ಪುಸ್ತಕ ಪ್ರಪಂಚ

ಜೂನ್ ೧೯೮೮



ಜಾರ್ಜ್ ಎಲಿಯಟ್ : ವಿಶೇಷ ಸಂಚಿಕೆ

ಪುಸ್ತಕ ಪ್ರಪಂಚ
ಮಾಸಿಕ

ಪರಿವಿಡಿ

ಸಂಪುಟ : ೪೨ ಸಂಚಿಕೆ–೧೧

PUSTAKA PRAPANCHA : Monthly

Published and printed by Karnataka State Adult Eductaion Council, Mysore-4 Pages 128. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :


ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 004.



ಡಾ॥ ನ. ಭದ್ರಯ್ಯನವರು

ನಭದಲ್ಲಿ ಲೀನಗೊಂಡ ನಭ

೧

ವಿಶ್ವವಿದ್ಯಾಲಯದ ಪದವಿ ಪಡೆಯದಿದ್ದರೂ, ಹತ್ತಾರು ವಿಶ್ವವಿದ್ಯಾಲಯಗಳ ಗೌರವ ಪದವಿಗಳಿಗರ್ಹರಾದ ಕೆಲವೇ ಕೆಲವು ಧೀಮಂತರಲ್ಲೊಬ್ಬರು; ಹಳ್ಳಿಯಲ್ಲಿ ಹುಟ್ಟಿ, ಪಟ್ಟಣದಲ್ಲಿ ನೆಲಸಿದರೂ, ಹಳ್ಳಿಯ ಪುರೋಭಿವೃದ್ಧಿಗಾಗಿ, ಹಳ್ಳಿಗರ ಸರ್ವಾಂಗೀಣ ಅಭ್ಯುದಯಕ್ಕಾಗಿ ನಿರಂತರವಾಗಿ ಕನವರಿಸಿದ, ಹಂಬಲಿಸಿದ, ಎಡೆಬಿಡದೆ ದುಡಿದ ಅಸಾಮಾನ್ಯ ಶ್ರೀಸಾಮಾನ್ಯರು; ವ್ಯಾಸಂಗಕ್ಕೆ ತಿಲಾಂಜಲಿಯಿತ್ತು, ಭವಿಷ್ಯದ ಚಿಂತೆಯನ್ನು ಮರೆತು, ಸ್ವಾತಂತ್ರ್ಯ ಸಮರಕ್ಕೆ ಧುಮುಕಿ, ಕಾರಾಗೃಹವಾಸದ ಕಷ್ಟಕ್ಲೇಶಗಳನ್ನನುಭವಿಸಿಯೂ, ಸ್ವಾತಂತ್ರ್ಯೋತ್ತರ ಕಾಲದಲ್ಲಿ ಸುಲಭವಾಗಿ ದಕ್ಕಿಸಿಕೊಳ್ಳಬಹುದಾಗಿದ್ದ ಅಧಿಕಾರ ಶ್ರೀಮಂತಿಕೆ ಭೋಗ ಜೀವನಗಳಿಗೆ ಎರವಾಗಿ, ಕೊನೆಯ ತನಕ ಕಷ್ಟದ ತ್ಯಾಗಜೀವನವನ್ನಾರಿಸಿಕೊಂಡ ಕಾಯಕ ನಿಷ್ಠರು; ಕರ್ನಾಟಕ ರಾಜ್ಯದ ವಯಸ್ಕರ ಶಿಕ್ಷಣ ಸಮಿತಿಯನ್ನು ನ ಭೂತೋ ನ ಭವಿಷ್ಯತಿ ಎನ್ನುವಂತೆ ಬೆಳೆಸಿ, ಅದರ ಪ್ರಾಣಸ್ವರೂಪದಂತಿದ್ದು, ವಿನೂತನ ವಿಶಿಷ್ಟ ಪಾರಿಣಾಮಕ ಯೋಜನೆಗಳ ಮೂಲಕ ಸಂಸ್ಥೆಯ ಕೀರ್ತಿಯನ್ನು ಜಗದಗಲಕ್ಕೂ ಹರಡಿದ ಪ್ರತಿಭಾಶಾಲಿ ಖ್ಯಾತಿವಂತರು; ವಯಸ್ಕರ ಶಿಕ್ಷಣದಲ್ಲಿ ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿ, ಹಲವು ಸಲ ಭೂಗೋಲದ ಮೇಲೆಲ್ಲ ಹರಿದಾಡಿ, ಅಂತರರಾಷ್ಟ್ರೀಯ ಸಂಸ್ಥೆಗಳ ಸಂಸ್ತುತಿಗೆ ಭಾಜನರಾದರೂ, ಸ್ವದೇಶ ಸೇವೆಗೆಂದು ಹಿಂದಿರುಗಿ, ಸ್ವದೇಶದ ಜನ ತಮ್ಮ ಸೇವೆಯನ್ನು ಬಳಸಿಕೊಳ್ಳದಿದ್ದಾಗಲೂ, ಕೊನೆಯುಸಿರಿರುವ ತನಕ ವಯಸ್ಕ ಶಿಕ್ಷಣದ ಮೂಲ ಮಂತ್ರವನ್ನೆ ಜಪಿಸುತ್ತ, ಬೇಡಿದವರಿಗೆ ತಮ್ಮ ವಿಚಾರಧಾರೆಯನ್ನು ಧಾರೆಯೆರೆಯುತ್ತಿದ್ದ ಜ್ಞಾನವರ್ಧಿಷ್ಣುಗಳು; ಕ್ರಿಯಾಶೀಲ ಜೀವನದ ನಡುವೆಯೂ ಸರಳ ಸುಂದರ ಸಾಹಿತ್ಯವನ್ನು ನಿರ್ಮಿಸಿ, ಅಗ್ಗದ ಪ್ರಚಾರಕ್ಕೆ ಹೊರಚ್ಚಾಗಿ ನಿಂತ ವಿನಯ ಶ್ರೀಮಂತರು; ಗಾಂಧೀಜಿ ಬದುಕಿದ್ದಾಗ ತ್ರಿಕರಣ ಶುದ್ಧಿಯಾಗಿ ಅವರನ್ನನುಸರಿಸಿ, ಅವರು ತೀರಿಕೊಂಡ ನಂತರವೂ ಗಾಂಧಿ ತತ್ತ್ವದ ಕಟ್ಟಾ ಅನುಷ್ಠಾನಶೀಲರಾಗುಳಿದ ಅಪರೂಪದ ವ್ಯಕ್ತಿ :

—ಹೌದು, ಇವರೇ ನಭ ಎಂದು ಖ್ಯಾತ ನಾಮರಾದ ನ. ಭದ್ರಯ್ಯನವರು.

೨

ಗ್ರಾಮೀಣ ಪರಿಸರದಲ್ಲಿ, ಅನನುಕೂಲ ಪರಿಸ್ಥಿತಿಯಲ್ಲಿ ಹುಟ್ಟಿ ಬೆಳೆದ ಮಕ್ಕಳಿಗೆ ವಿದ್ಯಾರ್ಜನೆ ಗಗನ ಕುಸುಮವಾಗಿದ್ದ ಕಾಲವದು. ಅಂಥ ಸಾವಿರ ಮಕ್ಕಳಲ್ಲೊಬ್ಬನ ಗಮನ ವ್ಯಾಸಂಗದ ಕಡೆಗೆ ಹರಿಯುವುದೇ ಒಂದು ಅದ್ಭುತ. ಬಾಡಿಗೆ ಕೋಡಿಯಲ್ಲಿ ಅನ್ನ ಬೇಯಿಸಿಕೊಂಡೋ, ವಾರಾನ್ನ ಸಂಪಾದಿಸಿಕೊಂಡೋ, ಇಲ್ಲವೇ ಗುರುತಿನ ಜನರ ಮನೆಯಲ್ಲಿದ್ದುಕೊಂಡೋ ವ್ಯಾಸಂಗ ಮುಂದುವರಿಸುವ ವಿದ್ಯಾರ್ಥಿಗಳ ಕಷ್ಟಕ್ಲೇ

ಗಳು, ಅನುಕ್ಷಣದ ಸಮಸ್ಯೆಗಳು ಅನುಭವವುಳ್ಳವರಿಗೆ ಮಾತ್ರ ವೇದ್ಯ. ಇಷ್ಟೆಲ್ಲ ಸಂಕಷ್ಟ ಗಳ ಅಗ್ನಿದಿವ್ಯದಲ್ಲಿಯೂ ವಿಜಯಶೀಲರಾಗಿ ನಭ ತಮ್ಮ ಜ್ಞಾನದಾಹದ ತಣಿವಿನಲ್ಲಿ ಬಡತನವನ್ನು ಮರೆಯುತ್ತಾರೆ.

ಸನಿಹದ ಕುವೆಂಪು, ದೂರದ ಗಾಂಧೀಜಿ ಅವರ ಧ್ರುವತಾರೆಯಾಗುತ್ತಾರೆ. ಕುವೆಂಪು ಅವರ ಸಂಪರ್ಕ, ಗಾಂಧೀಜಿಯ ದರ್ಶನ ಅವರ ಜೀವನದ ನಾವೆಯಾಗುತ್ತದೆ. ಆತ್ಮ ಸಮರ್ಪಣೆಯಿಂದಲ್ಲದೆ ದಾಸ್ಯವಿಮುಕ್ತಿ ಸಾಧ್ಯವಿಲ್ಲವೆಂಬ ಗಾಂಧೀಜಿಯ ಕರೆಗೆ ಓಗೊಟ್ಟು, ಸ್ವಾತಂತ್ರ್ಯಸಮರದ ಅಗ್ನಿಯಾತ್ರೆಗೆ ನಭ ಸಜ್ಜುಗೊಳ್ಳುತ್ತಾರೆ. ವೇದಿಕೆ ಗಳಿಂದ ಮಾಡುವ ಬರಡು ತತ್ತ್ವಪ್ರಚಾರ ಅವರಿಗೊಗ್ಗದು. ಅವರು ಖಾದಿ ನೂತರು; ಧರಿಸಿದರು; ಅದಕ್ಕೆ ಶರಣಾದರು. ಅದಕ್ಕಿಂತ ಮಿಗಿಲಾಗಿ ಗಾಂಧೀಜಿಯ ಧ್ಯೇಯಸೂತ್ರ ಗಳಲ್ಲಿ ಒಂದೆರಡನ್ನಾದರೂ ಆರಿಸಿಕೊಂಡು, ಅವುಗಳನ್ನು ಶ್ರದ್ಧಾನಿಷ್ಠೆಗಳಿಂದ ಅನುಷ್ಠಾನ ಗೈಯುವ ತಪಶ್ಚರ್ಯೆಯಲ್ಲವರು ಮಗ್ನರಾದರು. ಹಳ್ಳಿಗಳ ಏಳ್ಗೆಯಿಂದಲ್ಲದೆ ನಾಡಿನ ಸರ್ವಾಭ್ಯುದಯ ಸಾಧ್ಯವಾಗದೆಂದು ಮನಗಂಡ ಅವರು ಹಳ್ಳಿಗಳ ಪುನರುತ್ಥಾನವನ್ನು ಲಕ್ಷ್ಯದಲ್ಲಿರಿಸಿಕೊಂಡು 'ಗ್ರಾಮಸೇವೆ' ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು; ಹಳ್ಳಿಯ ಮಕ್ಕಳ ವ್ಯಾಸಂಗಕ್ಕೆ ಅನುಕೂಲ ಕಲ್ಪಿಸುವ ಸಲುವಾಗಿ 'ಗ್ರಾಮಸೇವಾ ನಿಲಯ'ವೆಂಬ ವಿದ್ಯಾರ್ಥಿನಿಕೇತನವನ್ನು ಸಂಸ್ಥಾಪಿಸಿದರು; ಕಾಯಕವೇ ಕೈಲಾಸವೆಂದು ನಂಬಿ 'ಗ್ರಾಮಸೇವಾ ಮುದ್ರಣಾಲಯ'ವನ್ನು ತೆರೆದು, ಅವರೇ ಸ್ವತಃ ಕಾರ್ಮಿಕರಂತೆ ದುಡಿದರು.

ಸಾಕ್ಷರತಾ ಪ್ರಚಾರದ ಮೂಲಕ ನಾಡಿನ ಬೌದ್ಧಿಕ ಚೈತನ್ಯವನ್ನು ಉದ್ದೀಪನ ಗೊಳಿಸದಿದ್ದರೆ ರಾಷ್ಟ್ರಾಭ್ಯುದಯವಾಗಲಿ, ರಾಷ್ಟ್ರೈಕ್ಯವಾಗಲಿ ಅಸಂಭವನೀಯವೆಂಬುದು ಅವರ ನಿಶ್ಚಿತ ಮತ. ಹಳ್ಳಿಯಲ್ಲಿ ಹುಟ್ಟಿ ಬೆಳೆದು, ಹಳ್ಳಿಗರ ಬಗ್ಗೆ ಸಹಾನುಭೂತಿಯುಳ್ಳ ಅವರಿಗೆ ಹಳ್ಳಿಗಳಿಗಂಟಿಕೊಂಡು ಬಂದಿರುವ ವ್ಯಾಧಿಗಳೂ ಗೊತ್ತು; ಆ ವ್ಯಾಧಿಗಳಿಗೆ ತಕ್ಕ ಔಷಧಿಗಳೂ ಗೊತ್ತು. ಹಳ್ಳಿಗಳಲ್ಲಿ ವ್ಯಾಪಕವಾಗಿ ಹರಡಿರುವ ಮೌಢ್ಯಗಳಿಗೆ, ಹಳ್ಳಿಗರ ನಿಶ್ಚೈತನ್ಯ ನಿರುತ್ಸಾಹಗಳಿಗೆ ಜ್ಞಾನಪ್ರಸಾರವೊಂದೇ ದಿವ್ಯಭೇಷಜವೆಂಬುದನ್ನವರು ಬಲ್ಲರು. ಸ್ವಾತಂತ್ರ್ಯ ಸಮರದ ಹೋರಾಟಗಾರರಾಗಿ ಸೆರೆಮನೆಯಲ್ಲಿರುವಾಗ, ಅಲ್ಲಿಯ ಸಹಖೈದಿಗಳ ಸಂಗದಲ್ಲಿ ಒಡನಾಟ ನಡಸುವಾಗ, ಆ ಕಾಲದಲ್ಲಿ ನಡೆಸಿದ ಚಿಂತನ ಮಂಥನಗಳ ಫಲವಾಗಿ, ಅಂತಃಪ್ರೇರಣೆಯ ಕಾರಣವಾಗಿ ವಯಸ್ಕರ ಶಿಕ್ಷಣದ ಅಗತ್ಯದ ಬಗ್ಗೆ ಅವರು ಅಚಲವಾದ ನಿರ್ಣಯಕ್ಕೆ ಬಂದದ್ದುಂಟು. ಆ ನಿರ್ಣಯವೇ ಅವರ ಬದುಕಾಗುತ್ತದೆ, ಕನಸಾಗುತ್ತದೆ, ಅವರ ಸರ್ವಸಾಧನೆಗಳ ಗುರಿಯಾಗುತ್ತದೆ.

ಬಿ. ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾದ ಅಕ್ಷರ ಪ್ರಚಾರ ಸಮಿತಿಯ ಮೂಲ ಸದಸ್ಯರಲ್ಲಿ ನಭ ಅವರೂ ಒಬ್ಬರು; ಅವರು ಬರಿಯಸದಸ್ಯರು ಮಾತ್ರವಲ್ಲ, ಅದರ ಆಧಾರಸ್ತಂಭವಾಗಿ ನಿಷ್ಠೆಯಿಂದ ದುಡಿಯುತ್ತಾರೆ. ಅದು ವಯಸ್ಕರ ಶಿಕ್ಷಣ ಸಮಿತಿಯಾಗಿ ಪ್ರವರ್ಧಮಾನಕ್ಕೆ ಬರಲು ಅವರ ದುಡಿಮೆಯೇ ಕಾರಣ. ಅದರ ಸರ್ವತೋಮುಖವಾದ ಅಭಿವೃದ್ಧಿಗಾಗಿ ಅವರು ತಮ್ಮ ಸುಖಜೀವನವನ್ನು ಬದಿಗೊತ್ತ ರಿಸಿ, ತಮ್ಮನ್ನೇ ತಾವು ಅದಕ್ಕೆ ಸಮರ್ಪಿಸಿಕೊಳ್ಳುತ್ತಾರೆ. ವಯಸ್ಕರ ಶಿಕ್ಷಣ ಸಮಿತಿಯೇ

ಅವರ ಮನೆಯಾಗುತ್ತದೆ, ಗುಡಿಯಾಗುತ್ತದೆ, ತಪೋನಂದನವಾಗುತ್ತದೆ, ಅವರ ಕಾರ್ಯಕ್ಷೇತ್ರವಾಗುತ್ತದೆ; ವಯಸ್ಕರ ಶಿಕ್ಷಣವೇ ಅವರ ಧ್ಯಾನ ಮನನಗಳ, ಜಪತಪಗಳ ಗಂತವ್ಯವಾಗುತ್ತದೆ. ಆ ಬಗ್ಗೆ ಅವರು 'ಉನ್ಮಾದ ಗ್ರಸ್ತ'ರಾದರೆಂದರೂ ಸಲ್ಲುತ್ತದೆ, ಭಗವಂತನಿಗಾಗಿ ಭಕ್ತ ಉನ್ಮಾದಗೊಳ್ಳುವಂತೆ. ಶಿಕ್ಷಣದ ಸ್ವರೂಪ ನೆಲೆ ಬೆಲೆ ಗೊತ್ತು ಗುರಿ ತಂತ್ರವಿಧಾನ ಸಾಧನಗಳ ಬಗ್ಗೆ ನಿರಂತರವಾಗಿ ಚಿಂತಿಸುತ್ತಾರೆ, ಅಧ್ಯಯನ ನಡಸುತ್ತಾರೆ, ಪ್ರಯೋಗ ಸಂಶೋಧನೆಗಳಲ್ಲಿ ತೊಡಗುತ್ತಾರೆ. ಕಮ್ಮಟ, ವಿಚಾರಸಂಕಿರಣ ಹಾಗೂ ಉಪನ್ಯಾಸಮಾಲೆಗಳ ಮೂಲಕ ವಯಸ್ಕರಿಗಗತ್ಯವಾದ ಆಧಾರ ಸಾಹಿತ್ಯ ಹಾಗೂ ಬೆಂಬಲ ಸಾಹಿತ್ಯಗಳ ನಿರ್ಮಾಣದಲ್ಲಿ ಆಸ್ಥೆ ವಹಿಸುತ್ತಾರೆ; ಪಠ್ಯಪುಸ್ತಕ ಮತ್ತು ಪಾಠೋಪಕರಣಗಳ ತಯಾರಿಕೆಯಲ್ಲಿ ಯಶಸ್ವಿಯಾಗುತ್ತಾರೆ. ವಯಸ್ಕರಿಗೆಂಥ ಶಬ್ದ ಕೋಶವಿರಬೇಕು, ವಾಕ್ಯರಚನೆ ಅಗತ್ಯ, ವಸ್ತುವೈವಿಧ್ಯ ಹೇಗಿರಬೇಕು, ಪಾಠಗಳ ಗಾತ್ರ ಎಷ್ಟಿರಬೇಕು, ಎಂಬೆಲ್ಲ ಸೂಕ್ಷ್ಮಾತಿಸೂಕ್ಷ್ಮ ಸಂಗತಿಗಳ ಕಡೆಗೆ ಗಮನ ಹರಿಸುತ್ತಾರೆ. ಕೊನೆಗೆ ಗ್ರಾಮಕಲೆಗಳ ಪುನರ್ಜೀವನ ಕಾರ್ಯವೂ ಅವರ ಲಕ್ಷ್ಯವನ್ನು ಸೆಳೆಯುತ್ತದೆ. ವಯಸ್ಕರ ಶಿಕ್ಷಣ ಸಮಿತಿ ಹಮ್ಮಿಕೊಂಡ ಪ್ರತಿಯೊಂದು ಕಾರ್ಯಕ್ರಮಗಳಲ್ಲಿಯೂ ಅವರ ಕೈವಾಡವಿದ್ದೇ ಇರುತ್ತದೆ; ಅದರ ಪ್ರತಿಯೊಂದು ಸಾಧನೆ ಸಿದ್ಧಿಗಳ ಮೇಲೂ ಅವರ ಪ್ರಭಾವದ ಮುದ್ರೆ ಇದ್ದೇ ಇದೆ.

ಸಮಿತಿ ರೂಪಿಸಿ, ಬೆಳೆಸಿರುವ, ಇಡೀ ಜಗತ್ತಿನ ಗಮನವನ್ನು ಸೆಳೆದಿರುವ ಪ್ರಧಾನ ಯೋಜನೆಗಳ ಪೈಕಿ ವಿದ್ಯಾಪೀಠಗಳಿಗೆ ವಿಶಿಷ್ಟಸ್ಥಾನವಿದೆ. ನಭ ಅವರ ಹೆಸರಿನೊಡನೆ ಸದಾ ಸಂಗತಗೊಳ್ಳಬೇಕಾದ, ಅವರ ಬೌದ್ಧಿಕ ಶಿಶುಗಳಾಗಿ, ಅವರ ವ್ಯಕ್ತಿತ್ವವನ್ನಿಂದಿಗೂ ಪ್ರತಿಬಿಂಬಿಸುತ್ತಿರುವ, ನಾಡಿನ ಹಿತದೃಷ್ಟಿಯಿಂದ ಭವಿಷ್ಯದ ಆಶಾಕಿರಣವಾಗಿರುವ ಅವುಗಳನ್ನು ಸರಕಾರವಾಗಲಿ, ಶಿಕ್ಷಣ ಕ್ಷೇತ್ರವಾಗಲಿ ಎಂದಿಗೂ ಮರೆಯುವಂತಿಲ್ಲ. ಅವು ಗ್ರಾಮೀಣ ಸಾಂಸ್ಕೃತಿಕ ಕೇಂದ್ರಗಳಾಗಬೇಕು, ಅನೌಪಚಾರಿಕ ಶಿಕ್ಷಣದ ನೆಲಗಟ್ಟಾಗಬೇಕು, ವಯಸ್ಕರ ಸ್ವಯಂಪೂರ್ಣಸ್ವಾವಲಂಬನ ವಿಶ್ವವಿದ್ಯಾಲಯಗಳಾಗಬೇಕು, ರಾಷ್ಟ್ರ ಪ್ರಗತಿಯ ಸಂಕೇತಗಳಾಗಬೇಕು ಎನ್ನುವ ಅವರ ಕನಸು ನನಸಾಗುವ ದಿನ ಬಹುದೂರವಿದೆಯೆಂದೇ ತೋರುತ್ತದೆ. ಇಂಥ ವಿದ್ಯಾಪೀಠಗಳನ್ನುಳ್ಳ ಪ್ರಥಮ ರಾಜ್ಯ ಈ ರಾಷ್ಟ್ರದಲ್ಲಿ ಕರ್ನಾಟಕವೊಂದೇ ಎಂಬುದು ಹೆಮ್ಮೆಯ ಸಂಗತಿ. ನಭರವರ ದೂರದೃಷ್ಟಿಗೆ, ವಿಚಾರಮತಿಗೆ ಹಾಗೂ ಅವರ ಶೈಕ್ಷಣಿಕ ತಜ್ಞತೆಗೆ ಈ ಯೋಜನೆಯ ನಿದರ್ಶನವೊಂದೆ ಸಾಕು. ರಾಷ್ಟ್ರೀಯ ಮಟ್ಟದ ವಯಸ್ಕ ಶಿಕ್ಷಣ ತಜ್ಞರಲ್ಲಿ ಅವರಿಗೆ ಹೊಯ್‌ಕಯ್ಯಾದವರು ಅಪರೂಪ. ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಸಂಸ್ಥಾಪಕರಲ್ಲೊಬ್ಬರಾಗಿ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಅಧ್ಯಕ್ಷರಾಗಿ, ಅದಕ್ಕೊಂದು ಸಮಗ್ರ ವ್ಯಕ್ತಿತ್ವವನ್ನು ನೀಡಿ, ರಾಷ್ಟ್ರೀಯ ಶಿಕ್ಷಣದ ಇತಿಹಾಸದಲ್ಲೊಂದು ಸುಭದ್ರ ಸ್ಥಾನವನ್ನು ದೊರಕಿಸಿಕೊಂಡ ಸಾಚಾತಜ್ಞರವರು.

ಅವರಂಥ ಅಸಾಧಾರಣ ಶಿಕ್ಷಣತಜ್ಞರ ಸೇವೆಯನ್ನು ಬಳಸಿಕೊಳ್ಳಲು ಯುನೆಸ್ಕೊ ಮುಂದಾದದ್ದು ಆಶ್ಚರ್ಯವೇನಲ್ಲ. ಹತ್ತು ಹದಿನೈದು ವರ್ಷಗಳ ಕಾಲ ಅವರು ಇಂಡೊನೇಷಿಯಾ, ಇರಾನ್, ಕೆನ್ಯಾ, ಕ್ಯಾಮರೂನ್ ಮೊದಲಾದ ಅನೇಕ ಏಷಿಯಾ

ಹಾಗೂ ಆಫ್ರಿಕಾ ರಾಷ್ಟ್ರಗಳಲ್ಲಿ ಒಂದೇ ಸಮನೆ ಕೆಲಸಮಾಡಿ, ಅಲ್ಲಿಯ ನಿರಕ್ಷರತೆಯನ್ನು ನಿರ್ಮೂಲಗೊಳಿಸಿ, ಜಗತ್ತಿನ ಯಾವ ಮೂಲೆಯಲ್ಲಿದ್ದರೂ ಹಿಂದುಳಿದವರೆಲ್ಲ ತನ್ನವರೆಂಬ ಅಭಿಮಾನವನ್ನು ಮೆರೆದ ಮಾನವತಾವಾದಿಯವರು; ಹೋದೆಡೆಯಲ್ಲೆಲ್ಲ ಅಲ್ಲಲ್ಲಿಯ ನಾಯಕರ, ಶಿಕ್ಷಣತಜ್ಞರ ಪ್ರೀತಿಯನ್ನು ಸಂಪಾದಿಸಿಕೊಂಡು, ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದ ಹಲವಾರು ಸಮಸ್ಯೆಗಳ ಬಗ್ಗೆ ವಿಶ್ವಸಂಸ್ಥೆಗೂ ಪರಿಹಾರಗಳನ್ನೊದಗಿಸಿ, ತಾಯ್ನಾಡಿಗೆ ಕೀರ್ತಿಯನ್ನು ತಂದುಕೊಟ್ಟು, ವಿಶ್ವ ಪ್ರಜ್ಞೆಯನ್ನು ಬೆಳೆಸಿಕೊಳ್ಳುವ ಮೂಲಕ ವಿಶ್ವ ಪ್ರಜೆಯ ಸ್ಥಾನವನ್ನು ಪಡೆದ ಹಿರಿಯ ವ್ಯಕ್ತಿಯವರು. ಸಮಾನ ಮನೋಧರ್ಮಿಯೂ, ಸುಸಂಸ್ಕೃತೆಯೂ, ಸ್ವಯಂ ಶಿಕ್ಷಣ ತಜ್ಞೆಯೂ ಆದ ಅಮೆರಿಕೆಯ ಸಾಧ್ವೀಮಣಿಯನ್ನು ತಮ್ಮ ಧರ್ಮಪತ್ನಿಯನ್ನಾಗಿ ಸ್ವೀಕರಿಸಿದ್ದು, ಅವರೊಡನೆ ಆದರ್ಶ ಸಂಸಾರವನ್ನು ನಡಸಿದ್ದು ಅವರ ವಿಶ್ವಮಾನವತೆಗೆ ನಿದರ್ಶನವಾಗಿದೆ. ಈ ಜಗತ್ತಿನಲ್ಲಿ ಅವರು ಸಮರ್ಪಣ ಮನೋಭಾವದಿಂದ ಕಾಮಿಸಿದ, ಪ್ರೇಮಿಸಿದ ವಸ್ತುಗಳು ಎರಡು: ಒಂದು, ವಯಸ್ಕರ ಶಿಕ್ಷಣ; ಎರಡು, ಅಮೆರಿಕೆಯ ಶ್ರೀಮತಿ ಶಾಂತಿ. ವಯಸ್ಕರ ಶಿಕ್ಷಣಕ್ಕೆ ಸಲ್ಲಿಸಿದ ಸೇವೆಗೆ ನೆಹರೂ ಪ್ರಶಸ್ತಿಯೇನೊ ಅವರಿಗೆ ದೊರಕಿತು. ಆದರೆ ಅದರಿಂದ ಅವರ ವ್ಯಕ್ತಿತ್ವಕ್ಕೆ ದೊಡ್ಡಸ್ತಿಕೆಯೊದಗಲಿಲ್ಲ; ಏಕೆಂದರೆ ಅವರು ಅದಕ್ಕಿಂತ ಬಹು ಬಹು ದೊಡ್ಡವರು. ಪ್ರೇಮದಿಂದ ಅವರಿಗೆ ಶುಭೋದಯವಾಯಿತೆಂಬುದಂತು ನಿಜ.

ನಭರವರದು ಮೂಲಭೂತವಾಗಿ ಕವಿಹೃದಯ; ಸಾಹಿತಿಯ ಮನೋಧರ್ಮ, ನಿಜ; ಆದರೆ ಅವರ ಸಾಹಿತ್ಯಸೃಷ್ಟಿ ಗಾತ್ರದಲ್ಲಿ ಅವರ ಅನುಭವ ಶ್ರೀಮಂತತೆಗೆ ತಕ್ಕಂತಿಲ್ಲ. ಅವರ ಜೀವನದ ಹೋರಾಟವನ್ನು, ಅವರ ವಿಶ್ವವಿಶಾಲ ಕಾರ್ಯಕ್ಷೇತ್ರವನ್ನು ನೆನೆದಾಗ, ಅವರು ರಚಿಸಿರುವ ಸಾಹಿತ್ಯ ಅಲ್ಪವಲ್ಲವೆನಿಸುತ್ತದೆ. ಅವರು ಗಾಂಧೀಜಿಯ ಜೀವನ ಚರಿತ್ರೆಯನ್ನು ಬರೆದಿದ್ದಾರೆ; ಗಾಂಧಿ ತತ್ತ್ವಗಳನ್ನು ಸೂತ್ರೀಕರಿಸಿದ್ದಾರೆ. 'ಜೀವಸಂತಾನ ಸಾಗಿದ ಬಗೆ' ಎಂಬ ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಿಕೆಯನ್ನು ಹೋಲುವ ಪುಸ್ತಕ ಮತ್ತೊಂದಿಲ್ಲ. ಸರಳತೆ, ಸ್ಪಷ್ಟತೆ, ನಿಷ್ಕೃಷ್ಟತೆ, ಸಂಕ್ಷಿಪ್ತತೆ ಅದರ ಪ್ರಮುಖ ಲಕ್ಷಣಗಳು. ಯಾವ ವೈಜ್ಞಾನಿಕ ವಿಷಯವಾದರೂ ಸಾಮಾನ್ಯರಿಗೂ ಅರ್ಥವಾಗುವಂತೆ ಬರೆಯಬಲ್ಲರೆಂಬುದಕ್ಕೆ 'ನಿಮ್ಮ ದೇಹ'ವೇ ಸಾಕ್ಷಿ. ಪ್ರವಾಸ ಸಾಹಿತ್ಯಕ್ಕಂತು ಅವರ ಕೊಡುಗೆ ಅಪಾರ, ಅಮೂಲ್ಯ, ವಿಶಿಷ್ಟ. ಗಾಂಧೀಜಿ ಶೈಲಿಯ ಧಾತುವೇ ನಭರವರ ಲೇಖಣಿಯಲ್ಲಿ ಪ್ರವಹಿಸುತ್ತಿರುವಂತೆ ತೋರುತ್ತದೆ.

೩

೧೯೩೬ ನೆಯ ಸಂವತ್ಸರ. ಖದರ್ ಪಂಚೆ ಕಪ್ಪುಕೋಟು ಧರಿಸಿದ, ಮಿಂಚುಗಣ್ಣುಗಳ, ವಿಶಾಲ ಫಾಲದ, ತೆಳುಗೂದಲ ನೆತ್ತಿಯ, ಸಮತಟ್ಟಿನ, ನಿಸ್ಥೂಲವಾದ, ಆದರೆ ಆರೋಗ ದೃಢಕಾಯದ ವ್ಯಕ್ತಿಯೊಬ್ಬರು ಬೆಂಗಳೂರಿನ ಒಕ್ಕಲಿಗ ಸಂಘದ ಮುದ್ರಣಾಲಯದ ಬಳಿ ಯಾರೊಡನೆಯೊ ಮಾತಾಡುತ್ತ ನಿಂತಿದ್ದರು. ಅಲ್ಲಿಯ ವಿದ್ಯಾರ್ಥಿನಿಲಯದ ನಿವಾಸಿಯೂ ಸಂಕೋಚ ಸ್ವಭಾವದವನೂ ಆದ ನಾನು ಏಕೊ ಏನೋ ಅವರ ಬಳಿ ನಿಂತೆ. ಹಳ್ಳಿಯ ಹುಡುಗನಾದ ನನ್ನನ್ನವರು ಪ್ರೀತಿಯಿಂದ ಮಾತಾಡಿ

ಸಿದರು, ಬೆನ್ನುತಟ್ಟಿ ಪ್ರೋತ್ಸಾಹಿಸಿದರು. ಅವರ ಹಿತಮಿತ ಅಕೃತ್ರಿಮ ಮಾತುಗಳಲ್ಲಿ ಏನೋ ಒಂದು ಬಗೆಯ ಕಾಂತಶಕ್ತಿ ಇದ್ದಂತೆ ತೋರಿತು. ಅವರೇ ನಭ!

ನಾನು ಬೆಂಗಳೂರು ಬಿಟ್ಟು ಮೈಸೂರು ಸೇರುವ ವೇಳೆಗೆ ಅವರ ಕರಿಯ ಕೋಟ ಮಾಯವಾಗಿತ್ತು. ಸದಾ ಶ್ವೇತ ಶುಭ್ರ ಖಾದಿ ವಸನಧಾರಿ! ಅವರ ವಸನದಂತೆ ಅವ ಮನಸ್ಸೂ ಶುಭ್ರ. ಅವರ ವಸನಗಳ ಶುಭ್ರತೆಗೆ ಅವರ ಧೌತ ಕೌಶಲವೆ ಕಾರಣವಾದರೆ, ಅವರ ಮನಸ್ಸಿನ ಮಡಿಗೆ ಗಾಂಧಿಶಕ್ತಿಯೇ ಕಾರಣ. ಆಫ್ರಿಕೆಯಲ್ಲಿದ್ದಾಗ ಮಾತ್ರವಲ್ಲ, ಈಚೆಗೆ ಖಾಯಿಲೆ ಬೀಳುವ ತನಕ ಅವರ ಮಡಿವಾಳ ಅವರೇ!

ಮೈಮನಗಳಲ್ಲಿ, ಬದುಕಿನಲ್ಲಿ ಮಡಿಯಾಗಿದ್ದುಕೊಂಡೇ ೧೬–೫–೮೮ ರಂದು ರಾತ್ರಿ ನಭದಲ್ಲಿ ಲೀನಗೊಂಡರು ನಭ! ಅಹುದು, ಇವರೇ ನಭ!

ದೆ ಜಗ

ಮನುಷ್ಯನಲ್ಲಿ ನಂಬಿಕೆ ಇರಿಸಿದ ಕಾದಂಬರಿಕಾರಳು

ಎಲ್. ಎಸ್. ಶೇಷಗಿರಿರಾವ್

'ಜಾರ್ಜ್ ಎಲಿಯಟ್' ಎನ್ನುವುದು ಗಂಡಸಿನ ಹೆಸರಿನಂತೆ ಕಂಡರೂ ಹೆಂಗಸೊಬ್ಬಳು ಆರಿಸಿಕೊಂಡ ಗುಪ್ತನಾಮ. ಅವಳ ನಿಜವಾದ ಹೆಸರು ಮೇರಿ ಆ್ಯನ್ ಎವಾನ್ಸ್. ಇಂಗ್ಲೆಂಡಿನ ಪ್ರಸಿದ್ಧ ಕಾದಂಬರಿಕಾರಳು. ಈ ಹೆಸರನ್ನು ಆರಿಸಿಕೊಂಡದಕ್ಕೆ ಅವಳೇ ಕಾರಣವನ್ನು ಹೇಳಿದ್ದಾಳೆ. 'ಜಾರ್ಜ್' ಎನ್ನುವುದು ಅವಳು ಪ್ರೀತಿಸಿದ ಜಾರ್ಜ್ ಲೂಯಿಸ್ ಎನ್ನುವ ಮನುಷ್ಯನ ಹೆಸರು ('ಲೂಯಿಸ್' ಅವನ ಮನೆತದ ಹೆಸರು) 'ಎಲಿಯಟ್' ಎನ್ನುವುದು ಬಾಯಿತುಂಬುವ ಆದರೆ ಸುಲಭವಾಗಿ ಹೇಳಬಹುದಾದ ಹೆಸರು.

ಈಕೆ ೧೮೧೯ ರ ನವೆಂಬರ್ ೧೯ ರಂದು ಇಂಗ್ಲೆಂಡಿನ ವಾರ್ ವಿಕ್‌ಷೈರ್ ಜಿಲ್ಲೆಯಲ್ಲಿ ಆರ್‌ಬರಿ ಫಾರಂ ಎನ್ನುವ ಸ್ಥಳದಲ್ಲಿ ಹುಟ್ಟಿದಳು. ತಂದೆ ರಾಬರ್ಟ್ ಎವಾನ್ಸ್ ಬಡಗಿ ಕೆಲಸ ಮಾಡುತ್ತಿದ್ದ. ಅನಂತರ ಆಸ್ತಿ ಮಾರಾಟದ ಏಜೆಂಟ್ ಆದ. ಕಷ್ಟಪಟ್ಟು ಕೆಲಸ ಮಾಡುವ, ಚಟುವಟಿಕೆಯ, ನಂಬಿಕಸ್ತ ಮನುಷ್ಯ ಎಂದು ಹೆಸರು ಪಡೆದ, ತಕ್ಕಷ್ಟು ಸ್ಥಿತಿವಂತ. ಅವನಿಗೆ ಎರಡನೆ ಹೆಂಡತಿಯಿಂದ ಮೂವರು ಮಕ್ಕಳು, ಕ್ರಿಶ್ಚಿಯಾನ್, ಐಸಾಕ್ ಮತ್ತು ಮೇರಿ. ಜಾರ್ಜ್ ಎಲಿಯಟ್‌ಳ ಬಾಲ್ಯದ ವರ್ಷಗಳಲ್ಲಿ ಅವಳು ಕಂಡ ಹಳ್ಳಿಯ ಜೀವನ, ಸುತ್ತಮುತ್ತಲಿನ ವ್ಯಕ್ತಿಗಳು ಅವಳ ಮನಸ್ಸಿನ ಮೇಲೆ ಮಾಡಿದ ಗಾಢವಾದ ಪರಿಣಾಮನ್ನು ಅವಳ 'ಆ್ಯಡಂ ಬೀಡ್', 'ದಿ ಮಿಲ್ ಆನ್ ದಿ ಫ್ಲಾಸ್' ಮತ್ತು 'ಸೈಲಸ್ ಮಾರ್ನರ್' ಕಾದಂಬರಿಗಳಲ್ಲಿ ಕಾಣಬಹುದು. ಅವುಗಳಲ್ಲಿ ಹಳ್ಳಿಯ ಜೀವನದ ನಿರೂಪಣೆ ಅವಳ ಬಾಲ್ಯದ ಅನುಭವಗಳಿಂದ ಪ್ರೇರಿತವಾದದ್ದು. ಹಲವು ಪಾತ್ರಗಳಿಗೆ ಸುತ್ತಮುತ್ತಲಿನ ಜೀವನದಲ್ಲಿ ಕಂಡ ವ್ಯಕ್ತಿಗಳಿಗೆ ಆಧಾರ. (ಆ ವ್ಯಕ್ತಿಗಳನ್ನು ಜೀವನದಲ್ಲಿ ಕಂಡ ಹಾಗೆಯೇ ಚಿತ್ರಿಸಿದಳು ಎಂದು ಭಾವಿಸುವುದು ತಪ್ಪಾಗುತ್ತದೆ.)

ಶಾಲೆಯೊಂದರಲ್ಲಿ ವಿದ್ಯಾಭ್ಯಾಸವಾಯಿತು. ಅವಳಿಗೆ ಹದಿನೇಳು ವರ್ಷವಾಗಿದ್ದಾಗ ತಾಯಿ ತೀರಿಕೊಂಡಳು. ಕೆಲವು ದಿನಗಳ ನಂತರ ಅವಳ ಅಕ್ಕನಿಗೆ ಮದುವೆಯಾಯಿತು. ೧೮೪೯ ರವರೆಗೆ (ಆಗ ಅವಳಿಗೆ ಮೂವತ್ತು ವರ್ಷ) ಅವಳು ತಂದೆಯೊಡನಿದ್ದು ಅವನ ಕೊನೆಯ ಉಸಿರಿನವರೆಗೆ ಅವನನ್ನು ನೋಡಿಕೊಂಡಳು.

ಅವಳ ತಂದೆಯದು ಗಟ್ಟಿ ವ್ಯಕ್ತಿತ್ವ, ಮಗಳಲ್ಲಿ ಅವನಿಗೆ ಪ್ರೀತಿ. ತಂದೆಯ ಪ್ರಭಾವ ಜಾರ್ಜ್ ಎಲಿಯಟ್‌ಳ ಮೇಲೆ ಪ್ರಬಲವಾಯಿತು. ಅವನ ಅಭಿಪ್ರಾಯಗಳೇ ಅವಳ ಅಭಿಪ್ರಾಯಗಳಾದವು. ಅವನಿಗೆ ಅಪಾರ ರಾಜಭಕ್ತಿ, ಸರ್ಕಾರ ಎಂದರೆ ಗೌರವ; ಆತ ಕಟ್ಟುನಿಟ್ಟಾದ ಕ್ರೈಸ್ತ. ಬಾಲ್ಯದಲ್ಲಿ ಹುಡುಗಿ ಅಣ್ಣನ ಜೊತೆಗೆ ಅಲೆದಾಡಿದಳು, ಆಡಿದಳು, ಅವನೆಂದರೆ ಆಳವಾದ ಪ್ರೀತಿ ಬೆಳೆಯಿತು. ಶಾಲೆಯಲ್ಲಿ ಪುಸ್ತಕಗಳನ್ನು ಓದುವ ಅಭ್ಯಾಸ ಬೆಳೆಸಿಕೊಂಡಳು. ಹತ್ತೊಂಬತ್ತನೆಯ ವಯಸ್ಸಿಗೇ ಅವಳ ಓದಿನ ವ್ಯಾಪ್ತಿ ಅಸಾಧಾರಣವಾಗಿತ್ತು. ಫ್ರೆಂಚ್ ಮತ್ತು ಜರ್ಮನ್ ಭಾಷೆಗಳನ್ನು ಸಂಗೀತವನ್ನು ಕಲಿತಳು. ತನ್ನ ಒಬ್ಬ ಉಪಾಧ್ಯಾಯಿನಿ ಮತ್ತು ಮಿಸೆಸ್ ಸ್ಯಾಮ್ಯುಯಲ್ ಎವಾನ್ಸ್ ಎನ್ನುವ ನೆಂಟರಿಂದ ಕ್ರೈಸ್ತ ಧರ್ಮದಲ್ಲಿ ಗಾಢವಾದ ಶ್ರದ್ಧೆ ಬೆಳೆಯಿತು. ಶಾಲೆಯನ್ನು ಬಿಟ್ಟಮೇಲೂ ಅವಳು ಧಾರ್ಮಿಕ ಪುಸ್ತಕಗಳನ್ನೂ ವಿಚಾರ ಸಾಹಿತ್ಯವನ್ನೂ–ತನ್ನ ವಯಸ್ಸಿಗೆ ಮೀರಿದ ಶ್ರದ್ಧೆಯಿಂದ–ಅಧ್ಯಯನ ಮಾಡಿದಳು.

ಚಾರ್ಲ್ಸ್ ಬ್ರೇ ಎನ್ನುವಾತ ಮತ್ತು ಅವನ ಭಾವ ಚಾರ್ಲ್ಸ್ ಹೆನೆಲ್ ಎನ್ನುವಾತ ಇವರ ಪರಿಚಯವಾದದ್ದು ಅವಳ ಜೀವನದಲ್ಲಿ ಒಂದು ತಿರುವನ್ನು ಕೊಟ್ಟಿತು. ಅವರಿಗೆ ಅನುಸರಿಸಿದ್ದ ಆಚಾರವಂತ ದೃಷ್ಟಿ ಮತ್ತು ಆಚಾರಗಳು ತೀರ ಸಂಕುಚಿತ ಎನ್ನಿಸಿತು. ಕ್ರೈಸ್ತರಲ್ಲಿ ಒಂದು ಪಂಥಕ್ಕೆ ಸೇರಿದವರಿಗೆ ಮಾತ್ರ ಸ್ವರ್ಗಕ್ಕೆ ಪ್ರವೇಶ ಎನ್ನುವ ಉಪದೇಶ ತಪ್ಪಾಗಿ ತೋರಿತು. ಅವಳ ಹೊಸ ವಿಚಾರ ರೀತಿಯನ್ನು ಕಂಡು ಅವಳ ತಂದೆ ಮತ್ತು ಹತ್ತಿರದವರಿಗೆ ಆತಂಕವಾಯಿತು. ಅವಳೊಂದಿಗೆ ವಾದ ಮಾಡಲು ಬಂದ ಪಾದ್ರಿ, ಅವಳೊಡನೆ ವಾದಿಸಲಾರದೆ ಹೋದ; "ಈ ತರುಣಿಯ ಪಕ್ಷದಲ್ಲಿ ಸಹಾಯ ಮಾಡಲು ದೆವ್ವವೇ ನಿಂತಿದ್ದಿರಬೇಕು; ನಾನು ಯಾವ ಪುಸ್ತಕದ ಹೆಸರನ್ನು ಹೇಳಿದರೂ ಅವಳು ಆಗಲೇ ಅದನ್ನು ಓದಿಬಿಟ್ಟಿದ್ದಳು" ಎಂದ. ಅವಳು ತಾನು ಚರ್ಚಿಗೆ ಹೋಗುವುದಿಲ್ಲ ಎಂದಳು. ಅವಳ ತಂದೆಗೆ ತೀರ ಅಸಮಾಧಾನವಾಯಿತು. ತಾನು ಅವಳೊಡನೆ ವಾಸ ಮಾಡಲಾರೆ ಎಂದು ಹೇಳಿ, ಹಿರಿಯ ಮಗಳ ಮನೆಗೆ ಹೋಗಲು ನಿರ್ಧರಿಸಿದ. ಮೇರಿಗೆ (ಜಾರ್ಜ್ ಎಲಿಯಟ್) ನೋವಾಯಿತು. ಅವಳ ಬಾಳಿನುದ್ದಕ್ಕೂ ಒಂದು ಮುಖ್ಯವಾದ ಸಂಗತಿಯೆಂದರೆ ತಾನು ಒಪ್ಪದಿದ್ದ ಅಭಿಪ್ರಾಯಗಳನ್ನು ಪ್ರತಿವಾದಿಸುವವರ ವಿಷಯದಲ್ಲೂ ನೈಜವಾದ ಸಹಾನುಭೂತಿ ಉಳಿಸಿಕೊಂಡದ್ದು. ಯಾರಿಗೇ ಆಗಲಿ ಒಂದು ಗಾಢ ನಂಬಿಕೆ ಇದ್ದರೆ, ಆ ನಂಬಿಕೆಯ ಹಿಂದೆ ಮನಸ್ಸಿನ ತೀವ್ರ ಭಾವನೆ ಇರುತ್ತದೆ, ನಾವು ಆ ನಂಬಿಕೆಯನ್ನು ಒಪ್ಪದಿದ್ದರೂ ಆ ಭಾವನೆಯನ್ನು, ಪ್ರಾಮಾಣಿಕತೆಯನ್ನು ಗೌರವಿಸಬೇಕು ಎಂದು ಅವಳ ನಿಲುವು. ತಂದೆಗೂ ಮಗಳಿಗೂ ನಡುವೆ ಇದ್ದ ಅಸಮಾಧಾನ ಕರಗಿತು.

ಜಾರ್ಜ್ ಎಲಿಯಟ್‌ಳಿಗೆ ಹಲವರು ಬುದ್ಧಿಜೀವಿಗಳ ಪರಿಚಯವಾಯಿತು. ಒಂದಿಷ್ಟು ಅನುವಾದದ ಕೆಲಸ ಮಾಡಿದಳು. ತಂದೆ ೧೮೪೯ರಲ್ಲಿ ಮರಣ ಹೊಂದಿದ

ಇದು ಅವಳಿಗೆ ಭಾರಿ ಆಘಾತ. ಚಾರ್ಲ್ಸ್ ಬ್ರೇ ಮತ್ತು ಅವನ ಹೆಂಡತಿ ಅವಳನ್ನು ಯೂರೋಪಿನ ಪ್ರವಾಸಕ್ಕೆ ಕರೆದೊಯ್ದರು. ಅವಳ ಸ್ವಭಾವಕ್ಕೆ ಹೊಂದಿಕೊಂಡ ಕಲವರ ಪರಿಚಯು ಆಯಿತು. ಕ್ರಮೇಣ ನೋವಿನ ತೀಕ್ಷ್ಣತೆ ಮಾಯವಾಯಿತು. ೧೮೫೧ರಲ್ಲಿ ಜಾರ್ಜ್ ಲೂಯಿಸ್ ಎಂಬಾತನ ಪರಿಚಯವಾಯಿತು. ಅವನೊಬ್ಬ ಪತ್ರಿಕಾಕರ್ತ. ಕೆಲವು ಕಾದಂಬರಿಗಳನ್ನು ಬರೆದಿದ್ದ. ಬುದ್ಧಿವಂತ. ಸಂಭಾಷಣೆಯಲ್ಲಿ ಬುದ್ಧಿವಂತ. ಅವನ ಜೊತೆಗೆ ಹಲವರು ತತ್ವಶಾಸ್ತ್ರಜ್ಞರ ಬರಹಗಳನ್ನು ಓದಿದಳು. ಜಾರ್ಜ್ ಅವಳಿಗಿಂತ ಎರಡು ವರ್ಷ ದೊಡ್ಡವನು. ಅವನದು ದುರದೃಷ್ಟಕರ ಮದುವೆ. ಹೆಂಡತಿಗೆ ಸ್ವಲ್ಪ ಹುಚ್ಚು ಇತ್ತು ಎಂದು ಕಾಣುತ್ತದೆ. ಆಕೆ ವಿವಾಹ ವಿಚ್ಛೇದನಕ್ಕೆ ಒಪ್ಪಲಿಲ್ಲ. ಮೇರಿ–ಜಾರ್ಜರಿಗೆ ಪರಸ್ಪರ ಆಕರ್ಷಣೆಯಾಯಿತು. ಇಪ್ಪತ್ತನಾಲ್ಕು ವರ್ಷ ಮದುವೆಯಾಗದೆಯೇ ಗಂಡ ಹೆಂಡತಿಯರಂತೆ ಬಾಳಿದರು. ಜಾರ್ಜ್‌ನ ಹೆಂಡತಿ ಉಸಿರಾಡುತ್ತಿದ್ದ ಹೆಣ ಎಂದು ಹೇಳುತ್ತಾರೆ. ಮೇರಿ (ಜಾರ್ಜ್ ಎಲಿಯಟ್) ಗೆ ಎಂದೂ ತಾನು ಮಾಡಿದ್ದ ತಪ್ಪು ಎನ್ನಿಸಲಿಲ್ಲ. ಒಂದು ಮಾತಂತೂ ನಿಜ. ಅವಳದು ಬಹು ಅಧೈರ್ಯದ ಸ್ವಭಾವ. ಮತ್ತೆ ಮತ್ತೆ ತನ್ನ ಸಾಮರ್ಥ್ಯದಲ್ಲಿ ಅವಳಿಗೆ ಅಪನಂಬಿಕೆ. ಅವಳು ಕಾದಂಬರಿಕಾರಳಾಗಿ ಬೆಳೆದದ್ದು ಬಹುಮಟ್ಟಿಗೆ ಅವನ ಸಹವಾಸದಿಂದ, ಪ್ರೋತ್ಸಾಹದಿಂದ. ಅವಳ ಜೀವನ ರೀತಿ ಅವನ ನೆಂಟರಿಷ್ಟರಲ್ಲಿ ಹಲವರಿಗೆ ಅಸಮಾಧಾನವನ್ನುಂಟುಮಾಡಿತು, ಅವಳಿಂದ ಅವರು ದೂರವಾದರು. ಜಾರ್ಜ್ ಲೂಯಿಸನ ವಿಷಯದಲ್ಲಿ ಅವಳಿಗೆ ಎಂತಹ ಭಾವನೆ ಇದ್ದಿತು ಎನ್ನುವುದು ಅವಳು ೧೮೬೩ರಲ್ಲಿ 'ರಮೋಲ' ಎಂಬ ಕಾದಂಬರಿಯ ಹಸ್ತಪ್ರತಿಯನ್ನು ಅವನಿಗೆ ಅರ್ಪಿಸಿದ ಒಕ್ಕಣೆಯಲ್ಲಿದೆ. "ಅವಳ ಒಳನೋಟ ಮತ್ತು ಶಕ್ತಿಗಳಿಗೆ ಅತ್ಯುತ್ತಮ ಮೂಲವಾದ ಪರಿಪೂರ್ಣ ಪ್ರೇಮವನ್ನು ಕೊಟ್ಟ ಗಂಡನಿಗೆ, ಈ ಹಸ್ತಪ್ರತಿಯನ್ನು ಅವನ ನಿಷ್ಠೆ ಹೆಂಡತಿ ಅರ್ಪಿಸಿದ್ದಾಳೆ."

ಅವಳು ಸ್ವತಂತ್ರ ಬರಹವನ್ನು ಪ್ರಾರಂಭಿಸಿದಾಗ ಅವಳಿಗೆ ಹತ್ತಿರ ಹತ್ತಿರ ನಲವತ್ತು ವರ್ಷ. ಅವಳ ಮೊದಲನೆಯ ಗಮನಾರ್ಹ ಬರಹ 'ಸೀನ್ಸ್ ಆಫ್ ಕ್ಲರಿಕಲ್ ಲೈಫ್' ಪ್ರಕಟವಾದಾಗ (೧೮೫೮) ಅವಳಿಗೆ ೩೯ ವರ್ಷ. ಅವಳ ಮೊದಲನೆಯ ಸೊಗಸಾದ 'ಆ್ಯಡಂ ಬೀಡ್' ಪ್ರಕಟವಾದಾಗ (೧೮೫೯) ಅವಳಿಗೆ ೪೦ ವರ್ಷ. ಇಷ್ಟು ತಡವಾಗಿ ಕಾದಂಬರಿ ರಚನೆ ಪ್ರಾರಂಭಿಸಿದ ಶ್ರೇಷ್ಠ ಕಾದಂಬರಿಕಾರರು ಇನ್ನೊಬ್ಬರಿಲ್ಲ ಎಂದು ಕಾಣುತ್ತದೆ. ಮರುವರ್ಷ 'ದಿ ಮಿಲ್ ಆನ್ ದಿ ಫ್ಲಾಸ್! ಅದರ ಮರುವರ್ಷ 'ಸೈಲಸ್ ಮಾರ್ನರ್' ಪ್ರಕಟವಾದವು. ಈ ಕಾದಂಬರಿಗಳೆಲ್ಲ ಅವಳ ಬಾಲ್ಯದ ನೆನಪುಗಳಿಂದ ಅರಳಿ ಬಂದವು. ಅವಳ ನಂಟಳು ಶ್ರೀಮತಿ ಸ್ಯಾಮ್ಯುಯೆಲ್ ಎವಾನ್ಸ್ ಅವಳಿಗೆ ತನ್ನ ಒಂದು ಅನುಭವವನ್ನು ಹೇಳಿದಳು. ತರುಣಿಯೊಬ್ಬಳಿಗೆ ಅವಳ ಮಗುವನ್ನು ಕೊಂದದಕ್ಕಾಗಿ ಮರಣದಂಡನೆ ವಿಧಿಸಲಾಯಿತು; ಅವಳನ್ನು ಗಲ್ಲಿಗೇರಿಸಿದ ಹಿಂದಿನ ರಾತ್ರಿಯನ್ನು ಶ್ರೀಮತಿ ಎವಾನ್ಸ್ ಅವಳ ಜೊತೆಗೆ ಕಳೆದಿದ್ದಳು, ಇಡೀ ರಾತ್ರಿ ಅವಳೊಡನೆ ದೇವರಿಗೆ ಪ್ರಾರ್ಥನೆ ಸಲ್ಲಿಸಿದ್ದಳು, ಅವಳು ತನ್ನ ಅಪರಾಧವನ್ನು ಒಪ್ಪಿಕೊಳ್ಳುವಂತೆ ಅವಳ ಮನಸ್ಸನ್ನು ಒಲಿಸಿದ್ದಳು. ಈ ಕಥೆಯನ್ನು ಕೇಳಿದ ಜಾರ್ಜ್ ಎಲಿಯಟ್ ಇದನ್ನು ಗಂಡನಿಗೆ ಹೇಳಿದಳು. ಅವನು, ಸೆರೆಮನೆಯಲ್ಲಿನ ದೃಶ್ಯ ಬಹು ಪರಿಣಾಮಕಾರಿ

ಯಾಗುತ್ತದೆ ಎಂದ. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಆಕೆ ಕಾದಂಬರಿಯನ್ನು ರಚಿಸಿದಳು. ಇಲ್ಲಿನ ಡೀನ ಮಾರಿಸ್ ಎನ್ನುವ ಬಹು ಶ್ರದ್ಧೆಯ, ಧಾರ್ಮಿಕ ಮನೋಧರ್ಮದ ಯುವತಿಗೆ ಶ್ರೀಮತಿ ಎವಾನ್ಸಳೇ ಆಧಾರ. ನಾಯಕ ಆ್ಯಡಂ ಬೀಡ್ ಮತ್ತೆ ಮತ್ತೆ ಅವಳ ತಂದೆಯನ್ನು ನೆನಪಿಗೆ ತರುತ್ತಾನೆ. 'ದಿ ಮಿಲ್ ಆನ್ ದಿ ಫ್ಲಾಸ್' ನಲ್ಲಿ ಒಂದು ಮುಖ್ಯ ಪಾತ್ರ ಹುಡುಗಿ ಮ್ಯಾಗಿ ಟೆಲಿವರ್ಸ್. ಮೇರಿ ಎವಾನ್ಸಳೇ ಎನ್ನುವಷ್ಟು ಮಟ್ಟಿಗೆ ಅವಳನ್ನು ಹೋಲುತ್ತಾಳೆ. ಮ್ಯಾಗಿ ಅವಳ ಅಣ್ಣನ ಪ್ರೀತಿ, ಓಡಾಟ, ಒಡನಾಟ ಮೇರಿಯ ಬಾಲ್ಯದ ನೆನಪುಗಳಿಂದ ರೂಪಗೊಂಡವು. ಇದರ ಮುಖ್ಯ ಪಾತ್ರಗಳು ಎಳೆಯರೇ, ಅವರ ಜಗತ್ತು ಸಣ್ಣದು; ಆದರೂ ಇಲ್ಲಿ ದುರಂತ ನಾಟಕವೊಂದು ನಡೆದು ಹೋಗುತ್ತದೆ. 'ಸೈಲಸ್ ಮಾರ್ನರ್' ನಲ್ಲಿನ ಹಳ್ಳಿಯ ಜೀವನ ಜಾರ್ಜ್ ಎಲಿಯಟ್ ಬಾಲ್ಯದಲ್ಲಿ ಕಂಡ ಹಳ್ಳಿಯ ಜೀವನ ತನ್ನ ಬಾಲ್ಯದ ನೆನಪುಗಳಿಂದ ಅವಳು ಸೃಷ್ಟಿಸಿದ ಕಡೆಯ ಕಾದಂಬರಿ ಇದೇ.

ಈ ಹೊತ್ತಿಗೆ ಅವಳು ತನ್ನ ಕಾಲದ ಕಾದಂಬರಿಕಾರರ ಮೊದಲ ಪಂಕ್ತಿಗೆ ಸೇರಿದ್ದಳು. 'ಆ್ಯಡಂ ಬೀಡ್' ಪ್ರಕಟವಾದ ವರ್ಷವೇ ಏಳು ಆವೃತ್ತಿಗಳನ್ನು (ಒಟ್ಟು ೧೬,೦೦೦ ಪ್ರತಿಗಳು) ಕಂಡಿತು. ನಾಲ್ಕು ವರ್ಷದ ಪ್ರಕಟಣೆಯ ಹಕ್ಕಿಗೆ ಎಂಟುನೂರು ಪೌಂಡ್ ಕೊಡಲು ಒಪ್ಪಿದ್ದ ಪ್ರಕಾಶಕ ಮೊದಲ ವರ್ಷಕ್ಕೆ ಇನ್ನು ಎಂಟುನೂರು ಪೌಂಡ್ ಕೊಟ್ಟು ಪ್ರಕಟಣೆಯ ಹಕ್ಕನ್ನು ಅವಳಿಗೇ ಕೊಟ್ಟ. ಅವಳ ಮುಂದಿನ ಕಾದಂಬರಿಯ ೪೦೦೦ ಪ್ರತಿಗಳಿಗೆ ಎರಡು ಸಾವಿರ ಪೌಂಡ್ ಕೊಡಲು ಮಾತುಕೊಟ್ಟ. 'ರಮೋಲ' ಎಂಬ ಕಾದಂಬರಿಯನ್ನು ಅವಳು ಬರೆಯುತ್ತಿದ್ದಾಗಲೆ ಒಬ್ಬ ಪ್ರಕಾಶಕ ಹತ್ತು ಸಾವಿರ ಪೌಂಡ್‌ಗಳನ್ನು ಕೊಡಲು ಮುಂದೆ ಬಂದ. ಅವಳ ಕಾಲದಲ್ಲಿ ಇಷ್ಟು ಹಣವನ್ನು ಒಂದು ಕಾದಂಬರಿಗೆ ಆವರೆಗೆ ಕೊಟ್ಟದ್ದೇ ಇಲ್ಲ.

ಜಾರ್ಜ್ ಎಲಿಯಟ್ ತನ್ನ ಬೌದ್ಧಿಕ ಆಸಕ್ತಿಗಳನ್ನು ಮುಂದುವರೆಸಿಕೊಂಡು ಹೋದಳು. ಅವಳ ಕಾಲದಲ್ಲೆ ಚಾರ್ಲ್ಸ್ ಡಾರ್ವಿನ್ ಎಂಬಾತ ತನ್ನ ವಿಕಾಸದ ಸಿದ್ಧಾಂತವನ್ನು ಪ್ರತಿಪಾದಿಸಿದ. ಇದರ ಪ್ರಕಾರ, ಬೈಬಲಿನಲ್ಲಿ ಹೇಳಿರುವಂತೆ ಭಗವಂತ ವಿಶ್ವವನ್ನು ಆರು ದಿನಗಳಲ್ಲಿ ಸೃಷ್ಟಿಸಲಿಲ್ಲ, ಆರನೆಯದಿನ ತನ್ನ ಪ್ರೀತಿಯ ಮಗುವಾಗಿ ತನ್ನನ್ನೇ ಹೋಲುವ ಮನುಷ್ಯನನ್ನು ಸೃಷ್ಟಿಸಲಿಲ್ಲ. ಸೃಷ್ಟಿ ಕೋಟ್ಯಾಂತರ ವರ್ಷಗಳಿಂದ ಸಾಗಿ ಬಂದಿದೆ. ಎಷ್ಟೋ ಕೋಟಿ ವರ್ಷಕಾಲ ಮಾನವ ವಿಶ್ವದಲ್ಲಿ ಇರಲೇ ಇಲ್ಲ. ಅವನು ಈ ವಿಕಾಸದ ಸರಪಳಿಯಲ್ಲಿ ಒಂದು ಕೊಂಡಿ ಅಷ್ಟೆ. ಕೋತಿಗಳೂ ಒಂದು ಕೊಂಡಿ. ಅವನ್ನು ದಾಟಿ ವಿಕಾಸ ಮುಂದುವರಿದಾಗ ಮನುಷ್ಯ ಕಾಣಿಸಿಕೊಂಡ. ಅವನಿಗೆ ವಿಶ್ವದಲ್ಲಿ ವಿಶೇಷ ಸ್ಥಾನವೇನೂ ಇಲ್ಲ. ಈ ಸಿದ್ಧಾಂತ ಇಡೀ ಯೂರೋಪಿನಲ್ಲಿ ಅಲ್ಲೋಲ ಕಲ್ಲೋಲವನ್ನುಂಟುಮಾಡಿತು. ಅನೇಕರು ಆವರೆಗೆ ಪರಂಪರಾಗತವಾಗಿ ಬಂದಿದ್ದ ಧಾರ್ಮಿಕ ನಂಬಿಕೆಗಳನ್ನು ಕಳೆದುಕೊಂಡರು. ಜಾರ್ಜ್ ಎಲಿಯಟಳ ವಯಸ್ಸಿನವನೇ ಆದ ಹರ್‌ಬರ್ಟ್ ಸ್ಪೆನ್ಸರ್ ಎನ್ನುವಾತ ಸಮಾಜದ ಬೆಳವಣಿಗೆ ಮನುಷ್ಯನ ಮನಸ್ಸಿನ ವ್ಯಾಪಾರ ಇವನ್ನೆಲ್ಲ ಕುರಿತು ಜನರ ವಿಚಾರ ಶಕ್ತಿಯನ್ನು ಪ್ರಚೋದಿಸುವ ಪುಸ್ತಕಗಳನ್ನು ಬರೆದ. ಜೀವವು ವಿಕಾಸವಾದಂತೆಯೇ ಸಮಾಜವೂ ವಿಕಾಸವಾಗುತ್ತದೆ ಎಂಬ ವಿಚಾರವನ್ನು ಪ್ರತಿಪಾದಿಸಿದ ಎಲಿಯಟಳು ಇವನ ಪುಸ್ತಕಗಳನ್ನು ಓದಿದ್ದಳು.

ಮುಂದಿನದು 'ರಮೋಲ' ಎಂಬ ಚಾರಿತ್ರಿಕ ಕಾದಂಬರಿ. ಇದು ಅಷ್ಟೇನೂ ಯಶಸ್ವಿಯಾಗಲಿಲ್ಲ. ೧೮೬೬ ರಲ್ಲಿ 'ಫೆಲಿಕ್ಸ್ ಹೋಲ್ಟ್' ಪ್ರಕಟವಾಯಿತು. ಇದರ ನಾಯಕ ಸಮಾಜದಲ್ಲಿ ತೀವ್ರ ಬದಲಾವಣೆಗಳಾಗಬೇಕೆಂದು ಹಂಬಲಿಸುವ ತರುಣ. ೧೮೭೧-೨ ರಲ್ಲಿ ಎಂಟು ಭಾಗಗಳಲ್ಲಿ ಪ್ರಕಟವಾದ 'ಮಿಡ್ಲ್‌ಮಾರ್ಚ್' ಅನ್ನು ಬಹುಮಂದಿ ಅತ್ಯುತ್ತಮ ಕಾದಂಬರಿ ಎಂದು ಪರಿಗಣಿಸುತ್ತಾರೆ. 'ಡ್ಯಾನಿಯಲ್ ಡೆರೋಂಡ' (೧೮೭೬) ಅವಳ ಕೊನೆಯ ಕಾದಂಬರಿ. ಅಂತಹ ಒಳ್ಳೆಯ ಕೃತಿಯೇನೂ ಅಲ್ಲ.

ಜಾರ್ಜ್ ಎಲಿಯಟ್, ಜಾರ್ಜ್ ಲೂಯಿಸ್ ಸಮಾಜದ ಕೆಂಗಣ್ಣನ್ನು ಎದುರಿಸಿಯೂ ಸಂತೋಷವಾಗಿಯೇ ಬಾಳುತ್ತಿದ್ದರು. ಮದುವೆಯಾಗದೆ ಒಟ್ಟಿಗೆ ಇದ್ದ ಅವರ ವಿಷಯದಲ್ಲಿ ಆ ಕಾಲದಲ್ಲಿ ಸಮಾಜ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿತು. ಇಬ್ಬರೂ ತಮ್ಮ ಹಲವರು ನಂಟರಿಂದ, ಸ್ನೇಹಿತರಿಂದ ದೂರವಾಗಬೇಕಾಯಿತು. ಆದರೂ ಸಂತೋಷವಾಗಿಯೇ ಬದುಕಿದರು. ಪ್ರವಾಸಗಳನ್ನು ಕೈಗೊಂಡರು. ಜಾರ್ಜ್ ಎಲಿಯಟಳ ಹೆಸರು ಹಬ್ಬಿದಂತೆ ಹೆಚ್ಚು ಹೆಚ್ಚು ಮಂದಿ ಗಂಡ ಹೆಂಡತಿಯರ ಭೇಟಿಗೆ ಬರಲಾರಂಭಿಸಿದರು. ಕ್ರಮೇಣ ಅವಳೂ ತನ್ನ ಸಂಕೋಚವನ್ನು ಬದಿಗೊತ್ತಿ ಜನರೊಂದಿಗೆ ಬೆರೆಯಲಾರಂಭಿಸಿದಳು. ಆದರೆ ೧೮೭೮ ರ ಕೊನೆಯಲ್ಲಿ ಲೂಯಿಸ್ ಇದ್ದಕ್ಕಿದ್ದಂತೆ ತೀರಿಕೊಂಡ. ಇಪ್ಪತ್ತನಾಲ್ಕು ವರ್ಷ ಅವನೊಂದಿಗೆ ಬಾಳಿದ ಜಾರ್ಜ್ ಎಲಿಯಟಳಿಗೆ ಇದೊಂದು ತಡೆಯಲಾಗದ ಆಘಾತ. ಅವಳ ದುಃಖದಲ್ಲಿ ಅವಳಿಗೆ ಸಾಂತ್ವನ ನೀಡಿದವನು ಜಾನ್ ವಾಲ್ಟರ್ ಕ್ರಾಸ್ ಎಂಬಾತ. ೧೮೮೦ರ ಮಾರ್ಚ್‌ನಲ್ಲಿ ಜಾರ್ಜ್ ಎಲಿಯಟ್ ಅವನನ್ನು ಮದುವೆಯಾದಳು. ಅದೇವರ್ಷ ಡಿಸೆಂಬರಿನಲ್ಲಿ ತೀರಿಕೊಂಡಳು. ಆಗತಾನೆ ಅರವತ್ತೊಂದು ವರ್ಷ ದಾಟಿದ್ದಳು.

ಜಾರ್ಜ್ ಎಲಿಯಟಳ ಕಾದಂಬರಿಯ ಕೇಂದ್ರ ಪಾತ್ರಗಳು ಜನಸಾಮಾನ್ಯರಿಂದ ಆರಿಸಿದವು. ಇವರು ಶ್ರೀಮಂತರಲ್ಲಿ, ಹಿರಿಯ ಸ್ಥಾನಗಳಲ್ಲಿ ಇರುವವರಲ್ಲ. ಆ್ಯಡಂ ಬೀಡ್, ಸೈಲಸ್ ಮಾರ್ನರ್, ಫೆಲಿಕ್ಸ್ ಹೋಲ್ಟ್ ಮ್ಯಾಗಿ ಟೆಲಿವರ್, ('ಮಿಡ್ಲ್‌ಮಾರ್ಚ್'ನ) ಡರೊಥಿಯ ಎಲ್ಲ ಸಾಮಾನ್ಯ ಜನರೇ. ಈ ಸಾಮಾನ್ಯ ಜನರ ಬದುಕಿನ ಸಾಧಾರಣ ಘಟನೆಗಳ, ಏಳುಬೀಳುಗಳ ಮೂಲಕ ಜಾರ್ಜ್ ಎಲಿಯಟ್ ವ್ಯಕ್ತಿ—ಸಮಾಜಗಳ ಸಂಬಂಧ, ಇಂದು—ನಿನ್ನೆ ಮೊನ್ನೆಗಳ ಸಂಬಂಧ, ಬದುಕಿನ ಸಾರ್ಥಕತೆ ಇವನ್ನು ವಿಶ್ಲೇಷಿಸಲು ಹೊರಡುತ್ತಾಳೆ. ತನ್ನ ಉದ್ದೇಶ, ತನ್ನ ನಂಬಿಕೆಗಳನ್ನು ಅವಳೇ ಹೀಗೆ ಸಂಗ್ರಹವಾಗಿ ಹೇಳಿದ್ದಾಳೆ. ಅವಳ ಉದ್ದೇಶ. "ಸಾಮಾನ್ಯ ಕಷ್ಟನಿಷ್ಠುರಗಳ ವಿಷಯದಲ್ಲಿ ನಿಮ್ಮ ಕಸಿಕರ ಎಚ್ಚೆತ್ತುಕೊಳ್ಳುವಂತೆ ಮಾಡುವುದು, ನಿಜವಾದ ದುಃಖಕ್ಕಾಗಿ ನೀವು ಕಣ್ಣೀರಿಡುವಂತೆ ಮಾಡುವುದು ನನ್ನ ಅಪೇಕ್ಷೆ; (ನಾನು ಚಿತ್ರಿಸುವುದು) ನಿಮ್ಮ ಪಕ್ಕದ ಮನೆಯಲ್ಲೇ ಇರಬಹುದಾದಂತಹ ದುಃಖವನ್ನು ತೀರ ಚಿಂದಿ ಬಟ್ಟೆಯನ್ನಾಗಲಿ ಮುಕವಲ್ಲನ್ನಾಗಲಿ ಧರಿಸಿ ನಡೆಯುವ ದುಃಖವನ್ನಲ್ಲ, ಬಹು ಸಾಧಾರಣವಾದ ಸಭ್ಯ ಉಡುಗೆಯಲ್ಲಿ ನಡೆಯುವ ದುಃಖವನ್ನು." ಅವಳ ನಂಬಿಕೆ : ನಾನು ಆಶಾವಾದಿಯೂ ಅಲ್ಲ, ನಿರಾಶಾವಾದಿಯೂ ಅಲ್ಲ, ನಾನೊಬ್ಬ 'ಮೀಲಿಯೊರಿಸ್ಟ್.'" (ಎಂದರೆ, ಪ್ರಪಂಚ

ಉತ್ತಮಗೊಳ್ಳುವುದು ಸಾಧ್ಯ, ಉತ್ತಮಗೊಳ್ಳುತ್ತಲೂ ಇದೆ, ಆದರೆ ಸುಧಾರಣೆ ಬಹು ನಿಧಾನ, ಇದಕ್ಕೆ ಅಡ್ಡಿಗಳೂ ಹಲವಾರು ಎಂದು ನಂಬುವ ವ್ಯಕ್ತಿ.)

ಪ್ರಪಂಚ, ಬದುಕು ಉತ್ತಮವಾಗಬೇಕಾದದ್ದು ಮನುಷ್ಯನಿಂದ. (ಸಾಂಪ್ರದಾಯಿಕ ಮತದಲ್ಲಿ ಜಾರ್ಜ್ ಎಲಿಯಟ್ ಚಿಕ್ಕ ವಯಸ್ಸಿನಲ್ಲಿ ನಂಬಿಕೆಯನ್ನು ಕಳೆದುಕೊಂಡಳೆಂಬ ಮಾತನ್ನು ಹಿಂದೆಯೇ ಹೇಳಿದೆ.) ಮನುಷ್ಯನಲ್ಲೂ ಪ್ರಾಣಿಯ ಪ್ರವೃತ್ತಿಗಳೇ ಇವೆ. ಆದರೆ ಅವನು ನಾಗರಿಕ ಸಮಾಜದ ಭಾಗವೂ ಹೌದು. ಸಮಾಜ ಸೃಷ್ಟಿಸಿ ರೂಪಿಸಿರುವ ನಾಗರಿಕತೆ ನಮ್ಮ ಬೆಳವಣಿಗೆಗೆ ಸಾಧನೆ. ನ್ಯಾಯ, ಸತ್ಯ, ತ್ಯಾಗ ಇಂತಹ ಆದರ್ಶಗಳನ್ನೆಲ್ಲ ರೂಪಿಸಿ, ನಮ್ಮ ಕೈಗೆ ದೀಪಗಳನ್ನಾಗಿ ಕೊಟ್ಟಿರುವುದು ಸಮಾಜ. ಮನುಷ್ಯನಿಗೆ ಅಹಂಭಾವ ಸಹಜ. ಅಹಂನ ಪರಿಣಾಮ ಸ್ವಾರ್ಥ—ಎಲ್ಲವನ್ನೂ ತನ್ನ ಅನುಕೂಲ, ತನ್ನ ಭೋಗ ಈ ದೃಷ್ಟಿಯಿಂದಲೇ ಅಳೆಯುವುದು. ಆದರೆ ಮನುಷ್ಯನಲ್ಲಿ ಪ್ರಜ್ಞೆಯೂ ಇದೆ, ಎಂದರೆ ತಾನು ಸೃಷ್ಟಿಯ ಭಾಗ, ಸಮಾಜದ ಭಾಗ ಎಂದು ಗುರುತಿಸಿ ಯೋಚಿಸುವ ಶಕ್ತಿಯೂ ಇದೆ. ಇದೇ ಅವನ ನೈತಿಕ ಶಕ್ತಿಯ ಆಧಾರ. ಜಾರ್ಜ್ ಎಲಿಯಟ್, ಸಮಾಜಕ್ಕೆ ಪ್ರಾಮುಖ್ಯತೆ ಕೊಡುತ್ತಾಳೆ. ಸಮಾಜದಿಂದ ದೂರನಾದ ವ್ಯಕ್ತಿ ಅರ್ಥವತ್ತಾಗಿ ಬದುಕಲಾರ. ತನಗೆ ಅನ್ಯಾಯವಾಯಿತೆಂದು ಮನುಷ್ಯರಿಂದ ದೂರವಾಗಿ ಬದುಕುವ ಸೈಲಸ್ ಮಾರ್ನರನ ಬದುಕು ಎಲ್ಲ ಅರ್ಥವನ್ನೂ ಕಳೆದುಕೊಳ್ಳುತ್ತದೆ. ಅವನು ಬಂಗಾರಕ್ಕೆ ದಾಸನಾಗುತ್ತಾನೆ. ಅವನು ಕೂಡಿಟ್ಟ ಬಂಗಾರ ಮಾಯವಾದಾಗ ಇತರ ಹಳ್ಳಿಯವರ ಸಹಾನುಭೂತಿ ಅವನಿಗೆ ಲಭ್ಯವಾಗುತ್ತದೆ. ಅವನಿಗೆ ಗೊತ್ತಿಲ್ಲದೆ ಪುಟ್ಟ ಮಗು ಅವನ ಮನೆಯೊಳಕ್ಕೆ ಬಂದು ನಿದ್ರೆ ಹೋಗಿರುವಾಗ ಮನೆಗೆ ಬಂದ ಸೈಲಸನಿಗೆ ಮೊದಲು ಮಗುವಿನ ಬಂಗಾರದ ಬಣ್ಣದ ಕೂದಲು ಕಂಡು, ತನ್ನ ಬಂಗಾರ ಮತ್ತೆ ಬಂದಿತೊ ಎಂದು ಒಂದು ಕ್ಷಣ ಅವನು ಸಂಭ್ರಮ ಪಡುವುದು ಅರ್ಥವತ್ತಾಗಿದೆ. ಕ್ರಮೇಣ ಅವನಿಗೆ ನಿಧಾನವಾಗಿ ಅರ್ಥವಾಗುತ್ತದೆ. ನಿಜವಾಗಿ ತನಗೆ ಭಾಗ್ಯ ಬಂದಿದೆ ಎಂದು, ನಿಜವಾದ ಭಾಗ್ಯ ತಾನು ಕಳೆದುಕೊಂಡ ಬಂಗಾರವಲ್ಲ, ಆದರೆ ಈ ಮಗುವೇ ಎಂದು. ಮನುಷ್ಯನಲ್ಲಿರುವ ಈ 'ಭಾವನೆ,' 'ಅನುಭೂತಿ' (ಸೆಂಟಿಮೆಂಟ್) ಬಹು ಮುಖ್ಯವಾದದ್ದು. ಇದು ಗಟ್ಟಿಯಾಗಿದ್ದಷ್ಟೂ, ಸೂಕ್ಷ್ಮವಾಗಿದ್ದಷ್ಟೂ ಮನುಷ್ಯನ ಉದ್ಧಾರ ಸಾಧ್ಯ. ಏಕೆಂದರೆ ಅವನು ಇತರರ ಜೀವನ, ಸಮೂಹ ಜೀವನ ಇವಕ್ಕೆ ಸ್ಪಂದಿಸಬಲ್ಲ. ತನ್ನ 'ಅಹಂ'ಗೆ ಕಡಿವಾಣ ಹಾಕಬಲ್ಲ. ಆದ್ದರಿಂದ ನೀತಿಯಿಂದ ಬಾಳುವುದಕ್ಕೆ ಭಾವನೆ ಬಹು ಮುಖ್ಯ. ಮನುಷ್ಯನಲ್ಲಿ 'ಅಹಂ' ಎಲ್ಲಿ ಅಡಗಿಕೊಂಡಿರುತ್ತದೆ ಎಂದು ಹೇಳುವುದು ಕಷ್ಟ. ಆ್ಯಡಂ ಬೀಡ್ ಒಳ್ಳೆಯ ಮನುಷ್ಯ, ಗಟ್ಟಿ ವ್ಯಕ್ತಿತ್ವದ ಮನುಷ್ಯ. ಕುಡುಕನಾದ ತಂದೆಯ ರೀತಿಯಿಂದ ಬೇಸತ್ತು ಹೆಂಡವನ್ನು ದೂರ ಇಟ್ಟವನು. ಕಷ್ಟಪಟ್ಟು ಕೆಲಸ ಮಾಡುತ್ತಾನೆ. ಅವನಿಗೂ ತನ್ನಲ್ಲಿ ಹುದುಗಿರುವ ಅಹಂಭಾವದ ಅರಿವಾಗುವುದು; ಥಳುಕಿನ ಶ್ರೀಮಂತ ಯುವಕನನ್ನು ನಚ್ಚಿ ಮೋಸಹೋದ ಹೆಣ್ಣು ಹೆಟ್ಟಿಯನ್ನು ಕಂಡಾಗ ಇತರರ ನೋವು, ನೋವು. ತನ್ನ ನಿಜವಾದ ಸ್ಥಾನ ಇವನ್ನು ಅರಿತುಕೊಳ್ಳುವುದು ಒಂದು ಅಪೂರ್ವ ಅನುಭವ. ಈ ಅನುಭವ ಆದಾಗಲೇ ಮನುಷ್ಯನ ಸ್ವಭಾ

ಅರಳುವುದು ಸಾಧ್ಯ. ಅಹಂಭಾವ, ಸ್ವಾರ್ಥಗಳ ಚಿಪ್ಪಿನಲ್ಲಿ ಸಿಕ್ಕಿಕೊಂಡ ಚೇತನ ಬೆಳೆಯಲಾರದು. ದುಃಖ ಎಷ್ಟೋ ಬಾರಿ ಈ ಚಿಪ್ಪನ್ನು ಒಡೆದು ಮನುಷ್ಯ ಇತರರಲ್ಲಿ ಒಂದಾಗಿ ಬೆಳೆಯುವುದನ್ನೂ ಸಾಧ್ಯ ಮಾಡುತ್ತದೆ.

ಎರಡು ಕಾರಣಗಳಿಗಾಗಿ ಜಾರ್ಜ್ ಎಲಿಯಟ್ ಸಮಾಜಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಾಳೆ. ಇತರರ ಜೊತೆಗೆ ಬದುಕಿದಾಗಲೇ, ಅವರ ಕಷ್ಟಸುಖಗಳಲ್ಲಿ ತಾನು ಭಾಗಿಯಾಗಿ ತನ್ನ ಕಷ್ಟಸುಖಗಳನ್ನು ಅವರೊಂದಿಗೆ ಹಂಚಿಕೊಂಡಾಗಲೇ ಅವನು ಮಾಗಬಲ್ಲ. ಎರಡನೆಯದಾಗಿ, ಎಲ್ಲರಿಗೂ ಸರಿ–ತಪ್ಪು, ನೀತಿ–ಅನೀತಿಗಳನ್ನು ಕಂಡುಕೊಳ್ಳುವ ವಿವೇಚನೆ ಇರುವುದಿಲ್ಲ. ಕೆಟ್ಟ ಕೆಲಸ ಮಾಡುವವರೆಲ್ಲ ಕೆಟ್ಟವರಲ್ಲ. ಅವರಲ್ಲಿ ಎಷ್ಟೋ ಮಂದಿ ಒಳ್ಳೆಯವರಾಗಿರಬೇಕೆಂದು ಬಯಸುವವರೆ. ಆದರೆ ಆಸೆಯನ್ನು, ಆಮಿಷವನ್ನು ಅವರು ಎದುರಿಸಲಾರರು. ಅವರದು ಕೆಟ್ಟತನವಲ್ಲ, ಮನಸ್ಸಿನ ದೌರ್ಬಲ್ಯ. ದೌರ್ಬಲ್ಯದಿಂದ ಒಂದು ತಪ್ಪು ಮಾಡಿ, ಅನಂತರ ಅದರಿಂದಾದ ಸುಳಿಯಲ್ಲಿ ಸಿಕ್ಕು, ತಪ್ಪುಗಳನ್ನು ಮಾಡುತ್ತಲೇ ಹೋಗಿ ಕಡೆಗೆ ಮಹಾಪರಾಧ ಮಾಡುತ್ತಾರೆ. ಆಗತಾನೆ ಹುಟ್ಟಿದ ಮಗುವನ್ನು ಕೊಲ್ಲುವುದು ಮಹಾಪಾಪ. ಈ ಕೆಲಸವನ್ನು ತಾಯಿಯೇ ಮಾಡಿದಾಗ ಅದು ಅತ್ಯಂತ ಹೀನ ಪಾಪಕೃತ್ಯವಾಗುತ್ತದೆ. 'ಆ್ಯಡಂ ಬೀಡ್'ನಲ್ಲಿ ಹೆಟ್ಟಿ ಸೋರೆಲ್ ಈ ಹೇಯಕೃತ್ಯವನ್ನು ಮಾಡುತ್ತಾಳೆ. ಎಂದರೆ, ಅವಳು ಹೆಣ್ಣಿನ ರೂಪದ ಪಿಶಾಚಿಯಲ್ಲ. ಆದರೆ ಅವಳದು ದುರ್ಬಲ ವ್ಯಕ್ತಿತ್ವ. ತನ್ನ ರೂಪಿನ ಬಗೆಗೆ ಜಂಬ. ಶ್ರೀಮಂತ ಯುವಕನೊಬ್ಬ ತನ್ನನ್ನು ಮೋಹಿಸಿದ ಎನ್ನುತ್ತಲೇ ಅವಳಿಗೆ ಖುಷಿ. ಆ ಕ್ಷಣದ ಸುಖಕ್ಕೆ ತನ್ನನ್ನು ಒಪ್ಪಿಸಿಕೊಂಡು, ಮುಂದೆ ತನ್ನ ಮಗುವನ್ನೆ ಕೊಂದು, ಗಲ್ಲಿಗೆ ಹೋಗುತ್ತಾಳೆ. 'ಸೈಲಸ್ ಮಾರ್ನರ್'ನ ಗಾಡ್‌ಫ್ರಿ ಕ್ಯಾಸ್ ಕೆಟ್ಟ ಮನುಷ್ಯನಲ್ಲ. ಆದರೆ ಒಂದು ಹೆಣ್ಣಿನ ಮೋಹಕ್ಕೆ ಸಿಕ್ಕಿ, ಮುಂದೆ ಪ್ರಾಮಾಣಿಕವಾಗಿ ಅವಳು ತನ್ನ ಹೆಂಡತಿ ಎಂದು ಎಲ್ಲರೆದುರಿಗೆ ಒಪ್ಪಿಕೊಳ್ಳಲಾರದೆ, ತನ್ನ ಮಗು ತನ್ನ ಕಣ್ಣೆದುರಿಗೇ ಅನಾಥ ಶಿಶು ಎಂದು ಬಡ ಸೈಲಸನ ಮನೆ ಸೇರುವಾಗಲೂ ತುಟಿಗಳನ್ನು ಹೊಲಿದುಕೊಳ್ಳುತ್ತಾನೆ. ಕಡೆಗೆ, ತನಗೆ ಮಕ್ಕಳಾಗದೆ ಆ ಮಗಳನ್ನೆ ಮನೆಗೆ ಕರೆತರುವೆನೆಂದು ಹೋಗಿ, ಅವಳ ಮುಂದೆ ಶ್ರೀಮಂತ ಜೀವನದ ಆಸೆಯನ್ನೊಡ್ಡಿದರೂ ಅವಳು ಬಡ ಸೈಲಸನನ್ನೆ ತಂದೆ ಎನ್ನುವಾಗ ಪಶ್ಚಾತ್ತಾಪ, ನೋವು ಹೊತ್ತು ಮನೆಗೆ ಮರಳುತ್ತಾನೆ. ಜಾರ್ಜ್ ಎಲಿಯಟಳ ಕಾದಂಬರಿಗಳಲ್ಲಿ ಈ ವಿಚಾರವೊಂದು ಮತ್ತೆ ಮತ್ತೆ ಪ್ರಕಟವಾಗುತ್ತದೆ. ಬಾಳಿನಲ್ಲಿ ಕಾರ್ಯಕಾರಣ ಸಂಬಂಧ ಉಂಟೇ ಉಂಟು. ತಪ್ಪು ಮಾಡುತ್ತೇನೆಂದು ತಿಳಿದೂ ಮಾಡುವವನು, ತಾನು ಅದರ ಪರಿಣಾಮದಿಂದ ತಪ್ಪಿಸಿಕೊಳ್ಳುತ್ತೇನೆ ಎಂಬ ಧೈರ್ಯದಿಂದಲೇ ಹೆಜ್ಜೆ ಇಡುತ್ತಾನೆ. ಆದರೆ ಇದೊಂದು ಭ್ರಾಂತಿ. ಭೂಮಿಯಲ್ಲಿ ಹಾಕಿದ ಬೀಜಗಳಲ್ಲಿ ಹಲವು ಮೊಳಕೆಯಾಗದೆ ಹೋಗಬಹುದು. ಆದರೆ ಕಾಲವೆಂಬ ಭೂಮಿಯಲ್ಲಿ ಬಿದ್ದ ಪ್ರತಿ ಬೀಜವೂ ಮೊಳಕೆಯಾಗಿಯೇ ಆಗುತ್ತದೆ.

ಸಾಂಪ್ರದಾಯಕ ಮತದಿಂದ ದೂರವಾದ ಜಾರ್ಜ್ ಎಲಿಯಟ್ ಬಾಳನ್ನು ಒಂದು ಹೊಣೆ ಎಂದು ಸ್ವೀಕರಿಸಿದಳು. ಈ ರೀತಿಯಲ್ಲಿ ಅವಳದು ಧಾರ್ಮಿಕ ಮನೋ

ಧರ್ಮ. ‘ಅತ್ಯಂತ ವಿಷಣ್ಣತೆಯ ಕಾದಂಬರಿಗಳನ್ನು ಬರೆದವಳು’ ಎಂದು ಕೆಲವರು ಅವಳನ್ನು ವರ್ಣಿಸಿರುವುದುಂಟು. ಅವಳ ಕಾದಂಬರಿಯ ಪ್ರಪಂಚ ವಿಷಾದದ ಪ್ರಪಂಚವೇ. ಆದರೆ ಅವಳು ಸೊಗಸಾದ ಹಾಸ್ಯವನ್ನೂ ಅದರಲ್ಲಿ ಕಾಣಿಸಬಲ್ಲಳು. ಹಲವೊಮ್ಮೆ ಒರಟು ಹಾಸ್ಯವೂ ಸೇರುತ್ತದೆ. ಅಂತೂ ಹಾಸ್ಯವು ಈ ಜಗತ್ತಿನ ವಿಷಾದಕ್ಕೆ ಕಟ್ಟೆ ಕಟ್ಟುತ್ತದೆ, ಇಲ್ಲಿನ ಮಬ್ಬಿನಲ್ಲಿ ಒಂದಿಷ್ಟು ಬೆಳಕನ್ನು ಹರಿಸುತ್ತದೆ. ಸಾಮಾನ್ಯವಾಗಿ ಹಾಸ್ಯ ಹಳ್ಳಿಯ ಮುಗ್ಧ ಜನರಿಂದ ಬರುತ್ತದೆ—ಅವರ ಮಾತು, ನಂಬಿಕೆಗಳು ನಗೆಯನ್ನು ಬರಿಸುತ್ತವೆ. ಇಂತಹ ಹಳ್ಳಿಯ ಜನರಲ್ಲಿ ಒಬ್ಬಿಬ್ಬರು ಶ್ರೀಮಂತರಲ್ಲದಿದ್ದರೂ, ವಿದ್ಯಾವಂತರಲ್ಲದಿದ್ದರೂ, ಹಲವೊಮ್ಮೆ ಅವರ ಮಾತು ನಮಗೆ ನಗೆಯನ್ನೇ ತಂದರೂ, ವಿವೇಚನೆಯ ದೀಪಗಳಾಗುತ್ತಾರೆ. ‘ಆ್ಯಡಂ ಬೀಡ್’ನ ಶ್ರೀಮತಿ ಪಾಯಿಸೆರ್, ‘ಸೈಲಸ್ ಮಾರ್ನರ್’ನ ಡಾಲಿ ವಿನ್‌ತ್ರಾಪ್ ಇಂತಹವರು. ಲವಲವಿಕೆಯ ಜನ, ಇತರರೊಂದಿಗೆ ಸ್ನೇಹದಿಂದ ಬೆರೆಯಬಲ್ಲವರು, ಇತರರ ದುಃಖದಲ್ಲಿ ಸಾಂತ್ವನ ನೀಡುವವರು, ಮುಖ್ಯವಾಗಿ ಅವರ ಮಾತಿನಲ್ಲಿ ಹುಟ್ಟಿನಿಂದ ಬಂದ ವಿವೇಕ, ಸ್ಪಷ್ಟವಾದ ದೃಷ್ಟಿ ಎದ್ದು ಕಾಣುತ್ತವೆ. ಸಮಾಜದ ಪರಂಪರಾಗತ ಅನುಭವ–ವಿವೇಕಗಳು ಅವರ ನಡೆನುಡಿಗಳಲ್ಲಿ ಸಹಜವಾಗಿ ಕಾಣಿಸಿಕೊಳ್ಳುತ್ತವೆ.

ಸಾಂಪ್ರದಾಯಿಕ ಮತವನ್ನು ದೂರಮಾಡಿದ ಜಾರ್ಜ್ ಎಲಿಯಟ್‌ಳ ದೃಷ್ಟಿಯಲ್ಲಿ ಮನುಷ್ಯ–ಮನುಷ್ಯರ ಸಂಬಂಧಗಳೇ ಧಾರ್ಮಿಕವಾದವು. ಮನುಷ್ಯ ಇತರ ಮನುಷ್ಯರಲ್ಲಿಡುವ ಪ್ರೀತಿ, ತೋರುವ ಗೌರವ, ಸಹಾನುಭೂತಿ, ಇತರರಿಗಾಗಿ ಮಾಡುವ ತ್ಯಾಗ ಇವೇ ಧರ್ಮ. ಈ ದೃಷ್ಟಿಯಿಂದ ಜಾರ್ಜ್ ಎಲಿಯಟ್ ವಾಸ್ತವಿಕವಾದ ಕಾದಂಬರಿಗಳನ್ನು ಬರೆದಳು. ಇಲ್ಲಿ ‘ವಾಸ್ತವಿಕತೆ’ ಎಂದರೆ ಜನರ ನಿತ್ಯ ಜೀವನವನ್ನು ಉತ್ಪ್ರೇಕ್ಷೆ ಇಲ್ಲದೆ ವಿವರವಿವರವಾಗಿ ಪುನರ್‌ಸೃಷ್ಟಿ ಮಾಡಿದಳು ಎಂದಷ್ಟೇ ಅಲ್ಲ, ಜನರ ಮನಸ್ಸಿನ ವ್ಯಾಪಾರಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದಳು. ಸಾಮಾನ್ಯ ಮನುಷ್ಯರಲ್ಲೇ ಧರ್ಮ, ನಿಜವಾದ ಧರ್ಮ, ಬೆಳಗುವ ಸಾಧ್ಯತೆಯನ್ನು ಕಂಡಳು.

ಧರ್ಮ ಧರ್ಮಗಳ ಮಧ್ಯೆ ಜಗಳವಿರಬಾರದು. ಆದರೆ ಎಲ್ಲ ಧರ್ಮಗಳೂ ಅಧರ್ಮದ ವಿರುದ್ಧ ಹೋರಾಡಬೇಕು.

ಗಾಂಧೀಜಿ

ಜಾರ್ಜ್ ಎಲಿಯಟ್—ಒಂದು ಭಾವನಾತ್ಮಕ ಪರಿಚಯ

ಅರ್ನೆಸ್ಟ್ ಎ. ಬ್ಯಾಕರ್

ಬಾಲ್ಯ: ಮೇರಿ ಅನ್ನೆ ಅಥವಾ ಮೇರಿಯನ್ ಇವಾನ್ಸ್*(೧೮೧೯–೧೮೮೦) ವಾರ್‌ವಿಕ್ ಷೈರ್‌ನ ಅರ್‌ಬರಿ ಫಾರಂನಲ್ಲಿ ಹುಟ್ಟಿದ ಕಾಲಕ್ಕೆ ಜೇನ್ ಅಸ್ಟಿನ್ ಸತ್ತು ಎರಡುವರ್ಷ ಆಗಿತ್ತು. ಜಾರ್ಜ್ ಎಲಿಯಟ್ಟಳ ತಂದೆ ಅದೇ ಫಾರಂನ ನ್ಯೂಡಿಗೇಟ್ ಕುಟುಂಬದಲ್ಲಿ ಕೆಲಸಕ್ಕಿದ್ದ. ಮೊದಲ ಹೆಂಡತಿ ತೀರಿಕೊಂಡದ್ದಕ್ಕೆ ಮರು ಮದುವೆಯಾದ. ಎರಡನೆಯ ಹೆಂಡತಿಯಲ್ಲಿ ಮೂವರು ಮಕ್ಕಳು. ಅವರಲ್ಲಿ ಕೊನೆಯವಳು ಮೇರಿಯನ್ ಇವಾನ್ಸ್. ಎಲಿಯಟ್ಟಳ ಮೊದಲ ಕತೆಗಳಲ್ಲೆಲ್ಲಾ ಇಲ್ಲಿನ ನಂಟರ, ನೆರೆಯವರ ಚಿತ್ರಣವೇ ಇದೆ. ಅವಳ ಅಣ್ಣ ಐಸಕ್, ಅಕ್ಕ ಕ್ರಿಸ್ಸೀ ಮುಂತಾದವರೊಂದಿಗಿನ ನೆನಪುಗಳೇ.

ಆದರೆ ವಾರ್ ವಿಕ್‌ಷೈರ್‌ನಲ್ಲಿದ್ದಾಗ ಎಲಿಯಟ್ಟಳದಿನ್ನೂ ಎಳೆಯ ಮನಸ್ಸು. ಅಲ್ಲಿನ ಎಲ್ಲ ಅನುಭವಗಳನ್ನು ನೋಡಿ ಗ್ರಹಿಸಿಕೊಳ್ಳುವುದು ಸಾಧ್ಯವಿತ್ತೇ? ಅಥವಾ ಭಾಗಶಃ ನಂತರ ಕೇಳಿ ಗ್ರಹಿಸಿದ್ದೇ–ಇವೆಲ್ಲಾ ಊಹೆಯ ಮಾತು.

ಹೊಸ ಅಧ್ಯಾಯಗಳು : ಇವಳ ತಾಯಿಯ ಸಾವಿನ ನಂತರ ತಂದೆ ಕೆಲಸದಿಂದ ನಿವೃತ್ತನಾದ. ಆಮೇಲೆ ಇವರ ಕುಟುಂಬ ಕವೆಂಟ್ರಿ ಎಂಬಲ್ಲಿಗೆ ಬಂದು ಮನೆ ಮಾಡಿತು. ಜಾರ್ಜ್ ಎಲಿಯಟ್ಟಳ ಜೀವನದಲ್ಲಿ ಒಂದು ಅತಿ ಮುಖ್ಯ ಘಟ್ಟ.

ಇಲ್ಲಿ ಅವಳಿಗೆ ಬ್ರೇ ದಂಪತಿಗಳ ಪರಿಚಯ ಆಯಿತು. ಬ್ರೇ ಒಬ್ಬ ರಿಬ್ಬನ್ ಉದ್ಯಮಿ. ಆತ ಕಾಂಬೆಯ ಸಾಮುದ್ರಿಕ ಶಾಸ್ತ್ರವನ್ನು ನಂಬುತ್ತಿದ್ದ, ರಾಬರ್ಟ್ ಓವನ್ನಿನ ಸಮಾಜವಾದವನ್ನು ನಂಬುತ್ತಿದ್ದ ವಿಚಿತ್ರ ವ್ಯಕ್ತಿ. ಇವನ ಭಾವ ಹೆನ್ನೆಲ್ ಮತ್ತಾತನ ಹೆಂಡತಿ

* ಜಾರ್ಜ್ ಎಲಿಯಟ್ಟಳ ನಿಜವಾದ ಹೆಸರು.

ಗ್ಗದ ಬ್ರೇ ದಂಪತಿಗಳ ಮುಖೇನವೇ ಪರಿಚಯವಾದರು. ಹೆನ್ನೆಲ್ ಏಕತಾವಾದಿ. ಆತ ಕ್ರೈಸ್ತಮತದ ಮೂಲದ ಬಗ್ಗೆ ಸಾಕಷ್ಟು ತಲೆ ಕೆಡಿಸಿಕೊಂಡಿದ್ದ. ಆ ಸಮಸ್ಯೆಯನ್ನು ಹೊಸ ದೃಷ್ಟಿಯಿಂದ ನೋಡುವ ಅಗತ್ಯವನ್ನು ಒಪ್ಪಿಕೊಂಡಿದ್ದ. ಆ ಹೊಸ ದೃಷ್ಟಿ ಎಂಬುದು 'Life of Jesus' ಎಂಬ ಕೃತಿಯನ್ನು ಬರೆದ ಸ್ಟ್ರಾಸ್‌ನ ನಿಲುವಿಗೆ ಹತ್ತಿರದ್ದೇ ಆಗಿತ್ತು.

ಮೇಲಿನ ಇಬ್ಬರ ಜತೆ ನಡೆಸಿದ ಮಾತುಕತೆಗಳು ಜಾರ್ಜ್ ಎಲಿಯಟ್ಟಳಮೇಲೆ ಸಾಕಷ್ಟು ಪ್ರಭಾವ ಬೀರಿದವು. ಈ ಕಾಲದಲ್ಲೇ ಶ್ರೀಮತಿ ಹೆನ್ನೆಲ್ ಕೈಗೊಂಡ ಸ್ಟ್ರಾಸ್‌ನ 'Life of Jesus' ನ ಅನುವಾದವನ್ನು ಎಲಿಯಟ್ ಮುಂದುವರೆಸಿ ೧೮೪೬ ರಲ್ಲಿ ಪ್ರಕಟಿಸಿದಳು.

ಸಂಪಾದಕಿಯಾಗಿ : ೧೮೪೯ ರಲ್ಲಿ ಎಲಿಯಟ್ಟಳ ತಂದೆ ಕಣ್ಮುಚ್ಚಿದ. ಇದರಿಂದ ಅವಳ ಆರೋಗ್ಯ ಮನಸ್ಸು ಎರಡೂ ಕೆಟ್ಟಿತು. ಆಗ ಬ್ರೇ ದಂಪತಿಗಳು ಅವಳನ್ನು ವಿದೇಶಕ್ಕೆ ಕರೆದುಕೊಂಡು ಹೋದಳು. ಜಿನೀವಾದಲ್ಲಿದ್ದಾಗ ಅವಳು ಹೆಚ್ಚು ಕಡಮೆ ಸ್ವಸ್ಥಳಾದಳು. ಮತ್ತೆ ಅಧ್ಯಯನ ಮತ್ತು ವಿಚಾರಗಳಲ್ಲಿ ಕರಗಲು ಮೊದಲು ಮಾಡಿದಳು. ಇಂಗ್ಲೆಂಡಿಗೆ ಮರಳಿದ ಮೇಲೆ ಸ್ವಲ್ಪಕಾಲ ಬ್ರೇ ದಂಪತಿಗಳ ಜತೆಯೇ ಉಳಿದುಕೊಂಡಳು.

ವಿದೇಶದಿಂದ ಮರಳಿದ ಕೂಡಲೇ West Minister Review ಎಂಬ ಪತ್ರಿಕೆಗೆ ಬರೆಯಲು ಪ್ರಾರಂಭಿಸಿದಳು. (ಇದು ರ್‍ಯಾಡಿಕಲ್ ಪಾರ್ಟಿಯ ಮುಖವಾಣಿಯಾಗಿತ್ತು). ಕೊನೆಗೆ ಅದೇ ಪತ್ರಿಕೆಯ ಉಪಸಂಪಾದಕತ್ವಕ್ಕೆ ಆಹ್ವಾನವೂ ಬಂತು. ಈ ಆಹ್ವಾನವನ್ನು ಒಪ್ಪುವುದಾದರೆ ಲಂಡನ್ನಿನಲ್ಲಿ ಮನೆ ಮಾಡಬೇಕು. ಲಂಡನ್ನಿನಲ್ಲಿ ಹರ್ಬರ್ಟ್ ಸ್ಪೆನ್ಸರ್, ಫ್ರಾನ್ಸಿಸ್ ನ್ಯೂಮನ್ ಅಂಥವರ ಪರಿಚಯ ಆಯಿತು. ಸ್ಪೆನ್ಸರ್ ಮುಖೇನ ಜಿ. ಎಚ್. ಲೂಯಿಸ್ ಪರಿಚಯವಾದ. ಆತ ಅಂದಿನ ವಿಚಾರವಂತರಲ್ಲಿ ಗಣ್ಯನಾಗಿದ್ದ. ಲೂಯಿಸ್‌ನಲ್ಲಿ ಎಲಿಯಟ್ ಆಸಕ್ತಳಾದಳು. ಆತ ತನ್ನ ಹೆಂಡತಿಯಿಂದ ಬೇರೆಯಾಗಿದ್ದರೂ ವಿವಾಹ ವಿಚ್ಛೇದನ ಪಡೆಯಲಾಗಿರಲಿಲ್ಲ. ಎಲಿಯಟ್ ಹಾಗೂ ಲೂಯಿಸ್ ಶಾಸನಬದ್ಧವಾಗಿ ವಿವಾಹವಾಗಲು ಇದೇ ಅಡ್ಡಿಯಾಗಿತ್ತು. ಆದರೂ ಅವರು ತಮ್ಮ ದಾಂಪತ್ಯವನ್ನು ಶಾಸನಬದ್ಧ ದಾಂಪತ್ಯದಷ್ಟೇ ಪವಿತ್ರ ಎಂದು ನಂಬಿದರು. ಎಲಿಯಟ್ ಲೂಯಿಸ್‌ಗೆ ಅರ್ಪಿಸಿದ ಎಲ್ಲ ಕೃತಿಗಳಲ್ಲೂ "ನನ್ನ ಪ್ರೀತಿಯ ಗಂಡನಿಗೆ" ಎಂಬ ಒಕ್ಕಣೆಯಲ್ಲೇ ಇದೆ.

೧೮೫೪–೫೫ ರಲ್ಲಿ ಈ ದಂಪತಿಗಳು ಜರ್ಮನಿಗೆ ಹೋದರು. ಆಗ ಲೂಯಿಸ್ ಗಯಟೆಯ ಜೀವನದ ಮೇಲೆ ಸಂಶೋಧನೆ ನಡೆಸುತ್ತಿದ್ದ. ಅಲ್ಲಿಂದ ಮರಳಿದ ಮೇಲೆ ಲೂಯಿಸ್‌ನ ನಿರಂತರ ಪ್ರೋತ್ಸಾಹ–ಸಹಾಯದ ಬೆಂಬಲದಿಂದಲೇ ತನ್ನ ಮೊದಲ ಕತೆ 'ಅಮೋಸ್ ಬರ್ಟನ್' ಬರೆದಳು. (೧೮೫೭) ಅವಳ ಎರಡನೆಯ ಕತೆ 'Mr. Gilfil's Love Story' ಬರೆದಾಗಲಷ್ಟೇ ಮೇರಿಯನ್ ಇವಾನ್ಸ್ ಜಾರ್ಜ್ ಎಲಿಯಟ್ಟಳಾಗಿ ಬದಲಾದದ್ದು.

ಲೂಯಿಸ್ ಸಾಯುವವರೆಗೆ (೧೮೭೮) ಅವನೊಂದಿಗೇ ಬಾಳಿದ ಆಕೆ ತನ್ನ ಮುಂದಿನ ಜೀವನದ ಹೆಚ್ಚು ಕಾಲವನ್ನು ಲಂಡನ್ನಿನಲ್ಲಿ ಕಳೆದಳು. ತನ್ನ ಸಾವಿಗೆ ಕೆಲವ

ತಿಂಗಳು ಮುಂಚೆ ಅವಳ ಗೆಳೆಯ ಜಾನ್ ವಾಲ್ಟರ್‌ಸ್ಕ್ರಾಟ್ ಅನ್ನು ಮದುವೆ ಆದಳು. ನಂತರ ಇವನೇ ಇವಳ ಜೀವನ ಚರಿತ್ರೆಯನ್ನು ಬರೆದ.

ವಾಸ್ತವವಾದ ಮತ್ತು ಎಲಿಯಟ್ : ಇಂಗ್ಲಿಷ್ ಕಾದಂಬರಿಯ ಇತಿಹಾಸ ದಲ್ಲಿ ಇವಳದು ಬ್ರಾಂಟೆ ಸೋದರಿಯರಷ್ಟೇ ವಿಶಿಷ್ಟ ಸ್ಥಾನ. ಇವಳ ಕೈವಾಡದಿಂದಾಗಿ ಅಂದಿನ ಇಂಗ್ಲಿಷ್ ಕಾದಂಬರಿ ಕೇವಲ ಮನರಂಜನೆಯ ಸಾಧನವಾಗದೆ ವೈಚಾರಿಕತೆಯ ಬನಿಯನ್ನು ಪಡೆಕೊಂಡದ್ದನ್ನು ನಮ್ಮ ವಿಮರ್ಶಕರು ಮೇಲಿಂದ ಮೇಲೆ ಗುರುತಿಸುತ್ತಲೇ ಬಂದಿದ್ದಾರೆ. ಕಾದಂಬರಿ ಆ ನಡುವೆ ದಕ್ಕಿಸಿಕೊಂಡಿದ್ದ ಯಾವ ಕ್ರಿಯಾಶೀಲ ನಾಟಕೀಯ ಗುಣಗಳನ್ನು ಕಳೆದುಕೊಳ್ಳದೆ, ತನ್ನ ವಿಚಾರಶೀಲತೆಯ, ವ್ಯಾಖ್ಯಾನದ ಹಕ್ಕನ್ನು ಎಲಿಯಟ್ಟಳಿಂದಾಗಿ ಮರಳಿ ಪಡೆಯಿತು.

ಹೀಗಾಗಲು ಎಲಿಯಟ್ಟಳ ವ್ಯಕ್ತಿತ್ವವೂ ಕಾರಣ. ಅವಳು ತನ್ನ ಅನುಭವಗಳಿಗೆ ಕಲಾತ್ಮಕ ಅಭಿವ್ಯಕ್ತಿಯನ್ನು ನೀಡಲು ಮನಸ್ಸು ಮಾಡುವುದಕ್ಕೆ ಎಷ್ಟು ವಂಚಿತ ಮುಂಚಿತವಾಗಿಯೇ ತತ್ತ್ವಶಾಸ್ತ್ರ, ಮನಶ್ಶಾಸ್ತ್ರದ ಶ್ರದ್ಧಾವಂತ ವಿದ್ಯಾರ್ಥಿಯಾಗಿದ್ದಳು. ನಾಡಿನ ಗಣ್ಯ ವಿಚಾರವಂತರ ಗೆಳತಿ, ಸಹಭಾಗಿಯಾಗಿದ್ದಳು. ತನ್ನ ಲೇಖನಗಳ ಬನಿಯಾದ ನೈತಿಕ–ಸಾಮಾಜಿಕ ನಿಲುವುಗಳಿಂದಾಗಿ ಸಾಕಷ್ಟು ಗಮನ ಸೆಳೆದಿದ್ದಳು.

ಈ ವೈಚಾರಿಕತೆಯ ಹಿನ್ನೆಲೆ ಅವಳ ಕಲೆಗಾರಿಕೆಯನ್ನು ರೂಪಿಸುವುದರಲ್ಲಿ ಮುಖ್ಯ ಪಾತ್ರ ವಹಿಸಿತು. ಅದು ಅವಳ ಬಾಲ್ಯದ ನೆನಪುಗಳು ಮಾಸುವುದಕ್ಕೆ ಮುಂಚೆಯೇ ಅವಕ್ಕೆ ಒಂದು 'ಪ್ರೌಢ' ಆಯಾಮವನ್ನು ಕೊಟ್ಟು ಆಕೆಗೆ ತನ್ನ ಹಳೆಯ ಅನುಭವವನ್ನು ಹೊಸ ವ್ಯಾಖ್ಯೆಯಲ್ಲಿ, ಹಾಗೂ ಹೊಸ ಪರಿಸ್ಥಿತಿಯಲ್ಲಿ ಹೊಸ ಪಾತ್ರಗಳ ಮುಖೇನ ಸೃಷ್ಟಿಸಲು ನೆರವಾಯಿತು. ಅವಳ ಕಾದಂಬರಿಯಲ್ಲಿ ಮನಸ್ಸು ತತ್ತ್ವಶಾಸ್ತ್ರದ ಮುಖೇನ ಜೀವನವನ್ನು ನೋಡುವಂತಾಯಿತು.

ಅವಳ ಓರಗೆಯ ಲೇಖಕರ ಜತೆ ಇಟ್ಟು ನೋಡಿದಾಗ ಎಲಿಯಟ್ಟಳ ಈ ರೀತಿ ನವ್ಯ ಎನಿಸುತ್ತಿತ್ತು. ಉಳಿದವರು ತಮ್ಮ ಕಾದಂಬರಿಯಲ್ಲಿ ಕಾಮನ್‌ಸೆನ್ಸ್‌ಗಿಂತ ಹೆಚ್ಚಿನ ತಾತ್ತ್ವಿಕತೆಯನ್ನು ನಿರೀಕ್ಷಿಸುತ್ತಿರಲಿಲ್ಲ. ಆದರೆ ಚಾರಿತ್ರಿಕವಾಗಿ ನೋಡಿದರೆ ಇಂಗ್ಲಿಷ್ ಕತೆಗಾರಿಕೆಯಲ್ಲಿ ನೀತಿ ಹೇಳುವ ವ್ಯಾಖ್ಯಾನ ಮಾಡುವ ಒಂದು ಪರಂಪರೆಯೇ ಇತ್ತು. ಹಾಗಾಗಿ ಕಾದಂಬರಿ ಎಂದರೆ ಪ್ರಬಂಧದ ಸೋದರಳಿಯ ಎನ್ನುವ ಪರಿಸ್ಥಿತಿಯೇ ಇತ್ತು. ಫೀಲ್ಡಿಂಗ್ ಕಾದಂಬರಿಯಿಂದ ಆಚೆಗೆ ಹೇಳಬೇಕಾದ್ದನ್ನು ಮುನ್ನುಡಿಯಲ್ಲಿ ಹೇಳಿದರೆ, ಎಲಿಯಟ್ ಅವನ್ನು ತನ್ನ ಕಾದಂಬರಿಯ ಪಾತ್ರಗಳ ಬಾಯಿಗೇ ಹಾಕುತ್ತಿದ್ದಳು. ಬೇಕಾದರೆ ಅದರ ಜತೆಗೆ ಮುನ್ನುಡಿಯಲ್ಲೂ ಬರೆಯುತ್ತಿದ್ದರು. (ನಿಜ, ಫೀಲ್ಡಿಂಗ್‌ಗೆ ಸಾಧ್ಯವಾಗದ ಮನುಷ್ಯನ ಮನಸ್ಸಿನ ಸಮೀಪದ ವಿಶ್ಲೇಷಣೆ ಎಲಿಯಟ್ಟ ಳಿಗೆ ಸಾಧ್ಯವಿತ್ತು. ಆ ಮಾತು ಬೇರೆ)

'ಸತ್ಯ'ವನ್ನು ಹಾಗೇ ಒಂದು ಚೂರೂ ಆದರ್ಶಗೊಳಿಸದ ತನ್ನ ಎಲ್ಲಾ ವೈಚಾರಿಕತೆಯೊಂದಿಗೆ ಹೇಳುವ ಶ್ರದ್ಧಾಪೂರ್ವಕ ನಿರ್ಧಾರ ಎಲಿಯಟ್ಟಳದು. ಜಾರ್ಜ್ ಎಲಿಯಟ್ಟಳಿಗೆ 'ಸತ್ಯ' ಒಂದು ನಿಷ್ಠೆಯಾಗಿತ್ತು. ಒಂದು ಧರ್ಮವೇ ಆಗಿತ್ತು. ಅವಳ ಪ್ರಕಾರ 'ಸತ್ಯ' ಕಾದಂಬರಿಯ ಏಕಮಾತ್ರ ಕರ್ತವ್ಯವಾಗಿತ್ತು. ಆದರಿಂದಲೇ, ಅವಳ ಕಾದಂಬರಿಗಳಲ್ಲಿ ಕತೆಯ ಮಧ್ಯೆ ಅವಳೇ ಬಂದು ಮಾಡುವ ಟೀಕೆ, ತರುವ ನೆನಪುಗಳು

ಕತೆಯ ಪ್ರಭಾವಕ್ಕೆ ಧಕ್ಕೆ ತಂದರೂ ಅವು 'ಸತ್ಯ'ವನ್ನು ಇನ್ನೂ ಹೆಚ್ಚು 'ಸತ್ಯ'ಗೊಳಿಸ ತ್ತವೆ ಎಂದೇ ನಂಬಿ ತಂದಂಥವು.

'Adam Bede' ಯ ಎರಡನೆಯ ಭಾಗದಲ್ಲಿ ಆ ವಿಷಯಕ್ಕೆ ಅವಳು ಹೇಳುವ ಮಾತುಗಳು ಗಮನಾರ್ಹವಾದವು. "ನಾನು ವಾಸ್ತವವನ್ನ ಅದಕ್ಕೆ ಬಣ್ಣ ಕಟ್ಟದೆ ಸುಳ್ಳಿಗಲ್ಲದೆ ಇನ್ನಾವುದಕ್ಕೂ ಹೆದರದೆ ಈ ಸರಳ ಕತೆಗಳಲ್ಲೇ ತೃಪ್ತಳಾಗುತ್ತಿದ್ದೇನೆ ಸುಳ್ಳು ಹೇಳುವುದು ತುಂಬಾ ಸುಲಭ. ನಿಜ ಅಷ್ಟೇ ಕಷ್ಟ.....ಸತ್ಯದ ಈ ಅಪರೂಪದ ಅಮೂಲ್ಯ ಗುಣಕ್ಕಾಗಿಯೇ ನಾನು ಅನೇಕರು ಮೂಗು ಮುರಿಯುವ ಡಚ್ ವರ್ಣ ಚಿತ್ರಗಳನ್ನು ಮೆಚ್ಚಿಕೊಳ್ಳುತ್ತೇನೆ. ಈ ಪ್ರಾಮಾಣಿಕ ಚಿತ್ರಗಳ ಏಕತಾನತೆಯ ಅತ್ಯಪ್ರಿಯ ಅಸ್ತಿತ್ವದಲ್ಲಿ ನನಗೆ ರುಚಿ ಸಿಗುತ್ತದೆ. ಹಾಗೆ ನೋಡಿದರೆ (ಇನ್ನೆಷ್ಟೋ ತರದ ಬದುಕಿಗಿಂತ) ಈ ಏಕತಾನತೆಯೇ ನಮ್ಮಲ್ಲಿ ಹಲವರ ವಿಧಿಯಾಗಿದೆ."

ಆದರೆ ಅವಳ ಮುಂದಿನ ಕೃತಿಗಳಲ್ಲಿ ಸ್ಪಷ್ಟವಾದಂತೆ (ಈ ಕಾದಂಬರಿಯಲ್ಲೂ ಸೂಚ್ಯವಾಗಿ ಇದೆ) ಜಾರ್ಜ್ ಎಲಿಯಟ್ ವಿಮರ್ಶಾತ್ಮಕ ವಾಸ್ತವ ವಾದದಲ್ಲೇ ತೃಪ್ತಿ ಹೊಂದಲಿಲ್ಲ. ಬದುಕಿನಿಂದ ತುಸು ದೂರವಾಗಿ, ಎತ್ತರದಲ್ಲಿಲ್ಲೂ ದಯೆ ದಾರುಣ್ಯಕ್ಕೆ ಅಲ್ಲಾಡದೆ ನಿಂತು ಬರಿ ವ್ಯಾಖ್ಯಾನಿಸುವುದು ಅವಳ ವ್ಯಕ್ತಿತ್ವಕ್ಕೆ ಸಾಧ್ಯವಿರಲಿಲ್ಲ. ಆಕೆಯ ದಯಾವಂತಿಕೆ ಪ್ರೀತಿ ಅವಳನ್ನು ಹಾಗೇ ಉಳಿಯಲು ಬಿಡಲಿಲ್ಲ. ಬ್ರಾಂಟೆ ಸೋದರಿಯ ರಂತೆಯೇ, ಎಲಿಯಟ್ಟಳೂ ಬದುಕಿನ ಆಧ್ಯಾತ್ಮಿಕತೆಯಲ್ಲಿ, ಮನುಷ್ಯನ ಅಂತರಂಗದ ಮೌಲ್ಯಗಳಿಗೆ, ಮನಸ್ಸಿನ ಒಳಗೆ ನಡೆಯುವ ಘಟನೆಗಳ ಮಹತ್ವದಲ್ಲಿ ನಂಬಿಕೆ ಯಿಟ್ಟಿದ್ದಳು.

ಇವಳಲ್ಲಿ ಸುಸಂಬದ್ಧ ಸಿದ್ಧಾಂತವೊಂದೇನೂ ಇರಲಿಲ್ಲ. ಅದು ಹಾಗೆ ಆಗುವುದೂ ಸಾಧ್ಯವಿರಲಿಲ್ಲ. ತನ್ನ ಚಿಕ್ಕಂದಿನ ಇವಾಂಜೆಲಿಕಲ್ ಪಂಥವನ್ನು ಆಚರಣೆಯಲ್ಲಿ ಕೈಬಿಟ್ಟಳು ನಿಜ. ಆದರೆ ಅದಕ್ಕೆ ಬದಲಾಗಿ ಸ್ಪಿನೋಜನ ತತ್ತ್ವಗಳು ಬಂದರೂ ಅವು ಅವಳನ್ನು ಆಕ್ರಮಿಸಿಕೊಳ್ಳಲಿಲ್ಲ. ತನ್ನ ಸತ್ಯದ ಸಿದ್ಧಾಂತಕ್ಕೆ ಒಗ್ಗುವ ಯಾವುದೇ ತತ್ತ್ವವನ್ನು ಅವಳು ಕಂಡೇಟಿಗೆ ಕೈಚಾಚಿ ಹಿಡಿದುಕೊಳ್ಳುತ್ತಿದ್ದಳು. ಆದರೆ ಮನುಷ್ಯನ ಉತ್ತಮಿಕೆಯ ಶೋಧನೆಯ ಪ್ರಶ್ನೆ ಬಂದಾಗ ಅವಳಿಗೆ ಯಾವ ಸಿದ್ಧಾಂತಗಳ ನೆರವೂ ಕಾಣದೆ ತನ್ನ ಬಾಲ್ಯದ ಎವಾಂಜಲಿ ಕಲಿ ಸಿದ್ಧಾಂತಗಳಿಗೆ ಮರಳುತ್ತಿದ್ದಳು. ಅವಳ ತಾತ್ತ್ವಿಕತೆ ಕೇವಲ ನೈತಿಕವಾದದ್ದು ಮಾತ್ರ ಆಗಿತ್ತು. ಉಳಿದದ್ದು ಮಾನವೀಯ ತುಡಿತ ಅಂದರೆ—ಕಲೆಗಾರಿಕೆಯ ತುಡಿತ ಅಷ್ಟೆ.

ಅವಳು ಚಿಕ್ಕವಳಿದ್ದಾಗ ಓದಿದ್ದು ವರ್ಡ್ಸ್‌ವರ್ಥ್ ಅನ್ನು. ಬೆಳೆದ ಮೇಲೂ ಅವನೇ ಅವಳ ಮೆಚ್ಚಿನ ಕವಿಯಾಗಿದ್ದ. ಅವನು ಕಂಡುಕೊಂಡ 'ವ್ಯಕ್ತಿಯ ಐಕ್ಯ'ದ ('the unity of man') ಚಿತ್ರವೇ ಇವಳದ್ದೂ ಆಗಿತ್ತು. ಇವಳಿಗೆ ಅವನಂತೆ ಜೀವನದ ಅನಂತತೆಯಲ್ಲಿ ನಂಬಿಕೆಯಿತ್ತೋ ಇರಲಿಲ್ಲವೋ ಅದು ಬೇರೆ ಮಾತು. ಆದರೆ "ಪ್ರೇಮ, ಕಲ್ಪನೆಯ ನೆರವಿನಿಂದ ವಿಚಾರದೊಡನೆ ಬೆರತು" ಬದುಕಿನಲ್ಲಿ ತೊಡಗುವ ಆದರ್ಶ ಇಬ್ಬರಿಗೂ ಒಂದೇ ಆಗಿತ್ತು.

ಅನು : ಟಿ. ಎಸ್. ರಾಮಸ್ವಾಮಿ

"ದಿ ಮಿಲ್ ಆನ್ ದಿ ಫ್ಲಾಸ್" : ಪಕ್ವತೆಯ ಹಾದಿಯಲ್ಲಿ

ಎ. ಆರ್. ನಾಗಭೂಷಣ

ಹತ್ತೊಂಭತ್ತನೆಯ ಶತಮಾನದ ಇಂಗ್ಲೆಂಡ್ ಅತ್ಯಂತ ಶಕ್ತರಾದ ಹಲವು ಕಾದಂಬರಿಕಾರರನ್ನು ಸೃಷ್ಟಿಸಿತು. ಇಂಗ್ಲಿಷ್ ಸಾಹಿತ್ಯ ಚರಿತ್ರೆಯ ಒಂದು ಮುಖ್ಯ ಘಟ್ಟವಾದ ವಿಕ್ಟೋರಿಯನ್ ಯುಗದಲ್ಲಿ ಮನುಷ್ಯನ ಅಸ್ತಿತ್ವ ಮತ್ತು ಘನತೆಗಳನ್ನು ಕುರಿತಂತೆ ಪುನರ್‌ವಿಮರ್ಶೆ ನಡೆಯಿತು. ಈ ಮಂಥನದಲ್ಲಿ ವಿಜ್ಞಾನಿಗಳು, ಬರಹಗಾರರು ಮತ್ತು ವಿವಿಧ ಶಾಸ್ತ್ರಜ್ಞರು ಪಾಲ್ಗೊಂಡು ಒಟ್ಟಾರೆ ಮನುಷ್ಯನ ಬೌದ್ಧಿಕ ಮಟ್ಟವನ್ನು ವಿಸ್ತರಿಸಿದರು. ಇದರ ಪರಿಣಾಮವಾಗಿ ಹರಿತಗೊಂಡ ಮತ್ತು ಗೊಂದಲಗೊಂಡ ಮನುಷ್ಯನ ಪ್ರಜ್ಞೆ ಸಾಹಿತ್ಯದಲ್ಲಿ ತನ್ನ ಅಭಿವ್ಯಕ್ತಿಯನ್ನು ಹುಡುಕತೊಡಗಿತು. ಇಂತಹ ಕಾಲದಲ್ಲಿ ಕಾದಂಬರಿಕಾರರಾಗಿ ರೂಪುಗೊಂಡು ಇಂಗ್ಲಿಷ್ ಸಾಹಿತ್ಯ ಚರಿತ್ರೆಗೆ ಹೊಸ ಅಧ್ಯಾಯವನ್ನು ಜೋಡಿಸಿದ ಪ್ರಮುಖ ಕಾದಂಬರಿಕಾರರೆಂದರೆ ಚಾರ್ಲ್ಸ್ ಡಿಕನ್ಸ್, ಬ್ರಾಂಟೆ ಸಹೋದರಿಯರು ಮತ್ತು ಜಾರ್ಜ್ ಎಲಿಯಟ್.

ಕಾದಂಬರಿಗಾರ್ತಿಯಾಗಿ ಪ್ರಸಿದ್ಧಳಾಗಿರುವ ಜಾರ್ಜ್ ಎಲಿಯಟ್ ಮೊದಲು ಬರೆದದ್ದು ಒಂದು ಕಥೆ. ತನ್ನ ಮೂವತ್ತೇಳನೆಯ ವಯಸ್ಸಿನಲ್ಲಿ (ಜನನ: ೧೮೧೯) 'ಅಮೊಸ್ ಬಾರ್ಟನ್' ಎಂಬ ಕಥೆಯನ್ನು ರಚಿಸಿ 'ಬ್ಲ್ಯಾಕ್‌ವುಡ್ ಮ್ಯಾಗಜಿನ್'ನಲ್ಲಿ ಪ್ರಕಟಿಸಿದಳು. ಎರಡು ವರ್ಷಗಳ ತರುವಾಯ ೧೮೫೮ರಲ್ಲಿ 'ಸೀನ್ಸ್ ಆಫ್ ಕ್ಲರಿಕಲ್ ಲೈಫ್' ಎಂಬ ಶೀರ್ಷಿಕೆಯುಳ್ಳ ಮೂರು ಕಥೆಗಳನ್ನೊಳಗೊಂಡ ಪುಸ್ತಕ ಪ್ರಕಟವಾಯಿತು. ಮೊದಲು ಮೇರಿ ಆ್ಯನ್ ಇವಾನ್ಸ್ ಎಂಬ ನಿಜ ಹೆಸರನ್ನು ಬಳಸುತ್ತಿದ್ದ ಇವಳು ತನ್ನ ಮೊದಲ ಪುಸ್ತಕದಿಂದ ಜಾರ್ಜ್ ಎಲಿಯಟ್ ಎಂಬ ಕಾವ್ಯ

ನಾಮವನ್ನು ಬಳಸಲು ಪ್ರಾರಂಭಿಸಿದಳು. ನಂತರ ಕಾದಂಬರಿಗಳು ನಿಯತವಾಗಿ ಹೊ
ಬೀಳಲು ಪ್ರಾರಂಭಿಸಿದವು. ಆ್ಯಡಮ್ ಬೀಡೆ, ದಿ ಮಿಲ್ ಆನ್ ದಿ ಫ್ಲಾಸ್, ಸೈಲಾಸ್
ಮಾರ್ನರ್, ರಮೋಲಾ, ಫೆಲಿಕ್ಸ್ ಹೋಲ್ಟ್, ಮಿಡ್ಲ್‌ಮಾರ್ಚ್, ಡೇನಿಯಲ್
ಡೆರೊಂಡಾ ಕಾದಂಬರಿಗಳ ಜೊತೆಗೆ ಕಥೆ, ಕವನ ಮತ್ತು ಅನುವಾದಗಳನ್ನೂ ಜಾರ್ಜ್
ಎಲಿಯಟ್ ಪ್ರಕಟಿಸಿದ್ದಾಳೆ.

ಭಾವುಕತೆಯ ತೀವ್ರತೆಯೊಂದಿಗೆ ವೈಚಾರಿಕತೆಯ ಪ್ರಖರತೆ ಮಿಳಿತಗೊಂಡಿರ
ವುದು ಜಾರ್ಜ್ ಎಲಿಯಟ್ಟಳ ಕಾದಂಬರಿಗಳ ಮುಖ್ಯ ಲಕ್ಷಣವಾಗಿದೆ. ಇವೆರಡರ
ನಡುವೆ ಸಮತೋಲನವನ್ನು ಕಾಪಾಡಿಕೊಂಡಾಗೆಲ್ಲ ಕಲಾತ್ಮಕ ಯಶಸ್ಸು ಇವಳ
ಪಾಲಿಗೆ ದಕ್ಕಿರುವುದನ್ನು ಗಮನಿಸಬಹುದು. ಮನುಷ್ಯ ಜೀವಿಯ ಪ್ರತಿಯೊಂದು
ಕ್ರಿಯೆಯ ಪ್ರೇರಣೆಯಾಗಿ ಪರಿಸರದ ಶಕ್ತಿಯನ್ನು ಇವಳು ಸೂಕ್ಷ್ಮವಾಗಿ ಗಮನಿಸಿ
ದ್ದಾಳೆ. ಒಟ್ಟಾರೆ ಸಾರ್ವಜನಿಕ ಬದುಕಿನಿಂದ ನಿರ್ಧಾರಿತವಾಗದ ಯಾವುದೇ ಖಾಸಗಿ
ಬದುಕು ಇರಲು ಸಾಧ್ಯವಿಲ್ಲವೆಂದು ಇವಳು ಹೇಳಿದ್ದಾಳೆ. ಒಂದು ವೇಳೆ ವ್ಯಕ್ತಿಯ
ಬದುಕು ಹೆಚ್ಚು ಹೆಚ್ಚು ಖಾಸಗಿಯಾಗುತ್ತಾ ಹೋದರೆ ಸ್ವಮೋಹವೂ ಹೆಚ್ಚಾಗುತ್ತದೆ
ಇದು ಅನೈತಿಕವಾದ ಜೀವನ ಶೈಲಿಗೆ ಕಾರಣವಾಗುತ್ತದೆ; ಇದನ್ನು ತೊಡೆದುಹಾಕ
ಬೇಕೆಂಬ ಆಶಯ ಜಾರ್ಜ್ ಎಲಿಯಟ್ಟಳ ಕಾದಂಬರಿಗಳಲ್ಲಿದೆ. ಈ ಬೆಳಕಿನಲ್ಲಿ ಹೆನ್ರಿ
ಜೇಮ್ಸ್‌ನ ಮಾತುಗಳು ಅರ್ಥಪೂರ್ಣವಾಗಿವೆ: "ಜಾರ್ಜ್ ಎಲಿಯಟ್ಟಳಿಗೆ ಕಾದಂಬ
ಒಂದು ಜೀವನ ಚಿತ್ರವಲ್ಲ; ಅದು ಒಂದು ಫೇಬಲ್, ಉದಾಹರಣೆಯ ಮೂಲಕ ಒಂದ
ತತ್ವವನ್ನು ಬೋಧಿಸುವ ಪ್ರಯತ್ನ."

ಕಲೆಯ ಉದ್ದೇಶ ಮತ್ತು ಕಾದಂಬರಿಗಾರ್ತಿಯಾಗಿ ತನ್ನ ನಿಲುವುಗಳ ಬಗ್ಗೆ
ಸ್ವತಃ ಜಾರ್ಜ್ ಎಲಿಯಟ್ಟಳೇ ಬೇರೆ ಬೇರೆ ಕಡೆ ಹೇಳಿರುವುದನ್ನು ಹೀಗೆ ಕ್ರೋಢೀಕರಿ
ಬಹುದು: ಕಲೆ ಜೀವನಕ್ಕೆ ಹತ್ತಿರವಾದದ್ದು. ಇದು ಅನುಭವವನ್ನು ವಿಸ್ತೃತಗೊಳಿ
ವೈಯಕ್ತಿಕ ಮಿತಿಗಳನ್ನು ದಾಟಿ ಇತರರನ್ನು ಮುಟ್ಟುತ್ತದೆ. ಮನುಷ್ಯ ಪ್ರಜ್ಞೆಯನ್ನೂ
ಸಮಾಜದ ರಚನೆಯನ್ನೂ ಪುನರ್ರೂಪಿಸುವುದೇ ಇದರ ಅಂತಿಮ ಗುರಿಯಾಗಿರಬೇಕು
ಮನುಷ್ಯನ ಮನಸ್ಸನ್ನು ವಿಕಸಿತಗೊಳಿಸದಿದ್ದರೆ ಕಲೆ ವ್ಯರ್ಥ. ಓದುಗರು ಇತರ
ನೋವು, ನಲಿವುಗಳನ್ನು ಕಲ್ಪಿಸಿಕೊಂಡು ಅರ್ಥ ಮಾಡಿಕೊಳ್ಳಬೇಕೆಂದು ನಾನ
ಪ್ರಯತ್ನಿಸುತ್ತೇನೆ. ಬರವಣಿಗೆ ನನ್ನ ಧರ್ಮದ ಒಂದು ಭಾಗ. ಆಂತರಿಕ ಒತ್ತಡವಿಲ್ಲ
ಒಂದು ಪದವನ್ನೂ ನಾನು ಬರೆಯಲಾರೆ. ನನ್ನ ಬರಹ ವಾಸ್ತವವಾಗಿರಬೇಕು ಮತ್ತ
ಮೂರ್ತವಾಗಿರಬೇಕು. ಯಾವುದು ಹೇಗಿದೆ ಎಂಬುದನ್ನು ತೋರಿಸುವುದು ನ
ಉದ್ದೇಶವೇ ಹೊರತು, ಹೇಗಿರಬೇಕು ಎಂಬುದಲ್ಲ.

ಈ ಮೇಲಿನ ಮಾತುಗಳಿಂದ ಸಾಹಿತ್ಯ–ಸಮಾಜ–ಓದುಗವರ್ಗ ಇವುಗಳಿಗಿರು
ಪರಸ್ಪರ ಸಂಬಂಧದ ಬಗೆಗಿನ ಅರಿವು ಜಾರ್ಜ್ ಎಲಿಯಟ್ಟಳ ಸಾಹಿತ್ಯ ನಿರ್ಮಿತಿ
ಬೆನ್ನೆಲುಬಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಜಾರ್ಜ್ ಕ್ರೀಗರ್ ಎಂಬ ವಿಮರ್ಶಕ ಗುರುತಿಸುವಂತೆ ಜಾರ್ಜ್ ಎಲಿಯಟ್
ಮನಸ್ಸಿಗೆ ಮೂರು ಮುಖಗಳಿವೆ. ಸಂಪ್ರದಾಯದಲ್ಲಿ ನಂಬಿಕೆಯಿದ್ದ ಇವಳಿಗೆ ಆಧುನಿ

ಯಲ್ಲೂ ನಿಷ್ಠೆ ಇದ್ದುದರಿಂದ ಇವೆರಡರ ನಿರಂತರ ಘರ್ಷಣೆ ಇವಳ ಮೊದಲ ಮುಖ. ಜೀವನೋತ್ಸಾಹ ಮತ್ತು ಜೀವನ ತ್ಯಾಗಗಳ ನಡುವಣ ಘರ್ಷಣೆ ಎರಡನೆಯ ಮುಖ. ಸ್ವಂತ ಹಿತವೆಂಬ ಅನೈತಿಕತೆಯನ್ನು ಮೀರುವ ಪ್ರಯತ್ನ ಮೂರನೆಯ ಮುಖ. ಈ ಮೂರು ಮುಖಗಳೂ ಜಾರ್ಜ್ ಎಲಿಯಟ್ಟಳ ಕಾದಂಬರಿಗಳಲ್ಲಿ ಸ್ಪಷ್ಟವಾಗಿ ಕಾಣಿಸಿ ಕೊಂಡಿವೆ.

ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ಜಾರ್ಜ್ ಎಲಿಯಟ್ಟಳ ಎರಡನೆಯ ಕಾದಂಬರಿ 'ದಿ ಮಿಲ್ ಆನ್ ದಿ ಫ್ಲಾಸ್'ಅನ್ನು ಪ್ರವೇಶಿಸುವುದು ಉಪಯುಕ್ತವಾದೀತು. ಈ ಕಾದಂಬರಿಯಲ್ಲಿ ಮ್ಯಾಗಿಯ ಜೀವನವನ್ನು ಸೂಕ್ಷ್ಮವಾಗಿ ಶೋಧಿಸುತ್ತಾ ಅವಳ ಪರಿಸರದ ಮೌಲ್ಯಗಳನ್ನು ವಿವೇಚಿಸುವ ಪ್ರಯತ್ನವನ್ನು ಜಾರ್ಜ್ ಎಲಿಯಟ್ ಮಾಡಿದ್ದಾಳೆ. ಮ್ಯಾಗಿಯ ಬಾಲ್ಯದಿಂದ ಪ್ರಾರಂಭವಾಗಿ ಅವಳ ಅಂತ್ಯದ ತನಕ ಈ ಕಾದಂಬರಿಯ ವಿಸ್ತಾರವಿದೆ. ಆದರೆ ಇದು ಕೇವಲ ವ್ಯಕ್ತಿಚಿತ್ರಣ ಅಥವಾ ವ್ಯಕ್ತಿ ಪ್ರಧಾನ ಕಾದಂಬರಿ ಯಾಗದಂತೆ ಇತರ ಕೆಲವು ಆಯಾಮಗಳನ್ನು ಹೆಣೆದು ಶ್ರೀಮಂತಗೊಳಿಸುವ ಆಶಯ ಜಾರ್ಜ್ ಎಲಿಯಟ್‌ಗಿದೆ. ಅತ್ಯಂತ ಸೂಕ್ಷ್ಮ ಸಂವೇದನೆಯನ್ನುಳ್ಳ ಒಬ್ಬ ವ್ಯಕ್ತಿ ತನ್ನ ಮನಸ್ಸಿಗೆ ಸರಿ ಕಂಡಿದ್ದನ್ನು ಸಮಾಜದ ಒತ್ತಡಗಳಿಗೆ ಸಿಕ್ಕು ಮಾಡಲಾಗದೇ ಹೋದಾಗ ಅಥವಾ ಅದನ್ನು ಮಾಡಿ ನಂತರ ಸಮಾಜದ ಉಗ್ರ ಟೀಕೆಗೆ ಗುರಿಯಾದಾಗ ವ್ಯಕ್ತಿ—ಸಮಾಜದ ಸಂಬಂಧದ ಸ್ವರೂಪ ಹೇಗಿರುತ್ತದೆ ಎಂಬುದು ಈ ಕಾದಂಬರಿಯ ಹೃದಯ ದಲ್ಲಿದೆ. ತನ್ನ ಸಹಜ ಪ್ರವೃತ್ತಿಗಳಿಗೆ ಅನುಗುಣವಾಗಿ ಕ್ರಿಯೆಯಲ್ಲಿ ತೊಡಗುವ ಮ್ಯಾಗಿಗೂ ಸಂಕುಚಿತ ಮನೋಭಾವವುಳ್ಳ ಆ ಕಾಲದ ಸಮಾಜಕ್ಕೂ ಉಂಟಾಗುವ ಘರ್ಷಣೆ 'ದಿ ಮಿಲ್ ಆನ್ ದಿ ಫ್ಲಾಸ್'ನ ಮುಖ್ಯ ವಸ್ತುಗಳಲ್ಲೊಂದಾಗಿದೆ.

ಮ್ಯಾಗಿಯ ಜೀವನದುದ್ದಕ್ಕೂ ಪ್ರಮುಖವಾಗಿ ಮೂರು ರೀತಿಯ ಘರ್ಷಣೆಗಳು ಉಂಟಾಗುತ್ತವೆ. ಒಂದು, ಸಮಾಜ ನಂಬಿಕೊಂಡ ಮೌಲ್ಯಗಳ ಜೊತೆಗೆ; ಎರಡು, ಟಾಮ್ ಮತ್ತು ಇತರ ಸಂಬಂಧಿಕರ ಜೊತೆಗೆ; ಮೂರು, ತನ್ನ ಅಂತರ್ಯದೊಳಗೆ. ಈ ಮೂರನ್ನೂ ಜಾರ್ಜ್ ಎಲಿಯಟ್ ಸಂಕೀರ್ಣವಾಗಿ ಗ್ರಹಿಸಿ ಅಭಿವ್ಯಕ್ತಿಸಿದ್ದಾಳೆ. ಲೂಸಿಯೊಡನೆ ಮದುವೆಯಾಗಬೇಕಾಗಿದ್ದ ಸ್ಟೀಫನ್‌ನೊಡನೆ ಮ್ಯಾಗಿ ಓಡಿಹೋದಾಗ ಊರಿನ ಸಮಾಜಿಕ ಮೌಲ್ಯಗಳಿಗೆ ಆಘಾತವಾಗುತ್ತದೆ. ಫಿಲಿಪ್ ಜೊತೆ ಗೆಳೆತನ ಬೆಳೆಸಿದ್ದ ಕ್ಕಾಗಿ ಮ್ಯಾಗಿಗೂ ಟಾಮ್‌ಗೂ ಘರ್ಷಣೆ ಪ್ರಾರಂಭವಾಗಿ ಸ್ಟೀಫನ್ ಜೊತೆ ಹೋದಾಗ ಇನ್ನಷ್ಟು ಉಗ್ರವಾಗುತ್ತದೆ. ತನ್ನ ತಾಯಿ ಮತ್ತಿತರ ಸಂಬಂಧಿಕರೊಡನೆ ಮ್ಯಾಗಿಗೆ ಬಾಲ್ಯದಿಂದಲೂ ತಿಕ್ಕಾಟವಿದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಇವಳ ಮನಸ್ಸಿನೊಳಗೆ ತೀವ್ರರೂಪದ ಗೊಂದಲ ನಿರಂತರವಾಗಿದೆ. ಪ್ರವೃತ್ತಿ ಮತ್ತು ಕರ್ತವ್ಯ ಪ್ರಜ್ಞೆಯ ಮಧ್ಯೆ, ಭಾವನೆ ಹಾಗೂ ಬೌದ್ಧಿಕತೆಯ ಮಧ್ಯೆ ನಡೆಯುವ ಹೊಯ್ದಾಟ ಮ್ಯಾಗಿಯ ಜೀವನ ಶೈಲಿಯನ್ನು ರೂಪಿಸುತ್ತದೆ. ಇವಳು ಮೂಲಭೂತವಾಗಿ ವರ್ತಮಾನದಲ್ಲಿ ಬದುಕುವ ಹುಡುಗಿ; ಮೊದಲು ಕ್ರಿಯೆಯಲ್ಲಿ ತೊಡಗಿ ಅದರ ಪರಿಣಾಮಗಳ ಬಗ್ಗೆ ನಂತರ ಚಿಂತಿಸು ವಂತಹವಳು.

ಮ್ಯಾಗಿಯ ಬಗ್ಗೆ ಜಾರ್ಜ್ ಎಲಿಯಟ್‌ಗೆ ಗಾಢವಾದ ಪ್ರೀತಿ ವ್ಯಕ್ತವಾಗಿರುವುದು ಕಾದಂಬರಿಯ ಉದ್ದಕ್ಕೂ ನಿಚ್ಚಳವಾಗಿದೆ. ಪ್ರಾಯಶಃ ಈ ಕಾರಣದಿಂದಲೇ ಈ ಕಾದಂಬ

ರಿಗೆ 'ಸಿಸ್ಟರ್ ಮ್ಯಾಗಿ' ಎಂಬ ಶೀರ್ಷಿಕೆಯನ್ನು ಕೊಡಬೇಕೆಂದು ಜಾರ್ಜ್ ಎಲಿಯಟ್ ಮೊದಲು ಯೋಚಿಸಿದ್ದಳು. ಈ ಕಾದಂಬರಿಗೆ ಆಧಾರವಾಗಿ ತನ್ನ ಜೀವನವನ್ನೆ ಎಲಿಯಟ್ ಒಡ್ಡಿಕೊಂಡಿದ್ದಾಳೆ ಎಂಬುದರ ಬಗ್ಗೆಯೂ ಮ್ಯಾಗಿ ಮತ್ತು ಟಾಮ್ ಪಾತ್ರಗಳಲ್ಲಿ ತನ್ನನ್ನೂ ಮತ್ತು ತನ್ನ ಅಣ್ಣ ಐಸಾಕ್‌ನನ್ನೂ ಕಂಡುಕೊಂಡಿದ್ದಾ ಎಂಬುದರ ಬಗ್ಗೆಯೂ ಸಾಕಷ್ಟು ಚರ್ಚೆ ಇಂಗ್ಲೀಷ್ ಸಾಹಿತ್ಯ ವಿಮರ್ಶೆಯಲ್ಲಿ ನಡೆದಿದೆ ಈ ದಿಕ್ಕಿನಲ್ಲಿ ಕಾದಂಬರಿಯನ್ನು ಅವಲೋಕಿಸುತ್ತಾ ಲೆಸ್ಲೀ ಸ್ಟೀಫನ್ 'ದಿ ಮಿಲ್ ಆನ ದಿ ಫ್ಲಾಸ್'ನ ಮೊದಲ ಭಾಗವನ್ನು ಜಾರ್ಜ್ ಎಲಿಯಟ್ಟಳ 'ಆಧ್ಯಾತ್ಮಿಕ ಆತ್ಮಕಥೆ ಎಂದು ಕರೆದಿದ್ದಾನೆ.

ಈ ಕಾದಂಬರಿಯಲ್ಲಿ ನದಿ ಶಕ್ತವಾದ ಒಂದು ಸಂಕೇತವಾಗಿ ಬಳಕೆಯಾಗಿದ ಕಾದಂಬರಿಯ ಅರ್ಥವನ್ನು ಶ್ರೀಮಂತಗೊಳಿಸಿದೆ. ಮ್ಯಾಗಿಗೂ ನದಿಗೂ ನಿಕಟವಾ ಸಂಬಂಧವನ್ನು ಜಾರ್ಜ್ ಎಲಿಯಟ್ ಕಾದಂಬರಿಯ ಶಯ್ಯೆಯಲ್ಲಿ ನಿರ್ಮಿಸಿದ್ದಾಳ ಮ್ಯಾಗಿಯ ಪ್ರವೃತ್ತಿಗಳು ಯಾವುದನ್ನೂ ಲೆಕ್ಕಿಸದ, ಎಲ್ಲವನ್ನೂ ರಭಸವಾಗಿ ಹೊಡೆದ ಕೊಂಡು ಹೋಗುವ ಪ್ರವಾಹದಂತೆ. ಪ್ರವಾಹದಲ್ಲಿರುವ ನದಿಯಂತೆ, ಮ್ಯಾಗಿಯು ಸಹಾ ತನ್ನ ಕ್ರಿಯೆ ತನ್ನನ್ನು ಯಾವ ದಿಕ್ಕಿಗೆ ಕರೆದೊಯ್ಯಬಹುದೆಂದು ಯೋಚಿ ದವಳು. ಸ್ಟೀಫನ್ ಜೊತೆ ಇವಳು ಊರು ಬಿಟ್ಟು ಹೋಗುವುದು ನದಿಯ ಮುಖಾಂತರ ಆದರೆ ಈ ಪ್ರಯಾಣ ಫಲಪ್ರದವಾಗುವುದಿಲ್ಲ. ಕೊನೆಗೆ ಮ್ಯಾಗಿ ಟಾಮ್ ಜೊ ಸಾಯುವುದೂ ನದಿಯಲ್ಲಿ. ಹೀಗೆ ಮ್ಯಾಗಿಯ ಭಾವನೆಗಳು, ಆಕರ್ಷಣೆ, ವೈಫಲ್ ಸಾವು ಎಲ್ಲವೂ ನದಿಯ ಜೊತೆ ಸಂಬಂಧವನ್ನು ಹೊಂದಿವೆ. ಇದನ್ನು ಜಾರ್ ಎಲಿಯಟ್ ಕಾದಂಬರಿಯ ವಿನ್ಯಾಸದಲ್ಲಿ ಚಾಕಚಕ್ಯತೆಯಿಂದ ಹೆಣೆದಿದ್ದಾಳೆ. ಮೊದಲ ಯದಾಗಿ ಊರಿನ ಹೆಸರಾದ 'ಸೇಂಟ್ ಆಗ್' ಎಂಬುದೇ ನದಿಯ ಪ್ರಾಮುಖ್ಯತೆಯನ ಸೂಚಿಸುತ್ತದೆ. ಒಂದು ರಾತ್ರಿ ಮಗುವನ್ನು ಎತ್ತಿಕೊಂಡು ಬಂದ ಒಂದು ಹೆಣ್ಣನ ಒಬ್ಬ ಅಂಬಿಗ ಪ್ರವಾಹದಲ್ಲಿದ್ದ ನದಿಯ ಇನ್ನೊಂದು ದಡಕ್ಕೆ ದಾಟಿಸುತ್ತಾನೆ. ನಂತ ಅವಳು ವರ್ಜಿನ್ ಮೇರಿಯೆಂದೂ ಆವನು ಒಬ್ಬ ಸಂತನೆಂದೂ ಜನರಿಗೆ ತಿಳಿಯುತ್ತ ಎರಡನೆಯದಾಗಿ, ಮ್ಯಾಗಿಗೆ ಬಾಲ್ಯದಿಂದಲೂ ನೀರಿನ ಬಗ್ಗೆ ವ್ಯಾಮೋಹವಿರುತ್ತ ಮೂರನೆಯದಾಗಿ, ಮಿಸೆಸ್. ಟಲಿವರಳಿಗೆ ತನ್ನ ಮಗಳು ನೀರಿನಲ್ಲಿ ಮುಳುಗಿ ಹೊ ಬಹುದೆಂಬ ದಿಗಿಲು ಸದಾ ಇರುತ್ತದೆ.

'ದಿ ಮಿಲ್ ಆನ್ ದಿ ಫ್ಲಾಸ್'ಗೆ ಓದುಗರ ಗಮನವನ್ನು ಕೂಡಲೇ ಎಳ ಕೊಳ್ಳುವ ಕೆಲವು ಸಾಮರ್ಥ್ಯಗಳಿವೆ. ಈ ಕಾದಂಬರಿಯಲ್ಲಿ ಜಾರ್ಜ್ ಎಲಿಯಟ್ ಒಂ ಎಪಿಕ್‌ಗಿರುವ ಸೂಕ್ಷ್ಮ ವಿವರಗಳನ್ನೂ ಗ್ರೀಕ್ ದುರಂತ ನಾಟಕಗಳಿಗಿರುವ ಗಾ ಯನ್ನೂ ಮಿಳಿತಗೊಳಿಸಿದ್ದಾಳೆ. ಉದಾಹರಣೆಗೆ ತನಗೆ ದುಃಖವಾದಾಗೆಲ್ಲ ಮ್ಯಾಗಿ ತ ಕೋಣೆಗೆ ಹೋಗಿ ಒಂದು ಬೊಂಬೆಗೆ ವಿಚಿತ್ರ ರೀತಿಯಲ್ಲಿ ಹಿಂಸೆ ನೀಡುವ ವಿ ಮಹತ್ವವಾದದ್ದು. ಹಾಗೆಯೇ ಮಿಸ್ಟರ್ ಟಲಿವರನ ಅಂತ್ಯ ಬಹಳ ತೀವ್ರವಾಗಿ ಚಿ ವಾಗಿದೆ. ಮ್ಯಾಗಿಯ ಬಾಲ್ಯದ ಅನುಭವಗಳನ್ನು ಒಂದು ಮಗು ನೋಡುವಂತೆ ಮು ವಾಗಿಯೂ ಒಬ್ಬ ಕಲೆಗಾರ ನೋಡುವಂತೆ ವಿವೇಕಿಯಾಗಿಯೂ ಒಟ್ಟಾರೆಯ

ಜಾರ್ಜ್ ಎಲಿಯಟ್ ಪರಿಭಾವಿಸಿದ್ದಾಳೆ. ಗ್ರಾಮೀಣ ಜೀವನದ ವಿವಿಧ ಮುಖಗಳನ್ನೂ ಎಲ್ಲ ಪಾತ್ರಗಳನ್ನೂ ಇವಳು ಅಸದೃಶ ರೀತಿಯಲ್ಲಿ ಚಿತ್ರಿಸಿದ್ದಾಳೆ. ಹೀಗಾಗಿ ಡಾಕ್ಟರ್ ಕೆನ್, ಬಾಬ್ ಜಾಕಿನ್ ಮುಂತಾದ ಸಣ್ಣ ಪಾತ್ರಗಳಿಗೂ ಅವುಗಳದೇ ಆದ ವೈಯಕ್ತಿಕ ಛಾಪು ಇದೆ.

'ದಿ ಮಿಲ್ ಆನ್ ದಿ ಫ್ಲಾಸ್'ಗೆ ಶಕ್ತಿಯನ್ನು ಸಂಪಾದಿಸಿಕೊಡುವ ಗುಣಗಳಿರುವಂತೆ ದೌರ್ಬಲ್ಯಗಳೂ ಇವೆ. ಮೊದಲನೆಯದಾಗಿ, ಮ್ಯಾಗಿಯ ಜೊತೆ ತನ್ನನ್ನು ಜಾರ್ಜ್ ಎಲಿಯಟ್ ಅತಿಯಾಗಿ ಗುರುತಿಸಿಕೊಂಡಿದ್ದಾಳೆ. ಹೀಗಾಗಿ ಪಾತ್ರಕ್ಕೂ ತನಗೂ ವಿಮರ್ಶಾತ್ಮಕ ಅಂತರವನ್ನು ಕಾಯ್ದುಕೊಳ್ಳುವುದು ಇವಳಿಗೆ ಸಾಧ್ಯವಾಗಿಲ್ಲ. ಮ್ಯಾಗಿಯ ಬಗೆಗಿನ ಅತಿವ್ಯಾಮೋಹ ಜಾರ್ಜ್ ಎಲಿಯಟ್ಟಳ ಆತ್ಮಾನುಕಂಪದಲ್ಲಿ ಪರ್ಯಾವಸನವಾಗಿದೆ ಎಂದು ಎಫ್. ಆರ್. ಲೀವೀಸ್ ಅಭಿಪ್ರಾಯಪಟ್ಟಿದ್ದಾನೆ. ಜಾರ್ಜ್ ಎಲಿಯಟ್ ತನ್ನ ಜೀವನದ ಘಟನೆಗಳನ್ನು ಮ್ಯಾಗಿಯ ಜೀವನದೊಂದಿಗೆ ಸಮೀಕರಣಗೊಳಿಸಿ, ಆತ್ಮ ಕಥೆಯ ಅಂಶಗಳನ್ನು ಹೆಚ್ಚಾಗಿ ಕಾದಂಬರಿಯ ಹಂದರದೊಳಗೆ ತಂದಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ. ಈ ಕಾದಂಬರಿಯ ಎರಡನೆಯ ಮಿತಿ ಎಂದರೆ, ಇದರ ಅಂತ್ಯ ಮ್ಯಾಗಿಯ ನೈತಿಕ ಸಂಕಟಗಳನ್ನು ಹಾರಿಸಿಕೊಂಡು ಹೋಗುವ ಪಲಾಯನವಾಗಿ ಮೂಡಿ ಬಂದಿದೆ. ಅವಳ ಬಿಕ್ಕಟ್ಟನ್ನು ಅವಳೇ ನಿವಾರಿಸಿಕೊಳ್ಳಲು ಪ್ರಯತ್ನ ಪಡುವ ಅವಕಾಶವನ್ನು ಜಾರ್ಜ್ ಎಲಿಯಟ್ ನಿರಾಕರಿಸಿದ್ದಾಳೆ. ಹೀಗಾಗಿ ಅಂತ್ಯ ಅತಿ ನಾಟಕೀಯವಾದ, ಅತಿಭಾವುಕವಾದ ನಿರ್ಣಯವಾಗಿದೆಯೇ ಹೊರತು ವಸ್ತು ಮತ್ತು ಪಾತ್ರಗಳಿಗೆ ಸ್ವಾತಂತ್ರ್ಯವನ್ನು ಒದಗಿಸಿಕೊಡುವುದಿಲ್ಲ. ಟಾಮ್‌ನನ್ನು ರಕ್ಷಿಸುವ ಪ್ರಯತ್ನದಲ್ಲಿ ಮ್ಯಾಗಿ ಸಾಯುವುದರ ಮುಖೇನ ಟಾಮ್‌ಗಿಲ್ಲದ ನೈತಿಕ ಶಕ್ತಿ ಮ್ಯಾಗಿಗಿದೆ ಎಂಬ ಸೂಚನೆಯನ್ನು ಜಾರ್ಜ್ ಎಲಿಯಟ್ ಕಾಣಿಸಿದ್ದರೂ ನದಿಯ ಪ್ರವಾಹ ಅವಳ (ಮ್ಯಾಗಿಯ) ಎಲ್ಲ ತಿಕ್ಕಾಟ, ದ್ವಂದ್ವಗಳನ್ನು ಮುಖಾಮುಖಿಯಾಗಿ ಎದುರಿಸದೆ ಹೋಗುವ ಒಂದು ಸೂತ್ರವಾಗಿದೆ. ಮೂರನೆಯದಾಗಿ, ಮ್ಯಾಗಿ ಮತ್ತು ಸ್ಟೀಫನ್ ನಡುವಣ ಸಂಬಂಧವನ್ನು ಸಮರ್ಪಕವಾಗಿ ಹಿಡಿದಿಡಲು ಜಾರ್ಜ್ ಎಲಿಯಟ್‌ಗೆ ಸಾಧ್ಯವಾಗಿಲ್ಲ. ಉದಾತ್ತ ಗುಣಗಳುಳ್ಳ ಮ್ಯಾಗಿ ತೆಳುವಾದ ವ್ಯಕ್ತಿತ್ವವುಳ್ಳ ಸ್ಟೀಫನ್‌ನ ಆಕರ್ಷಣೆಗೆ ಒಳಗಾಗುವುದು ಹೇಗೆ ಸಾಧ್ಯ ಎಂಬುದರ ಬಗ್ಗೆ ವಿಮರ್ಶಕರು ಚಿಂತಿಸಿದ್ದಾರೆ. ಪ್ರವೃತ್ತಿಗಳೇ ಮ್ಯಾಗಿಯ ವ್ಯಕ್ತಿತ್ವದ ಅಡಿಪಾಯವಾದ್ದರಿಂದ ಮತ್ತು ಗಂಡು–ಹೆಣ್ಣುಗಳ ಪರಸ್ಪರ ಆಕರ್ಷಣೆ ವಿಭಿನ್ನ ವ್ಯಕ್ತಿತ್ವಗಳನ್ನು ಹೊಂದಿದ್ದಾಗಲೂ ಸಾಧ್ಯವಾದ್ದರಿಂದ ಈ ಪ್ರಶ್ನೆ ಮುಖ್ಯವಾಗಬಾರದು. ಆದರೆ ಸ್ಟೀಫನ್‌ನ ವ್ಯಕ್ತಿತ್ವದ ಆಕರ್ಷಣೆಗೆ ಮ್ಯಾಗಿ ಒಳಗಾಗುವ ಪ್ರಕ್ರಿಯೆ ಸೂಕ್ಷ್ಮವಾಗಿಲ್ಲದಿರುವುದರಿಂದ ಕಾದಂಬರಿಗೆ ಮೊದಲ ಭಾಗಗಳಲ್ಲಿ ಪ್ರಾಪ್ತವಾಗುವ ಶಕ್ತಿಯನ್ನು ಕೊನೆಯ ಭಾಗ ಕುಂದಿಸುತ್ತದೆ. ನಾಲ್ಕನೆಯದಾಗಿ, ಕಾದಂಬರಿಯ ಅಂತ್ಯದಲ್ಲಿ ಪ್ರಕಾಶವಾಗುವ ದುರಂತಕ್ಕೂ ಮೊದಲ ಭಾಗಗಳಿಗೂ ಸ್ಪಷ್ಟವಾದ ತಾರ್ಕಿಕ ಸಂಬಂಧ ಕಾಣುವುದಿಲ್ಲ. ವಾಸ್ತವವಾದಿ ಪರಂಪರೆಯಲ್ಲಿ ಈ ಕಾದಂಬರಿಯನ್ನು ಬರೆದಿರುವುದರಿಂದ ವಸ್ತುವಿನ ತಾರ್ಕಿಕ ಬೆಳವಣಿಗೆ ತೀರಾ ಅನಿವಾರ್ಯವಾಗುತ್ತದೆ. ಈ ಬಗ್ಗೆ ತನ್ನ ಸೋಲನ್ನು ಸ್ವತಃ ಜಾರ್ಜ್ ಎಲಿಯಟ್ಟಳೇ ಒಪ್ಪಿಕೊಂಡಿ

ದ್ದಾಳೆ: "ಕಾದಂಬರಿಯ ದುರಂತಕ್ಕೆ ಸಿದ್ಧತೆ ಸಮರ್ಪಕವಾಗಿಲ್ಲ. ಮೊದಲ ಭಾಗಗಳ ನನ್ನ ವಸ್ತುವಿನ ಪ್ರೀತಿಗೆ ನಾನು ಅತಿಯಾಗಿ ಒಳಗಾದ್ದರಿಂದ ಕೊನೆಯ ಭಾಗವನ್ನು ಸೂಕ್ತವಾಗಿ ನಿರ್ವಹಿಸಲಾಗಿಲ್ಲ."

'ದಿ ಮಿಲ್ ಆನ್ ದಿ ಫ್ಲಾಸ್' ಬಗ್ಗೆ ಡಿಕನ್ಸ್ ಹೀಗೆ ಹೇಳಿದ್ದಾನೆ: "ಈ ಕಾದಂಬರಿಯ ಓದು ನನ್ನ ಜೀವನದ ಮಹತ್ವದ ಘಟ್ಟಗಳಲ್ಲಿ ಒಂದು." ಚಾರ್ಲ್ಸ್ ರೀಡ್‌ನ ಪ್ರಶಂಸೆ ಇನ್ನೂ ಎತ್ತರದ್ದು: "ಶೇಕ್ಸ್‌ಪಿಯರನ ನಂತರದ ಕಾಲದಲ್ಲಿ ರಚಿತ ವಾದ ಶ್ರೇಷ್ಠ ಪುಸ್ತಕವೆಂದರೆ 'ದಿ ಮಿಲ್ ಆನ್ ದಿ ಫ್ಲಾಸ್.' ಆದರೆ ಈ ಕಾದಂಬರಿಯ ಶಕ್ತಿಸಾಮರ್ಥ್ಯಗಳ ಜೊತೆಗೆ ದೌರ್ಬಲ್ಯಗಳೂ ಇರುವುದನ್ನು ಮರೆಯಬಾರದು. ತನ್ನ ಜೀವಿತದ ಕೊನೆಯ ದಶಕದಲ್ಲಿ ಉತ್ಕೃಷ್ಟ ಕೃತಿಗಳಾದ 'ಮಿಡ್ಲ್‌ಮಾರ್ಚ್' (೧೮೭೧-೭೨) ಮತ್ತು 'ಡೇನಿಯಲ್ ಡೆರೊಂಡಾ' (೧೮೭೬)ಗಳನ್ನು ಬರೆದ ಜಾರ್ಜ್ ಎಲಿಯಟ್ಟಳ ಸೃಜನಶೀಲತೆಯ ಹಾದಿಯಲ್ಲಿ ಅವಳ ಪೂರ್ವಭಾವಿ ಸಿದ್ಧತೆಯನ್ನೂ ಪಕ್ವ ಮನಸ್ಸನ್ನೂ ಕಲಾತ್ಮಕತೆಯನ್ನು ಸೂಚಿಸುವ 'ದಿ ಮಿಲ್ ಆನ್ ದಿ ಫ್ಲಾಸ್' ಒಂದು ಮುಖ್ಯ ಘಟ್ಟವನ್ನು ಗುರುತಿಸುತ್ತದೆ.

ವ್ಯಕ್ತಿಯಲ್ಲಿರುವ ಉತ್ತಮ ಅಂಶವನ್ನು ಬೆಳಕಿಗೆ ತರುವುದೇ ನಿಜವಾದ ಶಿಕ್ಷಣ. ಮಾನವತ್ವದ ಪುಸ್ತಕಕ್ಕಿಂತ ಉತ್ತಮ ಪುಸ್ತಕ ಯಾವುದಿದೆ?

ತಾಳ್ಮೆ, ಕ್ಷಮೆ, ದಯೆ, ಔದಾರ್ಯ, ಪ್ರೇಮ—ಇವು ಕ್ಷಾತ್ರಗುಣದ ಪೋಷಕ ಶಕ್ತಿಗಳು.

ಗಾಂಧೀಜಿ

ಜಾರ್ಜ್ ಎಲಿಯಟ್ : ಮಿಡಲ್ ಮಾರ್ಚ್

ಸೂಸನ್ ಡ್ಯಾನಿಯಲ್

ಜಾರ್ಜ್ ಎಲಿಯಟ್ ಎಂಬ ಕಾವ್ಯನಾಮದ ಮೇರಿ ಆ್ಯನ್ ಇವಾನ್ಸ್ ಒಂದು ರೀತಿಯ ಅರ್ಧನಾರೀಶ್ವರರೂಪ. ಜ್ಞಾನವಂತೆಯೆಂದೂ, ಪ್ರಜ್ಞಾಶಾಲಿಯೆಂದೂ ಅವಳ ಕಾದಂಬರಿಗಳ ಗಟ್ಟಿತನವನ್ನು ಹೊಗಳಿದವರು ಅವಳನ್ನು ಶ್ರೇಷ್ಠ ಪುರುಷ ಸಾಹಿತಿಗಳ ಸಾಲಲ್ಲಿ ಇರಿಸಿದರು. ಸ್ವತಹ ತನ್ನ ಸಮಕಾಲೀನ ಲೇಖಕಿಯರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ "Those silly women novelists" ಸಂಬೋಧಿಸಿದಾಗ ಈಕೆಯೂ ಈ ಬೇಧದಲ್ಲಿ ನಂಬಿಕೆಯಿಟ್ಟಂತಿತ್ತು. ಇನ್ನು ಪುರುಷರಿಗೆ ಸವಾಲಾಗಿ ಕಂಡ ಇವಳ ಬೌದ್ಧಿಕ ಮಟ್ಟ 'ಗಂಡಸಿನಂತೆ' ಇವಳ ಪ್ರಧಾನ ಮುಖ ಲಕ್ಷಣಗಳು, ಈ ಮಾತುಗಳಿಗೆ ಹೆಚ್ಚು ಪುಷ್ಠಿ ಕೊಟ್ಟಂತಿತ್ತು. (ಅಭಿಮಾನಿಯೊಬ್ಬರು ಉಡುಗೆಯಾಗಿ ಡಾಂಟೆಯ ಭಾವಚಿತ್ರವನ್ನು ಜಾರ್ಜ್ ಎಲಿಯಟ್‌ನ್ನು ಹೋಲುತ್ತಿತ್ತೆಂಬ ಕಾರಣಕ್ಕಾಗಿ ಕೊಟ್ಟ ನಿದರ್ಶನವೂ ಇದೆ.)

ಆದರೆ ತನ್ನ ಆದರ್ಶ ವ್ಯಕ್ತಿಗಳಾಗಿ ಮಾರ್ಗರೆಟ್ ಫುಲ್ಲರ್ ಮತ್ತು ಮೇರಿ ವುಲ್‌ಸ್ಟೋನ್ ಕ್ರಾಫ್ಟ್ ಎಂಬ ಸ್ತ್ರೀ ವಾದಿಗಳೆಂದು ಜಾರ್ಜ್ ಎಲಿಯಟ್ ತಾನೇ ಹೇಳುತ್ತಾಳೆ. ಇವರ ಬರವಣಿಗೆಗಳನ್ನು ಭಾಷಾಂತರಿಸುವುದರ ಜೊತೆಗೆ ಸದಾ ಇವರ ಆದರ್ಶಗಳನ್ನು ನಿಜ ಜೀವನದಲ್ಲಿ ಅಳವಡಿಸುವುದರತ್ತ ಶ್ರಮವಹಿಸಿರುವುದಾಗಿ ಕಾಣುತ್ತೇವೆ. ತಂದೆಯ ಮರಣಾನಂತರ ಬರಹಗಾರ ವಿಮರ್ಶಕ ಎರಡು ಮಕ್ಕಳ ತಂದೆಯಾದ ಜಾರ್ಜ್ ಲೂವಿಸಿನೊಡನೆ ತನ್ನ ಜೀವನವನ್ನು ಪುನರಾರಂಭಿಸಿದಾಗ ವಿಕ್ಟೋರಿಯನ್ ಮಡಿವಂತಿಕೆಯನ್ನು ಗಾಳಿಗೆ ತೂರಿದಳು. ಇನ್ನು ಲೂವಿಸ್ ತೀರಿಕೊಂಡ ಮೇಲೆ ತನ್ನ ೬೦ ನೆಯ ವಯಸ್ಸಿನಲ್ಲಿ ೪೫ ವರ್ಷದ ಕ್ರಾಸ್ ಅನ್ನು ಮದುವೆಯಾದಾಗ ವಿಕ್ಟೋರಿಯನ್ ಸಮಾಜಕ್ಕೆ ಒಬ್ಬ ಮಾಟಗಾರ್ತಿಯಾಗಿ, ಶೀಲಗೆಟ್ಟ ಸ್ತ್ರೀಯಾಗಿ ಎದುರಾದಳು.

ಹೀಗಿದ್ದೂ ವಿಕ್ಟೋರಿಯನ್ ನೈತಿಕತೆ ಅವಳ ಕಾದಂಬರಿಯ ಜೀವಾಳವಾಗಿ ಅವಳ ಕಾದಂಬರಿಗಳನ್ನು ರೂಪಿಸಿದ ವಸ್ತುವಾಯಿತೆಂದರೆ ವಿಪರ್ಯಾಸವಾಗಲಾರದು. ಮಿಡಲ್ ಮಾರ್ಚ್ ಕಾದಂಬರಿ ಕೂಡ ಈ ಕಾಳಜಿಗಳನ್ನು ನಿರ್ವಹಿಸುತ್ತದೆ. ಜಾರ್ಜ್ ಎಲಿಯಟ್‌ಳ ಕಾದಂಬರಿಗಳಲ್ಲಿ ಈ ಕಾದಂಬರಿ ಅತ್ಯುತ್ತಮವಾದದೆಂದು ಹೇಳಬಹುದು. ೧೮೭೧-೭೨ ರವರೆಗೆ ಎಂಟು ಭಾಗವಾಗಿ ಪ್ರಕಟಗೊಂಡ ಈ ಕೃತಿ ಒಂದು ಜನಸಮುದಾಯದ ಜೀವನ ಕ್ರಮವನ್ನು ಚಿತ್ರಿಸುವುದರ ಜೊತೆಗೆ ಸ್ವಾಭಿಪ್ರಾಯ ಜನಾಭಿಪ್ರಾಯಗಳು ಒಂದು ಸಮಾಜವನ್ನು ನೇಯುವ ಕ್ರಮವಾಗಿ ಚಿತ್ರಿಸಲ್ಪಡುತ್ತದೆ. ಒಟ್ಟು ಕಾದಂಬರಿಯು ಒಂದು ನೀಳ್ಗತೆಯಾಗಿರದೆ ನಾಲ್ಕೈದು ಕಥೆಗಳು ಅಥವಾ ಸಂಚುಗಳನ್ನೊಳಗೊಂಡ ಆಕೃತಿ ಎಂದು ಹೇಳಬಹುದು.

ಡಾರತೀಯ ಬ್ರುಕಿನ ಕಥೆಯೊಡನೆ ಕಾದಂಬರಿ ಪ್ರಾರಂಭವಾಗುತ್ತದೆ. ಬುದ್ಧಿಮತಿಯೂ ಆದರ್ಶವಾದಿಯೂ ಆದ ಇವಳು ತನಗಿಂತ ಹಿರಿಯವನಾದವನನ್ನು ಮದುವೆಯಾಗಲು ಒಪ್ಪಿದಾಗ ಅವಳ ಮುಕ್ತ ಬದುಕಿಗೆ ಕಡಿವಾಣ ಹಾಕಿದಂತಾಗುತ್ತದೆ. ಗಂಡನ ಶುಷ್ಕ ವಿದ್ವತ್ತಿಗೆ ನೆರವಾಗುತ್ತಾ ಯಾವುದೊ ನಿರಾಕಾರ ಆದರ್ಶದ ಬೆನ್ನು ಹತ್ತಿ ಸೊರಗುತ್ತಾಳೆ. ಅವಳಲ್ಲಿ ಚಿಮ್ಮುತ್ತಿದ್ದ ಭಾವನೆಗಳು, ಗಾಢಾನುರಕ್ತಿಗಳ ವಿರೋಧವಾಗಿ ಒಂದು ರೀತಿಯ ವೀರನಿಯಮಿಯಾಗಿ ವಿನೋಧ ವೈರಿಯಾಗಿ ತನ್ನ ವ್ಯಕ್ತಿತ್ವವನ್ನು ಬಡವಾಗಿಸುತ್ತಾಳೆ. ಕೆಲವೊಮ್ಮೆ ಅವಳ ಭಾವೋದೀಪ್ತ ಸ್ವಭಾವ ಅವಳನ್ನೇ ಅಚ್ಚರಿಗೊಳಿಸುತ್ತಿತ್ತು. ತನ್ನ ಗಂಡನ ಹತ್ತಿರದ ಸಂಬಂಧಿಯಾದ ಲಾಡಿಸ್ಲಾವ್ ಅವರ ಮನೆಗೆ ಬಂದಾಗ ತನ್ನ ಸ್ಥಿತಿಯ ಬಗ್ಗೆ ಅವಳಲ್ಲಿ ಒಂದು ರೀತಿಯ ಅಸಂತೋಷ ಪ್ರಾರಂಭವಾಗುತ್ತದೆ. ಲಾಡಿಸ್ಲಾವ್ ತಾನು ಇಲ್ಲಿಯವರೆಗೆ ಪೂಜಿಸುತ್ತಿದ್ದ ಗಂಡನ ಕೊರತೆಗಳನ್ನು ಎತ್ತಿತೋರಿಸಿದಾಗ, ಅವನ ಪಾಂಡಿತ್ಯದಲ್ಲಿ ಕಂಡು ಬಂದ ಕೊರತೆಗಳ ಬಗ್ಗೆ ಪ್ರಸ್ತಾಪಿಸಿದಾಗ, ಒಂದು ಹೊಸ ಜಗತ್ತಿನ ಅರಿವನ್ನು ಅವಳಲ್ಲಿ ಮೂಡಿಸುತ್ತಾನೆ. ಡಾರತೀಯಾಳಿಗೆ ಅವಳ ಬದುಕು ಅಪೂರ್ಣವಾಗಿ ಕಾಣಲಾರಂಭಿಸುತ್ತದೆ. ಅವಳಲ್ಲಿ ಮೊಳಕೆಯೊಡೆದಿರುವ ಅಸಮಾಧಾನಕ್ಕೆ ಲಾಡಿಸ್ಲಾವ್ ಕಾರಣನೆಂದು ಕಸಬೋನ್ (ಗಂಡ) ಊಹಿಸುತ್ತಾನೆ. ಅವನನ್ನು ದೂರವಿಡಲು ಶ್ರಮಿಸುತ್ತಾನೆ. ಚೆಲುವೆಯಾದ ಬುದ್ಧಿಮತೀಯಳೂ ಆದ ಡಾರತೀಯಾಳ ಜೀವನವನ್ನು ಪ್ರವೇಶಿಸಲು ಲಾಡಿಸ್ಲಾವ್ ಹಂಬಲಿಸುತ್ತಾನೆ. ನಿಸ್ಸಹಾಯಕನಾಗಿ ಚಡಪಡಿಸುತ್ತಾನೆ.

ಎರಡನೇಯ ಸಂಚಿನ ನಾಯಕ ಲಿಡ್‌ಗೇಟ್ ಒಟ್ಟು ಕಾದಂಬರಿಯನ್ನು ಹೆಚ್ಚು ಹೊಂದಿಕೊಂಡು ಚಿತ್ರಿಸಲ್ಪಟ್ಟಿರುವ ಪಾತ್ರ. ಲಿಡ್‌ಗೇಟಿನ ವಿಧಿಯು ಕೇವಲ ರೋಸಮುಂಡಳನ್ನು ಮದುವೆಯಾಗುವುದರಲ್ಲಿ ಕೊನೆಗೊಳ್ಳದೆ ಮಿಡಲ್‌ಮಾರ್ಚ್ ಸಮಾಜದ ಆಗುಹೋಗುಗಳನ್ನು ಸ್ಪಂದಿಸಿ ಬದುಕುವ ಪಾತ್ರ. ವೈದ್ಯನಾಗಿ ಹೊಸ ಅನ್ವೇಷಣೆಗಳ ಕಡೆ ಗಮನ ಹರಿಸಿದಾಗ ವೃತ್ತಿಯಲ್ಲಿ ಹಿರಿಯರಾದವರ ಕೋಪಕ್ಕೆ ಕಾರಣನಾಗುತ್ತಾನೆ. ಇದೇನೂ ಸಾಲದೆಂಬಂತೆ, ತಾನು ಮೆಚ್ಚಿ ಮದುವೆಯಾದ ರೋಸಮುಂಡಳ ದುಂದು ವೆಚ್ಚದ ಸ್ವಭಾವ ಅವನನ್ನು ಇನ್ನಷ್ಟು ಇಕ್ಕಟ್ಟಿಗೆ ಸಿಕ್ಕಿಸುತ್ತದೆ. ಮನೆಯ ವಸ್ತುಗಳನ್ನು ಅಡವಿಡುವ ಪ್ರಸಂಗ ಬಂದೊದಗುತ್ತದೆ. ಇವರುಗಳ ವಿವಾಹ ಜೀವನದಲ್ಲಿ ಅತೃಪ್ತಿ ತ

ಬೋರುತ್ತದೆ. ತನ್ನ ಸಾಲದ ಹೊರೆಯು ಜೊತೆಗೆ ರೋಸಮಂಡಳ ನಿರಾಶೆಯನ್ನೂ ಹೊರುವಂತಾಗುತ್ತದೆ. ಈಚೆ ಬುಲ್‌ಸ್ಟ್ರೋಡನು ತಾನು ಮಾಡಿದ ಅವ್ಯವಹಾರ ವಂಚನೆಗಳನ್ನು ಮುಚ್ಚಿಡಲು ಶ್ರಮಿಸುತ್ತಿದ್ದಂತೆ ಇದನ್ನೆಲ್ಲಾ ಬಲ್ಲ ರಾಫಲ್ಸ್ ಬುಲ್‌ಸ್ಟ್ರೋಡಿನ ಅವ್ಯವಹಾರಗಳನ್ನು ಬಯಲಿಗೆಳೆಯುವ ಬೆದರಿಕೆ ಹಾಕಿ ಅವನಿಂದ ಹಣ ವಸೂಲಿ ಮಾಡುತ್ತಾನೆ. ಕೊನೆಗೊಮ್ಮೆ ರಾಫಲ್ಸ್ ತಾನೇ ಖಾಯಿಲೆ ಬಿದ್ದು ಬುಲ್‌ಸ್ಟ್ರೋಡಿನ ಮನೆ ಸೇರುತ್ತಾನೆ. ಬುಲ್‌ಸ್ಟ್ರೋಡನು ಲಿಡ್‌ಗೇಟಿನ ಸಹಾಯ ಪಡೆಯುತ್ತಾನೆ. ಆದರೆ ಅವನ ಆದೇಶಗಳನ್ನು ಪಾಲಿಸದೆ, ರಾಫಲ್ಸ್ ನಿರ್ಲಕ್ಷ್ಯದಿಂದ ಸಾಯುತ್ತಾನೆ. ದೂರದ ಬಡ ಸಂಬಂಧಿ ಎಂದು ರಾಫಲ್ಸ್‌ನ್ನು ಹೂಳಲಾಗುತ್ತದೆ. ತನ್ನ ಸಂತೋಷವನ್ನು ಕೆಡಲು ಬಂದ ರಾಫಲ್ಸ್ ಕೊನೆಕಂಡ ಸಂತೋಷಕ್ಕೆ ಹಿಂದೆ ಲಿಡ್‌ಗೇಟ್ ಕೇಳಿದ ಸಾಲವನ್ನು ಕೊಡಲು ಮುಂದಾಗುತ್ತಾನೆ. ಲಿಡ್‌ಗೇಟ್ ಇದ್ಯಾವುದನ್ನೂ ಅರಿಯದೆ ತನ್ನ ಕಷ್ಟಗಳು ತತ್ಕಾಲಕ್ಕೆ ಮುಂದೂಡಲ್ಪಟ್ಟವೆಂದು ಸಂತೋಷಪಡುತ್ತಾನೆ. ರಾಫಲ್ಸ್ ಸಾಯುವ ಮೊದಲು ಮಿಡಲ್ ಮಾರ್ಚ್‌ನ ಕೆಲವು ಕಿವಿಗಳಲ್ಲಿ ಪಿಸುಗುಟ್ಟಿದ ಕಥೆಗಳು ಕಾಡ್ಗಿಚ್ಚಿನಂತೆ ಹರಡಿ, ಅವನ ನಿಗೂಢ ಸಾವಿನ ಬಗ್ಗೆ ಪ್ರಶ್ನೆಗಳೇಳಾರಂಭಿಸು ತ್ತವೆ. ಜನರ ಮಾತುಗಳು ಬುಲ್‌ಸ್ಟ್ರೋಡನ್ನು ಆವರಿಸಲಾರಂಭಿಸುತ್ತದೆ. ಇವನ ವ್ಯಕ್ತಿತ್ವದಲ್ಲಿ ಕಾದಂಬರಿಗಾರ್ತಿ ಒಂದು ಸಾಮಾಜಿಕ ಪ್ರಪಂಚದ ಪೂರ್ಣಾನುಭವವನ್ನು ನಮ್ಮ ಮುಂದೆ ಇಡುತ್ತಾಳೆ. ಹೊಸ ಬದುಕಿನ ಅಪೇಕ್ಷೆಯಲ್ಲಿ ಬುಲ್‌ಸ್ಟ್ರೋಡಿನ ಪ್ರಯತ್ನಗಳು ನೀರುಪಾಲಾದಾಗ ತನ್ನ ವ್ಯಕ್ತಿತ್ವಕ್ಕೆ ಹೊಂದುವ ಚಟುವಟಿಕೆಗಳಲ್ಲಿ ತೊಡಗುತ್ತಾಳೆ. ಲಾಡಿಸ್ಲಾವಿನಲ್ಲಿನ ವಿಶ್ವಾಸ ಪ್ರೀತಿ ದೃಢಗೊಂಡು ಬೆಳೆಯುತ್ತದೆ. ಆದರೆ ಅವರಿಬ್ಬರನ್ನು ಜೀವಪರ್ಯಂತ ದೂರವಿಡಬೇಕೆಂಬ ದುರದ್ದೇಶದೊಡನೆ, ತಾನು ಸತ್ತ ಮೇಲೂ ಡಾರತೀಯಳ ಬದುಕಿನ ಮೇಲಿನ ಹತೋಟಿಯನ್ನು ಕಳೆದುಕೊಳ್ಳಬಾರ ದೆಂದು ತನ್ನ ಆಸ್ತಿಯನ್ನು ಡಾರತೀಯಾಗೆ ಬಿಟ್ಟು, ಅವಳು ಲಾಡಿಸ್ಲಾವನ್ನು ಮದುವೆ ಮಾದಲ್ಲಿ ಈ ಆಸ್ತಿಯ ಮೇಲಿನ ಹಕ್ಕನ್ನು ಕಳೆದುಕೊಳ್ಳುವುದಾಗಿ ತನ್ನ ಮರಣ ಪತ್ರದಲ್ಲಿ ಕಸಟೋನ್ ಸೂಚಿಸುತ್ತಾನೆ. ಈ ವಿಷಯ ಮಿಡಲ್ ಮಾರ್ಚ್‌ನಲ್ಲಿ ಹಬ್ಬಿ ರುತ್ತಿ ಡಾರತೀಯು ಜನರ ಗುಸುಗುಸು ಮಾತನ್ನು ಎದುರಿಸಬೇಕಾಗುತ್ತದೆ. ಲಾಡಿಸ್ಲಾವಿ ಗಾದ ಅನ್ಯಾಯ ಅವಳಿಗೆ ತನ್ನ ಗಂಡನ ಬಗ್ಗೆ ನಾನು ಅವನೊಡನೆ ನಡೆಸಿದ ಬದುಕಿನ ಬಗ್ಗೆ ಜಿಗುಪ್ಸೆ ಹುಟ್ಟಿಸುತ್ತದೆ. ಕಾದಂಬರಿಯ ಮುಖ್ಯ ಆಸಕ್ತಿ ಡಾರತೀಯ. ಅವಳ ಮಹತ್ವಾಕಾಂಕ್ಷೆಗಳಲ್ಲಿ ಮಿಡಲ್ ಮಾರ್ಚ್ ಸಮುದಾಯವನ್ನು ಉತ್ತಮಪಡಿಸುವ ನೆನಸೂ ಸೇರಿರುವುದರಿಂದ ತನಗಾದ ಅನ್ಯಾಯವನ್ನು ಕಡೆಗಣಿಸಿ ತನ್ನ ಸುತ್ತಮುತ್ತಲಿನ ಜನರ ಹಿತರಕ್ಷಣೆಯಲ್ಲಿ ತೊಡಗುತ್ತಾಳೆ. ಕಡೆಯಲ್ಲಿ ಲಾಡಿಸ್ಲಾವ್‌ನ್ನು ಮದುವೆಯಾಗಲು ಒಪ್ಪಿದಾಗ ಕಾದಂಬರಿ ಮುಖ್ಯ ಆಸಕ್ತಿ ನೆರವೇರಿದಂತಾಗುತ್ತದೆ.

"I wanted to give a Panaromic view of Provincial fe" ಎಂದು ಕಾದಂಬರಿಯ ಬಗ್ಗೆ ಲೇಖಕಿಯ ಮಾತು ನಿಜವಾಗಿಸಿರುವ ದೃಶ್ಯಗಳು ನೇಕ ಇವೆ? ಮೇಲೆ ಹೇಳಿರುವ ಪಾತ್ರಗಳಲ್ಲಿ ಅವಳು ವಹಿಸಿರುವ ಶ್ರದ್ಧೆ ಅಲ್ಲದೆ ಡಲ್ ಮಾರ್ಚ್‌ನಲ್ಲಿ ಕಳಸೆಯಾದುದರ ಅನುಭವವೂ ನಮ್ಮೆದುರು ಇಡುತ್ತಾಳೆ

ನೇಯ್ಗಾರರ ಮೋಸ, ಗೇಣಿದಾರರಿಗಾದ ಅನ್ಯಾಯ, ಚುನಾವಣೆಯ ಹೊತ್ತಿನಲ್ಲಿ ಜನ ಸಾಮಾನ್ಯರು ತೋರಿಸುವ ಜಾಗ್ರತೆ ಅವನು ನಡೆಸುವ ಆತ್ಮಶೋಧನೆ, ತನ್ನನ್ನು ನಂಬಿ ಬದುಕಿದ ಮುಗ್ಧ ಹೆಂಡತಿಯೆದುರು ಅವನು ಪಡುವ ಯಾತನೆ—ಇವು ಚಿರಸ್ಮರಣೀಯ ವಾಗಿ ಉಳಿಯುವ ಭಾಗಗಳು. ಕೆಲವೊಮ್ಮೆ ಪತ್ತೆದಾರಿ ಕಾದಂಬರಿಯ ಸೂಕ್ಷ್ಮತೆಗಳ ಸೇರಿಕೊಂಡರೂ ಮಾನವೀಯ ಬದುಕಿನತ್ತ ನಡೆಸಬೇಕಾದ ಬೃಹತ್ ಪ್ರಯತ್ನಗಳ ಸೂಕ್ಷ್ಮಾತಿಸೂಕ್ಷ್ಮಗಳನ್ನು ಲೇಖಕಿ ನಮ್ಮೆದಿರು ತೆರೆದಿಡುತ್ತಾಳೆ. ಜನಾಭಿಪ್ರಾಯದ ಕಟ್ಟುಪಾಡುಗಳನ್ನು ಮೀರಿ ಬದುಕುವುದು ಅಸಾಧ್ಯವೆಂಬಂತೆ ಕಂಡರೂ ಬುಲ್ ಸ್ಟ್ರೋಡಿನ ಹೆಂಡತಿ ಹ್ಯಾರಿಯಟ್‌ನಂತವರ ಮಾನವೀಯತೆ ಇಡೀ ಸಮಾಜದ ನಿಂದನೆ ಯನ್ನು ಹೊರುವ ಚೈತನ್ಯ ಪಡೆಯುತ್ತದೆ.

ನಾಲ್ಕನೆಯ ಕಥೆ ಗಾರ್ತ್ ಕುಟುಂಬಕ್ಕೆ ಸೇರಿದ್ದು. ಕೇಬಲ್ ಗಾರ್ತ್, ಅವನ ಪ್ರತಿ ಮೇರಿ ಗಾರ್ತ್ ಅವಳ ವಿವಾಹಾರ್ಥಿ, ಫ್ರೆಡ್ ವಿನ್ಸಿ ಇತ್ತ ಮೇರಿಯ ಮನ ವೊಲಿಸಲು ಪ್ರಯತ್ನಿಸುವ ರೆವರೆಂಡ್ ಫೇರ್ ಬ್ರದರ್. ಕಾದಂಬರಿಯ ಶಕ್ತಿ ಈ ಎಲ್ಲಾ ಪಾತ್ರಗಳು ತಮ್ಮ ಭಾವನೆಗಳನ್ನು ಯಾವ ತಡೆಯಿಲ್ಲದೆ ವ್ಯಕ್ತಪಡಿಸುವ ಸಾಮರ್ಥ್ಯ ಹೊಂದಿರುವುದರಿಂದ ಅಷ್ಟೇ ಅಲ್ಲ, ಕಥಾವಸ್ತುವನ್ನು ಶೋಧಿಸಿಬಿಡುವ ಲೇಖಕಿಯ ಪ್ರಯತ್ನಗಳು. ಈ ಕಥೆಗಳು ಒಂದಕ್ಕೊಂದು ಹೆಣೆದಿರುವ ರೀತಿಯಿಂದ ಕಾದಂಬರಿಗೆ ಒಂದು ನಿರ್ದಿಷ್ಟ ಆಯಾಮ ಒದಗಿಸುತ್ತದೆ. ಡಾರತೀಯಳ ಆದರ್ಶವಾದ ರೆವರೆಂಡ್ ಫೇರ್ ಬ್ರದರ್‌ನ ಕ್ರೈಸ್ತ ಧರ್ಮವಾಗಲಿ ಫ್ರೆಡ್ ವಿನ್ಸಿ ದಾರಿ ತಪ್ಪಿದ ಮಗನಾಗಿ—ಕೊನೆಗೆ ಮೇರಿ ಗಾರ್ತಳ ನಿರಾಡಂಬರತೆ ಅವಳ ನೈತಿಕತೆ ಫ್ರೆಡ. ವಿನ್ಸಿ ಯಲ್ಲಿ ಜವಾಬ್ದಾರಿತನವನ್ನು ತುಂಬುವ ಕ್ರಮ–ಇವೆಲ್ಲವೂ ಕಥಾವಸ್ತುವನ್ನೂ ಪಾತ್ರ ನಿರ್ವಹಣೆಯನ್ನು ಸರಿದೂಗಿಸುವ ಸನ್ನಿವೇಶಗಳು.

ಮುಂದೆ ಡಾರತೀಯ ತನ್ನ ಗಂಡನ ಮರಣಾನಂತರ ಮೊದಲಿನಂತೆ ಇವೆಲ್ಲವು ಲೇಖಕಿಯ ಹಾಸ್ಯ ಪ್ರಜ್ಞೆಯಲ್ಲಿ ಸಮತೋಲನವನ್ನು ಹುಡುಕಿಕೊಳ್ಳುತ್ತವೆ. ಹೀಗಾಗಿ ಮಿಡಲ್ ಮಾರ್ಚ್ ಅನ್ನು ನಾವು ಪ್ರತ್ಯಕ್ಷ ಕಾಣದಿದ್ದರೂ, ಆ ಸಮಾಜದ ಆಗು ಹೋಗುಗಳ ಧ್ವನಿ ಪ್ರತಿಧ್ವನಿಗಳು ನಮಗೆ ಕೇಳುತ್ತಿರುತ್ತವೆ. ಲೇಖಕಿಯ ಪ್ರಜ್ಞೆಯಲ್ಲಿ ಒಂದು ಸಮರ್ಪಕ ಜೀವನ ದರ್ಶನವು ಈ ಕಾದಂಬರಿ ನಮಗೆ ಕೊಡುತ್ತದೆ.

ನಮ್ರತೆಯು ಅಹಿಂಸೆಯ ಒಂದು ಅಂಗ.

ಗಾಂಧೀಜಿ

ಇನ್ನೊಂದು ಜಗತ್ತು

ನಿರ್ಮಲ್ ವರ್ಮಾ

ಬಹಳ ಹಿಂದೆ ನನಗೊಬ್ಬಳು ಹುಡುಗಿ ಗೊತ್ತಿದ್ದಳು. ಅವಳು ಇದೇ ದಿನ ಪಾರ್ಕ್‌ನಲ್ಲಿ ಆಡುತ್ತಿರುತ್ತಿದ್ದಳು. ಅಲ್ಲಿ ತುಂಬಾ ಮರಗಳಿದ್ದುವು. ಅವುಗಳಲ್ಲಿ ನನಗೆ ಪರಿಚಯವಿದ್ದ ಮರಗಳು ಬಲು ಕಡಮೆ. ನಾನು ಇಡೀ ದಿನ ಲೈಬ್ರರಿಯಲ್ಲಿದ್ದು ಸಂಜೆ ರೂಮಿಗೆ ಹಿಂತಿರುಗುವಾಗ ಆ ಹುಡುಗಿ ಮರಗಳ ಮಧ್ಯೆ ಕುಳಿತಿರುವುದು ಕಾಣಿಸುತ್ತಿತ್ತು. ಬಹಳ ದಿನಗಳು ನಾವು ಒಬ್ಬರಿಗೊಬ್ಬರು ಮಾತಾಡಿರಲಿಲ್ಲ. ನಾನು ಲಂಡನ್ನಿನ ಆ ಪ್ರದೇಶದಲ್ಲಿ ಕೆಲದಿನಗಳ ವರೆಗೆ ಮಾತ್ರ ತಂಗಿದ್ದೆ. ಏಕೆಂದರೆ, ಆ ದಿನಗಳಲ್ಲಿ ಕಡಮೆ ಬಾಡಿಗೆಯ ಮನೆ ಹುಡುಕಿಕೊಂಡು ನಾನು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹೋಗುತ್ತಿರುತ್ತಿದ್ದೆ.

ಅವು ಬಲು ಬಡತನದ ದಿನಗಳು.

ಆ ಹುಡುಗಿಯೂ ಬಡವಿಯಾಗಿದ್ದಿರಬೇಕು ಎಂದು ಈಗ ನನಗನಿಸುತ್ತದೆ. ಅರ್ಧಂಬರ್ಧ ಹರಿದ ಸ್ವೆಟರ್ ತೊಟ್ಟಿರುತ್ತಿದ್ದಳು ; ಮಾಸಿದ ಟೋಪಿಯನ್ನು ತಂತಿಗೆ ಹಾಕಿರುತ್ತಿದ್ದಳು. ಅದರ ಸುತ್ತಲೂ ಕೂದಲು ಹೊರಗೆ ಬಂದಿರುತ್ತಿದ್ದುವು. ಅವಳ ಕಿವಿ ಹಾಗೂ ಮೂಗಿನ ಮೇಲ್ಭಾಗ ಸದಾ ಕೆಂಪಾಗಿರುತ್ತಿದ್ದುವು. ಅವು ಅಕ್ಟೋಬರ್ ತಿಂಗಳ ಕೊನೆಯ ದಿನಗಳು. ಅಂದರೆ ಚಳಿಗಾಲದ ಆರಂಭ. ಆ ದಿನಗಳು ಒಮ್ಮೊಮ್ಮೆ ಚಳಿಗಾಲದ ದಿನಗಳಿಗಿಂತಲೂ ಕ್ರೂರವಾಗಿರುತ್ತಿದ್ದುವು.

ನಿಜ ಹೇಳಬೇಕೆಂದರೆ ಚಳಿಯಿಂದ ತಪ್ಪಿಸಿಕೊಳ್ಳಲೆಂದೇ ನಾನು ಲೈಬ್ರರಿಗೆ ಹೋಗುತ್ತಿದ್ದೆ. ಆ ಚಳಿಗಾಲದ ದಿನಗಳಲ್ಲಿ ನನ್ನ ರೂಮು ಹಿಮಮಯವಾಗಿರುತ್ತಿತ್ತು. ರಾತ್ರಿ ಮಲಗುವ ಮುಂಚೆ ನಾನು ಸ್ವೆಟರ್ ತೊಟ್ಟು, ಕೈ-ಕಾಲುಗಳಿಗೆ ಗ್ಲೌಸುಗಳನ್ನು ಹಾಕಿಕೊಂಡರೂ ಹೊದೆಯುವ ರಜಾಯಿಯ ಮೇಲ್ಭಾಗಕ್ಕೆ ನನ್ನ ಕೋಟು–ಓವರ್ ಕೋಟುಗಳನ್ನೆಲ್ಲಾ ಹಾಕಿಕೊಂಡರೂ ಚಳಿ ಮಾತ್ರ ಹೋಗುತ್ತಿರ

ಲಿಲ್ಲ. ರೂಮಿನಲ್ಲಿ ಹೀಟರ್ ಇರಲಿಲ್ಲ ಅಂತೇನೂ ಅಲ್ಲ. ಆದರೆ ಅದನ್ನು ಹೊತ್ತಿ
ಅದರ ಬಾಯಿಗೆ ಒಂದು ಶಿಲಿಂಗ್ ಹಾಕಬೇಕಾಗುತ್ತಿತ್ತು. ಮೊದಲ ದಿನ ಆ ರೂವಿ
ಮಲಗಿಕೊಂಡಾಗ ಇಡೀ ರಾತ್ರಿ ಆ ಹೀಟರ್ ಬಾಯಿಗೆ ನಾನು ಹಣವನ್ನು ತಿನ್ನಿ
ಅರ್ಧ ಘಂಟೆಗೊಮ್ಮೆ ಅದರ ಜಠರಾಗ್ನಿಯನ್ನು ಶಮನಗೊಳಿಸಬೇಕಾಗುತ್ತಿತ್ತು.
ಮಾಡಲಾಗಿ ಮಾರನೆಯ ದಿನ ಬೆಳಗ್ಗೆ ನನ್ನ ಬಳಿ ತಿಂಡಿಗೇ ಹಣ ಉಳಿದಿರಲಿಲ್ಲ
ದಿನವೇ ಕೊನೆ. ಅಲ್ಲಿಂದಾಚೆಗೆ ನಾನು ಹೀಟರ್ ಅನ್ನು ತೆಗೆದು ಬೇರೆಯಿಟ್ಟೆ. ನ
ಇಡೀ ರಾತ್ರಿ ಚಳಿಯಿಂದ ನಡುಗಿದರೂ ಪರವಾಗಿಲ್ಲ. ಅದು ಹಸಿವೆಯಿಂದಿರುವುದು ನ
ಸಮಾಧಾನ ತಂದಿತ್ತು. ಮೇಜಿನ ಮೇಲೆ ಅದು ತಣ್ಣಗೆ ಬಿದ್ದಿರುತ್ತಿತ್ತು. ನಾ
ಹಾಸಿಗೆಯ ಮೇಲೆ ಬಿದ್ದಿರುತ್ತಿದ್ದೆ. ಈ ಪ್ರಕಾರವಾಗಿ ನಮ್ಮಿಬ್ಬರ ಮಧ್ಯೆ ಶೀತಯು
ಜಾರಿಯಲ್ಲಿತ್ತು.

ಬೆಳಗಾಗುತ್ತಿದ್ದಂತೆಯೇ ಬೇಗ ಬೇಗನೆ ನಾನು ಲೈಬ್ರರಿಗೆ ಹೋಗುತ್ತಿದ್ದೆ. ನ
ಹಾಗೆಯೇ ಅಡಿಷ್ಟೊಂದು ಜನ ಲೈಬ್ರರಿಗೆ ಬರುತ್ತಿದ್ದರು ಅಂತೀರಿ. ಲೈಬ್ರರಿ ಬಾಗಿ
ತೆರೆಯುವುದಕ್ಕೆ ಮುಂಚೆಯೇ ಅವರೆಲ್ಲ ಬಾಗಿಲ ಹತ್ತಿರ ಸಾಲಾಗಿ ನಿಂತಿರುತ್ತಿದ್ದ
ಅವರಲ್ಲಿ ಬಹಳಷ್ಟು ಜನ ಮುದುಕರು. ಅವರಿಗೆ ಬರುತ್ತಿದ್ದ ಪೆನ್ಷನ್ ತುಂಬಾ ಕಡ
ಆದರೆ ತುಂಬಾ ಚಳಿ ಜಾಸ್ತಿಯಾಗಿತ್ತು. ಅವರು ಮೇಜಿನ ಮುಂದೆ ಒಂದೆರಡು ಪು
ಗಳನ್ನು ತೆರೆದಿಟ್ಟುಕೊಂಡು ಕುಳಿತು ಬಿಡುತ್ತಿದ್ದರು. ಕೊಂಚ ಹೊತ್ತು ಬಿಟ್ಟು ನಾ
ಅತ್ತ-ಇತ್ತ ನೋಡಿದರೆ ಅವರೆಲ್ಲ ನಿದ್ದೆ ಮಾಡುತ್ತಿರುತ್ತಿದ್ದರು. ನಾನು ಅವರ
ಎಚ್ಚರಿಸುತ್ತಿರಲಿಲ್ಲ. ಅರ್ಧ ಗಂಟೆ ಒಂದು ಗಂಟೆಯ ಅನಂತರ ಲೈಬ್ರರಿಯ ಯಾವ
ದರೂ ಒಬ್ಬ ನೌಕರ ಆಕಡೆ ಅಡ್ಡಾಡಿಕೊಂಡು ಬಂದು ಹೀಗೆ ಅವರೆಲ್ಲ ನಿದ್ದೆ ಮಾಡು
ರುವುದನ್ನು ನೋಡಿ, ಅವರ ಮುಂದೆ ತೆರೆದಿಟ್ಟಿರುತ್ತಿದ್ದ ಪುಸ್ತಕಗಳನ್ನು ಒಂದೊಂದಾ
ಮುಚ್ಚುತ್ತಿದ್ದ ಹಾಗೂ ಅವರ ಗೊರಕೆ ಬೇರೆಯವರ ನಿದ್ದೆಗೆ ಅಥವಾ ಓದಿಗೆ ತೊಂ
ಬಾರದಿರಲೆಂದು ಅವರನ್ನು ಮೆಲ್ಲಗೆ ಅಲುಗಾಡಿಸಿ ಎಚ್ಚರಿಸುತ್ತಿದ್ದ.

ಇಂಥಾದ್ದೇ ಒಂದು ಮಧ್ಯಾಹ್ನದ ಹೊತ್ತಿನಲ್ಲಿ ಲೈಬ್ರರಿಯ ನೀಳವಾದ ಕಿಟಕಿ
ಮೂಲಕ ನಾನು ಆ ಹುಡುಗಿಯನ್ನು ನೋಡಿದೆ. ಆಕೆ ಚೀಲವನ್ನು ಬೆಂಚಿನ ಮೇಲಿಟ
ತಾನು ಮರದ ಮರೆಗೆ ಹೋಗಿ ಅವಿತುಕೊಂಡಿದ್ದಳು. ಅಂಥಾ ಬಿಸಿಲಿನ ದಿನವೂ ಅ
ಅದೂ ಇಷ್ಟು ಥಂಡಿಯಲ್ಲಿ ಹೊರಗಡೆ ಆ ಹುಡುಗಿ ಆಡುತ್ತಿದ್ದುದನ್ನು ನೋಡಿ ನನ
ಕೊಂಚ ಆಶ್ಚರ್ಯವಾಯಿತು. ಅವಳು ಒಬ್ಬಳೇ ಇದ್ದಳು. ಉಳಿದ ಬೆಂಚುಗಳೆಲ್ಲ ಖಾ
ಇದ್ದುವು. ಆ ದಿನ ಮೊದಲ ಸಾರಿ, ಮಕ್ಕಳು ಒಂಟಿಯಾಗಿದ್ದಾಗ ತಮ್ಮಷ್ಟಕ್ಕೆ ತಾ
ಆಡಿಕೊಳ್ಳುವಂಥ ಆ ಆಟಗಳು ಯಾವುವು ಎಂಬುದನ್ನು ತಿಳಿದುಕೊಳ್ಳಬೇಕೆಂ
ಕುತೂಹಲವಾಯಿತು.

ಮಧ್ಯಾಹ್ನವಾಗುತ್ತಿದ್ದಂತೆ ಆಕೆ ಪಾರ್ಕ್‌ಗೆ ಬರುತ್ತಿದ್ದಳು. ಬೆಂಚಿನ ಮೇಲೆ ತ
ಚೀಲವನ್ನಿಟ್ಟು ಮರಗಳ ಮರೆಗೆ ಹೋಗುತ್ತಿದ್ದಳು. ನಾನು ಆಗೊಮ್ಮೆ ಈಗೊಮ
ಪುಸ್ತಕದಿಂದ ತಲೆಎತ್ತಿ ಅವಳನ್ನು ನೋಡುತ್ತಿದ್ದೆ. ಸಂಜೆ ಐದು ಘಂಟೆಯಾಗುತ್ತಿದ್ದಂ
ಸರಕಾರಿ ಆಸ್ಪತ್ರೆಯ ಘಂಟೆಯು ನನ್ನ ಕೇಳಿಬರುತ್ತಿತ್ತು. ಘಂಟೆ ಹೊಡೆಯು

ದ್ದಂತೆಯೇ ಆ ಹುಡುಗಿ ಎಲ್ಲಿದ್ದರೂ ಸರಿ, ಓಡಿ ಬಂದು ಆ ಬೆಂಚಿನ ಮೇಲೆ ಕುಳಿತು ಕೊಂಡುಬಿಡುತ್ತಿದ್ದಳು. ಮತ್ತೊಂದು ಕಡೆಯಿಂದ ಇನ್ನೊಂದು ಹೆಂಗಸು ಕಣ್ಣಿಗೆ ಬೀಳುವವರೆಗೆ ಅವಳು ತನ್ನ ಚೀಲವನ್ನು ತೊಡೆಯ ಮೇಲಿಟ್ಟುಕೊಂಡು ಕುಳಿತಿರುತ್ತಿದ್ದಳು. ಆ ಹೆಂಗಸಿನ ಮುಖವನ್ನು ನಾನೆಂದೂ ಸರಿಯಾಗಿ ನೋಡಿಲ್ಲ. ಅವಳು ನರ್ಸ್‌ಳ ಹಾಗೆ ಸದಾ ಬಿಳಿ ಉಡುಪು ಧರಿಸಿ ಬರುತ್ತಿದ್ದಳು. ಅವಳು ಬೆಂಚಿನ ಹತ್ತಿರಕ್ಕೆ ಬರುವುದಕ್ಕೆ ಮುಂಚೆಯೇ ಈ ಹುಡುಗಿ ತನ್ನೆಲ್ಲಾ ಧೈರ್ಯವನ್ನು ಕಳೆದುಕೊಂಡವಳಂತೆ ಓಡಿ ಹೋಗಿ ಆಕೆಯನ್ನು ಬಾಚಿ ತಬ್ಬಿಕೊಳ್ಳುತ್ತಿದ್ದಳು. ಅನಂತರ ಅವರಿಬ್ಬರೂ ಗೇಟ್‌ಕಡೆ ತಿರುಗಿಕೊಳ್ಳುತ್ತಿದ್ದರು. ನನ್ನ ಕಣ್ಣಿನ ದೃಷ್ಟಿಯಿಂದ ಅವರು ಮರೆಯಾಗುವವರೆಗೂ ನಾನು ಅವರನ್ನೇ ನೋಡುತ್ತಿರುತ್ತಿದ್ದೆ.

ಹಿಚ್‌ಕಾಕ್‌ನ ಹೀರೋ ರೀತಿಯಲ್ಲಿ ಕಿಟಕಿಯಿಂದ ಹೊರಗೆ ನಡೆಯುತ್ತಿದ್ದ ಆ ದೃಶ್ಯವನ್ನು ನಾನು ಪ್ರತಿ ನಿತ್ಯವೂ ನೋಡುತ್ತಿದೆ. ಬಹುಶಃ ಈ ಕ್ರಮ ಋತುಮಾನ ತನ್ನ ಸ್ವಭಾವವನ್ನು ಬದಲಿಸುವವರೆಗೆ, ಅಂದರೆ ಮಳೆಗಾಲದವರೆಗೂ ನಡೆಯುತ್ತಿರುತ್ತಿತ್ತು.

ಒಂದು ದಿನ ಮಲಗಿದ್ದಾಗ ನಾನು ಹೊದ್ದಿಕೊಂಡಿದ್ದ ರಜಾಯಿ ಹಾಗೂ ಅದರ ಮೇಲೆ ಹೇರಿದ್ದ ಕೋಟುಗಳು ಶರೀರಕ್ಕೆ ಭಾರವೆನಿಸಿದುವು. ಎಷ್ಟೋ ದಿನಗಳಿಂದ ಜ್ವರ ಬಂದು ಮಲಗಿ ಎದ್ದವನಿಗೆ ಆಗುವಂತೆ ನನ್ನ ಮೈ ಜ್ವರದಿಂದ ತೋಯ್ದಿತ್ತು. ಕಿಟಕಿ ತೆಗೆದು ಹೊರಗೆ ನೋಡಿದಾಗ ವಾತಾವರಣ ನಿಚ್ಚಳವಾಗಿತ್ತು. ಲಂಡನ್ನಿನ ಆಕಾಶ ನೀಲಿ ಮುಕಮಲ್ಲಿನ ಡಬ್ಬಿಯನ್ನು ತೆರೆದಿಟ್ಟಂತೆ, ಆ ಡಬ್ಬಿ ತುಂಬಾ ನಕ್ಷತ್ರಗಳನ್ನು ತುಂಬಿಟ್ಟಂತೆ, ಅದು ಬೇಸಿಗೆ ರಾತ್ರಿ ಎಂಬಂತೆ, ನಾನು ವಿದೇಶದಲ್ಲಿರದೆ ಸ್ವದೇಶದಲ್ಲಿರುವ ನನ್ನ ಮನೆ-ಮಾಳಿಗೆಯ ಮೇಲೆ ಮಲಗಿರುವಂತೆ ಅನುಭವವಾಯಿತು.

ಮಾರನೆಯ ದಿನ ಬಿಸಿಲು ಚೆನ್ನಾಗಿತ್ತು. ಲೈಬ್ರರಿಯಲ್ಲಿ ಬಹಳ ಹೊತ್ತಿನವರೆಗೆ ಕುಳಿತುಕೊಳ್ಳಲಾಗಲಿಲ್ಲ. ಮಧ್ಯಾಹ್ನವಾಗುತ್ತಿದ್ದಂತೆ ಹೊರಗೆ ಬಂದು, ಹಾಗೆಯೇ ಅಡ್ಡಾಡುತ್ತ ಪ್ರತಿನಿತ್ಯ ಊಟಕ್ಕೆ ಹೋಗುತ್ತಿದ್ದ ಹೋಟೆಲ್‌ಗೆ ಹೋದೆ. ಅದೊಂದು ಅಗ್ಗದ ಹೋಟೆಲ್. ಕೇವಲ ಒಂದೂವರೆ ಶಿಲಿಂಗ್‌ಗೆ ಕೋಶರ್ ಗೋಶ್ತ್, ಎರಡು ಚಪಾತಿ, ಒಂದು ಚಿಕ್ಕ ಲೋಟ ಬಿಯರ್ ಕೊಡುತ್ತಿದ್ದರು. ಹೋಟೆಲ್ ಒಡತಿ ಒಬ್ಬ ಯಹೂದಿ ಹೆಂಗಸು. ಯುದ್ಧಕ್ಕಿಂತ ಮೊದಲು ಆಥೂನಿಯಾದಿಂದ ಬಂದವಳು. ಈಕೆ ಒಂದು ಎತ್ತರ ಸ್ಟೂಲ್ ಮೇಲೆ ಕುಳಿತಿರುತ್ತಿದ್ದಳು. ಕೌಂಟರಿನಲ್ಲಿ ಒಂದು ಕ್ಯಾಷ್ ಬಾಕ್ಸ್ ಇಟ್ಟಿದ್ದರು. ಹಾಗೂ ಅದರ ಕೆಳಗೆ ಕುಳಿತಿರುತ್ತಿದ್ದ ಒಂದು ಬಿಳಿಯ ಸಿಯಾಮಿ ಬೆಕ್ಕು ಗ್ರಾಹಕರನ್ನೇ ನಿಟ್ಟಿಸುತ್ತಿರುತ್ತಿತ್ತು. ಬಹುಶಃ ಅದು ನನ್ನನ್ನು ಕೊಂಚ ಮಟ್ಟಿಗೆ ಗುರುತಿಸುತ್ತಿತ್ತು ಅಂತ ಕಾಣುತ್ತದೆ. ನಾನು ಊಟ ಮಾಡುತ್ತ ಕುಳಿತಿರುವವರೆಗೆ ಅದು ಸಹ ನನ್ನನ್ನು ತನ್ನ ಹಸಿರು ಕಣ್ಣುಗಳಿಂದ ಪಿಳಿ-ಪಿಳಿ ಅಂತ ನೋಡುತ್ತ ಕುಳಿತಿರುತ್ತಿತ್ತು. ಬಡತನ, ಚಳಿ ಮತ್ತು ಏಕಾಕಿತನದ ದಿನಗಳಲ್ಲಿ ಬೆಕ್ಕಿನ ಸಹವಾಸವೂ ಮನಸ್ಸಿಗೆ ಎಷ್ಟೋ ನೆಮ್ಮದಿ ಕೊಡುತ್ತದೆ ಎಂದು ಆ ದಿನಗಳಲ್ಲಿ ನನಗನ್ನಿಸಿದ್ದುಂಟು. ಅಂತೆಯೇ ಎಂದಾದರೊಂದು ದಿನ ನಾನೂ ಹೀಗೆಯೇ ಹಿಂದೂಸ್ತಾನಿ ರೆಸ್ಟೋರೆಂಟ್ ತೆರೆದು ಒಟ್ಟಿಗೆ ಮೂರು ಬೆಕ್ಕುಗಳನ್ನು ಸಾಕಬೇಕೆಂದೂ ಮನಸ್ಸಿಗನಿಸಿತು.

ರೆಸ್ಟೋರೆಂಟ್‌ನಿಂದ ಹೊರಗೆ ಬಂದೆ. ಮತ್ತೆ ಲೈಬ್ರರಿಗೆ ಹೋಗಬೇಕೆಂಬ ಇಚ್ಛೆಯ ಹಿಂಗಿ ಹೋಯಿತು. ಬಹಳ ದಿನಗಳ ಅನಂತರ ಅವತ್ತು ಮನೆಯಿಂದ ಪತ್ರಗಳು ಹಾಗ ಪತ್ರಿಕೆಗಳು ಬಂದಿದ್ದುವು. ಅವನ್ನು ಪಾರ್ಕ್‌ನ ಮುಕ್ತ ವಾತಾವರಣದಲ್ಲಿ ಓದು ಆಸೆಯಾಯಿತು. 'ಪಾರ್ಕ್‌ನಲ್ಲಿ ಅರಳಿದ್ದ ಹೂಗಳ ಕಡೆ ನನ್ನ ಗಮನ ಹೋಯಿತ ಹುಲ್ಲು ಗರಿಕೆಗಳ ಮಧ್ಯೆ ಸಾಲಾಗಿ ಅರಳಿನಿಂತಿದ್ದ ಪುಟ್ಟ ಪುಟ್ಟ ಹೂಗಳ ಆ ಪಂಕ್ತಿಯನ ನೋಡಿ ನನಗೆ ಕೊಂಚ ಆಶ್ಚರ್ಯವೂ ಆಯಿತು. ಜೀಸಸ್, 'ಲಿಲ್ಲೀಸ್ ಆಫ್ ದಿ ಫೀಲ್ ಎಂದು ಹೇಳಿದ್ದು ಬಹುಶಃ ಇಂಥ ಹೂಗಳನ್ನೇ ಕುರಿತು ಇರಬೇಕು. ಮುಂಬರು ದಿನಗಳ ಬಗೆಗೆ ಯೋಚಿಸಿದ ಈ ಹೂಗಳು ಕಳೆದುಹೋದ ಬೇಸಿಗೆಯನ್ನು ನೆನಪಿ ತರುತ್ತಿದ್ದುವು. ನಾನು ಹುಲ್ಲಿನ ಮಧ್ಯಭಾಗದಲ್ಲಿ ಹೂಗಳ ಮೇಲೆ ಕಾಲಿಟ್ಟು ನಡೆ ತೊಡಗಿದೆ.

ತುಂಬಾ ಹಿತ ಎನಿಸಿತು. ಬರಲಿರುವ ದಿನಗಳ ಎಲ್ಲ ಕೆಟ್ಟ ಚಿಂತನೆಗಳ ದೂರವಾಗಲಾರಂಭಿಸಿದುವು. ಹಗುರಾದೆ. ಚಪ್ಪಲಿಗಳನ್ನು ಬಿಟ್ಟು ಬರಿಕಾಲಿನಲ್ಲಿ ಹುಲ್ಲ ಮೇಲೆ ನಡೆಯತೊಡಗಿದೆ. ಇನ್ನೇನು ಬೆಂಚಿನ ಬಳಿ ಬರುವುದರಲ್ಲಿದ್ದೆ. ಅಷ್ಟರ ಯಾರೋ ಹಿಂದಿನಿಂದ ಕಿರುಚಿದಂತೆ ಕೇಳಿಸಿತು. ಹಾಗೆ ಕಿರುಚಿದವರು ವೇಗವಾಗಿ ನ ಕಡೆ ಓಡುತ್ತ ಬರುತ್ತಿದ್ದರು. ಹಿಂತಿರುಗಿ ನೋಡಿದರೆ, ಆ ಹುಡುಗಿ! ಮರದ ಮರೆಯ ಅವಿತುಕೊಂಡಿದ್ದ ಅವಳು ಹೊರಗೆ ಬಂದು ನನಗೆ ಅಡ್ಡ ಹಾಕಿ ನಿಂತಳು.

'You are caught',—ಆಕೆ ನಗುತ್ತ ಹೇಳಿದಳು—'ನಿಮಗೆ ಮುಂದಕ ಬಿಡುವುದಿಲ್ಲ.'

ನನಗೊಂದೂ ಅರ್ಥವಾಗಲಿಲ್ಲ, ನಿಂತಲ್ಲೇ ನಿಂತಿದ್ದೆ.

'ನೀವು ಸಿಕ್ಕಿ ಬಿದ್ದಿರಿ', ಅವಳು ಹೇಳಿದಳು—' ನೀವು ನನ್ನ ನೆಲದಮೇ ನಿಂತಿದ್ದೀರಿ.

ನಾನು ಸುತ್ತಲೂ ನೋಡಿದೆ. ಕಂಡದ್ದು ಹುಲ್ಲಿನಮೇಲೆ ಹೂಗಳು, ಬದಿಯ ಖಾಲಿ ಬೆಂಚುಗಳು, ಮಧ್ಯದಲ್ಲಿ ಮೂರು ಎವರ್‌ಗ್ರೀನ್ ಮರಗಳು ಹಾಗೂ ದಪ್ಪದಾ ಒಂದು ಓಕ್ ಮರ. ಅವಳದ್ದು ಎನ್ನುವ ಯಾವ ಭೂಮಿಯೂ ಕಾಣಲಿಲ್ಲ.

'ನನಗೆ ಗೊತ್ತಿರಲಿಲ್ಲ'—ಎಂದು ಹೇಳಿ ತಿರುಗಿ ವಾಪಸ್ ಹೋಗಲಾರಂಭಿಸಿದ 'ಇಲ್ಲ ಇಲ್ಲ, ನೀವು ಹೋಗಲು ಬಿಡುವುದಿಲ್ಲ' ಎಂದನ್ನುತ್ತ ಹುಡುಗಿ ನನ್ನ ಮುಂ ಬಂದು ನಿಂತಳು. ಅವಳ ಕಣ್ಣುಗಳು ಹೊಳೆಯುತ್ತಿದ್ದುವು. 'ಅವು ನಿಮಗೆ ಹೋಗಲ ಬಿಡುವುದಿಲ್ಲ' ಅಂದಳು.

'ಯಾರು ಬಿಡುವುದಿಲ್ಲವೆ?'—ನಾನು ಕೇಳಿದೆ.

ಅವಳು ಮರಗಳತ್ತ ಕೈಮಾಡಿ ತೋರಿಸಿದಳು. ಅವು ನಿಜಕ್ಕೂ ದಪ್ಪಪು ವಾಗಿದ್ದು ಎತ್ತರವಾಗಿದ್ದುವು. ನೋಡಿದರೆ ಸಿಪಾಯಿಗಳಂತೆ ಕಾಣುತ್ತಿದ್ದುವು. ನಾ ನನಗರಿವಿಲ್ಲದಂತೆಯೇ ಆಕೆಯ ಅಮಾಯಕ ಬಲೆಗೆ ಸಿಕ್ಕಿಬಿದ್ದಿದ್ದೆ.

ಕೊಂಚ ಹೊತ್ತಿನವರೆಗೂ ನಾವು ಮೌನವಾಗಿ ಎದುರು—ಬದುರು ನಿಂತಿದ್ದೆ ಅವಳ ಕಣ್ಣುಗಳು ನನ್ನನ್ನೇ ಎಚ್ಚರಿಕೆಯಿಂದ, ಕುತೂಹಲದಿಂದ ನೋಡುತ್ತಿದ್ದ

ನಾನು ಓಡಿಹೋಗುವುದಿಲ್ಲ ಎಂಬ ಇಂಗಿತವನ್ನರಿತ ಅವಳು ತನ್ನ ದೃಷ್ಟಿಯನ್ನು ಕೊಂಚ ಸಡಿಲಿಸಿದಳು.

'ಇಲ್ಲಿಂದ ಬಿಡಿಸಿಕೊಂಡು ಹೋಗಬೇಕಾ ?'—ಅವಳು ಕೇಳಿದಳು.

'ಹೇಗೆ ?' ಎಂದು ಅವಳ ಕಡೆಯೇ ನೋಡಿದೆ.

'ನೀವು ಇವುಗಳಿಗೆ ಊಟ ಹಾಕಬೇಕು. ಇವು ಬಹಳ ದಿನಗಳಿಂದ ಹಸಿದಿವೆ,'—ಅವಳು ಮರಗಳ ಕಡೆಗೆ ಬೆಟ್ಟುಮಾಡಿ ತೋರಿಸಿದಳು. ಅವು ಗಾಳಿಗೆ 'ಹೌದು' ಎಂಬಂತೆ ತಲೆಯಲ್ಲಾಡಿಸುತ್ತಿದ್ದುವು.

'ಊಟ ಹಾಕಲು ನನ್ನಲ್ಲೇನೂ ಇಲ್ಲ'—ನಾನಂದೆ.

'ಬೇಕೂ ಎಂದರೆ ನೀವು ತಂದುಕೊಡಬಲ್ಲಿರಿ', ಆಕೆ ನನ್ನಲ್ಲಿ ಆಸೆ ಮೂಡಿಸಿದಳು. 'ಇವು ಬರಿ ಹೂ—ಎಲೆಗಳನ್ನು ಮಾತ್ರ ತಿನ್ನುತ್ತವೆ' ಅಂದಳು. ಹೂಗಳನ್ನು, ಎಲೆಗಳನ್ನು ತರುವುದು ನನಗೇನೂ ಕಷ್ಟವಾಗಿರಲಿಲ್ಲ. ಅದು ಅಕ್ಟೋಬರ್ ತಿಂಗಳು. ಪಾರ್ಕ್‌ನಲ್ಲಿ ಹೂಗಳಷ್ಟೇ ಅಲ್ಲದೆ ರಾಶಿಗಟ್ಟಲೆ ಎಲೆಗಳೂ ಬಿದ್ದಿರುತ್ತಿದ್ದುವು. ನಾನು ಕೆಳಗೆ ಬಾಗುವುದರಲ್ಲಿದ್ದೆ. ಅಷ್ಟರಲ್ಲಿ ಅವಳು ಬಗ್ಗಿ ನನ್ನ ಕೈ ತಡೆದಳು.

'ಅಲ್ಲ, ಅಲ್ಲ, ಇಲ್ಲಿಯ ಎಲೆಗಳನ್ನು ತಗೋಕೂಡದು. ಇದು ನನ್ನ ಜಮೀನು. ಅಲ್ಲಿಂದ ತಗೊಂಡು ಬನ್ನಿ'—ಅವಳು ಪಾರ್ಕ್‌ನ ಫೆನ್ಸ್‌ಕಡೆ ನೋಡುತ್ತಿದ್ದಳು. ಅಲ್ಲಿ ಬಾಡಿದ ಹೂಗಳು, ಎಲೆಗಳು ರಾಶಿಗಟ್ಟಲೆ ಬಿದ್ದಿದ್ದುವು. ನಾನು ಅತ್ತ ಹೋಗಲಾರಂಭಿಸಿದೆ. ಅಷ್ಟರಲ್ಲಿ ಆಕೆಯ ಧ್ವನಿ ಕೇಳಿತು—'ನಿಲ್ಲಿರಿ, ನಾನೂ ನಿಮ್ಮ ಜೊತೆ ಬರ್ತೀನಿ. ನನ್ನಿಂದ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದರೋ ...ಇಲ್ಲಿಯೇ ಸತ್ತುಹೋಗ್ತೀರಿ'. ಅವಳು ಕೊಂಚ ತಡೆದು ನನ್ನ ಕಡೆ ನೋಡಿದಳು. 'ನಿಮಗೆ ಸಾಯಲಿಕ್ಕೆ ಇಷ್ಟವಾ ?' ಅಂತ ಕೇಳಿದಳು.

ನಾನು ಬೇಗ ತಲೆಯಲ್ಲಾಡಿಸದೆ. ಅಂದು ಎಂಥ ಬೆಚ್ಚನೆಯ ಉಲ್ಲಾಸದಾಯಕ ದಿನವಾಗಿತ್ತೆಂದರೆ ಸಾಯಲು ಮನಸ್ಸು ಬರುತ್ತಿರಲಿಲ್ಲ.

ನಾವು ಫೆನ್ಸ್‌ವರೆಗೆ ಹೋದೆವು. ನಾನು ಕರ್ಚಿಫ್ ಹರಡಿ ಹೂ ಎಲೆಗಳನ್ನು ಆಯ್ದು ಆಯ್ದು ಅದರಲ್ಲಿ ಹಾಕಿಕೊಳ್ಳತೊಡಗಿದೆ. ಜೀವ ಉಳಿಸಿಕೊಳ್ಳಲು ಮನುಷ್ಯ ಏನನ್ನುತಾನೇ ಮಾಡಲಾರ !

ವಾಪಸ್ ಬರುವಾಗ ಅವಳು ಸುಮ್ಮನಿದ್ದಳು. ಆಗಾಗ ನಾನು ಓರೆಗಣ್ಣುಗಳಿಂದ ಅವಳನ್ನು ನೋಡುತ್ತಿದ್ದೆ. ಅವಳು ಕೊಂಚ ಖಾಯಿಲೆಯ ಹುಡುಗಿಯಂತೆ ಕಾಣುತ್ತಿದ್ದಳು. ಅವಳು ಸುಮ್ಮನಿದ್ದಾಗ ಅವಳ ತುಟಿಗಳು ಒಂದಕ್ಕೊಂದು ಅಂಟಿಕೊಂಡಿರುತ್ತಿದ್ದುವು. ಕೆಳಗಿನ ತುಟಿ ಕೊಂಚ ಹೊರಕ್ಕೆ ಬಂದಂತೆ ಕಾಣುತ್ತಿತ್ತು. ಕೊಂಚ ನೀಳವಾಗಿದ್ದ ಮೂಗು ಅನಾಥವಾಗಿರುವಂತೆ ತೋರುತ್ತಿತ್ತು. ಕೂದಲುಗಳು ಬಲು ಚಿಕ್ಕವಿದ್ದುವು. ಆದರೆ ಅಪ್ಪಟ ಕಪ್ಪಗಿದ್ದುವು, ಕಪ್ಪು ಬಣ್ಣದಲ್ಲಿ ಅದ್ದಿದ ಹತ್ತಿಯಂತೆ. ಅವನ್ನು ನೋಡಿದರೆ ಮುಟ್ಟಬೇಕು ಎಂದೆನಿಸಿ ಕೈಗಳು ಮುಂದೆ ಹೋಗುತ್ತಿದ್ದುವು. ಆದರೆ, ಅವಳು ಯಾವುದೇ ಸ್ಪರ್ಶಕ್ಕೆ ಸಿಕ್ಕದಷ್ಟು ಅಂತರದಲ್ಲಿದ್ದಳು.

'ಈಗ ನೀವು ಈ ಮರಗಳಿಗೆ ಊಟಕೊಡಿ'— ಅವಳು ಹೇಳಿದಳು. ಅವಳು ಮರಗಳ ಬಳಿ ನಿಂತಿದ್ದಳು.

'ಊಟ ಕೊಟ್ಟರೆ ಇವು ನನ್ನನ್ನು ಬಿಟ್ಟುಬಿಡುತ್ತವೆಯೇನು'?—ನನ ಆಕೆಯಿಂದ ಭರವಸೆ, ಗ್ಯಾರಂಟಿ ಬೇಕಿತ್ತು.

ಈಗ ಅವಳು ಮುಗುಳ್ನಕ್ಕಳು. ನಾನು ಮೊದಲ ಸಾರಿ ಅವಳ ಹಲ್ಲುಗಳನ್ನ ನೋಡಿದೆ. ಹಲ್ಲುಗಳು ಬೆಳ್ಳಗೆ ಹೊಳೆಯುತ್ತಿದ್ದುವು. ಸಾಮಾನ್ಯವಾಗಿ ನೀಗ್ರೋಗಳ ಹಲ್ಲುಗಳಿರುತ್ತವೆಯಲ್ಲ; ಹಾಗೆ.

ನಾನು ಕರ್ಚೀಫಿನಲ್ಲಿದ್ದ ಎಲೆಗಳನ್ನು ನೆಲಕ್ಕೆ ಸುರಿದು ಅದನ್ನು ನಾಲ್ಕ ಸಮಭಾಗಮಾಡಿ ನಾಲ್ಕು ಮರಗಳ ಕೆಳಗೆ ಹಾಕಿ ಬಂದೆ.

ಈಗ ನಾನು ಸ್ವತಂತ್ರನಾಗಿದ್ದೆ. ತಲೆಯ ಮೇಲಿನ ಭಾರವನ್ನು ಕೆಳಗೆ ಇಳಿಸಿ ಬಿಟ್ಟವನಂತೆ ಹಗುರಾಗಿದ್ದೆ.

ನಾನು ಜೇಬಿನಿಂದ ಪತ್ರಗಳನ್ನು ಹಾಗೂ ಪತ್ರಿಕೆಗಳನ್ನು ಕೈಗೆ ತೆಗೆದುಕೊಂಡು ಅವಳು ಚೀಲ ಇಟ್ಟಿದ್ದ ಬೆಂಚಿನ ಮೇಲೆ ಕುಳಿತೆ. ಅದು ಕಪ್ಪು ಚರ್ಮದ ಚೀಲ. ಅದರ ತುಂಬ ಪುಸ್ತಕಗಳನ್ನು ತುರುಕಿದ್ದಳು. ಚೀಲದ ಮೇಲ್ಭಾಗದ ಜೇಬಿನಲ್ಲಿ ಅರ್ಧ ತಿಂದಿಟ್ಟಿದ್ದ ಸೇಬು ಹೊರಗೆ ಇಣುಕುತ್ತಿತ್ತು.

ಆಕೆ ಇದ್ದಕ್ಕಿದ್ದಂತೆಯೇ ಮಾಯವಾಗಿದ್ದಳು. ನಾನು ಸುತ್ತಲೂ ಗಮನವಿಟ್ಟು ನೋಡಿದಾಗ ಅವಳ ಫ್ರಾಕಿನ ತುದಿ ಪೊದೆಗಳ ಆ ಕಡೆಯ ಮಗ್ಗುಲಿನಿಂದ ಕಾಣಿಸಿತು. ನನ್ನ ಹಾಗೆ ಅರಿಯದೆ ಬರುವ ವ್ಯಕ್ತಿಯನ್ನು ಅಡ್ಡಗಟ್ಟಲು ಅವಳು ಮೊದಲ ರೀತಿಯಲ್ಲಿ ಮುದುರಿಕೊಂಡು ಕುಳಿತಿದ್ದಳು.

ಆದರೆ ಬಹಳ ಹೊತ್ತಿನವರೆಗೆ ಯಾರೂ ಪಾರ್ಕ್ ಒಳಗಡೆ ಬರಲಿಲ್ಲ. ಗಾ ಬೀಸಿದಾಗ ಮರದ ಕೆಳಗಡೆ ರಾಶಿ ಬಿದ್ದಿದ್ದ ಎಲೆಗಳು ಗರ ಗರ ಸುತ್ತುತ್ತಿದ್ದುವು. ಆಗ ಅವಳು ತನ್ನ ಬೇಟೆಯನ್ನು ಮರೆತು ಎಲೆಗಳ ಹಿಂದೆ ಓಡುತ್ತಿದ್ದಳು.

ಕೊಂಚ ಹೊತ್ತಿನ ಬಳಿಕ ಅವಳು ಬೆಂಚಿನ ಬಳಿ ಬಂದಳು. ಬಂದು ನನ್ನನ್ನು ಒಂದು ಕ್ಷಣ ನೋಡಿದಳು. ಅನಂತರ ಚೀಲದ ಜೇಬಿನಿಂದ ಸೇಬನ್ನು ತೆಗೆದಳು. ನಾನ ಪತ್ರಿಕೆಯನ್ನು ಓದುತ್ತಿದ್ದೆ. ಓದುತ್ತ—ಓದುತ್ತ ಅವಳ ಹಲ್ಲುಗಳ ಮಧ್ಯೆ ಚೂರ ಚೂರಾಗುತ್ತಿದ್ದ ಸೇಬಿನ ಕರಕರ ಶಬ್ದ ಕೇಳಿಸಿಕೊಳ್ಳುತ್ತಿದ್ದೆ.

ಇದ್ದಕ್ಕಿದ್ದಂತೆ ಅವಳ ದೃಷ್ಟಿ ಬೆಂಚಿನ ಮೇಲಿಟ್ಟಿದ್ದ ನನ್ನ ಪತ್ರಗಳ ಕ ಹೊರಳಿತು. ಸರಿ, ಆಡುತ್ತಿದ್ದ ದವಡೆಗಳು ತನ್ನ ಕೆಲಸ ನಿಲ್ಲಿಸಿದುವು.

'ಇದು ನಿಮ್ಮದಾ?'

'ಹೌದು'—ನಾನು ಆಕೆಯ ಕಡೆ ನೋಡಿದೆ.

'ಇದು....?'

ಅವಳು ಕವರಿನ ಮೇಲೆ ಅಂಟಿಸಿದ್ದ ಸ್ಟಾಂಪಿನತ್ತ ಕೈ ತೋರಿಸಿದಳು. ಸ್ಟಾಂಪ ಮೇಲೆ ಆನೆಯ ಚಿತ್ರವಿತ್ತು. ಅದರ ಸೊಂಡಿಲು ಗಾಳಿಗೆ ಮೇಲಕ್ಕೆ ಎತ್ತಿತ್ತು. ಅ ತನ್ನ ಕೋರೆ ಹಲ್ಲುಗಳಿಂದ ನಗುತ್ತಿರುವಂತೆ ತೋರುತ್ತಿತ್ತು.

'ನೀನು ಎಂದಾದರೂ ಜೂಗೆ ಹೋಗಿದ್ದೀಯಾ?'—ನಾನು ಕೇಳಿದೆ.

'ಅಪ್ಪನ ಜೊತೆ ಒಂದು ಸಾರಿ ಹೋಗಿದ್ದೆ.' ಅವರು ಒಂದು ಪೆನ್ನಿ ಕೊಟ್ಟಿದ್ದರ ಆಗ ತನ್ನ ಸೊಂಡಿಲಿನಿಂದ ನನ್ನ ಕೈಯಲ್ಲಿದ್ದ ಆ ಪೆನ್ನಿಯನ್ನು ತೆಗೆದುಕೊಂಡಿತ್ತು.

'ನಿನಗೆ ಹೆದರಿಕೆಯಾಗಲಿಲ್ಲವೆ ?'

'ಇಲ್ಲ. ಏಕೆ ?', ಅವಳು ಸೇಬನ್ನು ಅಗಿಯುತ್ತ ನನ್ನ ಕಡೆ ನೋಡಿದಳು.

'ನಿನ್ನ ತಂದೆ ನಿನ್ನ ಜೊತೆ ಇಲ್ಲಿಗೆ ಬರುವುದಿಲ್ಲವೇನು ?'

'ಒಂದು ಸಾರಿ ಬಂದಿದ್ದರು. ಮೂರು ಸಾರಿ ಸಿಕ್ಕಿಬಿದ್ದರು.'

ನಾನು ಅಲ್ಲಿರುವುದನ್ನು ಮರೆತವಳಂತೆ ಅವಳು ಮೃದುವಾಗಿ ನಕ್ಕಳು. ಯಾವುದಾದರೊಂದರ ನೆನಪು ತನ್ನ ನೂರು ಪದರಗಳನ್ನು ಬಿಚ್ಚಿಕೊಂಡಾಗ ಒಬ್ಬರೇ ಸಿಕ್ಕಿಕೊಳ್ಳುತ್ತೇವಲ್ಲ, ಹಾಗೆ.

ಆಸ್ಪತ್ರೆಯಲ್ಲಿ ಹೊಡೆದ ಘಂಟೆಯ ಸದ್ದು ಕೇಳಿಸಿತು. ನಾವಿಬ್ಬರೂ ಬೆಚ್ಚಿದೆವು. ಹುಡುಗಿ ಬೆಂಚ್‌ಮೇಲಿಟ್ಟ ಚೀಲವನ್ನು ಎತ್ತಿಕೊಂಡು ಮೌನವಾಗಿ ನಿಂತಿದ್ದ ಮರಗಳ ಬಳಿಗೆ ಹೋದಳು. ಪ್ರತಿ ಮರದ ಹತ್ತಿರಕ್ಕೂ ಹೋಗಿ ಅದನ್ನು ಮುಟ್ಟಿದಳು. ಅದಕ್ಕೆ ಏನೋ ಹೇಳಿದಳು. ಹೀಗೆ ಅವಳು ಹೇಳಿದ್ದು ಮರಕ್ಕೆ ಮಾತ್ರ ಅರ್ಥವಾಗುತ್ತಿತ್ತು. ಕೊನೆಗೆ ತನ್ನ ಹತ್ತಿರಕ್ಕೆ ಬಂದು, ನನ್ನನ್ನು ಒಂದು ಮರ ಎಂದು ಸಂಭವಿಸಿದವಳಂತೆ ನನ್ನ ಕೈಕುಲಕಿದಳು.

ಅವಳ ದೃಷ್ಟಿ ಹಿಂದಕ್ಕೆ ಹೊರಳಿತು. ಯಾರಿರಬಹುದೆಂದು ತಿರುಗಿ ನೋಡಿದರೆ ಒಬ್ಬ ಹೆಂಗಸು. ಅವಳು ಧರಿಸಿದ್ದ ನರ್ಸ್ ಉಡುಪು ಹಸಿರು ಹುಲ್ಲಿನ ಮೇಲೆ ಬೆಳ್ಳಗೆ ಹೊಳೆಯುತ್ತಿತ್ತು. ಹುಡುಗಿ ಆಕೆಯನ್ನು ನೋಡುತ್ತಿದ್ದಂತೆಯೇ ಅತ್ತ ಓಡಿದಳು. ನಾನು ಗಮನವಿಟ್ಟು ನೋಡಿದಾಗ ನಾನು ಲೈಬ್ರರಿಯ ಕಿಟಕಿಯಿಂದ ನೋಡುತ್ತಿದ್ದ ಹೆಂಗಸು ಈಕೆಯೆಂದೇ ಗೊತ್ತಾಯಿತು. ಚಿಕ್ಕ ಆಕೃತಿ. ಹೆಗಲಿಗೆ ನೇತುಹಾಕಿಕೊಂಡಿದ್ದ ಚೀಲ. ಆ ಹುಡುಗಿಯ ತಲೆಗೂದಲುಗಳಂತೆ ಗುಂಗುರು ಕೂದಲುಗಳು. ಆಕೆ ನನ್ನಿಂದ ಬಹಳಷ್ಟು ದೂರವಿದ್ದಾಗ್ಯೂ ಆಕೆ ಮಾತನಾಡುತ್ತಿದ್ದ ಶಬ್ದಗಳು, ಶಬ್ದಗಳಲ್ಲದಿದ್ದರೂ ಮಾತನಾಡುತ್ತಿದ್ದ ಸದ್ದು ಮಾತ್ರ ಕೇಳುತ್ತಿತ್ತು. ಅವರು ಹುಲ್ಲಿನ ಮೇಲೆ ಕುಳಿತಿದ್ದರು. ಹುಡುಗಿ ಇಷ್ಟು ಹೊತ್ತಿಗೆ ನನ್ನನ್ನು ಮರೆತ್ತಿದ್ದಳು.

ನಾನು ಚಪ್ಪಲಿ ಹಾಕಿಕೊಂಡೆ. ಪತ್ರಿಕೆಗಳನ್ನು ಮತ್ತು ಪತ್ರಗಳನ್ನು ಜೇಬಿನಲ್ಲಿಟ್ಟುಕೊಂಡೆ. ಇನ್ನೂ ಬಹಳ ಸಮಯವಿದ್ದುದರಿಂದ ಈ ಪಾರ್ಕಿನ ಮಾಂತ್ರಿಕತೆಯಿಂದ ದೂರವಾಗಿ ಲೈಬ್ರರಿಯ ಯಾವುದಾದರೊಂದು ಮೂಲೆಯಲ್ಲಿ ಕುಳಿತು ಕೊಂಚ ಹೊತ್ತು ಕಾಲ ಕಳೆಯಲೇ ಎನಿಸಿತು.

ನಾನು ಪಾರ್ಕ್ ಮಧ್ಯದಲ್ಲೇ ನಡೆದೆ. ಮರಗಳ ಚಿಗುರೆಲೆಗಳ ಮೇಲೆ ಬೆಂಕಿ ಬೆಳಕು ಹರಡಿತ್ತು. ಇದೇ ಪಾರ್ಕ್ ಸಂಜೆಯ ಬಂಗಾರದ ಬೆಳಕಿನಲ್ಲಿ ಮಿಂಚಿತ್ತು. ದಾರಿಯುದ್ದಕ್ಕೂ ಗಾಳಿಗೆ ಎಲೆಗಳೋಪಾದಿಯಲ್ಲಿ ಎಲೆಗಳ ನದಿ ಹರಿಯುತ್ತಿತ್ತು.

ಯಾರು ? ಯಾರದು ? ಯಾರೋ ನನ್ನನ್ನು ಕರೆಯುತ್ತಿದ್ದರು. ನಾನು ಮಾತ್ರ ನಡೆಯುತ್ತಲೇ ಇದ್ದೆ, ನಿಲ್ಲಲಿಲ್ಲ. ಒಮ್ಮೊಮ್ಮೆ ಮನುಷ್ಯ ಹೊರಗಡೆಯಿಂದ ತನ್ನನ್ನು ತಾನೇ ಕರೆದುಕೊಳ್ಳುತ್ತಾನೆ. ಆದರೆ ಒಳಗಡೆ ಏನೂ ಇರುವುದಿಲ್ಲ. ಆದರೆ ಈಗ ನನ್ನನ್ನು ಕೂಗಿದ ಧ್ವನಿ ಈ ಹಿಂದಿನ ದಿನಗಳಲ್ಲಿ ಕೇಳಿದ ಧ್ವನಿಯಂತಿರಲಿಲ್ಲ. ಅವನು ನನ್ನನ್ನು ಕರೆಯುವುದನ್ನು ನಿಲ್ಲಿಸಲೇ ಇಲ್ಲ. ಹೀಗಾಗಿ ನಾನು ನಿಲ್ಲಬೇಕಾಯಿತು. ಈಗ

ನನ್ನನ್ನು ಯಾರೋ ಕರೆಯುತ್ತಿದ್ದಾರೆ ಎನ್ನುವ ಬಗ್ಗೆ ಯಾವ ಅನುಮಾನವೂ ಇರಲಿಲ್ಲ. ಆ ಧ್ವನಿ ನನ್ನನ್ನು 'ಸ್ನ್ಯಾಪ್, ಸ್ನ್ಯಾಪ್' ಅನ್ನುತ್ತಿತ್ತು. ಹಿಂತಿರುಗಿ ನೋಡಿದರೆ, ಅ ಹುಡುಗಿ ಅಲ್ಲಿ ನಿಂತು ತನ್ನ ಎರಡೂ ಕೈಗಳನ್ನು ಗಾಳಿಯಲ್ಲಿ ಆಡಿಸುತ್ತಿದ್ದಳು.

ನಿಜ ಹೇಳಬೇಕೆಂದರೆ ಈಗ ನಾನು ಎರಡನೆಯ ಸಾರಿ ಸಿಕ್ಕಿಬಿದ್ದಿದ್ದೆ. ನಾಲ್ಕೂ ಮರಗಳಿಂದ ಸುತ್ತುವರಿದಿದ್ದ ಅವಳ ಜಮೀನಿನ ಮೇಲೆ ಬೇಕೂಫನಂತೆ ನಾನು ನಡೆದು ಬಂದಿದ್ದೆ. ಈಗ ತಾಯಿ ಮತ್ತು ಮಗಳು, ಇಬ್ಬರೂ ನಗುತ್ತಿದ್ದರು.

*　　　*　　　*

ಅವು ಬೇಸಿಗೆಯ ಭ್ರಮೆ ಹುಟ್ಟಿಸುವಂಥ ದಿನಗಳಾಗಿದ್ದುವು. ಹಗಲು ಕಡಮೆ. ಲೈಬ್ರರಿ ಬಟ್ಟ ಬಯಲಾಗುತ್ತಿತ್ತು. ನನ್ನ ನೆರೆಹೊರೆಯವರು, ಪೆನ್ಸನ್‌ದಾರರಾದ ವೃದ್ಧರು ಈಗ ಬಿಸಿಲಿನಲ್ಲಿ ಕುಳಿತುಕೊಳ್ಳುತ್ತಿದ್ದರು. ಆಕಾಶ, ಎಷ್ಟು ನೀಲಿಯಾಗಿ ಕಾಣುತ್ತಿತ್ತೆಂದರೆ ಲಂಡನ್ನಿನ ಹಿಮಧೂಮ ನೀಲಿ ಬೆಳಕನ್ನು ಒಂದಿಷ್ಟೂ ಕುಂದಿಸು ವಂತಿರಲಿಲ್ಲ. ಈ ಆಕಾಶದ ಕೆಳಗೆ ಪಾರ್ಕ್, ಹೇಗೆಂದರೆ ಒಂದು ಹಸಿರು ದ್ವೀಪದ ಹಾಗೆ.

ಗ್ರೇತಾ (ಇದು ಅವಳ ಹೆಸರು) ಸದಾ ಅಲ್ಲಿ ಕಾಣುತ್ತಿದ್ದಳು. ಒಂದು ವೇಳೆ ಅವಳು ಕಣ್ಣಿಗೆ ಬೀಳದಿದ್ದರೂ ಅಲ್ಲಿನ ಅವಳ ಚೀಲವನ್ನು ನೋಡಿ, ಆಕೆ ಇಲ್ಲೇ ಎಲ್ಲೋ ಮರದ ಮರೆಯಲ್ಲಿ ಬಚ್ಚಿಟ್ಟುಕೊಂಡಿದ್ದಾಳೆ ಎಂದು ಅಂದುಕೊಳ್ಳುತ್ತಿದ್ದೆ. ಮರಗಳಿಂದ, ಪೊದೆಗಳಿಂದ ಹುಲ್ಲಿನ ಮೇಲೆ ಅರಳಿದ ಹೂಗಳಿಂದ ತಪ್ಪಿಸಿಕೊಳ್ಳುತ್ತ, ಕಳ್ಳ ಹೆಜ್ಜೆಗಳನ್ನು ಹಾಕುತ್ತ ಕಣ್ಣು ತಪ್ಪಿಸಿ ನಡೆಯುತ್ತಿದ್ದೆ. ಆದರೆ ಪ್ರತಿದಿನವೂ ಆಕೆ ಎಲ್ಲಿಂದಲೋ ಏನೋ ಗೊತ್ತೇ ಆಗದಂತೆ ಭಯಂಕರವಾದ ಬಲೆಯನ್ನು ಬೀಸು ತ್ತಿದ್ದಳು. ಎಷ್ಟೋ ಎಚ್ಚರಿಕೆಯಿಂದಿದ್ದರೂ ನನ್ನ ಕಾಲುಗಳು ಆ ಬಲೆಯೊಳಕ್ಕೆ ಸಿಕ್ಕಿ ಬಿಡುತ್ತಿದ್ದುವು. ಆಗ ಅವಳು ಕೇಕೆ ಹಾಕುತ್ತ ನನ್ನ ಮುಂದೆ ಪ್ರತ್ಯಕ್ಷಳಾಗುತ್ತಿದ್ದಳು. ನಾನು ಅವಳ ಬಂಧಿಯಾಗಿಬಿಡುತ್ತಿದ್ದೆ. ಅವಳು ನನ್ನನ್ನು ಬಿಡುತ್ತಿದ್ದಳು. ಮತ್ತೆ ಹಿಡಿದುಕೊಳ್ಳುತ್ತಿದ್ದಳು.

ಅದು ಆಟವಲ್ಲ, ಒಂದು ಪ್ರಪಂಚ. ಆ ಪ್ರಪಂಚದೊಂದಿಗೆ ನನ್ನ ಯಾವುದೇ ಸಂಬಂಧವಿರದಿದ್ದರೂ ಯಾವಾಗಲಾದರೊಮ್ಮೆ ನಾಟಕದ ಎಕ್ಸ್‌ಟ್ರಾ ತರಹ ನನ್ನನ್ನು ನಾನು ಆ ಪ್ರಪಂಚಕ್ಕೆ ಆವಾಹಿಸಿಕೊಳ್ಳುತ್ತಿದ್ದೆ. ಹೀಗಾಗಿ ನಾನು ಸದಾ ಸಿದ್ಧನಾಗಿ ಬೇಕಿತ್ತು. ಏಕೆಂದರೆ ಅವಳು ಯಾವಾಗ ಎಂದರೆ ಆವಾಗ ನನ್ನನ್ನು ಕರೆಸಿಕೊಳ್ಳು ಸಾಧ್ಯತೆಯಿತ್ತು. ಒಂದು ಮಧ್ಯಾಹ್ನ ನಾವಿಬ್ಬರೂ ಬೆಂಚಿನ ಮೇಲೆ ಕುಳಿತಿದ್ದೆವು ಅವಳು ಇದ್ದಕ್ಕಿದ್ದಂತೆಯೇ ಎದ್ದು ನಿಂತಳು.

'ಹಲೋ ಮಿಸೆಸ್ ಥಾಮಸ್',—ಅವಳು ಮುಗುಳ್ನಗುತ್ತ ಹೇಳಿದಳು— 'ನೀವು ಬಹಳ ದಿನಗಳ ನಂತರ ಕಾಣ್ತಿದ್ದೀರಿ, ಇವರು ನನ್ನ ಇಂಡಿಯನ್ ಮಿತ್ರರು ಭೇಟಿಯಾಗಿ,' ಎಂದಳು.

ಬಿಟ್ಟ ಕಣ್ಣು ಬಿಟ್ಟಂತೆ ನಾನು ಅವಳನ್ನೇ ನೋಡುತ್ತಿದ್ದೆ. ಅಲ್ಲಿ ಯಾರೂ ಇರಲಿಲ್ಲ.

'ಅರೆ, ನೀವು ಕುಳಿತುಕೊಂಡೇ ಇದ್ದೀರಲ್ಲ? ಇವರ ಕೈ ಕುಲುಕಿ,'—ಆಕೆ ಕೊಂಚ ಸಿಡುಕಿನಿಂದ ಹೇಳಿದಳು.

ನಾನು ನಿಂತೆ, ಗಾಳಿಗೆ ಕೈ ಕುಲುಕಿದೆ. ಬೆಂಚಿನ ಮೂಲೆಯಲ್ಲಿ ಮಿಸೆಸ್ ಥಾಮಸ್‌ಗೆ ಕುಳಿತುಕೊಳ್ಳಲು ಜಾಗಮಾಡಿಕೊಟ್ಟು ಗ್ರೇತಾ ನನ್ನ ಪಕ್ಕಕ್ಕೆ ಸರಿದು ಬಂದಳು.

'ನೀವು ಪೇಟೆಗೆ ಹೋಗ್ತಿದ್ದೀರಾ',—ಅವಳು ಖಾಲಿ ಜಾಗದ ಕಡೆ ನೋಡುತ್ತಾ ಕೇಳಿದಳು—'ನಾನು ನಿಮ್ಮ ಕೈ ಚೀಲವನ್ನು ನೋಡಿ ಹಾಗೆ ಅಂದುಕೊಂಡೆ, ಇಲ್ಲ ದಯವಿಟ್ಟು ಕ್ಷಮಿಸಿ, ನಿಮ್ಮ ಜೊತೆ ಈಗ ಬರಲು ಸಾಧ್ಯವಿಲ್ಲ, ನನಗೆ ಬಹಳಷ್ಟು ಕೆಲಸವಿದೆ. ಇವನ್ನು ನೋಡಿ, (ಅವಳು ಮರಗಳ ಕಡೆ ಕೈ ತೋರಿಸಿದಳು) ಬೆಳಿಗ್ಗೆ ಯಿಂದ ಹಸಿದಿವೆ. ಬೆಳಿಗ್ಗೆಯಿಂದ ನಾನು ಅಡುಗೇನೂ ಮಾಡಿಲ್ಲ. ನೀವು ಕಾಫಿ ಕುಡಿತೀರೋ ಚಹನೋ? ಓಹ್! ನೀವು ಮನೆಯಿಂದ ಕುಡಿದುಕೊಂಡು ಬಂದಿದ್ದೀರಿ ಅಲ್ಲವೆ? ಏನಂದಿರಿ? ನಾನು ನಿಮ್ಮ ಮನೆಗೆ ಏಕೆ ಬರುವುದಿಲ್ಲಾಂತ ಕೇಳಿದಿರಾ? ಇತ್ತೀಚೆಗೆ ಬಿಡುವೆಲ್ಲಿದೆ ಹೇಳಿ? ಬೆಳಗಾದರೆ ಆಸ್ಪತ್ರೆಗೆ ಹೋಗಬೇಕು....ಮಧ್ಯಾಹ್ನ ಮಕ್ಕಳ ಜೊತೆ....ನಿಮಗೆ ಎಲ್ಲ ಗೊತ್ತಿದೆಯಲ್ಲ? ನಾನು ಭಾನುವಾರ ಬರ್ತೀನಿ.... ಹೊರಟರೇನು?....ಅವಳು ಎದ್ದುನಿಂತು ಮತ್ತೊಮ್ಮೆ ಕೈ ಕುಲಕಿದಳು. ಬಹುಶಃ ಮಿಸಸ್ ಥಾಮಸ್ ಅವಸರದಲ್ಲಿದ್ದರು ಅಂತ ಕಾಣುತ್ತೆ. ಅಲ್ಲಿಂದ ಹೊರಡುವಾಗ ಆಕೆ ನನ್ನ ಕಡೆ ನೋಡಲೇ ಇಲ್ಲ. ನಾನು ಬೆಂಚಿನ ಮೇಲೆ ಕುಳಿತಿದ್ದೆ.

ಕೊಂಚಹೊತ್ತು ನಾವು ಮೌನವಾಗಿ ಕುಳಿತಿದ್ದೆವು. ಆಕೆ ಮತ್ತೆ ಇದ್ದಕ್ಕಿದ್ದಂತೆ ಬೆಚ್ಚಿದಳು.

'ನಿಮಗೆ ಕೇಳಿಸುತ್ತಿಲ್ಲವೇನು?' ಅವಳು ತನ್ನ ಕೈಯಿಂದ ನನ್ನ ಮೊಣಕೈಗೆ ತಿವಿದಳು.

'ಏನು?' ಎಂದೆ.

'ಫೋನ್‌ಗಂಟೆ....ಎಷ್ಟು ಹೊತ್ತಿನಿಂದ ಹೊಡೆದುಕೊಳ್ಳುತ್ತಿದೆ, ನೋಡಿ ಇದ್ಯಾರು ಅಂತ'

ನಾನು ಎದ್ದು ಬೆಂಚಿನ ಹಿಂಭಾಗಕ್ಕೆ ಹೋದೆ. ಹುಲ್ಲಿನ ಗರಿಕೆಯನ್ನು ಕೈಗೆತ್ತಿ ಕೊಂಡು ಜೋರಾಗಿ 'ಹಲೋ' ಅಂದೆ.

'ಯಾರು'—ಅವಳು ಕೊಂಚ ಬೇಸರದಿಂದ ಕೇಳಿದಳು.

'ಮಿಸೆಸ್ ಥಾಮಸ್'....ನಾನು ಉತ್ತರಿಸಿದೆ.

'ಓಹ್! ಪುನಃ ಮಿಸೆಸ್ ಥಾಮಸ್?' ಅವಳು ಆಯಾಸಗೊಂಡವಳಂತೆ ಆಕಳಿ ಸಿದಳು. ನಿಧಾನವಾಗಿ ನನ್ನ ಬಳಿಗೆ ನಡೆದುಕೊಂಡು ಬಂದಳು. ನನ್ನ ಕೈಲಿದ್ದ ಹುಲ್ಲಿನ ಗರಿಕೆಯನ್ನು ತನ್ನ ಕೈಗೆ ತೆಗೆದುಕೊಂಡು ಮಾತನಾಡಿದಳು—'ಹಲೋ ಮಿಸೆಸ್ ಥಾಮಸ್, ಪೇಟೆಯಿಂದ ಮನೆಗೆ ಬಂದಿರಾ? ಏನೇನು ತೆಗೆದುಕೊಂಡು ಬಂದಿರಿ? ಮೀಟ್‌ಬಾಲ್ಸ್, ಫಿಶ್ ಫಿಂಗರ್ಸ್, ಆಲೂ ಚಿಪ್ಸ್?' ಅವಳ ಕಣ್ಣುಗಳು ಆಶ್ಚರ್ಯ ದಿಂದ ಅರಳುತ್ತ ಹೋಗುತ್ತಿದ್ದುವು. ಬಹುಶಃ ತನಗೆ ಇಷ್ಟವಾದಂಥ ಪದಾರ್ಥಗಳ ಹೆಸರುಗಳನ್ನು ಒಂದೊಂದಾಗಿ ಆಯ್ದು ಆಯ್ದು ಹೇಳುತ್ತಿದ್ದಳು ಅಂತ ಕಾಣುತ್ತೆ.'

ಮಿಸೆಸ್, ಥಾಮಸ್, ಯಾವುದೋ ಅನಿರೀಕ್ಷಿತವಾದಂಥ ವಿಷಯ ಪ್ರಸ್ತಾಪ ಮಾಡಿರಬಹುದೇನೋ? ಅವಳು ಸುಮ್ಮನಾದಳು. 'ಸರಿ ಮಿಸೆಸ್ ಥಾಮಸ್, ನಾನು ಈಗಲೇ ಬರ್ತೇನೆ. ಇಲ್ಲ, ಇಲ್ಲ ಹೊತ್ತಾಗುವುದಿಲ್ಲ, ಬಸ್‌ಸ್ಟ್ಯಾಂಡ್ ಕಡೆ ಹೊರಟೆ ಈಗ, ಗುಡ್ ಬೈ ಮಿಸೆಸ್ ಥಾಮಸ್.'

ತನ್ನ ಮಿಂಚು ಕಣ್ಣುಗಳಿಂದ ಅವಳು ನನ್ನತ್ತ ನೋಡಿದಳು. 'ಮಿಸೆಸ್ ಥಾಮಸ್ ನನ್ನನ್ನು ಡಿನ್ನರ್‌ಗೆ ಕರೆದಿದ್ದಾರೆ, ನೀವೇನು ಮಾಡ್ತೀರಾ?'

'ನಾನು ಮಲಗ್ತೇನೆ.'

'ಮೊದಲು ಇವುಗಳಿಗೇನಾದರೂ ತಿನ್ನಿಸಿ. ಇಲ್ಲವೆಂದರೆ ಇವು ಅಳುತ್ತವೆ,'— ಅವಳು ನಿಂತ ಗಾಳಿಯಲ್ಲಿ ನಿಸ್ಪಂದವಾಗಿ ನಿಂತಿದ್ದ ಮರಗಳತ್ತ ಕೈಮಾಡಿ ತೋರಿಸಿದಳು.

ಅವಳು ಸಿದ್ಧಳಾಗ ತೊಡಗಿದಳು. ನನ್ನ ಕೆದರಿದ ಕೂದಲುಗಳನ್ನು ಸರಿ ಮಾಡಿಕೊಂಡಳು. ಪೌಡರ್ ಹಾಕಿಕೊಳ್ಳುವಂತೆ ಅಭಿನಯಿಸಿದಳು. ಅಂಗೈಯನ್ನೇ ಕನ್ನಡಿಯೋಪಾದಿಯಲ್ಲಿ ಹಿಡಿದುಕೊಂಡು ಅದರಲ್ಲಿ ತನ್ನ ಮುಖವನ್ನು ನೋಡಿಕೊಂಡಳು. ಬಿಸಿಲುನೆರಳಿನ ಕಣ್ಣುಮುಚ್ಚಾಲೆಯಾಟದಲ್ಲಿ ಆಕೆ ನಿಜಕ್ಕೂ ಸುಂದರಳಾಗಿ ಕಾಣುತ್ತಿದ್ದಳು.

ಹೊರಡುವಾಗ ಅವಳು ನನ್ನ ಕಡೆ ನೋಡಿ ಕೈ ಆಡಿಸಿದಳು. ಅವಳು ಮರಗಳ ಹಾಗೂ ದಟ್ಟವಾದ ಪೊದೆಗಳನ್ನು ದಾಟಿ ಮರೆಯಾಗುವವರೆಗೂ ನಾನು ಅವಳನ್ನೇ ನೋಡುತ್ತ ನಿಂತೆ.

ಪ್ರತಿದಿನ ಹೀಗೆ ನಡೆಯುತ್ತಿತ್ತು. ಅವಳು ಮಿಸೆಸ್ ಥಾಮಸ್‌ರನ್ನು ಭೇಟಿಯಾಗಲು ಹೋಗುತ್ತಿದ್ದಳು. ನಾನು ಬೆಂಚಿನ ಮೇಲೆ ಮಲಗಿರುತ್ತಿದ್ದೆ. ಒಂಟಿ ಎಂದು ನನಗೇನೂ ಅನ್ನಿಸುತ್ತಿರಲಿಲ್ಲ. ಪಾರ್ಕ್‌ನಲ್ಲಿನ ವಿಚಿತ್ರವಾದ ಅದೃಶ್ಯ ಸದ್ದುಗಳು ನನ್ನನ್ನು ಸದಾ ಆವರಿಸಿಕೊಂಡಿರುತ್ತಿದ್ದುವು. ನಾನು ಒಂದು ಪ್ರಪಂಚದಿಂದ ಇನ್ನೊಂದು ಪ್ರಪಂಚಕ್ಕೆ ಹೋಗುತ್ತಿದ್ದೆ. ಆಕೆ ಪಾರ್ಕಿನ ದೂರದ ಮೂಲೆಗಳಲ್ಲಿ ಅಡ್ಡಾಡುತ್ತಿದ್ದಳು. ನಾನು ಲೈಬ್ರರಿಯ ಪುಸ್ತಕಗಳನ್ನು ತಲೆದಿಂಬಾಗಿಟ್ಟುಕೊಂಡು ಬೆಂಚಿನ ಮೇಲೆ ಮಲಗಿರುತ್ತಿದ್ದೆ. ಮಲಗಿ ಲಂಡನ್‌ನ ಮೋಡಗಳನ್ನು ನೋಡುತ್ತಿದ್ದೆ. ಮೋಡಗಳು ಚಲಿಸುತ್ತಿರುತ್ತಿದ್ದುವು. ಹೀಗೆ ಚಲಿಸುವ ಮೋಡಗಳಲ್ಲಿ ಯಾವುದಾದರೊಂದು ಮೋಡ ಸೂರ್ಯನಿಗೆ ಅಡ್ಡಬಂದಾಗ ಪಾರ್ಕ್ ತುಂಬಾ ಕತ್ತಲು ಕವಿದುಕೊಳ್ಳುತ್ತಿತ್ತು.

ಒಂದು ದಿನ ನಾನು ಹೀಗೆ ಬೆಂಚ್ ಮೇಲೆ ಮಲಗಿದ್ದಾಗ, ನನ್ನ ತೀರಾ ಹತ್ತಿರದಲ್ಲಿ ಸರಸರ ಎಂಬ ಸದ್ದಾಯಿತು. ನಾನು ಕನಸಿನಲ್ಲಿ ಮಿಸೆಸ್ ಥಾಮಸ್‌ರನ್ನು ನೋಡುತ್ತಿರುವಂಥ, ಅವರು ನನ್ನ ಹತ್ತಿರ.........ತೀರಾ ಹತ್ತಿರದಲ್ಲಿ ಬಂದು ನಿಂತಂತೆ ನಿಂತು ನನ್ನನ್ನು ತಮ್ಮ ಬಳಿ ಕರೆಯುತ್ತಿರುವಂಥ ಅನುಭವವಾಯಿತು.

ನಾನು ಗಾಬರಿಯಿಂದ ಎದ್ದೆ.

ಎದುರಿಗೆ ಹುಡುಗಿಯ ತಾಯಿ ನಿಂತಿದ್ದರು. ಆಕೆ ಗ್ರೇತಾಳ ಕೈ ಹಿಡಿದುಕೊಂಡು, ದ್ವಂದ್ವದಲ್ಲಿದ್ದವರಂತೆ ನನ್ನನ್ನು ನಿಟ್ಟಿಸುತ್ತಿದ್ದರು.

'ಕ್ಷಮಿಸಿ,'—ಅವರು ಸಂಕೋಚದಿಂದ ಹೇಳಿದರು—ನೀವು ನಿದ್ದೆ ಮಾಡ್ತಿರ್ಲಿಲ್ಲ ಾನೆ?

'ಇವತ್ತು ಬಹಳ ಮುಂಚೆ ಬಂದ್ಬಿಟ್ಟಿದ್ದೀರಲ್ಲ'—ನಾನು ನನ್ನ ಬಟ್ಟೆಯನ್ನು ೊಡವಿಕೊಳ್ಳುತ್ತ ಎದ್ದೆ. ಅವರ ಬಿಳಿ ಉಡುಪು, ಕಪ್ಪು ಬೆಲ್ಟ್, ತಲೆಗೆ ಕಟ್ಟಿದ್ದ ಸ್ಕಾರ್ಫ್ ಅನ್ನು ನೋಡಿ ನನ್ನ ಕಣ್ಣುಗಳು ಕೋರೈಸಿದಂಥ ಅನುಭವವಾಯಿತು. ಅವರು ಆಸ್ಪತ್ರೆಯಿಂದ ನೇರವಾಗಿ ಇಲ್ಲಿಗೆ ಬಂದವರಂತೆ ಕಾಣುತ್ತಿದ್ದರು.

'ಹೌದು, ನಾನು ಬೇಗ ಬಂದೆ,'—ಅವರು ಮುಗುಳ್ನಗುತ್ತಿದ್ದರು. 'ಶನಿವಾರದ ಿನ ಅಷ್ಟೊಂದು ಕೆಲಸ ಇರೋಲ್ಲ. ಮಧ್ಯಾಹ್ನಕ್ಕೇ ಬಂದುಬಿಡ್ತೀನೆ.' ಅವರು ವೆಸ್ಟ್ ಇಂಡೀಸ್‌ನ ದೀರ್ಘ ಉಚ್ಚಾರಣೆಯೊಂದನ್ನು ಹೇಳುತ್ತಿದ್ದರು. ಅವರು ಆಡುತ್ತಿದ್ದ ಪ್ರತಿಯೊಂದು ಶಬ್ದದ ಕೊನೆಯ ಸ್ವರ ಬೆಲೂನಿನಂತೆ ಮೇಲಕ್ಕೆ ಹಾರಿಹೋಗುತ್ತಿತ್ತು.

'ಇವತ್ತು ಸಂಜೆಯ ಚಹಾಕ್ಕೆ ನೀವು ನಮ್ಮ ಮನೆಗೆ ಬನ್ನಿ ಅಂತ ಹೇಳೋಣ ೆಂದು ನಾನು ಬಂದೆ. ನಮ್ಮ ಮನೆ ಹತ್ತಿರದಲ್ಲೇ ಇದ್ದ ಅವರ ಧ್ವನಿಯಲ್ಲಿ ಯಾವುದೇ ಸಂಕೋಚವಾಗಲಿ, ಬೂಟಾಟಿಕೆಯಾಗಲಿ ಇರಲಿಲ್ಲ. ನನ್ನನ್ನು ಎಷ್ಟೋ ದಿನಗಳಿಂದ ಬಲ್ಲವರಂತೆ ಮಾತನಾಡುತ್ತಿದ್ದರು.

ನಾನು ಸಿದ್ಧನಾದೆ. ಎಷ್ಟೋ ದಿನಗಳಿಂದ ನಾನು ಯಾರ ಮನೆಗೂ ಹೋಗಿರಲಿಲ್ಲ. ನನ್ನ ಬೆಡ್‌ಸಿಟರ್‌ನಿಂದ ಲೈಬ್ರರಿ ಮತ್ತು ಪಾರ್ಕ್ ಇಷ್ಟು ನನ್ನ ಪ್ರಪಂಚವಾಗಿತ್ತು. ಇದರಿಂದಾಚೆಗೂ ಒಂದು ಪ್ರಪಂಚವಿದೆ. ಅಲ್ಲಿ ಗ್ರೇತಾ ಇದ್ದಾಳೆ, ಅವಳು ತಿನ್ನುತ್ತಿದ್ದಾಳೆ, ಮಲಗುತ್ತಿದ್ದಾಳೆ ಎಂಬುದನ್ನು ನಾನು ಹೆಚ್ಚು ಕಡಮೆ ಮರೆತೇ ಇದ್ದೆ.

ಅವರು ಮುಂದೆ ಮುಂದೆ ಹೋಗುತ್ತಿದ್ದರು. ಹೋಗು–ಹೋಗುತ್ತಲೇ ನಾನು ಿಂದೆ ಬಿದ್ದುಬಿಟ್ಟನೇನೋ ಎಂದು ತಿರುಗಿ–ತಿರುಗಿ ನೋಡುತ್ತಿದ್ದರು. ನಾನು ಅವರ ಮನೆಗೆ ಹೋಗುತ್ತಿರುವುದು ಅವರಿಗೆ ಒಂದು ಅಪೂರ್ವ ಸಂಗತಿ ಎನಿಸಿತ್ತು. ನನಗೂ ಷ್ಟೇ, ಅವರ ಮನೆಗೆ ಹೋಗುವುದಲ್ಲ ಗ್ರೇತಾಳ ಅಮ್ಮನ ಜೊತೆ ಹೋಗುವುದು ಒಂದು ಗೆಯ ವಿಚಿತ್ರವೆನಿಸಿತ್ತು. ತಮ್ಮ ಕುಳ್ಳ ಶರೀರದಿಂದಾಗಿ ಅವರು ವಯಸ್ಸಿನಲ್ಲಿ ತುಂಬಾ ಚಿಕ್ಕವರಂತೆ ಕಾಣುತ್ತಿದ್ದರು. ಅದರಲ್ಲೂ ನಾನು ನಡೆಯುವಾಗಲಂತೂ ಅವರು ಮತ್ತೂ ಚಿಕ್ಕವರಂತೆ ಕಾಣುತ್ತಿದ್ದರು. ಇನ್ನೊಬ್ಬ ಗ್ರೇತಾಳೊಂದಿಗೆ ನಾನು ನಡೆಯುತ್ತಿದ್ದೇನೇನೋ ಎಂದನ್ನಿಸುತ್ತಿತ್ತು ನನಗೆ.

ಹಾದಿಗುಂಟ ಆಕೆ ಏನನ್ನೂ ಮಾತನಾಡಲಿಲ್ಲ. ಮನೆ ಹತ್ತಿರ ಬಂದಾಗ ಒಂದು ಣ ನಿಂತು, 'ನೀವು ಇಲ್ಲೇ ಹತ್ತಿರದಲ್ಲೆಲ್ಲೋ ವಾಸವಾಗಿದ್ದೀರಿ ಅಲ್ಲವೆ?' ಎಂದು ೇಳಿದರು.

'ಬ್ರಾಯ್ಡ್ ಸ್ಟ್ರೀಟ್‌ನಲ್ಲಿದ್ದೇನೆ'—ನಾನಂದೆ—ಟ್ಯೂಬ್ ಸ್ಟೇಷನ್ ಎದುರು.

'ಬಹುಶಃ ನೀವು ಇತ್ತೀಚೆಗೆ ಬಂದಿರಬೇಕು'—ಆಕೆ ಮುಗುಳ್ನಗುತ್ತ ನುಡಿದರು—ಈ ಭಾಗದಲ್ಲಿ ಬಹಳ ಕಡಮೆ ಜನ ಇಂಡಿಯನ್ಸ್ ಇದ್ದಾರೆ.'

ಅವರು ಕೆಳಗೆ ಇಳಿಯ ತೊಡಗಿದರು. ಅವರ ಮನೆ ಬೇಸ್‌ಮೆಂಟ್‌ನಲ್ಲಿದ್ದುದರಿಂದ ಮೆಟ್ಟಿಲುಗಳನ್ನು ಇಳಿದು ಕೆಳಕ್ಕೆ ಹೋಗಬೇಕಾಯಿತು. ಹುಡುಗಿ ಬಾಗಿಲು ತೆರೆದು

ಕೊಂಡು ನಿಂತಿದ್ದಳು. ಹಗಲಿನಲ್ಲೂ ಆ ರೂಮಿನಲ್ಲಿ ಕತ್ತಲೆ ಇತ್ತು. ದೀಪ ಹೊತ್ತಿಸಿದರ
ಈಗ ಮೂರು–ನಾಲ್ಕು ಕುರ್ಚಿಗಳು ಕಾಣಿಸಿದುವು. ಕುರ್ಚಿಗಳ ಮಧ್ಯದಲ್ಲಿ ಒಂ
ಮೇಜಿತ್ತು. ಅದು ಆವಶ್ಯಕತೆಗಿಂತಲೂ ಹೆಚ್ಚು ದೊಡ್ಡದಾಗಿತ್ತು. ಬೋಳು-ಬೋಳ
ಕಾಣುತ್ತಿತ್ತು. ಅದನ್ನು ಪಿಂಗ್–ಪಾಂಗ್ ಆಡಲು ಉಪಯೋಗಿಸುತ್ತಿದ್ದರು ಅಂ
ಕಾಣುತ್ತದೆ. ಗೋಡೆಗೆ ಅಂಟಿಕೊಂಡಂತೆ ಒಂದು ಸೋಫಾ ಇತ್ತು. ಅದರ ಒಂ
ತುದಿಗೆ ಒಂದು ರಜಾಯಿಯನ್ನು ಮಡಚಿ ಇಟ್ಟಿದ್ದರು. ಇದನ್ನೆಲ್ಲಾ ನೋಡಿದರೆ,
ರೂಮು ಊಟ ಮಾಡಲು, ಮಲಗಲು, ಸಮಯ ಬಂದರೆ ಅತಿಥಿ ಸತ್ಕಾರ ಮಾಡಲ
ಹೀಗೆ ಬಹಳಷ್ಟು ಕೆಲಸಗಳಿಗೆ ಉಪಯೋಗವಾಗುತ್ತಿತ್ತು.

'ನೀವು ಕುಳಿತ್ಕೊಳ್ಳಿ, ನಾನು ಈಗ ಚಹಾ ಮಾಡಿಕೊಂಡು ಬರ್ತೀನೆ'—ಎನ್ನು
ಅವರು ಬಾಗಿಲ ಪರದೆ ಸರಿಸಿ ಒಳಗೆ ಹೋದರು. ನಾನು ಮತ್ತು ಗ್ರೇತಾ ರೂಮಿನ
ಕುಳಿತಿದ್ದೆವು. ನಮ್ಮಿಬ್ಬರ ಪರಿಚಯವಾದದ್ದು ಪಾರ್ಕಿನಲ್ಲಿ ಉದುರಿದ್ದ ಎಲೆಗಳ ರಾ
ಮಧ್ಯೆ. ಆದರೆ ರೂಮಿನಲ್ಲಿ ಯಾವುದೇ ಋತುವಾಗಲಿ, ಮಾಯೆಯಾಗಲಿ ಇರಲಿ
ಅವಳು ಒಮ್ಮೆಗೇ ಚಿಕ್ಕವಯಸ್ಸಿನ ಮಗುವಿನಂತಾಗಿ ಬಿಟ್ಟಿದ್ದಳು. ಮಕ್ಕಳಲ್ಲಿರಬೇಕಾ
ಆತಂಕವಾಗಲಿ, ಎದುರುನಿಂತವರನ್ನು ಫಕ್ಕನೆ ಆಕರ್ಷಿಸುವಂಥ ಮೋಡಿಯಾಗ
ಅವಳಲ್ಲಿರಲಿಲ್ಲ.

'ನೀನು ಇಲ್ಲಿ ಮಲಗುತ್ತೀಯಾ?'—ನಾನು ಸೋಫಾದ ಕಡೆ ಕೈ ತೋರಿಸಿದೆ.

'ಅಲ್ಲ, ಇಲ್ಲಲ್ಲ'—ಅವಳು ತಲೆ ಅಲ್ಲಾಡಿಸಿದಳು,—'ನನ್ನ ರೂಮು ಒಳಗ
ಇದೆ. ನೋಡ್ತೀರೇನು?'

ಕಿಚನ್‌ನ ಆ ಕಡೆ ಒಂದು ರೂಮಿತ್ತು. ಬಹುಶಃ ಅದು ಹಿಂದೆ ಉಗ್ರಾಣವಾಗಿತ
ಅಂತ ಕಾಣುತ್ತೆ. ಅದರ ಬಾಗಿಲಿಗೆ ಒಂದು ನೀಲಿ ಪರದೆ ಹಾಕಿದ್ದರು. ಅವಳು ಪರ
ಸರಿಸಿ ಒಳಕ್ಕೆ ಹೋದಳು.

'ಮೆಲ್ಲಗೆ ಬನ್ನಿ, ಅವನು ಮಲಗಿದ್ದಾನೆ.'

'ಯಾರು?'

'ಉಶ್! ಅವಳು ತನ್ನ ಕೈಯನ್ನು ಬಾಯಿಯಮೇಲೆ ಇಟ್ಟುಕೊಂಡಳು. ಒಳ
ಯಾರೋ ಇರಬಹುದೆಂದು ನಾನು ಭಾವಿಸಿದ್ದೆ. ಆದರೆ ಒಳಗಡೆ ಯಾರೂ ಇರಲಿ
ಹಸಿರು ಬಣ್ಣದ ಗೋಡೆಗಳು. ಆ ಗೋಡೆಗಳ ಮೇಲೆ ಪ್ರಾಣಿಗಳ ಚಿತ್ರಗಳನ
ಅಂಟಿಸಿದ್ದರು. ಒಂದು ಮೂಲೆಯಲ್ಲಿ ಅವಳ ಮಂಚವಿತ್ತು. ಆ ಮಂಚದ ಮೇ
ಹಾಸಿದ್ದ ಹಾಸಿಗೆಯ ಮೇಲೆ ಒಂದು ಸಣ್ಣ ಕರಡಿ ಮಲಗಿತ್ತು. ಅವನ್ನು ಬಟ್ಟೆಯಿಂ
ಸುತ್ತಿದ್ದರು. ಅದು ಬೆಚ್ಚಗೆ ಮಲಗಿತ್ತು.

'ಅವನು ನಿದ್ದೆಯನ್ನು ಮಾಡುತ್ತಿದ್ದಾನೆ.'—ಅವಳು ಪಿಸುಗುಟ್ಟಿದಳು.

'ನೀನು?'—ನಾನಂದೆ—'ನೀನು ಇಲ್ಲಿ ಮಲಗುವುದಿಲ್ಲವಾ?'

'ಇಲ್ಲೀ ಮಲಗುವುದು. ಅಪ್ಪ ಇಲ್ಲಿದ್ದಾಗ ಇಲ್ಲಿಯೇ ಇನ್ನೊಂದು ಮಂಚ
ಮೇಲೆ ಮಲಗುತ್ತಿದ್ದರು. ಅಮ್ಮ ಈಗ ಆ ಮಂಚವನ್ನು ಹೊರಗಡೆ ಇಡಿಸಿದ್ದಾಳೆ.'

'ಈಗ ಅವರೆಲ್ಲಿದ್ದಾರೆ?' ಮೆಲ್ಲಗೆ ಕೇಳಿದೆ. ಹೀಗೆ ಮೆಲ್ಲಗೆ ಕೇಳಿದ್ದು ಕರಡಿ
ಹೆದರಿಕೆಯಿಂದಲ್ಲ, ಎಷ್ಟೋ ದಿನಗಳಿಂದ ನನ್ನೊಳಗೇ ಬೆಳೆದು ಬಂದಿದ್ದ ಹೆದರಿಕೆಯಿಂದಾ

'ಇನ್ನೆಲ್ಲಿರುತ್ತಾರೆ, ತಮ್ಮ ಮನೇಲಿದ್ದಾರೆ.'

ಅವಳು ಕೊಂಚ ಆಶ್ಚರ್ಯದಿಂದ ನನ್ನನ್ನು ನೋಡಿದಳು. ನಾನು ಸಂಪೂರ್ಣ ಯ ಮುಕ್ತನಾಗಿಲ್ಲ ಎಂದು ಆಕೆಗೆ ಅನ್ನಿಸಿರಬೇಕು. ಅವಳು ತನ್ನ ಸ್ಕೂಲ್ ಪುಸ್ತಕ ನ್ನಿಟ್ಟಿದ್ದ ಮೇಜಿನ ಬಳಿಗೆ ಹೋದಳು. ಡ್ರಾ ಎಳೆದು ಅದರೊಳಗಿದ್ದ ಕಾಗದಗಳ ನ್ನೊಂದನ್ನು ತೆಗೆದಳು. ಕೆಂಪು ಬಣ್ಣದ ಕಾಗದದಲ್ಲಿ ಅದನ್ನು ಸುತ್ತಿಟ್ಟಿರುವುದನ್ನು ೋಡಿದರೆ ಅದು ಕ್ರಿಸ್‌ಮಸ್ ಕಾಣಿಕೆ ಇರಬೇಕೆಂದು ಅನ್ನಿಸುತ್ತಿತ್ತು. ಅದನ್ನು ೆದುಕೊಂಡು ನನ್ನ ಬಳಿಗೆ ಬಂದಳು. ಎಲ್ಲಕ್ಕೂ ಮೇಲಿದ್ದ ಕವರ್‌ಮೇಲೆ ಹಚ್ಚಿದ್ದ ಚೆ ಸ್ಟಾಂಪನ್ನು ತೋರಿಸಿದಳು.

'ಅವರು ಎಲ್ಲಿದ್ದಾರೆ?'

ಅವಳು ಅಂದು ನಾನು ಮಾಡಿದಹಾಗೆ ಮಾಡುತ್ತಿದ್ದಾಳೆ. ಬಹಳ ಹಿಂದೆ ನಾನು ವಳಿಗೆ ನನ್ನ ದೇಶದ ಪತ್ರವನ್ನು ತೋರಿಸಿದ್ದೆ.

ಹೊರ ರೂಮಿನಿಂದ ಅವಳ ತಾಯಿ ನಮ್ಮನ್ನು ಕರೆಯುತ್ತಿದ್ದರು. ಕರೆದ ಸದ್ದು ಳುತ್ತಿದ್ದಂತೆಯೇ ಅವಳು ರೂಮಿನಿಂದ ಹೊರಗೆ ಬಂದಳು.

ನಾನು ಒಂದು ಕ್ಷಣ ಅಲ್ಲೇ ನಿಂತಿದ್ದೆ. ಮಂಚದ ಮೇಲೆ ಕರಡಿ ಮಲಗಿತ್ತು. ೋಡೆಗೆ ಅಂಟಿಸಿದ್ದ ಕಾಗದಗಳಲ್ಲಿದ್ದ ಪ್ರಾಣಿಗಳ ಕಣ್ಣುಗಳು ನನ್ನನ್ನು ನಿಟ್ಟಿಸುತ್ತಿದ್ದುವು. ಾಸಿಗೆಯ ಪಕ್ಕದಲ್ಲೇ ಒಂದು ಚಿಕ್ಕದಾದ ಬೇಸಿನ್ ಇತ್ತು. ಅದರ ಮೇಲೆ ಅವಳ ಾತ್‌ಬ್ರಶ್, ಸಾಬೂನು ಮತ್ತು ಬಾಚಣಿಗೆಗಳಿದ್ದುವು.

ನನ್ನ ಬೆಡ್‌ಸಿಟ್‌ನಂತೆಯೇ! ಆದರೆ ನನ್ನ ಸ್ವಭಾವಕ್ಕೆ ತೀರಾ ವಿರುದ್ಧ. ನಾನು ನ್ನ ರೂಮನ್ನು ಬಿಟ್ಟು ಎಲ್ಲಿಗೆ ಬೇಕಾದರೂ ಹೋಗಬಹುದಿತ್ತು. ಆದರೆ ಆಕೆಯ ಾಮು ತನ್ನೆಲ್ಲ ವಸ್ತುಗಳೊಂದಿಗೆ ಇದ್ದ ಸ್ಥಳದಲ್ಲೇ ಶಾಶ್ವತವಾಗಿರುವಂತೆ ತೋರುತ್ತಿತ್ತು.

ಮೇಜಿನ ಮೇಲೆ ರೇಷ್ಮೆ ದಾರದಿಂದ ಕಟ್ಟಿದ್ದ ಕಾಗದಗಳ ಒಂದು ಕವರ್ ಇತ್ತು. ದನ್ನು ಆಕೆ ಆತುರದಲ್ಲಿ ಅಲ್ಲೇ ಬಿಟ್ಟು ಹೋಗಿದ್ದಳು.

'ರೂಮು ನೋಡಿದರಲ್ಲ?'—ಆಕೆ ಮುಗುಳ್ನಗುತ್ತ ಕೇಳಿದಳು.

'ನಮ್ಮ ಮನೆಗೆ ಯಾರೇ ಬರಲಿ ಅವರಿಗೆ ಈಕೆ ಮೊದಲು ತನ್ನ ರೂಮನ್ನು ೋರಿಸುತ್ತಾಳೆ'—ಅವರು ಬಟ್ಟೆ ಬದಲಿಸಿ ಬಂದಿದ್ದರು. ಕೆಂಪು ಚುಕ್ಕೆಗಳ ಸ್ಕರ್ಟ್, ಾದು ಬಣ್ಣದ ಕಾರ್ಡಿಗನ್ ಉಟ್ಟಿದ್ದರು. ರೂಮಿನಲ್ಲಿ ಅಗ್ಗದ ಸೆಂಟ್‌ವಾಸನೆ ುತ್ತಿತ್ತು.

'ನೀವು ನನ್ನನ್ನು ಚಹಾಕ್ಕೆ ಕರೆದಿದ್ದೀರೋ, ಇಲ್ಲ ಔತಣಕ್ಕೆ ಕರೆದಿದ್ದೀರೋ?'— ೇಜಿನ ಮೇಲಿಟ್ಟಿದ್ದ ತಿಂಡಿ ಪದಾರ್ಥಗಳನ್ನು ನೋಡಿ ನಾನು ಹೇಳಿದೆ. ಟೋಸ್ಟ್ ಾಮ್, ಬೆಣ್ಣೆ, ಚೀಜ್—ಇಷ್ಟೆಲ್ಲವನ್ನು ಒಟ್ಟಿಗೆ ನಾನು ಎಲ್ಲಿ ನೋಡಿರಬಹುದು.

'ಆಸ್ಪತ್ರೆಯ ಕ್ಯಾಂಟೀನ್‌ನಿಂದ ತಂದಿದ್ದೀನಿ, ಅಲ್ಲಿ ಕೊಂಚ ಅಗ್ಗವಾಗಿ ಸಿಗುತ್ತವೆ. ವರು ಕೊಂಚ ಬೇಸರಗೊಂಡವರಂತೆ ಕಾಣುತ್ತಿದ್ದರು. ಮೇಲ್ನೋಟಕ್ಕೆ ನಗುತ್ತಿದ್ದರೂ ೇಸರಭಾವ ಅವರ ಮುಖದಲ್ಲಿ ಸ್ಥಿರವಾಗಿತ್ತು. ಮಗಳು ಎಲ್ಲಿ ಹೋದಳೋ ಏನೋ! ಾಗಿ ಕರೆಯುತ್ತಿದ್ದರು. ಚಹ ತಣ್ಣಗಾಗುತ್ತಿತ್ತು.

ಅವರು ತಲೆ ಮೇಲೆ ಕೈ ಇಟ್ಟುಕೊಂಡು ಕುಳಿತೇ ಇದ್ದರು. ಮುಂದಿನ ಕ್ಷಣದಲ್ಲಿ ನಾನು ಅಲ್ಲಿರುವುದು ನೆನಪಾಗಿ, 'ನೀವು ಶುರುಮಾಡಿ ಅವಳು ಕೈ ತೋಟದಲ್ಲಿರಬಹುದು' ಅಂದರು.

'ನಿಮ್ಮದು ಕೈತೋಟ ಇದೆಯಾ?'–ನಾನು ಕೇಳಿದೆ.

'ಕಿಚನ್ ಹಿಂಭಾಗದಲ್ಲಿ ಒಂದು ಚಿಕ್ಕ ಕೈತೋಟವಿದೆ. ನಾವು ಇಲ್ಲಿಗೆ ಬಂದಾಗ ಅದು ಹಾಳು ಬಿದ್ದಿತ್ತು. ನನ್ನ ಗಂಡ ಅದನ್ನೆಲ್ಲ ಅಚ್ಚುಕಟ್ಟು ಮಾಡಿದರು. ಈಗ ಅಲ್ಲಿ ಅಷ್ಟು–ಇಷ್ಟು ತರಕಾರಿ ಬೆಳೆಯುತ್ತೇವೆ.

'ನಿಮ್ಮ ಗಂಡ ಇಲ್ಲಿರುವುದಿಲ್ಲವೆ?'

'ಇಲ್ಲ, ಅವರಿಗೆ ಇಲ್ಲಿ ಯಾವ ಕೆಲಸವೂ ಸಿಗಲಿಲ್ಲ. ದಿನವಿಡೀ ಪಾರ್ಕ್‌ನಲ್ಲಿ ಅಲೆಯುತ್ತಿದ್ದರು....ಆ ಚಾಳಿ ಗ್ರೇತಾಳಿಗೂ ಹಿಡಿದಿದೆ. ಅವರ ಧ್ವನಿಯಲ್ಲಿ ಕೊಂಚ ಬಳಲಿಕೆಯಿದ್ದಂತೆ ಕಡಿತು. ಗಾಳಿಗೆ ಹಾರುವ ಧೂಳು ಬೇಡ ಬೇಡವೆಂದರೂ ಹೇಗೆ ಸುತ್ತಲಿನ ಮರಗಳ ಮೇಲೆ ಕೂರುತ್ತೋ ಹಾಗೆ ಆಕೆಯ ಬೇಸರ ಭಾವ ಆಕೆಯ ಮಾತು ಮಾತಲ್ಲೂ ಇಣುಕುತ್ತಿತು.

'ನಾನೂ ಪಾರ್ಕ್‌ನಲ್ಲಿ ಸುತ್ತುತ್ತೇನಲ್ಲ?'–ನಾನು ಅವರ ದುಃಖದ ತೀವ್ರತೆಯನ್ನು ಕಡಿಮೆಗೊಳಿಸುವ ದೃಷ್ಟಿಯಿಂದ ಹೇಳಿದೆ. ನನ್ನ ಮಾತುಗಳು ಪ್ರಭಾವ ಬೀರಿದುವು ಅಂತ ಕಂಡಿತು. ಅವರು ನಗಲಾರಂಭಿಸಿದರು.

'ನಿಮ್ಮ ವಿಚಾರ ಬೇರೆ'–ಅವರು ಭಾರವಾದ ಸ್ವರದಲ್ಲಿ ಹೇಳಿದರು–'ನೀವು ಒಂಟಿಯಾಗಿದ್ದೀರ' ಆದರೆ ಲಂಡನ್‌ನಲ್ಲಿ ಸಂಸಾರ ಜೊತೆಗಿತ್ತು ಅಂದರೆ ನೌಕರಿಯಿಲ್ಲದೆ ಬದುಕುವುದು ಸಾಧ್ಯವಿಲ್ಲ. ಅವರು ಮೇಜಿನ ಮೇಲಿದ್ದ ವಸ್ತುಗಳನ್ನು ತೆಗೆಯತೊಡಗಿದರು. ಪಾತ್ರೆಗಳನ್ನು ನಾನು ಒಟ್ಟುಗೂಡಿಸಿ ಕಿಚನ್‌ಗೆ ತೆಗೆದುಕೊಂಡು ಹೋದೆ. ಸಿಂಕ್ ಮುಂಭಾಗದಲ್ಲಿದ್ದ ಕಿಟಕಿಯಿಂದ ನೋಡಿದರೆ ಅವರ ಕೈತೋಟ ಕಾಣಿಸುತ್ತಿತ್ತು. ಮಧ್ಯದಲ್ಲಿ ಒಂದು ವೀಪಿಂಗ್–ವಿಲೋ ವೃಕ್ಷವಿತ್ತು. ಅದರ ರೆಂಬೆಗಳು ಬೋರಲು ಹಾಕಿದ ಛತ್ರಿಯ ಕಡ್ಡಿಗಳು ನೇತಾಡುವಂತೆ ನೇತಾಡುತ್ತಿದ್ದುವು.

ಹಿಂತಿರುಗಿ ಬಂದಾಗ ಅವರು ಎದುರಿಗೆ ಕಂಡರು. ಬಾಗಿಲ ಬಳಿ ಟವಲ್ ಹಿಡಿದುಕೊಂಡು ನಿಂತಿದ್ದರು.

'ಏನ್ ನೋಡ್ತಿದ್ದಿರಿ?'

'ನಿಮ್ಮ ತೋಟ ನೋಡ್ತಿದ್ದೆ. ಇದೇನೂ ಚಿಕ್ಕತೋಟವಲ್ಲ.

'ಅದು ಸರಿ, ಆದರೆ ಈ ಮರ ಎಲ್ಲಾ ಜಾಗವನ್ನು ಆಕ್ರಮಿಸಿಕೊಂಡು ಬಿಟ್ಟಿದೆ. ಕತ್ತರಿಸಿ ಹಾಕೋಣ ಅಂದುಕೊಂಡಿದ್ದೆ. ಆದರೆ ಇವಳ ಹಠದಿಂದ ಅದಿದೆ. ಅದನ್ನು ಕತ್ತರಿಸಿ ಹಾಕಬೇಕೂಂತ ಅಂದುಕೊಂಡ ದಿನ ಇವಳು ಇಡೀ ರಾತ್ರಿ ಅತ್ತಳು. ಮುಂದೆ ಆ ರಾತ್ರಿಯನ್ನು ನೆನಪು ಮಾಡಿಕೊಳ್ಳುವುದು ಒಂದೇ, ಅತ್ತು ಬಿಡುವುದೂ ಒಂದೇ ಎಂದು ಹೇಳುವವರಂತೆ, ಇಷ್ಟು ಹೇಳಿ ಸುಮ್ಮನಾದರು.

'ಏನ್ ಹೇಳ್ತಿದ್ದಳು?'

'ಇನ್ನೇನ್ ಹೇಳ್ತಾಳೆ, ಹಠ ಮಾಡ್ತಿದ್ದಳು. ಈ ಮರದ ಕೆಳಗೆ ಸಮ್ಮರ್ ಹೌಸ್ ಕಟ್ಟಿಸೋಣ ಅಂತ ಬಹಳ ಹಿಂದೆ ಇವರ ಅಪ್ಪ ಹೇಳಿದ್ದರು. ಅಂತ ಕಾಣುತ್ತೆ.

ೀವೇ ಹೇಳಿ, ಇದಲಿಕ್ಕೇ ಇಲ್ಲಿ ಜಾಗ ಇಲ್ಲ. ಇಲ್ಲಿ ಪ್ರಾಣಿಗಳಿಗೆ ಸಮ್ಮರ್ ಹೌಸ್ ಹೇಗೆ ಕಟ್ಟಲಿಕ್ಕೆ ಆಗುತ್ತೆ ಅಂತ?'

'ಸಮ್ಮರ್ ಹೌಸಾ?'

'ಹೌದು, ಸಮ್ಮರ್ ಹೌಸ್. ತನ್ನ ಕರಡಿ ಜೊತೇಲಿ ಗ್ರೇತಾ ಇಲ್ಲಿರ್ತಾಳಂತೆ'.

ಅವರು ನಕ್ಕರು. ವಿಷಾದದ ನಗೆ ಅದು, ಒಂದು ಖಾಲಿ ಪ್ರದೇಶದಿಂದ ಇನ್ನೊಂದು ಖಾಲಿ ಪ್ರದೇಶದಲ್ಲಿ ಮುಕ್ತಾಯವಾಗುವಂಥಾದ್ದು. ಇವೆರಡರ ಮಧ್ಯದ ಪ್ರದೇಶವನ್ನೂ ಿಕ್ತಗೊಳಿಸುವಂಥಾದ್ದು. ಹೊರಡಲು ನನಗೆ ಸಮಯವಾಗುತ್ತಿತ್ತು. ಆದರೆ ಗ್ರೇತಾ ಎಲ್ಲಿಯೂ ಕಾಣಿಸಲಿಲ್ಲ. ನಾವು ಮೆಟ್ಟಲುಗಳನ್ನು ಹತ್ತಿ ಮೇಲಕ್ಕೆ ನಡೆದು ಬಂದೆವು. ಲಂಡನ್‌ನ ಮಂಕು ಬಿಸಿಲು ಅಕ್ಕಪಕ್ಕದ ಮನೆಗಳ ಮೇಲೆ ದೇಕುತ್ತಿತ್ತು. ಅವರಿಂದ ಬೀಳ್ಕೊಳ್ಳಲು ನಾನು ಕೈ ಮುಂದೆ ಮಾಡಿದಾಗ ಅವರು ಕೊಂಚ ಸಂಕೋಚದಿಂದ, ನಾಳೆ ನೀವು ಬಿಡುವಾಗಿದ್ದೀರಾ?' ಅಂತ ಕೇಳಿದರು.

'ಏಕೆ? ಹೆಚ್ಚು-ಕಡಮೆ ದಿನವೂ ನಾನು ಬಿಡುವಾಗಿಯೇ ಇರ್ತೇನೆ.

'ನಾಳೆ ಭಾನುವಾರ........'ಅವರು ಹೇಳಿದರು-'ಗ್ರೇತಾಗೆ ನಾಳೆ ರಜೆ. ಆದರೆ ನನಗೆ ಆಸ್ಪತ್ರೇಲಿ ಡ್ಯೂಟಿಯಿದೆ. ಇವಳನ್ನು ನಿಮ್ಮ ಬಳಿ ಬಿಟ್ಟುಹೋಗಲಾ?'

'ಎಷ್ಟು ಗಂಟೆಗೆ ಬರಲಿ?'

'ಬೇಡ, ನೀವು ಬರುವ ಕಷ್ಟವನ್ನು ತೆಗೆದುಕೊಳ್ಳಬೇಡಿ. ಆಸ್ಪತ್ರೆಗೆ ಹೋಗುವಾಗ ಇವಳನ್ನು ನಾನೇ ಲೈಬ್ರರಿ ಮುಂದೆ ಬಿಡ್ತೇನೆ....ಸಂಜೆಗೆ ವಾಪಸಾಗುವಾಗ ಕರೆದು ಕೊಂಡು ಬರ್ತೇನೆ.

ನಾನು 'ಆಯಿತು' ಅಂದೆ. ರಸ್ತೆಗೆ ಬಂದೆ ಕೊಂಚ ದೂರ ನಡೆದು ಬಂದು ಜೇಬಿ ನಲ್ಲಿದ್ದ ಹಣವನ್ನು ತೆಗೆದು ಏಣಿಸತೊಡಗಿದೆ. ಇವತ್ತಿನ ಊಟದ ಖರ್ಚು ಉಳಿಯಿತು ಅಂದಂದುಕೊಂಡು ಸಂತೋಷಪಡುತ್ತ ಆ ಹಣವನ್ನು ಹಿಡಿಯಲ್ಲಿ ಹಿಡಿದು ರೂಮಿನ ಕಡೆ ಹೊರಟೆ.

ನಾನು ಲೈಬ್ರರಿಯ ಬಾಗಿಲ ಬಳಿ ನಿಂತಿದೆ.

ಚಳಿಯಿಂದಾಗಿ ಅವರು ಬರುವುದು ಕೊಂಚ ತಡವಾಯ್ತು ಅಂತ ಕಾಣುತ್ತದೆ. ಎಲ್ಲೂ ಬಿಸಿಲಿರಲಿಲ್ಲ. ಲಂಡನ್‌ನ ಕಟ್ಟಡಗಳ ಮೇಲೆಲ್ಲ ಮಂಕು ಬೆಳಕು ಹರಡಿತ್ತು. ಈ ಕಳಾಹೀನ ಬೆಳಕಿನಿಂದಾಗಿ ಅವು ಮತ್ತಷ್ಟು ದರಿದ್ರರಾದಂತೆ, ದುಃಖತಪ್ತರಾದಂತೆ ಕಾಣುತ್ತಿದ್ದುವು.

ಆಕೆಯ ಬಿಳಿ ಉಡುಪು ಕಾಣಿಸಿತು. ಅವರು ಪಾರ್ಕ್ ಒಳಗಡೆ ಬರುತ್ತಿದ್ದರು. ಮುಂದೆ-ಮುಂದೆ ಅವರು, ಹಿಂದೆ-ಹಿಂದೆ ಓಡುತ್ತ ಬರುತ್ತಿದ್ದ ಗ್ರೇತಾ ಅವರು ನನ್ನನ್ನು ನೋಡುತ್ತಿದ್ದಂತೆಯೇ ಗಾಳಿಯಲ್ಲಿ ಕೈಯಾಡಿಸಿದರು. ಅವಸರದಲ್ಲಿ ನಗಳಿಗೆ ಮುತ್ತಿಟ್ಟರು. ಹಾಗೂ ವೇಗವಾಗಿ ಹೆಜ್ಜೆ ಹಾಕುತ್ತ ಆಸ್ಪತ್ರೆಯ ಹಾದಿಯ ಕಡೆ ತಿರುಗಿದರು.

ಆದರೆ ಹುಡುಗಿಗೆ ಯಾವ ಅವಸರವೂ ಇರಲಿಲ್ಲ. ನಿಧಾನವಾಗಿ ಹೆಜ್ಜೆ ಹಾಕುತ್ತ ಆಕೆ ನನ್ನ ಹತ್ತಿರ ಬಂದಳು. ಚಳಿಯಿಂದಾಗಿ ಮೂಗು ಕೆಂಪಾಗಿತ್ತು. ಆಕೆ ತುಂಬು

ತೋಳಿನ ಬ್ರೌನ್ ಸ್ವೆಟರ್ ತೊಟ್ಟಿದ್ದಳು. ತಲೆಯ ಮೇಲೆ, ಪಾರ್ಕ್‌ನಲ್ಲಿ ನೋಡಿದ್ದೆನಲ್ಲ ಅದೇ ಹಳೇ ಕ್ಯಾಪ್!

'ಹೋಗೋಣ? ಅಂದೆ. ಸುಮ್ಮನೆ ನಿಂತಿದ್ದ ಅವಳು ಮೆಲ್ಲಗೆ ತಲೆಯಾಡಿಸಿದಳು. ನನಗೆ ಕೊಂಚ ನಿರಾಶೆಯಾಯಿತು. ಏಕೆಂದರೆ ಅವಳು ಎಲ್ಲಿಗೆ ಅಂತ ಕೇಳ್ತಾಳೆ, ಆ ನಾನು ಅವಳಿಗೆ ವಿಸ್ಮಯವನ್ನುಂಟುಮಾಡಬೇಕು ಎಂದು ನಾನು ಯೋಚಿಸುತ್ತಿ ಎಂದೆಲ್ಲ ನಾನು ಯೋಚಿಸಿದ್ದೆ. ಆದರೆ ಅವಳು ಏನನ್ನೂ ಕೇಳಲಿಲ್ಲ. ನಾವು ರಸ್ತೆ ದಾ ತೊಡಗಿದೆವು.

ನಾವು ಪಾರ್ಕ್ ದಾಟಿ ಮುಂದೆ ನಡೆದಾಗ, ತಾನು ತನ್ನ ಸುರಕ್ಷಿತ ಪ್ರದೇಶ ಪರಿಧಿಯಿಂದ ಹೊರಗೆ ಹೋಗುತ್ತಿದ್ದೇವಲ್ಲ ಎಂದೋ ಏನೋ ಒಮ್ಮೆ ಆಕೆ ಪ್ರಶ್ನಾರ್ಥ ದೃಷ್ಟಿಯಿಂದ ನನ್ನತ್ತ ನೋಡಿದಳು. ಆದರೆ ನಾನು ಸುಮ್ಮನಿದ್ದೆ. ಅವಳೂ ಎಲ್ಲಿ ಏನು ಅಂತ ಕೇಳಲಿಲ್ಲ. ಮಕ್ಕಳು ತಮ್ಮ ಅಪ್ಪ–ಅಮ್ಮನ ಜೊತೆ ಇರಲಿಲ್ಲ ಅಂದ ತಮ್ಮೆಲ್ಲಾ ಪ್ರಶ್ನೆಗಳನ್ನು ಗಂಟು ಕಟ್ಟಿ ಯಾವುದೇ ಕತ್ತಲು ಮೂಲೆಗೆ ಎಸೆ ಬಿಡುತ್ತಾರೇನೋ ಎಂದು ನನಗೆ ಮೊಟ್ಟ ಮೊದಲ ಬಾರಿಗೆ ಅನ್ನಿಸಿತು.

ಟ್ಯೂಬ್‌ನಲ್ಲಿ ಕುಳಿತುಕೊಂಡ ಮೇಲೆ ಅವಳು ಕೊಂಚ ನಿರಾತಂಕಗೊಂಡವಳ ಕಂಡಳು. ಈಗ ಆಕೆ ನನ್ನ ಕೈಬಿಟ್ಟು ಕಿಟಕಿಯಿಂದ ಹೊರಗೆ ನೋಡ ತೊಡಗಿದಳು.

'ಇಷ್ಟು ಬೇಗ ಕತ್ತಲಾಯಿತಾ?'–ಅವಳು ಕೇಳಿದಳು.

'ಕತ್ತಲು ಎಲ್ಲಾಗಿದೆ?'

'ಅಲ್ಲಿ ನೋಡಿ, ಹೊರಗೆ ಎಷ್ಟು ಕತ್ತಲಾಗಿದೆ'

'ನಾವು ಭೂಮಿಯ ಕೆಳಭಾಗದಲ್ಲಿದ್ದೇವೆ'

ಅವಳು ಏನನ್ನೋ ಯೋಚಿಸುತ್ತಿದ್ದಳು. ಕೊಂಚ ಹೊತ್ತು ಬಿಟ್ಟು ಅವ 'ಕೆಳಗೆ ರಾತ್ರಿ, ಮೇಲೆ ಹಗಲು, ಅಲ್ಲವೆ?' ಅಂದಳು.

ನಾವಿಬ್ಬರು ನಗತೊಡಗಿದೆವು. ಈ ರೀತಿ ನಾನೆಂದೂ ಯೋಚಿಸಿರಲಿಲ್ಲ. ಮೆ ಮೆಲ್ಲಗೆ ಬೆಳಕು ಕಾಣಲಾರಂಭಿಸಿತು. ಅನಂತರ ಒಂದು ಚೂರು ಆಕಾಶ ಕಾಣಿಸಿತ ಅನಂತರ ಬೆಳ್ಳಂ ಬೆಳಕಿನ ಹಗಲು ಸುರಂಗದ ಹೊರಗೆ ಕಾಣಿಸಿತು.

ಟ್ಯೂಬ್ ಸ್ಟೇಷನ್ನಿನ ಮೆಟ್ಟಲುಗಳನ್ನು ಹತ್ತುತ್ತಿರುವಾಗ ಅವಳು ನಿಂತಳ ನಾನು ಆಶ್ಚರ್ಯದಿಂದ ಅವಳತ್ತ ನೋಡಿದೆ 'ಏಕೆ ನಿಂತೆ?' ಅಂದೆ. 'ನಾನು ಬಾತ್‌ರೂ ಹೋಗಬೇಕು' ಅಂದಳು.

ಟಾಯ್ಲೆಟ್ ಕೆಳಭಾಗದಲ್ಲಿರುವುದು ನೆನಪಾಯಿತು. ಅವಳು ಬಹಳ ಹೊತ ತಡೆ ಹಿಡಿದುಕೊಂಡು ಬಹಳ ದೂರ ನಡೆದು ಬರುವಂಥ ಸ್ಥಿತಿಯಲ್ಲಿರಲಿಲ್ಲ. ಹೀಗ ಅವಳನ್ನು ಕಂಕುಳಲ್ಲಿ ಎತ್ತಿಕೊಂಡು ಬಂದ ದಾರಿಯಲ್ಲೇ ಮೆಟ್ಟಲುಗಳ ಮೇಲೆ ಓ ತೊಡಗಿದೆ. ನಾನು ಓಡುತ್ತಿದ್ದ ಹಾದಿಯ ಇನ್ನೊಂದು ಕೊನೆಯಲ್ಲಿ 'ಪುರುಷ ಎಂದು ಬರೆದಿದ್ದ ಟಾಯ್ಲೆಟ್ ಕಾಣಿಸಿತು. ನಾನು ಬೇಗ ಅವಳನ್ನು ಒಳಗೆ ಕರೆ ಕೊಂಡು ಹೋಗಿ ಬಿಟ್ಟು ಹೊರಗೆ ಬಂದು ಬಾಗಿಲು ಹಾಕಿದೆ. ಕಷ್ಟದಿಂದ ಮುಕ್ತ ಗಿದ್ದು ಅವಳಲ್ಲ, ನಾನು ಎಂಬಂಥ ಅನುಭವವಾಯಿತು.

ಅವಳು ಹೊರಗೆ ಬಂದಾಗ ಕೊಂಚ ಆತಂಕಗೊಂಡವಳಂತೆ ಕಂಡಳು. 'ಏನ್ ವಿಷಯ?' ಅಂದೆ-'ಚೈನ್ ತುಂಬಾ ಎತ್ತರದಲ್ಲಿದೆ' ಅಂದಳು. 'ಬಂದೆ ತಡಿ, ನಾನು ಎಳೆಯುತ್ತೇನೆ,' ಅಂದೆ.

ಅವಳು ನನ್ನ ಕೋಟನ್ನು ಹಿಡಿದುಕೊಂಡಳು. ಅವಳು ತನ್ನ ಕೈಯಿಂದಲೇ ಎಳೆಯಲು ಇಚ್ಛಿಸುತ್ತಿದ್ದಳು. ಅವಳ ಜೊತೆ ನಾನು ಒಳಗೆ ಹೋದೆ. ಅವಳನ್ನು ಎರಡೂ ಕೈಗಳಿಂದ ಮೇಲಕ್ಕೆ ಚೈನ್ ಅವಳ ಕೈಗೆ ಎಟಕುವವರೆಗೆ ಮೇಲಕ್ಕೆ ಎತ್ತಿದೆ. ನಾವಿಬ್ಬರೂ ವಿಸ್ಮಯದಿಂದ ನೀರು ಟಾಯ್ಲೆಟ್ ಒಳಗೆ ಭೋರ್ಗರೆದು ಹರಿಯುವುದನ್ನು ಬಹುಶಃ ಅದೇ ಮೊದಲ ಬಾರಿಗೆ ನೋಡುತ್ತಿರುವವರಂತೆ, ನೀರಿನ ಪವಾಡವನ್ನು ನೋಡುತ್ತ ನಿಂತೆವು.

ನಾವು ಮೆಟ್ಟಿಲುಗಳನ್ನು ಹತ್ತಿ ಮೇಲೆ ಬರುತ್ತಿದ್ದಂತೆಯೇ ಅವಳು ನನ್ನ ಕೈಯನ್ನು ಭದ್ರವಾಗಿ ಹಿಡಿದಳು. ಮುಂದೆ ಟ್ರಫಾಲ್ಗ ಸ್ಕ್ವಯರ್, ಅಲ್ಲಿ ಸುತ್ತಲೂ ಜನಸಂದಣಿ, ಬೆಳಕು, ಗಲಾಟೆ. ಅಲ್ಲಿ ನಾನು ಅವಳನ್ನು ಆಶ್ಚರ್ಯಕೀಡುಮಾಡಬೇಕೆಂದುಕೊಂಡಿದ್ದೆ. ಆದರೆ ಅವಳು ಹೆದರಿದಳು. ಎಷ್ಟೆಂದರೆ ಮತ್ತೆ ಅವಳನ್ನು ಟ್ಯೂಬ್ ಸ್ಟೇಷನ್‌ಗೆ, ಅಲ್ಲಿನ ಸುರಕ್ಷಿತವಾದ ಕತ್ತಲಿಗೆ ಕರೆದುಕೊಂಡು ಹೋಗಲೇ ಎಂದನ್ನಿಸಿತು.

ಆದರೆ ಆಕೆಯ ಭಯ ಹೆಚ್ಚು ಹೊತ್ತಿರಲಿಲ್ಲ. ಕೊಂಚ ಹೊತ್ತಿನ ನಂತರ ಆಕೆ ನನ್ನ ಕೈಯನ್ನು ಬಿಟ್ಟಳು. ಅವಳು ಸ್ಕ್ವಯರ್‌ನ ಉಜ್ವಲ ಬೆಳಕಿನ ಲೋಕದಲ್ಲಿ ತನ್ನನ್ನು ತಾನು ಮರೆತಳು. ಕಪ್ಪು ಕಲ್ಲುಗಳ ಮೇಲೆ ತಮ್ಮ ಕೈಗಳನ್ನಿಟ್ಟು ಜನ ಸಂದಣಿಯನ್ನೇ ದುರುಗುಟ್ಟಿಕೊಂಡು ನೋಡುತ್ತಿದ್ದ ಹುಲಿಗಳ ಕೆಳಭಾಗಕ್ಕೆ ಹೋದಳು. ಬಹಳ ಮಕ್ಕಳು ಪಾರಿವಾಳಗಳಿಗೆ ಕಾಳುಗಳನ್ನು ಹಾಕುತ್ತಿದ್ದರು.

ಹಕ್ಕಿಗಳ ನೆರಳು ಒಂದು ಮೋಡದಂತೆ, ಗಾಳಿಗೆ ಒಮ್ಮೆ ಇತ್ತ ಬಂದಂತೆ, ಒಮ್ಮೆ ಅತ್ತ ಹೋದಂತೆ ಕಾಣುತ್ತಿತ್ತು. ನೆತ್ತಿಯ ಮೇಲೆ ಅದು ಹಾಯ್ದು ಹೋದಾಗ ಕಿವಿಗಳ ತುಂಬಾ ಒಂದು ಬಗೆಯ ಬೆಚ್ಚನೆಯ, ಸರಸರ ಎಂಬ ಸದ್ದು ಮಾತ್ರ ಗುಂಯ್ ಗುಟ್ಟಿದಂತಾಗುತ್ತಿತ್ತು.

ಅವಳು ಅದನ್ನು ಕೇಳುತ್ತ ಕೇಳುತ್ತ ನನ್ನನ್ನು ಮರೆತಿದ್ದಳು.

ನಾನು ಅವಳ ಕಣ್ಣು ತಪ್ಪಿಸಿ ಸ್ಕ್ವಯರ್ ಮಧ್ಯಕ್ಕೆ ಹೋದೆ. ಅಲ್ಲಿದ್ದ ಕೆಂಪು ಹಲಗೆಯ ಕ್ಯಾಬಿನ್‌ನಲ್ಲಿ ಕಾಳುಗಳನ್ನು ಮಾರುತ್ತಿದ್ದರು. ನಾಲ್ಕು ಪೆನ್ಸ್ ಕೊಟ್ಟರೆ ಒಂದು ಕಪ್ ಕಾಳು ಕೊಡುತ್ತಿದ್ದರು ನಾನು ಒಂದು ಕಪ್ ಕಾಳು ಖರೀದಿಸಿಕೊಂಡು ಗುಂಪಿನಲ್ಲಿದ್ದ ಅವಳನ್ನು ಹುಡುಕತೊಡಗಿದೆ.

ತುಂಬಾ ಮಕ್ಕಳಿದ್ದರು, ಅವರ ಸುತ್ತ ಪಾರಿವಾಳಗಳಿದ್ದುವು. ಆದರೆ ಅವಳು ಮಾತ್ರ ತನ್ನ ಜಾಗದಿಂದ ಒಂದು ಇಂಚೂ ಅಲುಗಾಡದೆ ಈ ಮುಂಚೆ ಎಲ್ಲಿ ನಿಂತಿದ್ದಳೋ ಅಲ್ಲೇ ನಿಂತಿದ್ದಳು. ನಾನು ಅವಳ ಹಿಂಭಾಗದಲ್ಲಿ ನಿಂತು ಅವಳ ಮುಂದಕ್ಕೆ ಕಾಳು ತುಂಬಿದ ಕಪ್ಪನ್ನು ಹಿಡಿದೆ.

ಅವಳು ನನ್ನತ್ತ ಕಕ್ಕಾಬಿಕ್ಕಿಯಾದವಳಂತೆ ನೋಡಿದಳು. ಮಕ್ಕಳು ಕೃತಜ್ಞರಾಗಿರುವುದಿಲ್ಲ, ನಮ್ಮನ್ನು ತಮ್ಮವರನ್ನಾಗಿಸಿಕೊಂಡುಬಿಡುತ್ತಾರೆ. ಎಷ್ಟೆಲ್ಲ ನಿಶ್ಶಬ್ದತೆ.

ನೀರವತೆಯಿದ್ದರೂ ಅದನ್ನೆಲ್ಲ ಒಮ್ಮೆಗೇ ಸೀಳಿಹಾಕಿಬಿಡುವಂಥ ಮಾಂತ್ರಿಕ ಶಕ್ತಿ ಇರುತ್ತದೆ ಅವರಲ್ಲಿ. ಅವಳು ಹೆಚ್ಚು ಕಡಿಮೆ ನನ್ನ ಕೈಯಿಂದ ಕಪ್ಪನ್ನು ಕಿತ್ತುಕೊಳ್ಳುತ್ತ 'ಅವು ಇಲ್ಲಿಗೆ ಬರುತ್ವಾ?' ಎಂದು ಕೇಳಿದಳು.

'ಓಹ್, ಖಂಡಿತ ಬರುತ್ತವೆ....ಒಂದೊಂದೇ ಕಾಳು ಹಾಕಿ ಅವನ್ನು ಹತ್ತಿರ ಹತ್ತಿ ಕರಿ, ಆಮೇಲೆ....

ಅವಳು ನನ್ನ ಮಾತು ಕೇಳಲಿಲ್ಲ. ಹಾರಿಹೋಗುತ್ತಿದ್ದ ಅಲ್ಲೊಂದು ಇಲ್ಲೊಂದ ಪಾರಿವಾಳದ ಕಡೆ ಅವಳು ಓಡಿಹೋದಳು. ಮೊದಮೊದಲು ಹೆದರುತ್ತ ಹೆದರುತ್ತ ಕೈ ಮುಂದೆ ನೀಡಿದಳು. ಆಕೆಯ ಹೆದರಿಕೆ ಅದಕ್ಕೂ ಅಂಟಿತೇನೋ ಎಂಬಂ ಪಾರಿವಾಳಗಳು ಅವಳ ಹತ್ತಿರ ಬರಲು ಹೆದರಿದುವು. ಆದರೆ ಹೆಚ್ಚು ಹೊತ್ತು ಅವುಗಳಿಂ ತಮ್ಮ ಆಸೆಯನ್ನು ಹತ್ತಿಕ್ಕಿಕೊಂಡಿರಲಾಗಲಿಲ್ಲ. ಕೊನೆಗೆ ತಮ್ಮ ಬಿಂಕ ಭಿನ್ನಾಣಗಳನ್ನು ಬಿಟ್ಟು ಹತ್ತಿರ ಬಂದುವು; ಅತ್ತಿತ್ತ ನೋಡುವಂತೆ ನೆಪಮಾಡಿದುವು. ಅನಂತರ ಬಂದದ್ದೆ ಅವಳ ಅಂಗೈಯಲ್ಲಿದ್ದ ಕಾಳುಗಳನ್ನು ಕೊಕ್ಕಿನಿಂದ ತೆಗೆದು ತಿನ್ನತೊಡಗಿದುವು. ಈ ಅವಳು ತನ್ನ ಫ್ರಾಕ್ ಹರಡಿಕೊಂಡು ಕುಳಿತುಕೊಂಡಿದ್ದಳು. ಅವಳ ಒಂದು ಕೈ ಕಪ್ಪು, ಇನ್ನೊಂದು ಕೈಲಿ ಕಾಳುಗಳಿದ್ದುವು. ಈಗ ಅವಳು ನನಗೆ ಕಾಣಿಸುತ್ತಿರಲಿಲ್ಲ

ನಾನು ಬೆಂಚ್ ಮೇಲೆ ಕುಳಿತೆ. ನೀರಿನ ಬುಗ್ಗೆಗಳನ್ನು ನೋಡುತ್ತ ಕುಳಿತೆ ಬುಗ್ಗೆಗಳಿಂದ ಹಾರುತ್ತಿದ್ದ ಹನಿಗಳು ನನ್ನ ಕಾಲಿನವರೆಗೂ ಸಿಡಿಯುತ್ತಿದ್ದುವು ಮೋಡಗಳು ಎಷ್ಟು ಕೆಳಕ್ಕೆ ಬಾಗಿ ಬಂದಿದ್ದವೆಂದರೆ ನೆಲ್ಸನ್‌ನ ತಲೆ ಒಂದು ಕಪ್ಪು ಚುಕ್ಕೆಯಂತೆ ಕಾಣುತ್ತಿದ್ದುವು.

ಹಗಲು ಸರಿಯುತ್ತಿತ್ತು.

ಕೊಂಚ ಹೊತ್ತಿನಲ್ಲಿಯೇ ಅವಳು ಎದುರಿಗೆ ನಿಂತಿದ್ದಳು.

'ಇನ್ನೊಂದು ಕಪ್ಪು ಕಾಳು ಬೇಕು ನನಗೆ'—ಅಂದಳು.

'ಈಗ ಬೇಡ, ನಾನು ಕೊಂಚ ಹಿಂದು ಮುಂದು ನೋಡುತ್ತ 'ತುಂಬ ಹೊತ್ತಾಗಿದೆ, ಚಹಾ ಕುಡಿಯೋಣ, ನೀನು ಐಸ್‌ಕ್ರೀಂ ತಗೋ' ಅಂದೆ.

ಅವಳು ತಲೆ ಆಡಿಸಿದಳು.

'ಇನ್ನೊಂದು ಕಪ್ಪು ಕಾಳುಬೇಕು ನನಗೆ'—ಎಂದು ಹೇಳಿದ ಅವಳ ಧ್ವನಿಯ ಹಠ ಇರಲಿಲ್ಲ. ನಾನು ಅವಳ ಕೈಯಿಂದ ಕಪ್ಪು ತೆಗೆದುಕೊಂಡು ಅಂಗಡಿಯ ಕಡ ಹೊರಟೆ. ಹೋಗುತ್ತ ಹೋಗುತ್ತ ಹಿಂತಿರುಗಿ ನೋಡಿದೆ—ಅವಳು ನನ್ನನ್ನೇ ನೋಡ ತ್ತಿದ್ದಳು. ನಾನು ಅಂಗಡಿಯ ಹಿಂಭಾಗಕ್ಕೆ ತಿರುಗಿದೆ. ಅಲ್ಲಿ ಜನಗಳ ಗುಂಪು ನೆರೆದಿತ್ತು ಹೀಗಾಗಿ ಅವಳ ಕಣ್ಣುಗಳು ನನ್ನವರೆಗೂ ತಲುಪುವಂತಿರಲಿಲ್ಲ. ಮೂಲೆಗೆ ಹೋ ಜೇಬಿನಿಂದ ಹಣವನ್ನು ತೆಗೆದೆ. ಚಹ ಮತ್ತು ಐಸ್‌ಕ್ರೀಂಗೆ ಟ್ಯೂಬ್‌ಗೆ ತಗುಲಿ ಖರ್ಚನ್ನು ಲೆಕ್ಕ ಹಾಕಿದೆ. ಈಗ ನನ್ನ ಬಳಿ ಎರಡು ಪೆನ್ಸ್‌ಗಳು ಮಾತ್ರ ಉಳಿದಿದ್ದುವು ಸರಿ, ಅಂಗಡಿಯ ಮುಂದೆ ಕ್ಯೂನಲ್ಲಿ ನಿಂತೆ.

ಈಗ ನಾನು ಅವಳ ಕೈಗೆ ಕಪ್ಪು ಕೊಟ್ಟಾಗ ಅವಳು ನನ್ನ ಕಡೆ ತಿರುಗಿಯ ನೋಡಲಿಲ್ಲ. ನನ್ನ ಕೈಯಿಂದ ಕಪ್ಪನ್ನು ತೆಗೆದುಕೊಂಡದ್ದೇ ಹೆಚ್ಚು ಪಾರಿವಾಳಗಳ

ಗುಂಪುಗೂಡಿದ್ದ ಕಡೆಗೆ ಓಡಿಹೋದಳು. ಈಗ ಅವಳ ಉತ್ಸಾಹ ಇಮ್ಮಡಿಸಿತ್ತು. ಪಾರಿವಾಳಗಳು ಸಹ ಅವಳನ್ನು ಗುರುತಿಸಲಾರಂಭಿಸಿದ್ದುವು. ಅವು ಅತ್ತ ಇತ್ತ ಹಾರುತ್ತ ಹಾರುತ್ತ ಅವಳ ಕೈಗಳ ಮೇಲೆ, ಹೆಗಲಮೇಲೆ, ತಲೆಯಮೇಲೆ ಕೂಡಲಾರಂಭಿಸಿದ್ದುವು. ಅವಳು ನಗುತ್ತಿದ್ದಳು. ಅವಳ ಮುಖ ಸಂತೋಷವನ್ನು ಮುಕ್ಕಳಿಸುತ್ತಿತ್ತು. ಯಾವುದೇ ಕ್ಷಣದಲ್ಲಿ ಪಾರಿವಾಳಗಳ ರೆಕ್ಕೆಗಳನ್ನು ತನ್ನ ಕೈಲಿ ಹಿಡಿದುಕೊಂಡು ಬಿಡುವಳೇನೋ ಎಂಬ ಅವಳ ಕೈ ಹಿಡಿಗಳು ಒಂದು ವಿಚಿತ್ರ ಬಗೆಯ ಅಸಹಾಯಕತೆಯಿಂದ ಒಮ್ಮೆ ತೆರೆದುಕೊಳ್ಳುತ್ತಿದ್ದುವು. ಒಮ್ಮೆ ಮುಚ್ಚಿಕೊಳ್ಳುತ್ತಿದ್ದುವು. ಈ ಸಡಗರದಲ್ಲಿ ತನ್ನ ಕೈಲಿದ್ದ ಕಪ್ಪು ಯಾವಾಗ ಖಾಲಿಯಾಯಿತೆಂಬುದೇ ಅವಳಿಗೆ ಗೊತ್ತಾಗಲಿಲ್ಲ. ಅವಳು ಕೊಂಚ ಹೊತ್ತು ಅಂಗೈಯನ್ನು ಗಾಳಿಗೆ ಬಿಚ್ಚಿ ಹಿಡಿದುಕೊಂಡಿದ್ದಳು. ಪಾರಿವಾಳಗಳು ಈಗ ತನ್ನನ್ನೂ ಬಿಟ್ಟು ಬೇರೆ ಮಕ್ಕಳೆಡೆಗೆ ಹೋಗುತ್ತಿವೆ ಎಂದನ್ನಿಸಿರಬೇಕು ಅವಳಿಗೆ, ಸರಿ, ಎದ್ದು ನಿಂತು ಆಕಡೆ—ಈಕಡೆ ನೋಡದೆ ವೇಗವಾಗಿ ನನ್ನ ಬಳಿಗೆ ಬಂದಳು.

ಅವಳು ನನ್ನನ್ನು ನಿಟ್ಟಿಸುತ್ತಿದ್ದಳು. ಅವಳು ನನ್ನನ್ನು ಅನುಮಾನದಿಂದ ನೋಡುತ್ತಿದ್ದಾಳೇನೋ ಎಂದು ನನಗೆ ಅನುಮಾನವಾಯಿತು; ನಾನು ಎದ್ದು ನಿಂತೆ.

'ಇನ್ನು ಹೊರಡೋಣವೆ?' ಅಂದೆ.

'ಇನ್ನೊಂದು ಕಪ್ಪು ಬೇಕು'.

'ಇನ್ನು ಬೇಡ, ನೀನಾಗಲೇ ಎರಡು ಕಪ್ಪು ತೆಗೆದುಕೊಂಡಿದ್ದೀಯಾ' ನಾನು ಕೋಪದಿಂದ ಹೇಳಿದೆ—'ನನ್ನ ಹತ್ತಿರ ಎಷ್ಟು ಹಣ ಉಳಿದಿದೆ ಅಂತ ನಿನಗೇನಾದರೂ ಗೊತ್ತಾ?

'ಇನ್ನೊಂದೇ ಒಂದು, ಅದು ಮುಗಿಸಿ ಹೊರಟು ಬಿಡೋಣ' ಜನ ನಮ್ಮನ್ನೇ ನೋಡುತ್ತಿದ್ದರು. ಕಾಳುಗಳ ಒಂದು ಕಪ್ಪಿಗಾಗಿ ನಾನು ವಾದ ಮಾಡುತ್ತಿದ್ದೆ. ನಾನು ಅವಳನ್ನು ಎತ್ತಿ ಬೆಂಚಿನ ಮೇಲೆ ಕೂಡಿಸಿ, 'ಗ್ರೇತಾ, ನೀನು ತುಂಬಾ ಹಠಮಾರಿ, ನಿನಗಿನ್ನೇನೂ ಕೊಡಿಸುವುದಿಲ್ಲ,' ಅಂದೆ.

ಅವಳು ನಿರಾಶೆಗಣ್ಣುಗಳಿಂದ ನನ್ನನ್ನು ನೋಡಿದಳು—'ನೀವು ತುಂಬ ಕೆಟ್ಟವರು, ನಿಮ್ಮ ಜೊತೆ ನಾನು ಆಡುವುದಿಲ್ಲ,' ಅಂದಳು. ಅವಳು ನನ್ನನ್ನು ಯಾವನೋ ಒಬ್ಬ ಅದೃಶ್ಯ ವ್ಯಕ್ತಿಯೊಂದಿಗೆ ಹೋಲಿಸುತ್ತಿದ್ದಾಳೆ ಎಂದನ್ನಿಸಿತು. ನಾನು ಸುಮ್ಮನೆ ಕುಳಿತಿದ್ದೆ ಯಾವುದೇ ಆಸೆ–ಭರವಸೆಗಳಿಲ್ಲದವರಂತೆ ಒಮ್ಮೊಮ್ಮೆ ಪೆಚ್ಚಾಗಿ ಕುಳಿತುಬಿಡುತ್ತೇವಲ್ಲ ಹಾಗೆ. ಆಗ ಮನುಷ್ಯನಿಗೆ ಘೋರ ಆಶ್ಚರ್ಯವಾಗುತ್ತದೆ, ತನ್ನ ಬಗ್ಗೆ, ತನ್ನ ಇರುವಿನ ಬಗ್ಗೆ ವಿಸ್ಮಯವಾಗುತ್ತದೆ. ಆಗ ಕೇಳಿದ ಸದ್ದು ಇಂದೂ ಒಂಟಿಯಾಗಿರುವಾಗ ಕೇಳಿಸುತ್ತ ಆಗೆಲ್ಲ ನಾನು ನನ್ನ ಮುಖ ತಿರುಗಿಸಿಕೊಳ್ಳುತ್ತೇನೆ.

ಅವಳು ಅಳುತ್ತಿದ್ದಳು. ಕೈಯಲ್ಲಿ ಕಪ್ ಇತ್ತು. ಅವಳ ಕ್ಯಾಪ್ ಜಾರಿ ಹಣೆಯ ಮೇಲೆ ಬಂದಿತ್ತು. ಅವಳು ಬೇರೆಬೇರೆ ರಾಗ ಲಯಗಳಲ್ಲಿ ನಿಲ್ಲಿಸಿ, ನಿಲ್ಲಿಸಿ ಅಳುತ್ತಿದ್ದಳು. ಹಿನ್ನಿಂದ ಅವಳನ್ನು ನೋಡಲಾಗಲಿಲ್ಲ. ನಾನು ಅವಳ ಕೈಯಿಂದ ಕಪ್ಪು ತೆಗೆದುಕೊಂಡು ಕ್ಯೂನ್‌ನಲ್ಲಿ ನಿಂತೆ. ಈಗ ನನ್ನಲ್ಲಿದ್ದ ಹಣವನ್ನು ಎಣಿಸುವುದನ್ನು ಮರತೆ. ಅವಳು ನನ್ನಿಂದ ಬಹಳ ದೂರವಿದ್ದರೂ ಹಾಗೂ ಪಾರಿವಾಳಗಳ ರೆಕ್ಕೆಗಳ ಪಟಪಟ ಸದ್ದು ಹಾಗೂ ಮಕ್ಕಳ

ಕಿರುಚುವಿಕೆಯಿಂದಾಗಿ ಏನೊಂದು ಕೇಳಿಸದಿದ್ದರೂ ಅವಳ ಅಳು ಮಾತ್ರ ನನ್ನ ಕಿವಿ
ತುಂಬಾ ತುಂಬಿತ್ತು. ಇವೆಲ್ಲವನ್ನೂ ಮೀರಿದಂತೆ ನನ್ನ ಒಳಗಿದ್ದ ನೀರವತೆಯಲ್ಲಿ ಅವಳ
ಬಿಕ್ಕಳಿಸುವ ಉಸಿರುಗಳಿದ್ದುವು. ಅವನ್ನು ನಾನು ತುಂಬಾ ದೂರದಿಂದಲೂ ಕೇಳಬಲ್ಲವ
ನಾಗಿದ್ದೆ.

ಆದರೆ, ಈಗ ಮೊದಲಿನಂತಾಗಲಿಲ್ಲ. ಬಹಳ ಹೊತ್ತಿನವರೆಗೆ ಯಾವುದೇ ಪಾರಿವಾಳ
ಅವಳ ಬಳಿಗೆ ಬರಲಿಲ್ಲ. ಅವಳು ಗಾಬರಿಪಟ್ಟಿದ್ದರಿಂದಲೂ ಅಥವಾ ಕವಿದು ಬರುತ್ತಿದ್ದ
ಕತ್ತಲಿನಿಂದಾಗಿಯೋ ಏನೋ ಅಂತೂ ಅವು ಹತ್ತಿರಕ್ಕೆ ಬರುತ್ತಿದ್ದುವು, ಬಂದು ಅವಳ
ಖಾಲಿ ಕೈಗಳನ್ನು ಅವಹೇಳನ ದೃಷ್ಟಿಯಿಂದ ನೋಡಿ ಇತರೆ ಮಕ್ಕಳ ಬಳಿಗೆ ಓಡಿಬಿಡು
ತ್ತಿದ್ದುವು ಕೊನೆಗೆ, ಅವಳು ನಿರಾಶಳಾಗಿ ಕಾಳುಗಳ ಬಟ್ಟಲನ್ನು ನೆಲದ ಮೇಲಿಟ್ಟು
ಬೆಂಚಿನ ಮೇಲೆ ಕುಳಿತಿದ್ದ ನನ್ನ ಪಕ್ಕಕ್ಕೆ ಬಂದು ಕುಳಿತುಕೊಂಡಳು.

ಅವಳು ಬಂದು ಕೂಡುತ್ತಿದ್ದಂತೆಯೇ ಪಾರಿವಾಳಗಳ ದಂಡು ಕಪ್‌ನ ನಾಲ್ಕೂ
ಕಡೆ ನೆರೆಯಿತು. ಕೊಂಚ ಹೊತ್ತಿನ ಅನಂತರ ನೋಡಿದರೆ—ಕಾಳುಗಳಿದ್ದ ಆ ಕಪ್
ಬೋರಲು ಬಿದ್ದಿತ್ತು, ಅದರಲ್ಲಿ ಒಂದು ಕಾಳೂ ಇರಲಿಲ್ಲ.

'ಈಗ ಹೊರಡೋಣವಾ?' ಅಂದೆ.

ಬಹಳ ಹೊತ್ತಿನಿಂದ ನಾನು ಈ ಮಾತು ಹೇಳಲಿ ಎಂದು ಕಾದು ಕುಳಿತವಳಂ
ಅವಳು ಕೂಡಲೇ ಎದ್ದು ನಿಂತಳು. ಕಣ್ಣೀರು ಸುರಿದ ಮೇಲೆ ಕಣ್ಣುಗಳು ತೊಳೆದಂ
ಫಳಫಳ ಹೊಳೆಯುತ್ತಿದ್ದುವು.

ಆ ದಿನಗಳಲ್ಲಿ ಟ್ರಫಾಲ್ಗರ್ ಸ್ಕ್ವಯರ್ ಮುಂದೆ ಅಗ್ಗದ, ಗಲೀಜಿನ ಲಾಯನ್
ರೆಸ್ಟೊರೆಂಟ್ ಒಂದಿತ್ತು. ರಸ್ತೆ ದಾಟಿ ನಾವು ಅದೇ ಹೋಟೆಲಿಗೆ ಹೋದೆವು.

ಈ ಮಧ್ಯೆ ನಾನು ಜೇಬಿಗೆ ಕೈಹಾಕಿ ನನ್ನಲ್ಲಿದ್ದ ಹಣವನ್ನು ಲೆಕ್ಕ ಹಾಕಿದ್ದೆ
ಆಕೆಗೆಂದು ಎರಡು ಟೋಸ್ಟ್ ತರಿಸಿದೆ, ನನಗೆಂದು ಚಹಾಕ್ಕೆ ಹೇಳಿದೆ. ಐಸ್‌ಕ್ರೀಂ ಅನ
ಮರೆಯುವುದೇ ಸರಿ ಎಂದು ಭಾವಿಸಿದೆ.

ಅವಳು ಮೊದಲ ಸಾರಿ ಹೋಟೆಲಿಗೆ ಬಂದಿದ್ದಳು. ಹೀಗಾಗಿ ತುಂಬಾ ಉತ್ಸುಕ
ಯಿಂದ ನಾಲ್ಕೂಕಡೆ ನೋಡುತ್ತಿದ್ದಳು. ಕೊಂಚ ಹೊತ್ತಿನ ಹಿಂದೆ ಅವಳಿಗಾಗಿ
ಅಸಂತೋಷ ಈಗ ಕರಗತೊಡಗಿದೆ ಎಂದನ್ನಿಸಿತು. ನಾವು ಹೆಚ್ಚು ಕಡಿಮೆ ಎರಡನೆಯ
ಸಾರಿ ಒಬ್ಬರಿಗೊಬ್ಬರು ಹತ್ತಿರ ಬಂದೆವು. ಮೊದಲಿನ ಆತ್ಮೀಯತೆ ಇವರಲ್ಲಿರಲಿಲ್ಲ
ಪಾರಿವಾಳಗಳ ನೆರಳು ಈಗಲೂ ನಮ್ಮಿಬ್ಬರ ಮಧ್ಯೆ ನೆರಳು ಬೆಳಕಿನಾಟವನ್ನು ಆಡಿಸ
ತ್ತಿತ್ತು.

'ನಾನು ತುಂಬಾ ಕೆಟ್ಟವನೇನು?'—ನಾನು ಕೇಳಿದೆ.

ಅವಳು ಕಣ್ಣೆತ್ತಿ ಒಂದು ಕ್ಷಣ ನನ್ನನ್ನೇ ನೋಡಿದಳು. ಅನಂತರ ಒಂದು ಕ್ಷ
ಬಿಟ್ಟು ವಿಷಾದಯುಕ್ತ ಧ್ವನಿಯಲ್ಲಿ 'ನಾನು ನಿಮಗಲ್ಲ ಹಾಗೆಂದಿದ್ದು' ಅಂದಳು.

'ಹಾಗಾದರೆ ಯಾರಿಗೆ ಹೇಳಿದ್ದು?' ಅಂದೆ.

'ಮಿ. ಥಾಮಸ್‌ಗೆ, ಅವರು ತುಂಬಾ ಕೆಟ್ಟವರು, ಒಂದು ದಿನ ನಾನು ಅವ
ಮನೆಗೆ ಹೋಗಿದ್ದೆ ಅವರು ಬೈಯುತ್ತಿದ್ದರು ಮಿಸೆಸ್ ಥಾಮಸ್ ಅಳುತ್ತಿದ್ದರು.

'ಓಹ್'—ನಾನಂದೆ.

'ನಾನು ಹಾಗೆಂದಿದ್ದು ನಿಮಗೆ ಅಂತ ತಿಳಿದುಕೊಂಡಿರಾ?—ನಾನು ಹೀಗೆ ಭಾವಿಸಿದ್ದು ಮೂರ್ಖತನ ಎಂದು ಹೇಳುವವಳಂತೆ ಅವಳು ನಗತೊಡಗಿದಳು. ಅವಳ ನಗುವನ್ನು ಕಂಡು ಏಕೋ ಏನೋ ನನಗೂ ಒಂದು ಥರಾ ಆಯಿತು.

'ಇನ್ನೊಂದು ದಿನ ಯಾವಾಗಲಾದರೂ ಇಲ್ಲಿಗೆ ಬರೋಣ ಅವಳು ಹೇಳಿದಳು. 'ಬೇಸಿಗೆಯಲ್ಲಿ ಬರೋಣ—ನಾನಂದೆ—ಬೇಸಿಗೆಯಲ್ಲಿ ಟೇಮ್ಸ್ ಮೇಲೆ ಹೋಗೋಣ, ತುಂಬಾ ಹತ್ತಿರದಲ್ಲಿದೆ ಅದು'.

ಅಲ್ಲೂ ಪಾರಿವಾಳಗಳಿವೆಯಾ?' ಅವಳು ಕೇಳಿದಳು.

ಹುಡುಗಿಯೊಬ್ಬಳು ತನ್ನ ಪ್ರಿಯಕರನನ್ನು ಕುರಿತಂತೆ ಮತ್ತೆ ಮತ್ತೆ ಚರ್ಚೆ ಮಾಡುವಂತೆ ಅವಳು ಪಾರಿವಾಳಗಳನ್ನು ಕುರಿತಂತೆ ಮತ್ತೆಮತ್ತೆ ಕೇಳುತ್ತಿರುವುದನ್ನು ಕಂಡು ಕೊಂಚ ಬೇಸರವಾಯಿತು. ಆದರೆ ಅವಳಿಗೆ ಪುನಃ ನಿರಾಶೆ ಮಾಡುವ ಮನಸ್ಸಿರಲಿಲ್ಲ. ಬೇಸಿಗೆ ಬರಲು ಇನ್ನೂ ಬಹಳಷ್ಟು ದಿನಗಳಿದ್ದುವು. ಈ ಮಧ್ಯೆ ಶಿಶಿರಬೇಕು. ಚಳಿಗಾಲ ಬರಬೇಕು. ಅಷ್ಟು ಹೊತ್ತಿಗೆ ನಾನು ಹೇಳುವ ಸುಳ್ಳು ಕರಗಿ ಹೋಗಬಹುದು ಎಂದು ಯೋಚಿಸಿದೆ.

ನಾವು ಹೊರಗೆ ಬಂದೆವು, ಹಗಲು ಇನ್ನೂ ಇತ್ತು. ಆದರೆ ಕತ್ತಲಾವರಿಸುತ್ತ ಬರುತ್ತಿರುವಂತೆ ಭಾಸವಾಗುತ್ತಿತ್ತು. ಅವಳು ಏನನ್ನೋ ಕಳೆದುಕೊಂಡವಳಂತೆ ಸ್ಕ್ವಯರ್ ಕಡೆಯೇ ನೋಡುತ್ತಿದ್ದಳು. ಅಲ್ಲಿ ಪಾರಿವಾಳಗಳು ಈಗಲೂ ಹಾರಾಡುತ್ತಿದ್ದುವು. ನನ್ನ ಜೇಬಿನಲ್ಲಿ ಟ್ಯೂಬ್‌ಗೆ ಸಾಕಾಗುವಷ್ಟು ಹಣ ಮಾತ್ರ ಇತ್ತು. ಈಗ ಆಕೆ ಯಾವುದಕ್ಕೂ ಒತ್ತಾಯಿಸಲಿಲ್ಲ. ಮಕ್ಕಳು ಒಂದು ಹಂತದಾಟದ ಮೇಲೆ ದೊಡ್ಡವರ ಬಡತನವನ್ನು ಅರ್ಥಮಾಡಿಕೊಳ್ಳದಿದ್ದರೂ ಅವರ ಅಸಹಾಯಕತೆಯನ್ನು ಅರ್ಥ ಮಾಡಿಕೊಳ್ಳುತ್ತಾರೆ.

ನಾವು ರೈಲಿನಲ್ಲಿ ಹೋಗುತ್ತೇವೆ....ಆಗ ಅವಳನ್ನು ಸಮರ್ ಹೌಸ್ ಬಗ್ಗೆ, ಮನೆ ಹಿಂದಿನ ತೋಟದಲ್ಲಿ ಒಂಟಿಯಾಗಿ ನಿಂತಿದ್ದ ಆ ವಿಲೋ ವೃಕ್ಷದ ಬಗ್ಗೆ ಕೇಳೋಣ ಅಂತ ಅಂದುಕೊಂಡಿದ್ದೆ. ನಾವು ಮೊಟ್ಟಮೊದಲ ಸಾರಿ ಒಬ್ಬರಿಗೊಬ್ಬರು ಭೇಟಿಯಾದ ಅವಳ ಆ ಪ್ರಪಂಚಕ್ಕೆ ಆಕೆಯನ್ನು ಕರೆದುಕೊಂಡು ಹೋಗ ಬಯಸುತ್ತಿದ್ದೆ. ಆದರೆ ಅದು ಸಾಧ್ಯವಾಗಲಿಲ್ಲ. ಸೀಟ್‌ನಲ್ಲಿ ಕುಳಿತುಕೊಳ್ಳುತ್ತಿದ್ದಂತೆಯೇ ಅವಳು ಕಣ್ಣು ಮುಚ್ಚತೊಡಗಿದಳು. ಟ್ರೆಫಾಲ್ಗರ್ ಸ್ಕ್ವಯರ್‌ನಿಂದ ಇಸ್‌ಲಿಂಗ್ಟನ್‌ವರೆಗೆ ಸಾಕಷ್ಟು ದೂರವಿತ್ತು. ಕೊಂಚ ಹೊತ್ತಿನ ಒಳಗಾಗಿ ಅವಳು ನನ್ನ ಭುಜಕ್ಕೆ ಒರಗಿ ನಿದ್ದೆ ಮಾಡತೊಡಗಿದಳು.

ಈ ಮಧ್ಯೆ ಒಂದೆರಡು ಸಾರಿ ನಾನು ಅವಳ ಮುಖವನ್ನು ನೋಡಿದೆ. ಅವಳು ಮಲಗಿ ನಿದ್ರಿಸುತ್ತಿದ್ದರೂ ಪಾರ್ಕ್‌ನ ಮರಗಳ ಮಧ್ಯೆ ನಾನು ಮೊದಲ ಸಾರಿ ನೋಡಿದ್ದಂಥ ಆ ಸರಳ, ಮುಗ್ಧ ಮುಖವೇ ಇದು....ಪಾರಿವಾಳಗಳಿಗಾಗಿ ಹಂಬಲಿಸುವ ಪರಿತಪಿಸುವ ತವಕ ಆ ಮುಖದಲ್ಲಿರಲಿಲ್ಲ, ಕಣ್ಣೀರು ಯಾವಾಗಲೋ ಒಣಗಿ ಹೋಗಿತ್ತು. ಪಾರ್ಕ್‌ನ ಮಧ್ಯೆ ಇದ್ದಾಗ ಇದ್ದಷ್ಟೇ ಕೋಮಲತೆ, ಸ್ನಿಗ್ಧತೆ ಈಗಲೂ ಅವಳ ಮುಖದಲ್ಲಿ

ನೆಲೆಸಿತ್ತು ಪಾರ್ಕ್‌ನಲ್ಲಿ ಆಕೆ ಎಷ್ಟೋ ಸಾರಿ ನನ್ನನ್ನು ಹಿಡಿದು ಬಿಟ್ಟಿದ್ದಳು. ಅವಳ
ಮುಖ ತನಗೇ ತಿಳಿಯದಂತೆ ಎಂಥವರನ್ನೂ—ನನ್ನಂಥವನನ್ನೂ—ತನ್ನೆಡೆಗೆ ಸೆಳೆದು
ಬಿಡುವಂಥಾದ್ದು ಅನ್ನಿಸಿತು....ನಾನು ಮೊದಲ ಸಾರಿ ಅವಳನ್ನು ಮುಟ್ಟುವ ಪ್ರಯತ್ನ
ಮಾಡಿದೆ. ಅತ್ತದ್ದರಿಂದ ಬೆಚ್ಚಗಾಗಿದ್ದ ಮಳೆ ಬಂದು ನಿಂತನಂತರ ಹುಲ್ಲುಗರಿಕೆಯಿರು
ತ್ತದೆಯಲ್ಲ, ಆ ರೀತಿಯಿದ್ದ ಅವಳ ಕೆನ್ನೆಗಳನ್ನು ಮುಟ್ಟಿದೆ.

ಅವಳು ಎಚ್ಚರಗೊಳ್ಳಲಿಲ್ಲ. ಟ್ಯೂಬ್‌ಸ್ಟೇಷನ್ ಬರುವವರೆಗೂ ಆರಾಮಾಗಿ
ನಿದ್ರಿಸುತ್ತಿದ್ದಳು.

* * *

ಆ ರಾತ್ರಿ ಶುರುವಾದ ಮಳೆ ವಾರವಿಡೀ ಸುರಿಯುತ್ತಲೇ ಇತ್ತು. ಬೇಸಿಗೆಯ
ದಿನಗಳು ಕಳೆದುಹೋದುವು. ಇಡೀ ನಗರದ ಮೇಲೆಲ್ಲ ಹಿಮ ಆವರಿಸಿಕೊಂಡಿತ್ತು.
ರಸ್ತೆಯಲ್ಲಿನ ಏನೊಂದೂ—ಮರವಾಗಲಿ ಲ್ಯಾಂಪ್ ಪೋಸ್ಟ್ ಆಗಲಿ ಅಥವಾ ಜನರಾಗಲಿ
—ಕಾಣುತ್ತಿರಲಿಲ್ಲ.

ಆ ದಿನಗಳಲ್ಲೇ ನನಗೆ ನೌಕರಿ ಸಿಕ್ಕಿದ್ದರಿಂದ ಅವು ನನಗೆ ನೆನಪಿವೆ. ಲಂಡನ್ನಿನಲ್ಲಿ
ನನಗೆ ದೊರತ ಮೊದಲ ನೌಕರಿ ಅದು. ಕೆಲಸ ಹೆಚ್ಚಿತ್ತು, ಆದರೆ ಕಷ್ಟದ್ದೇನೂ
ಆಗಿರಲಿಲ್ಲ. ಒಂದು ಪಬ್‌ನಲ್ಲಿ ಕೌಂಟರ್‌ಬಳಿ ಏಳು ಗಂಟೆಗಳ ಕಾಲ ನಿಂತಿರಬೇಕಾಗು
ತ್ತಿತ್ತು. ಬಿಯರ್ ಮತ್ತು ಲಿಕ್ಕರ್‌ನ ಲೋಟಗಳನ್ನು ತೊಳೆಯಬೇಕಾಗುತ್ತಿತ್ತು.
ಹನ್ನೊಂದು ಗಂಟೆಗೆ ಘಂಟೆ ಹೊಡೆಯಬೇಕಾಗುತ್ತಿತ್ತು. ಅಲ್ಲದೆ ಕುಡಿದು ಅಮಲೇರಿ
ದವರನ್ನು ಹೊರಗೆ ದಬ್ಬಬೇಕಾಗುತ್ತಿತ್ತು. ಹೀಗಾಗಿ ಕೆಲ ದಿನಗಳವರೆಗೆ ಎಲ್ಲೂ
ಹೋಗಲಾಗಲಿಲ್ಲ. ರೂಮಿಗೆ ಬರುವುದು, ಬಂದು ಹಾಸಿಗೆಯಿಡಿದು ಮಲಗುವುದು
ಇಷ್ಟೇ ನನ್ನ ಕೆಲಸವಾಗಿತ್ತು. ಆಗ ಯಾವುದೋ ಹಳೆಯ ದ್ವೇಷವನ್ನು ತೀರಿಸಿಕೊಳ್ಳು
ತ್ತಿದೆಯೇನೋ ಎಂಬಂತೆ ನಿದ್ದೆ ಕಾಡುತ್ತಿತ್ತು. ಕಣ್ಣು ಬಿಟ್ಟು ಹೊರಗೆ ನೋಡಿದರೆ
ಜಿರುಗುಟ್ಟುತ್ತ ಸುರಿಯುತ್ತಿದ್ದ ಮಳೆ ಕಣ್ಣಿಗೆ ಬೀಳುತ್ತಿತ್ತು. ಗಡಿಯಾರದ ಟಿಕ್ ಟಿಕ್
ಸದ್ದಿನ ತರಹ ಒಂದೇ ಸಮನೆ ಟಪಟಪ ಸುರಿಯುತ್ತಿರುತ್ತಿತ್ತು ಮಳೆ. ಆಗ ಒಮ್ಮೆ
ನಾನು ಸತ್ತೇ ಹೋಗಿ ಬಿಟ್ಟನೇನೋ ಎಂಬ ಭ್ರಮೆಯುಂಟಾದರೆ, ಇನ್ನೊಮ್ಮೆ ನನ್ನ
ಸಮಾಧಿಯೊಳಗಡೆಯಿಂದ ಮಳೆ ಹನಿಗಳ ಟಪ್ ಟಪ್ ಸದ್ದು ಕೇಳಿ ಬರುತ್ತಿದೆಯೇನೋ
ಎಂಬ ಭ್ರಮೆಯುಂಟಾಗುತ್ತಿತ್ತು.

ಒಂದು ದಿನ ಆಕಾಶ ಕಾಣಿಸಿತು ಪೂರಾ ಅಲ್ಲ ಒಂದು ಚೂರು ನೀಲಿ ಆಕಾಶ
ಅದನ್ನು ನೋಡಿ ನನಗೆ ಒಮ್ಮೆಗೇ ಪಾರ್ಕ್‌ನಲ್ಲಿ ಕಳೆದ ದಿನಗಳು, ಯಹೂದಿ
ರೆಸ್ಟೋರೆಂಟ್ ಹಾಗೂ ಪೇಟೆಗೆ ಹೋಗುತ್ತಿದ್ದ ಮಿಸ್ಟರ್ ಥಾಮಸ್ ನೆನಪಾದರು.
ಅಂದು ರಜೆಯಿದ್ದುದ್ದರಿಂದ ಹೆಚ್ಚು ಬೆಲೆಬಾಳುವ ಸೂಟೊಂದನ್ನು ತೊಟ್ಟು ರೂಮಿನಿಂದ
ಹೊರಗೆ ನಡದೆ.

ಲೈಬ್ರರಿ ತೆರೆದಿತ್ತು. ಹಳೆಯ ಮುಖಗಳೇ ಕಾಣಿಸಿದುವು. ಪಾರ್ಕ್ ಬಿಕೋ
ಅನ್ನಿಸುತ್ತಿತ್ತು. ಮರಗಳ ಮೇಲೆಲ್ಲ ಹಿಂದಿನ ದಿನ ಸುರಿದ ಮಳೆ ಹನಿಗಳು ಹೊಳ

ಹೊಳೆಯುತ್ತಿದ್ದುವು. ಮುಂಬರುವ ಚಳಿಗಾಲದ ಭೀಕರತೆಗೆ ಹೆದರಿ ಮರಗಳು ಮುದುಡಿ ಕೊಂಡಿರುವಂತೆ ಭಾಸವಾಗುತ್ತಿತ್ತು.

ನಾನು ಮಧ್ಯಾಹ್ನದವರೆಗೆ ಕಾದೆ. ಬೆಂಚ್‌ಮೇಲೆ, ಮರಗಳ ಹಿಂಭಾಗದಲ್ಲಿ, ಎಲ್ಲೂ ಗ್ರೇತಾ ಕಾಣಿಸಲಿಲ್ಲ. ನಿಧಾನವಾಗಿ ಪಾರ್ಕ್ ಕತ್ತಲತೆಕ್ಕೆಗೆ ಬರುತ್ತಿತ್ತು. ಐದು ಗಂಟೆಗೆ ಆಸ್ಪತ್ರೆಯ ಘಂಟೆ ಕೇಳಿಸಿತು. ಆಗ ನನ್ನ ಕಣ್ಣುಗಳು ನನಗರಿವಿಲ್ಲದಂತೆಯೇ ಬಾಗಿಲಕಡೆಗೆ ಹೋದುವು. ಕೊಂಚಹೊತ್ತಿನವರೆಗೆ ಯಾರೂ ಕಾಣಿಸಲಿಲ್ಲ. ಬಾಗಿಲಿಗೆ ಹಾಕಿದ್ದ ಕಬ್ಬಿಣದ ಹ್ಯಾಂಡಲ್ ಸಂಜೆಯ ಬಿಸಿಲಿಗೆ ಹೊಳೆಯುತ್ತಿತ್ತು. ಅವರು ಮನೆಗೆ ಹೋಗಬೇಕಾದರೆ ಪಾರ್ಕ್ ಮಧ್ಯದಿಂದಲೇ ಹಾದು ಹೋಗುತ್ತಾರೆ ಎಂಬುದು ನನಗೆ ಗೊತ್ತಿದ್ದರೂ ಒಮ್ಮೆ ಅನಿಶ್ಚಿತ ದೃಷ್ಟಿಯಿಂದ ಒಮ್ಮೆ ಬಾಗಿಲಕಡೆ ಒಮ್ಮೆ ರಸ್ತೆ ಕಡೆ ನೋಡುತ್ತಿದ್ದೆ. ಒಮ್ಮೆ, ಬಹುಶಃ ಅವರಿಗೆ ಆಸ್ಪತ್ರೆಯಲ್ಲಿ ಡ್ಯೂಟಿ ಇಲ್ಲದೆಯೂ ಇರಬಹುದು, ಇಬ್ಬರೂ ಮನೆಯಲ್ಲಿಯೆ ಇದ್ದರೂ ಇರಬಹುದು ಎಂದನ್ನಿಸಿತು.

ಬೀದಿ ದೀಪಗಳು ಹೊತ್ತಿಕೊಂಡುವು. ನಿರೀಕ್ಷೆಯ ಕೊನೆಯ ಹಂತ ಇನ್ನೇನು ಬಂದುಬಿಟ್ಟದೆ, ನಾನು ಅದನ್ನು ಹಾಗೆಯೇ ಮುಂದೆಮುಂದಕ್ಕೆ ತಳ್ಳುತ್ತಿದ್ದೇನೆ ಎಂದನ್ನಿಸಿ ವಿಚಿತ್ರಬಗೆಯ ಗಾಬರಿಯಾಯಿತು. ಬೆಂಚ್ ಮೇಲೆ ಕುಳಿತಿದ್ದವನು ಎದ್ದು ನಿಂತೆ. ನಿಂತು ನಿರೀಕ್ಷಿಸುವುದು ಆರಾಮವೆನ್ನಿಸಿತು. ಆಗಲೇ ಬಾಗಿಲ ಬಳಿ ಸರಸರ ಎಂದ ಸದ್ದು ಕೇಳಿಸಿತು. ಮೊದಲು ಅವರ ಬಿಳಿ ಉಡುಪನ್ನು, ನಂತರ ಅವರ ಮುಖ ವನ್ನು ನೋಡಿದೆ. ಅವರು ಸರಸರ ಹೆಜ್ಜೆಗಳನ್ನಿಡುತ್ತ ಪಾರ್ಕ್ ಮಧ್ಯದ ಕಾಲುದಾರಿ ಯಲ್ಲಿ ಬಂದರು. ಅವರು ನನ್ನನ್ನು ಗಮನಿಸಲಿಲ್ಲ. ಅವರು ಒಂದು ವೇಳೆ ನಾನು ಕುಳಿತಿದ್ದ ದಿಕ್ಕಿನಲ್ಲೇ ಬಂದಿದ್ದರೂ ಮಬ್ಬು ಬೆಳಕಿನಲ್ಲಿ ಅವರು ನನ್ನನ್ನು ಗುರುತಿಸು ತ್ತಿರಲಿಲ್ಲ.

ನಾನು ಅವರ ಹಿಂದೆ ಓಡಿದೆ.

'ಮಿಸೆಸ್ ಪಾರ್ಕರ್'—ಎಂದು ಮೊದಲ ಸಾರಿ ಅವರ ಹೆಸರು ಹಿಡಿದು ಕರೆದೆ. ಅವರು ನಿಂತರು, ಬೆರಗಾದವರಂತೆ ನನ್ನನ್ನು ನೋಡಿದರು. 'ನೀವಿಲ್ಲಿ?' ಅಂದರು. 'ಮಧ್ಯಾಹ್ನದಿಂದಲೂ ನಾನಿಲ್ಲಿ ಕುಳಿತುಕೊಂಡಿದ್ದೇನೆ'—ನಾನು ನಗುತ್ತ ಹೇಳಿದೆ. ಕಕ್ಕಾಬಿಕ್ಕಿಯಾದವರಂತೆ ಅವರು ನನ್ನನ್ನೇ ನೋಡುತ್ತಿದ್ದರು. ನಾನೂ ಕೂಡ ದ್ವಂದ್ವ ದಲ್ಲಿ ಸಿಲುಕಿದೆನಾದರೂ ಸಹಜವಾಗಿಯೇ, 'ಇಷ್ಟು ತಡವಾಗಿ ಹೊರಟರಲ್ಲ? ಐದು ಗಂಟೆಯ ಬೆಲ್ಲಾಗಿ ಎಷ್ಟೋ ಹೊತ್ತಾಯಿತು,' ಅಂದೆ.

'ಐದು ಗಂಟೆಯ ಬೆಲ್?' ಅವರು ಆಶ್ಚರ್ಯದಿಂದ ಕೇಳಿದರು.

'ನೀವು ಯಾವಾಗಲೂ ಐದು ಗಂಟೆಗೆ ಮನೆಗೆ ಹೋಗ್ತಿದ್ದಿರಿ'—ನಾನಂದೆ.

ನಾನು ಯಾವುದೇ ಪ್ರಾಗೈತಿಹಾಸಿಕ ಘಟನೆಯನ್ನು ನೆನಪು ಮಾಡಿಕೊಟ್ಟೆ ನೇನೋ ಎಂಬಂತೆ ಅವರು 'ಓಹ್, ನೆನಪಾಯಿತು,' ಅಂದು, 'ನೀವು ಲಂಡನ್‌ನಲ್ಲೇ ಇದ್ದೀರಾ?' ಎಂದು ಪ್ರಶ್ನಿಸಿದರು.

'ನನಗೊಂದು ನೌಕರಿ ಸಿಕ್ಕಿದೆ. ಹೀಗಾಗಿ ನಿಮ್ಮ ಮನೆ ಕಡೆ ಬರಲಿಕ್ಕಾಗಲಿಲ್ಲ, ಗ್ರೇತಾ ಹೇಗಿದ್ದಾಳೆ?'

ಅವರು ಕೊಂಚ ಹಿಂದು–ಮುಂದು ನೋಡಿದರು, ಅದೂ ಒಂದೇ ಒಂದು ಕ್ಷಣ....ಇಳಿ ಸಂಜೆಯಲ್ಲಿ ಅದು ನನಗೆ ಅಪಶಕುನದಂತೆ ಕಂಡಿತು.

‘ನಿಮಗೆ ಹೇಳೋಣ ಅಂತಿದ್ದೆ. ಆದರೆ ನಿಮ್ಮ ಮನೆ ನನಗೆ ಗೊತ್ತಿರಲಿಲ್ಲ.

‘ಚೆನ್ನಾಗಿದ್ದಾಳಾ ?’

‘ಹೌದು ಚೆನ್ನಾಗಿದ್ದಾಳೆ’—ಎಂದು ಮುಂದಕ್ಕೆ ಬೇಗ ಬೇಗ ಹೇಳಿದರು. ‘ಆದರೆ, ಅವಳು ಈಗ ಇಲ್ಲಿಲ್ಲ. ಕೊಂಚ ದಿನಗಳ ಹಿಂದೆ ಅವರ ಅಪ್ಪ ಬಂದಿದ್ದರು. ಅವರು ತಮ್ಮ ಜೊತೆ ಕರೆದುಕೊಂಡು ಹೋದರು.’

ನಾನು ಅವರನ್ನೇ ನೋಡುತ್ತ ನಿಂತೆ. ನನ್ನ ಒಳಗಿದ್ದದ್ದು ಅಲ್ಲೇ ಉಳಿಯಿತು. ನಾನು ಅದರೊಳಗಡೆ ಬಂಧಿತನಾದೆ. ಅಲ್ಲಿಂದ ಹೊರಗೆ ಪ್ರಪಂಚ ಭಿನ್ನವಾಗಿಯೇ ತೋರುತ್ತಿತ್ತು. ನಾನು ಇಷ್ಟು ಸ್ಪಷ್ಟವಾಗಿ ಪ್ರಪಂಚವನ್ನೂ ಎಂದೂ ನೋಡಿರಲಿಲ್ಲ. ‘ಇದು ಯಾವಾಗಿನ ಮಾತು ?’ ಅಂದೆ.

‘ನೀವು ಆಕೆಯನ್ನು ಜೊತೆಯಲ್ಲಿ ಕರೆದುಕೊಂಡು ಟ್ರಫಾಲ್ಗರ್ ಸ್ಕ್ವಾಯರ್‌ಗೆ ಹೋಗಿದ್ದರಲ್ಲ, ಅದರ ಮಾರನೆಯ ದಿನದ ಮಾತು....ನಿಮಗೆ ಗೊತ್ತಿಲ್ಲ ? ಅವರಿಗೆ ಅಲ್ಲಿ ನೌಕರಿ ಸಿಕ್ಕಿದೆ.’

‘ನೀವು ?’—ನಾನು ಕೇಳಿದೆ—‘ನೀವಿಲ್ಲಿ ಒಂಟಿಯಾಗಿರ್ತೀರಾ ?

‘ನಾನಿನ್ನೂ ಏನು ಸಹ ಯೋಚನೆಮಾಡಿಲ್ಲ’—ಅವರು ನಿಧಾನವಾಗಿ ತಲೆಯಲ್ಲಾಡಿಸಿದರು. ಧ್ವನಿ ಮೆಲ್ಲಗೆ ಕಂಪಿಸಿತು. ಒಂದು ಕ್ಷಣ ಅವರ ಮುಖದಲ್ಲಿ ನನಗೆ ಅವರ ಮಗಳು ಕಾಣಿಸಿದಳು. ಕೊಂಚ ತೆರೆದ ತುಟಿಗಳು, ಒದ್ದೆ ಕಣ್ಣುಗಳು, ಗಾಳಿಯಲ್ಲಿ ಹಾರುತ್ತಿದ್ದ ಪಾರಿವಾಳಗಳನ್ನು ಎವೆಯಿಕ್ಕದೆ ನಿಟ್ಟಿಸುತ್ತಿದ್ದ ಮಗಳು....

‘ಯಾವಾಗಲಾದರೂ ಒಮ್ಮೆ ಖಂಡಿತವಾಗಿ ಮನೆಗೆ ಬನ್ನಿ....’ ಅವರು ಹೊರಡಲು ಅನುಮತಿ ಕೇಳಿದರು. ನಾನು ಬಹಳ ಹೊತ್ತಿನವರೆಗೆ ಅವರನ್ನೇ ನೋಡುತ್ತಿದ್ದೆ. ಅನಂತರ ಬಹಳ ಹೊತ್ತಿನವರೆಗೆ ಬೆಂಚ್ ಮೇಲೆ ಕುಳಿತಿದ್ದೆ. ನಾನು ಎಲ್ಲಿಗೂ ಹೋಗಬೇಕಾಗಿರಲಿಲ್ಲ, ಯಾರನ್ನೂ ಕಾಯಬೇಕಾಗಿರಲಿಲ್ಲ. ಮರಗಳ ಮೇಲೆ, ಆಕಾಶದಲ್ಲಿ ನಿಧಾನವಾಗಿ ಚುಕ್ಕೆಗಳು ಕಾಣಿಸಿಕೊಳ್ಳತೊಡಗಿದುವು. ನಾನು ಮೊಟ್ಟ ಮೊದಲ ಸಾರಿ ಲಂಡನ್‌ನ ಆಕಾಶದಲ್ಲಿ ಇಷ್ಟು ಚುಕ್ಕೆಗಳು ಹೊಳೆಯುತ್ತಿರುವುದನ್ನು ನೋಡಿದೆ. ಮಳೆ ಆ ಚುಕ್ಕೆಗಳನ್ನು ತೊಳದಂತೆ ಭಾಸವಾಗುತ್ತಿತ್ತು.

‘ಇಟ್ ಇಸ್ ಟೈಂ ಡಿಯರ್ !’—ಪಾರ್ಕ್‌ನ ಚೌಕಿದಾರ ದೂರದಿಂದ ಕೂಗಿದ. ಅವನು ಗೇಟ್‌ನ ಬೀಗದ ಕೈಗಳನ್ನ ಅಲ್ಲಾಡಿಸುತ್ತ ಪಾರ್ಕ್‌ನ ಸುತ್ತ ಸುತ್ತುತ್ತಿದ್ದ. ಟಾರ್ಚ್‌ನ ಬೆಳಕಿನಲ್ಲಿ ಅವನು ಪ್ರತಿಯೊಂದು ಪೊದೆ, ಮರದ ಸುತ್ತಮುತ್ತ ಏನಾದರೂ ಉಳಿದುಬಿಟ್ಟಿದೆಯೇನೋ ಎಂದು ನೋಡುತ್ತಿದ್ದ—ಕಳೆದುಹೋದ ಮಗು, ಕುಡುಕ, ಸಾಕು ಬೆಕ್ಕು ಹೀಗೆ....

ಅಲ್ಲಿ ಯಾರೂ ಇರಲಿಲ್ಲ, ಯಾವೊಂದು ಪದಾರ್ಥವೂ ಅಲ್ಲಿರಲಿಲ್ಲ. ನಾನು ಎದ್ದು ಗೇಟ್ ಕಡೆ ಹೋಗತೊಡಗಿದೆ. ಕೊಂಚ ಗಾಳಿ ಬೀಸಿತು. ಅದರ ಪರಿಣಾಮವಾಗಿ ಮರಗಳು ಸರಸರ ಅನ್ನತೊಡಗಿದುವು. ‘ಸ್ನ್ಯಾಪ್....ಸ್ನ್ಯಾಪ್’....ಎಂಬ ಕೊಂಚ

ಗ್ರಹದಿಂದೊಡಗೂಡಿದ ಧ್ವನಿಯೊಂದು ದೂರದಿಂದ ತೇಲಿ ಬಂದಂತಾಯಿತು. ನಾನು ಂತೆ, ನಾಲ್ಕೂ ಕಡೆ ನೋಡಿದೆ. ಯಾರೂ ಇರಲಿಲ್ಲ, ಯಾವ ಸದ್ದೂ ಕೇಳಲಿಲ್ಲ. ಮರದ ರೆಂಬೆಗಳು ಮಾತ್ರ ಗಾಳಿಗೆ ತೂರಾಡುತ್ತಿದ್ದುವು. ಆಗ ಅಲ್ಲೇ ಕುಳಿತುಬಿಡಲೇ ಂಬ ಹುಚ್ಚು ಆಸೆ, ನನ್ನ ಆಕಾಂಕ್ಷೆ ನನ್ನ ಮನಸ್ಸಿನಲ್ಲಿ ಬಂತು. ಈ ಮರಗಳ ಮಧ್ಯ ದಲ್ಲಿ ತಾನೇ ನಾನು ಮೊಟ್ಟಮೊದಲ ಸಾರಿ ಅವಳಿಗೆ ಸಿಕ್ಕಿಬಿದ್ದದ್ದು? ಆದರೆ ಈಗ ನ್ನು ಮುಂದಕ್ಕೆ ನಡೆದು ಹೋಗುವ ಯಾವ ಆಸೆಯೂ ನನ್ನಲ್ಲಿ ಉಳಿದಿರಲಿಲ್ಲ. ಈ ಾರಿ ಕಟ್ಟ ಕಡೆಯ ಸಲ, ಅನಿವಾರ್ಯವೆಂಬಂತೆ ಅವಳ ಕೈಗೆ ನಾನು ಸಿಕ್ಕಿ ಬೀಳ ಯಸುತ್ತಿದ್ದೆ....

'ಇಟ್ ಈಸ್ ಕ್ಲೋಸಿಂಗ್ ಟೈಂ'—ಈ ಸಾರಿ ಚೌಕಿದಾರ ತುಂಬಾ ಹತ್ತಿರ ಂದು ಹೇಳಿದ. ಕೊಂಚ ಹೊತ್ತಿನ ಮುಂಚೆ ಬೆಂಚ್ ಮೇಲೆ ಕುಳಿತಿದ್ದ ಮನುಷ್ಯ ಾನೇ ಇರಬೇಕು ಎಂದು ಪರೀಕ್ಷಿಸುವವನಂತೆ ಕುತೂಹಲದಿಂದ ನನ್ನ ಕಡೆ ನೋಡಿದ.

ಈ ಸಾರಿ ನಾನು ತಿರುಗಿ ನೋಡಲಿಲ್ಲ. ಪಾರ್ಕ್‌ನಿಂದ ಹೊರಗೆ ಬಂದೇ ನಿರಾಳ ಾಗಿ ಉಸಿರಾಡಿದೆ. ಗಂಟಲು ಒಣಗಿತ್ತು. ಶರೀರ ಟೊಳ್ಳಾದಂತೆ ಭಾಸವಾಗುತ್ತಿತ್ತು. ಾರ್ಕ್ ಮುಂಭಾಗದಲ್ಲಿ ಪಬ್‌ನ ತೂಗಾಡುತ್ತಿದ್ದ ಲಾಟೀನು ಕಾಣಿಸಿತು. ಹಣ ಸ್ಟಿದೆ ಎಂದು ಎಣಿಸಲು ಜೇಬಿನಿಂದ ಪರ್ಸ್ ತೆಗೆದೆ. ನನ್ನ ಹಳೆಯ ಬಡತನದ ನದ ಅಭ್ಯಾಸ. ನನ್ನ ಬಳಿ ಇಡೀ ಎರಡು ಪೌಂಡ್ ಹಣ ಇದ್ದದ್ದು ಕಂಡು ಆಶ್ಚರ್ಯ ಾಯಿತು, ಮರುಕ್ಷಣದಲ್ಲೇ ಈ ಹಣವನ್ನು ಪಾರಿವಾಳಗಳಿಗೆ ಕಾಳನ್ನು ಕೊಂಡು ೊಳ್ಳಲು ತಂದದ್ದು ಎಂದು ನೆನಪಾಯಿತು.

ಅನು : ತಿಪ್ಪೇಸ್ವಾಮಿ

ಶೀಲ ಪ್ರಗತಿಗೆ ಮೂಲ, ಸಂಪತ್ತಿಗೆ ತಳಹದಿ, ಆನಂದ ಶಾಂತಿಗಳಿಗೆ ರಾಜಮಾರ್ಗ.

ಇಡೀ ಜೀವನ ತುದಿಗಾಣದ ಒಂದು ಪ್ರಯೋಗಶಾಲೆ.

ಗಾಂಧೀಜಿ

ಬೂಮರಾಂಗ್

ಸ್ಟೀಫನ್ ಹಾಲ್

ಹೊರಟ ಸ್ಥಳಕ್ಕೇ ಹಿಂದಿರುಗುವ ವಿಶೇಷ ಸಾಮರ್ಥ್ಯವುಳ್ಳ ಮರದ
ತುಂಡನ್ನು ಮೆಚ್ಚದೆ ಇರುವುದು ಯಾರಿಗಾದರೂ ಸಾಧ್ಯವೆ?
ಇಲ್ಲ. ಬೂಮರಾಂಗ್ ಕೂಡ ಮೂಲತಃ ಮರದ ಒಂದು ತುಂಡೇ
ಆಗಿರುತ್ತದೆ. ಆದರೆ ಸರಿಯಾದ ರೀತಿಯಲ್ಲಿ ಎಸೆದ ಪಕ್ಷದಲ್ಲಿ
ಎಸೆದವನ ಕೈಗೇ ಮರಳಿ ಬರುತ್ತದೆ ಬೂಮರಾಂಗ್!

ಒಂದು ದೃಷ್ಟಿಯಲ್ಲಿ ಬೂಮರಾಂಗ್‌ಗಳು ಇಂದು ನಿರುಪಯುಕ್ತ
ವೆಂಬುದು ನಿಜ; ಆದರೆ ಇವುಗಳನ್ನು ತಯಾರಿಸಿದವರು ಬುದ್ಧಿ
ಶಾಲಿಗಳು ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಇವನ್ನು ಮೊತ್ತ
ಮೊದಲು ತಯಾರಿಸಿದವರು ಶಿಲಾಯುಗದ ಮಾನವರು; ಅವರ
ಕಲ್ಪನಾಶಕ್ತಿ, ನಿರ್ಮಾಣ ಸಾಮರ್ಥ್ಯ ಅಚ್ಚರಿಪಡುವಷ್ಟಲ್ಲದೆ
ಇನ್ನೇನು?

ಬೂಮರಾಂಗ್ ಎಂದರೆ ಏನು? ಪ್ರಾಚೀನ ಕಾಲದಲ್ಲಿ ಯುದ್ಧ
ಹಾಗೂ ಬೇಟೆಗಳಿಗಾಗಿ ಮತ್ತು ಸದ್ಯ ಕ್ರೀಡೆ-ವಿನೋದಗಳಿಗಾಗಿ
ಬಳಸಲಾಗುವ ಒಂದು ಉಪಕರಣ. ಆಕಾರದಲ್ಲಿ ವಕ್ರದಂಡ
ದಂತಿರುವ ಇದನ್ನು ಹಿಂದೆ ಮರ ಅಥವಾ ಲೋಹದಿಂದ ತಯಾರಿಸು
ತ್ತಿದ್ದರು. ಈಗ ಪ್ಲಾಸ್ಟಿಕ್‌ನಿಂದ ಕೂಡ ತಯಾರಿಸುತ್ತಾರೆ
ಎಸೆದಾಗ ಇದು ಸರಳ ದಂಡಕ್ಕಿಂತ ಹೆಚ್ಚು ದೂರ ಸಾಗುತ್ತದೆ.

ಬೂಮರಾಂಗ್‌ಗಳಲ್ಲಿ ಎರಡು ವಿಧ: ಹಿಂದಿರುಗದವು ಹಾಗೂ
ಹಿಂದಿರುಗಿ ಬರುವವು. ಇವೆರಡು ಬಗೆಯುವೂ ವಾಯುಗತಿ
ವಿಜ್ಞಾನದ ದೃಷ್ಟಿಯಿಂದ ಅತ್ಯಾಶ್ಚರ್ಯ ಕರ ವಸ್ತುಗಳಾಗಿವೆ
ನೋಡುವವರು ಬೆರಗುಗೊಳ್ಳುವಂತೆ ಮಾಡುವ ಹಾರು
ವಿಲಕ್ಷಣ ಯಂತ್ರಗಳಾಗಿವೆ. ಶುದ್ಧ ಮನೋರಂಜನೆ ಒದಗಿಸು

೧೯೮೬ ನೆಯ ಸೆಪ್ಟೆಂಬರ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾ
ಸ್ಟೀಫನ್ ಹಾಲ್ ಅವರ 'ಕಮ್ ಬ್ಯಾಕ್ ಆಫ್ ದಿ ಬೂಮರಾಂಗ್' ಲೇಖನದ ಆಧಾರದಿಂ

ಬೂಮರಾಂಗ್‌ಗಳು ಒಂದು ದೃಷ್ಟಿಯಲ್ಲಿ ಚಲನಶೀಲ ಕಾವ್ಯಗಳಂತೆ ಎನ್ನಬಹುದು. ಎಸೆದ ಬಳಿಕ ಸಂಕೀರ್ಣ ಪಥವನ್ನು ಕ್ರಮಿಸಿ ಮತ್ತೆ ಮೂಲ ಸ್ಥಾನಕ್ಕೇ ಮರಳುವಂತಹ ಬೂಮರಾಂಗ್‌ಗಳನ್ನು ಎಸೆಯುವುದು ಒಂದು ವಿನೋದವೆಂದು ಇಂದು ಅನೇಕ ದೇಶಗಳಲ್ಲಿ ಪರಿಗಣಿಸಲ್ಪಟ್ಟಿದೆ.

ಬೂಮರಾಂಗ್‌ಗಳ ಅನ್ವೇಷಣೆ ಹೇಗಾಯಿತು ಎಂಬುದನ್ನು ಪ್ರಾಯಶಃ ಯಾರೂ ಖಚಿತವಾಗಿ ಹೇಳಲಾರರು. ಆದರೆ ಹಿಂದೆಯೇ ಹೇಳಿದಂತೆ, ಪ್ರಾರಂಭದಲ್ಲಿ ಅಸ್ತ್ರಗಳಂತೆ ಬಳಸುವ ಉದ್ದೇಶದಿಂದ ಇವುಗಳನ್ನು ತಯಾರಿಸಲಾಯಿತು ಎಂಬುದು ಸ್ಪಷ್ಟ. ಅನೇಕ ವಿದ್ವಾಂಸರ ಅಭಿಪ್ರಾಯದಂತೆ, ಬೂಮರಾಂಗ್‌ಗಳನ್ನು ಮೊತ್ತಮೊದಲು ತಯಾರಿಸಿದವರು ಆಸ್ಟ್ರೇಲಿಯದ ಮೂಲನಿವಾಸಿಗಳು. ವಾಸ್ತವವಾಗಿ ಹೇಳುವುದಾದರೆ, ಈ ಮೂಲನಿವಾಸಿಗಳು ತಯಾರಿಸಿದ ಬೂಮರಾಂಗ್‌ಗಳಲ್ಲಿಯೆ ವಿವಿಧ ಮಾದರಿಗಳಿವೆ. ಹೆಚ್ಚಿನವನ್ನು ಮರದ ತುಂಡುಗಳನ್ನು ಕೆತ್ತಿ ತಯಾರಿಸಲಾಗಿದೆ. ಸುಮಾರು ಒಂದು ಮೀಟರ್‌ವರೆಗೆ ಇವುಗಳ ಉದ್ದವಿದೆ. ಬಾಳೆಹಣ್ಣುಗಳಲ್ಲಿ ಕಂಡು ಬರುವಷ್ಟು ಮಾತ್ರ ವಕ್ರತೆಯುಳ್ಳ ಇವು ಹೆಚ್ಚುಕಡಿಮೆ ಚಪ್ಪಟೆಯೂ ಆಗಿವೆ. ಇವುಗಳಲ್ಲಿ ಕೆಲವು ಸುಮಾರು ಇನ್ನೂರು ಮೀಟರ್‌ಗಳಷ್ಟು ದೂರ ಚಲಿಸಬಲ್ಲವಾಗಿದ್ದುವು. ಬೇಟೆಗಾಗಿಯೇ ಬಳಸಲಾಗುತ್ತಿದ್ದ ಈ 'ಹಂತಕ' ಬೂಮರಾಂಗ್‌ಗಳು ಎಸೆದವರ ಕೈಗೆ ಹಿಂದಿರುಗಿ ಬರುತ್ತಿರಲಿಲ್ಲ.

ಎಸೆದವರ ಕೈಗೆ ಹಿಂದಿರುಗಿ ಬರಬಲ್ಲ ಬೂಮರಾಂಗ್‌ಗಳಿಗೂ ಪ್ರಾಚೀನ ಇತಿಹಾಸವಿದೆ. ಇವುಗಳನ್ನೂ ಹಿಂದೆ ಬಹುಮಟ್ಟಿಗೆ ಮರದ ತುಂಡುಗಳಿಂದಲೇ ತಯಾರಿಸುತ್ತಿದ್ದರು. ಸಾಮಾನ್ಯ ಬೂಮರಾಂಗ್‌ಗಳಿಗಿಂತ ಇವು ಭಿನ್ನವಾಗಿ ಕಾಣಲು ಕಾರಣ ಅವುಗಳಿಗಿರುವ ಹಿಂದಿರುಗಿ ಬರಬಲ್ಲ ವಿಶಿಷ್ಟ ಸಾಮರ್ಥ್ಯ. ಆಡಿಲೆಡ್‌ನ ನೈರುತ್ಯ ಭಾಗದಲ್ಲಿ ದೊರೆತ ಸುಮಾರು ೧೦,೦೦೦ ವರ್ಷಗಳ ಹಿಂದಿನ ಕಾಲಕ್ಕೆ ಸೇರಿದ, ಮರದಿಂದ ತಯಾರಿಸಲಾದ ಬೂಮರಾಂಗ್‌ಗಳ ಆಕಾರದಿಂದ ಆ ಕಾಲದಲ್ಲಿಯೂ ಹಿಂದಿರುವ ಬೂಮರಾಂಗ್‌ಗಳಿದ್ದುದು ತಿಳಿದುಬಂದಿದೆ. ಇವು ಚಿಕ್ಕವಾಗಿದ್ದುವು ಮತ್ತು 'ಹಂತಕ' ಬೂಮರಾಂಗ್‌ಗಳಿಗಿಂತ ಹೆಚ್ಚು ಹಗುರವಾಗಿದ್ದುವು.

ನೈರುತ್ಯ ಅಮೆರಿಕದಲ್ಲಿ, ಯೂರೋಪಿನ ಬೇರೆ ಬೇರೆ ಭಾಗಗಳಲ್ಲಿ, ಪಶ್ಚಿಮ ಏಷ್ಯಾದಲ್ಲಿ ಹಾಗೂ ಈಶಾನ್ಯ ಆಫ್ರಿಕದಲ್ಲಿ ನಡೆದ ಉತ್ಖನನಗಳಲ್ಲಿ ಪ್ರಾಚೀನ ಶೋಧನಶಾಸ್ತ್ರಜ್ಞರಿಗೆ ದೊರೆತ ಬೂಮರಾಂಗ್‌ಗಳು ಬೇರೆ ಬೇರೆ ಸಂಸ್ಕೃತಿಗಳಿಗೆ ಸೇರಿದ್ದುದು ತಿಳಿದುಬಂದಿದೆ.

ಬೂಮರಾಂಗ್‌ಗಳಿಗೆ ಸಂಬಂಧಿಸಿದಂತೆ ಅತ್ಯಂತ ಪ್ರಾಚೀನವೆನ್ನಬಹುದಾದ ದಾಖಲೆಯೊಂದನ್ನು ಕ್ಯಾಪ್ಟನ್ ಜೇಮ್ಸ್ ಕುಕ್ ಮಾಡಿದ್ದಾನೆ. ೧೭೭೦ರಲ್ಲಿ ಬಾಟನಿ ಬೇಯಲ್ಲಿ ತಾನು ನೋಡಿದ ಮೂಲನಿವಾಸಿಗಳು ಒಯ್ಯುತ್ತಿದ್ದ ಬೂಮರಾಂಗ್‌ಗಳನ್ನು ಅವನು 'ಮರದ ಖಡ್ಗಗಳು' ಎಂದು ಉಲ್ಲೇಖಿಸಿದ್ದಾನೆ.

ಈಗ ಬಳಕೆಯಲ್ಲಿರುವ ಬೂಮರಾಂಗ್‌ಗಳ ಉದ್ದ ತುದಿಯಿಂದ ತುದಿಯವರೆಗೆ ಸುಮಾರು ೩೦ ರಿಂದ ೬೦ ಸೆ. ಮೀ. ಗಳಷ್ಟಿರುತ್ತದೆ. ಬಾಹುಗಳ ನಡುವಿನ ಕೋನ ಸುಮಾರು ೪೫° ರಿಂದ ೧೩೦° ಗಳಷ್ಟಿರುತ್ತದೆ. ಭಾರ ೧೪೦ ಗ್ರಾಮ್‌ಗಳಷ್ಟಿರುತ್ತದೆ.

ಈಗಲೂ ಇವನ್ನು ಬಹುಮಟ್ಟಿಗೆ ಮರದಿಂದ, ಹಾಗೂ ವಿರಳ ಸಂದರ್ಭಗಳಲ್ಲಿ ಮಾತ್ರ ಲೋಹ ಅಥವಾ ಪ್ಲಾಸ್ಟಿಕ್‌ನಿಂದ ತಯಾರಿಸುತ್ತಾರೆ. ಬೂಮರಾಂಗ್‌ಗಳ ಆಕಾರ ಹೀಗೆಯೇ ಇರಬೇಕೆಂದೇನೂ ಇಲ್ಲ. ಇಂಗ್ಲೀಷ್ ಅಕ್ಷರ ಮಾಲೆಯಲ್ಲಿ ಕಾಣಬರುವ ಹೆಚ್ಚಿನ ಅಕ್ಷರಗಳ ಆಕಾರಗಳ ಬೂಮರಾಂಗ್‌ಗಳು ಈಗ ದೊರೆಯುತ್ತಿವೆ. ಇವುಗಳಲ್ಲಿ C, X, V, S, T, H ಹಾಗೂ Y ಅಕ್ಷರಗಳ ಆಕಾರದ ಬೂಮರಾಂಗ್‌ಗಳು ಕಾರ್ಯನಿರ್ವಹಣೆಯಲ್ಲಿ ಉತ್ಕೃಷ್ಟವಾಗಿರುತ್ತವೆ.

ಬೂಮರಾಂಗ್‌ಗಳಿಗೆ ಸಂಬಂಧಿಸಿದಂತೆ ಹೆಚ್ಚು ಕೇಳಿಬರುತ್ತಿರುವ ಪ್ರಶ್ನೆಯೆಂದರೆ —ಅವು ಹೇಗೆ ಕೆಲಸ ಮಾಡುತ್ತವೆ? ಇದನ್ನು ಉತ್ತರಿಸುವುದು ಅಷ್ಟೇನೂ ಸುಲಭವಲ್ಲ. "ಬೂಮರಾಂಗ್‌ಗಳ ಹಾರಾಟದ ವಿಧಾನವನ್ನು ವಿಶ್ಲೇಷಿಸುವುದು, ಚಂದ್ರನನ್ನು ತಲುಪಿ ಮತ್ತೆ ಭೂಮಿಗೆ ಮರಳುವ ಗಗನನೌಕೆಯ ಕಾರ್ಯವಿಧಾನವನ್ನು ವಿಶ್ಲೇಷಿಸುವುದ ಕ್ಕಿಂತಲೂ ಹೆಚ್ಚು ಕಷ್ಟ" ಎನ್ನುತ್ತಾರೆ ರಸ್ಟಿ ಹಾರ್ಡಿಂಜ್. ಅಮೆರಿಕದ ಇವರು ಪ್ರತಿ ವರ್ಷ ೫೦೦೦ ಕ್ಕಿಂತಲೂ ಹೆಚ್ಚು ಬೂಮರಾಂಗ್‌ಗಳನ್ನು ತಯಾರಿಸುತ್ತಾರೆ. ಗಗನ ಯಾನ ಕ್ಷೇತ್ರದಲ್ಲಿ ಸಂಶೋಧನೆ ನಡೆಸುತ್ತಿರುವ ಹಾಗೂ ವೃತ್ತಿಯಲ್ಲಿ ಎಂಜಿನಿಯರ್ ಆಗಿರುವ ಇವರು ಕ್ಷಿಪಣಿಗಳ ನಿಯಂತ್ರಣ ವ್ಯವಸ್ಥೆಯನ್ನೂ ರೂಪಿಸಿರುತ್ತಾರೆ. ಬೂಮ ರಾಂಗ್‌ಗಳ 'ಮ್ಯಾಜಿಕ್' ಬಗ್ಗೆ ಸೊಗಸಾಗಿ, ಸ್ವಾರಸ್ಯಕರವಾಗಿ ಗಂಟೆಗಟ್ಟಲೆ ಮಾತಾಡ ಬಲ್ಲ ಇವರ ಅಭಿಪ್ರಾಯದಲ್ಲಿ ಅವುಗಳ ಹಾರಾಟದ ಮೇಲೆ ಪ್ರಭಾವ–ಪರಿಣಾಮಗಳನ್ನು ಬೀರುವ ಅಂಶಗಳು ಅತ್ಯಂತ ಸಂಕೀರ್ಣವಾಗಿವೆ. ಇವು ನ್ಯೂಟನ್ನನ ಚಲನ ನಿಯಮ ಗಳನ್ನೂ, ಎತ್ತುಬಲ, ಪರಿಭ್ರಮಣದ ಸ್ಥಿರತೆ, ಮಂದಚಲನೆ ಮುಂತಾದ ಹಲವಂಶ ಗಳನ್ನೂ ಒಳಗೊಂಡಿವೆ. ಬೂಮರಾಂಗ್‌ಗಳ ಕಾರ್ಯವಿಧಾನ ಹೊರನೋಟಕ್ಕೆ ನಿಜ ವಾಗಿಯೂ ಪವಾಡದಂತೆ ಕಂಡುಬರುತ್ತದೆ.

ಆದರೆ ವಿಮಾನದ ಹಾರಾಟವನ್ನು ಸುಗಮಗೊಳಿಸುವ ಎತ್ತುಬಲದ ಮೂಲ ಸಿದ್ಧಾಂತವೇ ಬೂಮರಾಂಗ್‌ಗಳ ಹಾರಾಟದ ವಿಧಾನಕ್ಕೂ ಅನ್ವಯಿಸುತ್ತದೆ. ಒಟ್ಟಿನಲ್ಲಿ ಹೇಳಬಹುದಾದ ಮಾತೆಂದರೆ, ಚಪ್ಪಟೆ ಬುಡ ಹಾಗೂ ಪೀನ ತುದಿಗಳನ್ನುಳ್ಳ ರೆಕ್ಕೆಯಾ ಕಾರದ ಯಾವುದೇ ವಸ್ತುವು ಗಾಳಿಯ ಮೂಲಕ ಚಲಿಸುವಾಗ ಎತ್ತುಬಲವನ್ನು ಉಂಟು ಮಾಡುತ್ತದೆ. ಪಕ್ಷಿಗಳ ಹಾರಾಟ, ವಿಮಾನಯಾನ ಮತ್ತು ಬೂಮರಾಂಗ್‌ಗಳ ಚಲನ —ಇವಿಷ್ಟಕ್ಕೂ ಅನ್ವಯಿಸುವ ಸಿದ್ಧಾಂತ ಹೆಚ್ಚು ಕಡಮೆ ಒಂದೇ ಎನ್ನಬಹುದು.

ಬೂಮರಾಂಗ್‌ಗಳನ್ನು ಎಸೆಯುವ ಕ್ರಮ ಹೀಗೆ: ಬಹುಮಟ್ಟಿಗೆ ಇದನ್ನು ಭೂಮಿಗೆ ಲಂಬವಾಗಿ ಮೇಲಕ್ಕೆ ಎಸೆಯಲಾಗುತ್ತದೆ. ಇದನ್ನೆಸೆಯುವ ರೀ ಚೆಂಡೊಂದನ್ನು ಎಸೆಯುವ ರೀತಿಗಿಂತ ಭಿನ್ನವೇನೂ ಅಲ್ಲ. ನಮ್ಮ ಕೈಯಿಂದ ಬಿಡುಗ ಹೊಂದಿದ ಬೂಮರಾಂಗ್, ತನ್ನ ಅಕ್ಷದಲ್ಲಿಯೆ ಅಪ್ರದಕ್ಷಿಣವಾಗಿ ಗಿರಗಿರ ತಿರುಗು ತನ್ನದೇ ಆದ ಅಂಡಾಕೃತಿಯ ಪಥವನ್ನು ನಿರ್ಮಿಸಿಕೊಂಡು, ನೋಡುವವರು ಅಚ್ಚ ಪಡುವಂತೆ ಗಂಟೆಗೆ ಸುಮಾರು ೯೫ ಕಿ.ಮೀ. ವೇಗದಲ್ಲಿ ಆಕಾಶದಲ್ಲಿ ಒಮ್ಮೆಲೇ ಮೇಲೆ ತೊಡಗುತ್ತದೆ.

ಕೆಲವೇ ಸೆಕೆಂಡುಗಳಲ್ಲಿ ಅದರ ಹಾರಾಟ ವಿಲಕ್ಷಣ ತಿರುವು ಪಡೆಯುತ್ತದೆ. ಕಾಯ ತ್ತಿರುವ ಕೈಯನ್ನು ತಲುಪಲು ಅದು ಇದ್ದಕ್ಕಿದ್ದಂತೆ ತನ್ನ ಚಲನೆಯ ದಿಕ್ಕನ್ನು ಬದಲ

ೊದಲಿನ ವೇಗದಲ್ಲಿಯೇ ಕೆಳಗಿಳಿಯಲು ಪ್ರಾರಂಭಿಸುತ್ತದೆ. ತನ್ನ ಅಕ್ಷದಲ್ಲಿಯೆ ರುಗುತ್ತ ಧಾವಿಸುವ ಬೂಮರಾಂಗ್‌ನ ಎರಡೂ ತುದಿಗಳ ವೇಗಗಳು ಬೇರೆಬೇರೆ ಾಗಿರುತ್ತವೆ. ಅಂದರೆ ಮೇಲ್ಭಾಗದ ವೇಗ ಕೆಳಭಾಗದ ವೇಗಕ್ಕಿಂತ ಹೆಚ್ಚಾಗಿರುತ್ತದೆ. ರಡೂ ತುದಿಗಳ ಚಲನೆಯ ವೇಗಗಳ ನಡುವಿನ ಈ ವ್ಯತ್ಯಾಸದಿಂದಾಗಿ ತಿರುಗುತ್ತಿರುವ ೂಮರಾಂಗ್‌ನ ಮೇಲ್ಭಾಗ ಹೆಚ್ಚು ಭಾರವಾಗುತ್ತದೆ. ಇದು ಅದರ ಚಲನೆಯ ಸ್ಥಿರತೆ ುನ್ನು ನಿಯಂತ್ರಿಸುತ್ತದೆ. ಅಂಡಾಕೃತಿಯ ತನ್ನ ದೀರ್ಘಪಥವನ್ನು ಪೂರ್ತಿಕ್ರಮಿಸಿದ ೂಮರಾಂಗ್ ತನ್ನ ಒಡೆಯನ ಕೈಯನ್ನು ಮರಳಿ ಸೇರುತ್ತದೆ.

ಬೂಮರಾಂಗ್‌ನ ಕಾರ್ಯನಿರ್ವಹಣೆ ಅಥವಾ ಹಾರಾಟದ ವಿಧಾನ ಹೇಗೆ ಂಬುದು ನಿಮಗಿನ್ನೂ ಅರ್ಥವಾಗದೆ ಇದ್ದರೆ ಆ ಬಗ್ಗೆ ಚಿಂತಿಸಬೇಕಿ. ಎತ್ತುಬಲ, ಕ್‌ಪರಿಮಾಣ, ಕೋನೀಯ ಆವೇಗ, ಪರಿಭ್ರಮಣದ ಸ್ಥಿರತೆ ಮೊದಲಾದ, ಬೂಮ ಾಂಗ್‌ಗಳಿಗೆ ಸಂಬಂಧ ಪಟ್ಟ ಆಧುನಿಕ ವೈಜ್ಞಾನಿಕ ಜ್ಞಾನ ಇಂದಿನ ಬಹುತೇಕ ಬೂಮ ಾಂಗ್ ತಯಾರಕರಿಗೇ ಇಲ್ಲದಿರುವಾಗ ಈ ಬಗ್ಗೆ ನಾವಾದರೂ ಏಕೆ ಸುಮ್ಮನೆ ತಲೆಕೆಡಿಸಿ ೊಳ್ಳಬೇಕು? ಹೀಗೆಂದ ಮಾತ್ರಕ್ಕೆ, ಈ ವಿಚಾರ ಕೂಲಂಕಷ ಅಧ್ಯಯನಕ್ಕೆ ಅರ್ಹವಲ್ಲ ಂದೇನೂ ಭಾವಿಸಬಾರದು. ಬೂಮರಾಂಗ್‌ಗಳ ಕಾರ್ಯವಿಧಾನದ ಬಗ್ಗೆ ಅನೇಕರು ಂಶೋಧನೆ ನಡೆಸಿದ್ದಾರೆ. ಉದಾಹರಣೆಗೆ, ಫೆಲಿಕ್ಸ್‌ಹೆಸ್ ಅವರನ್ನೇ ತೆಗೆದುಕೊಳ್ಳಿ. ಾಲೆಂಡಿನ ವಿಖ್ಯಾತ ಭೌತವಿಜ್ಞಾನಿಗಳಾದ ಇವರು ಬೂಮರಾಂಗ್‌ಗಳನ್ನು ಕುರಿತಂತೆ ಳು ವರ್ಷಗಳಷ್ಟು ದೀರ್ಘಕಾಲ ಅಧ್ಯಯನ ನಡೆಸಿ, ೫೫೫ ಪುಟಗಳ ತಮ್ಮ ಪ್ರೌಢ ್ರಬಂಧವನ್ನು ಇದೀಗ ಪ್ರಕಟಿಸಿದ್ದಾರೆ.

ಹೊಸ ಹೊಸ ಮಾದರಿಯ ಬೂಮರಾಂಗ್‌ಗಳನ್ನು ತಯಾರಿಸುವಲ್ಲಿ ಇಂದಿನ ುಶಲಕರ್ಮಿಗಳು ಆಸಕ್ತಿ ತಾಳಿದ್ದಾರೆ. ಬೂಮರಾಂಗ್‌ಗಳ ಆಕಾರಗಳನ್ನು ವಿನ್ಯಾಸ ೊಳಿಸುವುದು ಇಂದು ಒಂದು ಅಪೂರ್ವ ಕಲೆಯೇ ಆಗಿದೆ. ಇದಕ್ಕೆ ವಿಶಿಷ್ಟವಾದ ಪ್ರತಿಭೆ ೂಡ ಬೇಕು. ಈಚೆಗೆ ಅನೇಕ ಪ್ರಾಯೋಗಿಕ ಬೂಮರಾಂಗ್‌ಗಳು ರೂಪುಗೊಂಡಿವೆ. ುದಾಹರಣೆಗೆ, ರಿಚರ್ಡ್ ರೂಹೆ ಎಂಬವರು ವಿನ್ಯಾಸಗೊಳಿಸಿದ 'ಜಾಂಜಿಬಾರ್' ಎಂಬ ೆಸರಿನ ಬೂಮರಾಂಗ್. ಇದು ೩೦ ಸೆಕಂಡುಗಳಷ್ಟು ಕಾಲ ಮೇಲೇರುತ್ತಿದ್ದು ಅನಂತರ ೆಳಗಿಳಿಯುತ್ತದೆ (ಸಾಮಾನ್ಯವಾಗಿ ಬೂಮರಾಂಗ್‌ಗಳು ಹೆಚ್ಚೆಂದರೆ ೧೨ ಸೆಕೆಂಡು ಳಷ್ಟು ಕಾಲ ಮಾತ್ರ ಮೇಲೇರುತ್ತವೆ. ಅಷ್ಟು ಕಾಲ ಮೇಲೇರುತ್ತಿರುವುದೂ ವಿರಳ ಂದರ್ಭಗಳಲ್ಲಷ್ಟೆ!) ಆಸ್ಟ್ರೇಲಿಯಾದ ಬಾಬ್ ಬರ್ವೆಲ್ ಎಂಬುವರು ರೂಪಿಸಿದ ಾಂಡರರ್' ಎಂಬ ಹೆಸರಿನ ಬೂಮರಾಂಗನ್ನೂ ಇಲ್ಲಿ ಉಲ್ಲೇಖಿಸಬಹುದು. ಅದು ುಮಾರು ೨೦ ಸೆಕಂಡುಗಳಷ್ಟು ಕಾಲ ಮೇಲೇರಬಲ್ಲುದಾಗಿತ್ತು. ಲಾರಿನ್ ಹವೆಸ್ ಂಬುವರು ತಯಾರಿಸಿದ 'ಸಿಲ್ಕಿಸ್ಪಿನ್ನರ್' ಎಂಬ ಹೆಸರಿನ ಬೂಮರಾಂಗ್ ಬಲಿಷ್ಠವಾಗಿ ರೂ ಅತ್ಯಂತ ಹಗುರವಾಗಿದೆ. ಇದನ್ನು ಸುಲಭವಾಗಿ ಎಸೆಯಬಹುದು ಹಾಗೂ ಡಿಯಬಹುದು ಕೂಡ. ಫ್ರಾನ್ಸ್‌ನಲ್ಲಿ ತಯಾರಾಗಿ ಮಾರುಕಟ್ಟೆಗೆ ಬರುವ 'ಎವನ್‌ಕೆಗ' ಂಬ ಹೆಸರಿನ ಬೂಮರಾಂಗ್ ಅಂಡಾಕೃತಿಯ ಬದಲಾಗಿ ಬಹುಮಟ್ಟಿಗೆ ವೃತ್ತೀಯ ಥದಲ್ಲಿ ಸಂಚರಿಸುತ್ತದೆ. ಪಶ್ಚಿಮ ಜರ್ಮನಿಯ ವಿಲ್ಲಿ ಅರ್ಬಾನ್ ಅವರು ವಿನ್ಯಾಸ

ಗೊಳಿಸಿದ ನೈಲನ್ನಿನ 'ಕವರ್‌ಬ್ಯಾಕ್' ಎಂಬ ಹೆಸರಿನ ಬೂಮರಾಂಗ್‌ನ ಹಾರಾಟ ಅತ್ಯಂತ ವಿಶಿಷ್ಟವಾಗಿದೆ. ಎಸೆದಾಗ ಇತರ ಬೂಮರಾಂಗ್‌ಗಳಂತೆ ಮೇಲೇರುವ ಬದಲಿಗ ಇದು ಭೂಮಿಗೆ ಬಹುಮಟ್ಟಿಗೆ ಸಮಾಂತರವಾದ ಪಥದಲ್ಲಿ ಯಾವುದಾದರೊಂದು ದಿಕ್ಕಿನತ್ತ ಧಾವಿಸಿ, ಮತ್ತೆ ಹಿಂದಿರುಗಿ ಬರುತ್ತದೆ. ಹೀಗೆ ಬೂಮರಾಂಗ್‌ಗಳ ವಿನ್ಯಾಸ ಹಾರಾಟದ ವಿಧಾನಗಳಲ್ಲಿ ವೈವಿಧ್ಯವುಂಟು; ವೈಚಿತ್ರ್ಯವೂ ಉಂಟು.

ಬೂಮರಾಂಗ್‌ಗಳನ್ನು ಎಸೆಯುವವರಲ್ಲಿ ಕೆಲವರು ಸಾಧಿಸಿದ ಕೈಚಳಕವನ್ನು ಇಲ್ಲಿ ಹೇಳಬೇಕು. ಇವರಲ್ಲಿ ಮೊತ್ತಮೊದಲು ಹೆಸರಿಸಬೇಕಾದವನೆಂದರೆ ಸಿಡ್ನಿಯಲ್ಲಿ ಮುದ್ರಣಾಲಯ ನಡೆಸುತ್ತಿದ್ದ ಫ್ರಾಂಕ್ ಡೊನೇಲನ್. (ಇವನು ಈಗ ಇಲ್ಲ). ೧೯೩೦ ರಲ್ಲಿ ಇವನು ಬಯಲು ರಂಗಮಂದಿರಗಳಲ್ಲಿ ಬೂಮರಾಂಗ್‌ಗಳನ್ನು ಎಸೆಯುವ ಪ್ರದರ್ಶನಗಳನ್ನೇ ಪ್ರೇಕ್ಷಕರಿಗಾಗಿ ವ್ಯವಸ್ಥೆಗೊಳಿಸುತ್ತಿದ್ದ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಬೂಮರಾಂಗ್‌ಗಳನ್ನು ಒಂದರ ಅನಂತರ ಇನ್ನೊಂದರಂತೆ ಎಸೆದು, ಎಸೆದ ಎಲ್ಲವನ್ನೂ ಒಂದೂ ಬಿಡದಂತೆ ಪುನಃ ಹಿಡಿಯಬಲ್ಲವನಾಗಿದ್ದ ಈ ಭೂಪ! ಅಷ್ಟೇ ಅಲ್ಲದೆ, ತನ್ನ ಸಂಗಾತಿಯ ಜೊತೆಗೆ ಇವನು ಇನ್ನೊಂದು ಪ್ರೇಕ್ಷಣೀಯ ಬೂಮರಾಂಗ್ ಪ್ರದರ್ಶನ ವನ್ನೂ ನೀಡುತ್ತಿದ್ದನಂತೆ. ಈ ಪ್ರದರ್ಶನದಲ್ಲಿ ಫ್ರಾಂಕ್‌ನ ಸಂಗಾತಿ ಒಂದು ಸೇಬು ಹಣ್ಣನ್ನು ಅವನ ತಲೆಯ ಮೇಲಿಟ್ಟು, ದೂರದಲ್ಲಿ ನಿಂತು ಅವನತ್ತ ಬೂಮರಾಂಗನ್ನು ಎಸೆಯುತ್ತಿದ್ದ. ಮೇಲಕ್ಕೆ ಚಿಮ್ಮಿದ ಬೂಮರಾಂಗ್ ಹಿಂತಿರುಗುವಾಗ ಫ್ರಾಂಕ್‌ನ ತಲೆಯ ಮೇಲಿದ್ದ ಸೇಬುಹಣ್ಣನ್ನು ಹಾರಿಸಿಕೊಂಡು ಬಂದು ಎಸೆದವನ ಕೈಸೇರುತ್ತಿತ್ತು. ಫ್ರಾಂಕ್ ಡೊನೇಲನ್ ತನ್ನ ಕಾರಿನಲ್ಲಿ ಕುಳಿತುಕೊಂಡು ಒಂದು ಕಿಟಕಿಯಿಂದ ಬೂಮರಾಂಗನ್ನು ಎಸೆದು ಇನ್ನೊಂದು ಕಿಟಕಿಯಿಂದ ಹಿಂತಿರುಗಿ ಬರುವ ಅದನ್ನು ಹಿಡಿದು ಕೊಳ್ಳುತ್ತಿದ್ದ ಎಂದೂ ಹೇಳಲಾಗಿದೆ.

ಸದ್ಯ ಈ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಖ್ಯಾತಿಗಳಿಸಿದವನೆಂದರೆ ಬೇಬಿ ಬೆನ್. ೧೯೮೧ ರಲ್ಲಿ, ಇಪ್ಪತ್ತೆರಡು ತಿಂಗಳ ಬಾಲಕನಾಗಿರುವಾಗಲೇ ಈತ ಆಸ್ಟ್ರೇಲಿಯಾದಲ್ಲಿ ಜೂನಿಯರ್ ವಿಭಾಗದಲ್ಲಿ ರಾಷ್ಟ್ರೀಯ ಚಾಂಪಿಯನ್‌ಶಿಪ್ ಪಡೆದಿದ್ದ.

ಈಚೆಗೆ ಎಲ್ಲ ರಾಷ್ಟ್ರಗಳಲ್ಲಿ, ಅದರಲ್ಲೂ ವಿಶೇಷವಾಗಿ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ, ಬೂಮರಾಂಗ್ ಸ್ಪರ್ಧೆಗಳು ಹೆಚ್ಚುತ್ತಿವೆ. ಇಂಥ ಸ್ಪರ್ಧೆಗಳು ಮೊತ್ತ ಮೊದಲು ನಡೆದದ್ದು ೧೯೬೯ ರಲ್ಲಿ, ವಾಷಿಂಗ್‌ಟನ್‌ನಲ್ಲಿ. ಅಂದಿನಿಂದ ಈಚೆಗೆ ಇಂಥ ಸ್ಪರ್ಧೆಗಳು ಆಗಾಗ ನಡೆಯುತ್ತ ಬಂದಿವೆ. ಅಮೆರಿಕದಲ್ಲಿ ಕೆಲವೊಮ್ಮೆ ಪ್ರತಿ ತಿಂಗಳೂ ಬೂಮರಾಂಗ್ ಸ್ಪರ್ಧೆ ನಡೆಯುತ್ತದೆ. ಹಲವು ವಿಧದ ಬೂಮರಾಂಗ್ ಸ್ಪರ್ಧೆಗಳಿವೆ ಉದಾಹರಣೆಗೆ—ಹೆಚ್ಚು ದೂರ ಎಸೆಯುವುದು, ಹೆಚ್ಚು ಎತ್ತರ ಎಸೆಯುವುದು, ಎರಡು ಬೂಮರಾಂಗ್‌ಗಳಲ್ಲಿ ಒಂದು ಆಕಾಶದಲ್ಲಿ ಹಾಗೂ ಒಂದು ಕೈಯಲ್ಲಿ ಯಾವಾಗಲೂ ಉಳಿಯುವಂತೆ ಪ್ರದರ್ಶನ ನೀಡುವುದು, ಎರಡು ಬೂಮರಾಂಗ್‌ಗಳನ್ನು ಒಟ್ಟಿಗೆ ಎಸೆದ ಅವುಗಳನ್ನು ಒಟ್ಟಿಗೆ ಮರಳಿ ಪಡೆಯುವುದು, ಇತ್ಯಾದಿ. ಬೂಮರಾಂಗ್ ಪಟುಗಳ ಕೈಚಳಕ, ನೈಪುಣ್ಯಗಳು ಏನೇ ಇರಲಿ; ಎಷ್ಟೇ ಇರಲಿ ಅವುಗಳನ್ನು ನಿರ್ಲಕ್ಷಿಸಿಯೂ ಹೇಳಬಹುದಾದ ಮಾತೆಂದರೆ, ಆಕಾಶದಲ್ಲಿ ಬಾಣದಂತೆ ಧಾವಿಸುವ ಬೂಮರಾಂಗ್‌ನ್ನು

ನೋಡುವುದೇ ಒಂದು ಮೋಜು. ಬೂಮರಾಂಗ್‌ನ ಪ್ರತಿ ಹಾರಾಟವೂ 'ಬೂಮರಾಂಗ್‌ಗಳು ನೋಡಲು ಚಂದ' ಎಂಬ ಸರಳ ಸತ್ಯವನ್ನು ದೃಢಪಡಿಸುತ್ತದೆ.

ಬೂಮರಾಂಗ್‌ಗಳ ಪ್ರಮುಖ ಇತಿಹಾಸಕಾರನಾಗಿರುವ ಅಮೆರಿಕದ ಬೆನ್‌ರೂಹೆ ಹೇಳುವಂತೆ "ಇದು ಕೇವಲ ಒಂದು ಮರದ ತುಂಡು". ಆದರೆ ಒಮ್ಮೆ ಕಾರ್ಯಪ್ರವೃತ್ತವಾಯಿತೋ—ಆಕಾಶದಲ್ಲಿ ಒಂದು ಅದ್ಭುತ ದೃಶ್ಯವನ್ನೇ ಸೃಷ್ಟಿಸುತ್ತದೆ. ಒಂದು ಸ್ಥಳದಿಂದ ಹೊರಟು ಅತ್ಯಲ್ಪಕಾಲ ಆಕಾಶ ಸಂಚಾರ ಮಾಡಿ ಮತ್ತೆ ಅತ್ಯಂತ ವಿಧೇಯತೆಯಿಂದ ಹೊರಟಲ್ಲಿಗೇ ಮರಳಿ ಬರುವ ಬೂಮರಾಂಗ್‌ಗಳ ಕಾರ್ಯ ವಿಧಾನ ಆಶ್ಚರ್ಯಕರ; ಪ್ರದರ್ಶನ ಮನಮೋಹಕ.

ಅನು : ಶಂಶ ಐತಾಳ

ಪ್ರಜಾ ಪ್ರಭುತ್ವದಲ್ಲಿ ಬಲಿಷ್ಠನಿಗಿರುವ ಅವಕಾಶಗಳು ದುರ್ಬಲನಿಗೂ ಇರಬೇಕು. ಅದೇ ನಿಜವಾದ ಪ್ರಜಾ ಪ್ರಭುತ್ವ.

ದುಃಖ ಎನ್ನುವುದು ತ್ಯಾಗ ಅಲ್ಲ. ಯಾವ ತ್ಯಾಗದಿಂದ ಮನುಷ್ಯನಿಗೆ ಆನಂದ ಲಭಿಸುತ್ತದೆಯೋ ಅದೇ ನಿಜವಾದ ತ್ಯಾಗ.

ಗಾಂಧೀಜಿ

ಬದಲಾವಣೆಗಳ ಜತೆ ಗೆಳೆತನ ಬೆಳೆಸಿ

ಜಾಕೀ ಗ್ರಿ

"ಯಾವುದೂ ಶಾಶ್ವತವಲ್ಲ." ನಿರಾಶೆಗೊಂಡ, ಗಲಿಬಿಲಿಗೊಂಡ
ಆ ವಿಧವೆಗೆ ನಾನು ಹೇಳಿದೆ—"ಹಾಗಿದ್ದರೂ, ಆ ಸೋಲಿನ
ನಡುವಿನಲ್ಲೂ ಸದವಕಾಶಗಳಿವೆ! ಆದರೆ, ನೀವು ಮನಸ್ಸು ಮಾಡ
ಬೇಕು. ಈ ಬದಲಾವಣೆಗಳ ಜತೆ ಗೆಳೆತನ ಬೆಳೆಸಿಕೊಳ್ಳಬೇಕು!
ಟೆಕ್ಸಾಸಿನ ಹೌಸ್ಟನ್‌ನಲ್ಲಿರುವ ಗಣರಾಜ್ಯ ವಿಶ್ವಸ್ಥ ಠೇವಣಾತಿ
ಬ್ಯಾಂಕಿನ ನನ್ನ ಆಫೀಸಿನಲ್ಲಿ ನನ್ನ ಕಕ್ಷಿದಾರಳನ್ನು ನೋಡಿ ಭಾವ
ಪರವಶಳಾದೆ. ಆಕೆ ಚಿಂತಾಕ್ರಾಂತಳಾಗಲು ನಿಜಕ್ಕೂ ಹಲವಾರು
ಕಾರಣಗಳಿದ್ದುವು. ಆಗಷ್ಟೇ ಪತಿಯನ್ನು ಕಳೆದುಕೊಂಡ ಆಕೆಗೆ
ಅವಳ ಗಂಡ ಬರೆದಿಟ್ಟ ವಿಲ್ಲಿನ ಬಗ್ಗೆ ತಿಳಿಸಿಕೊಡಬೇಕಾಗಿತ್ತು.
ಅವಳ ಮಕ್ಕಳೂ ಅವಳಿಂದ ದೂರ ಹೋಗಿ ನೆಲೆಸಿಬಿಟ್ಟಿದ್ದರು.
ಮುಂದೆ ಒಂದೇ ವರ್ಷದಲ್ಲಿ ಅವಳಿಗೆ ೬೫ ವರ್ಷ ತುಂಬುವುದು,
ಮತ್ತು ಶಿಕ್ಷಕಿಯ ವೃತ್ತಿಯಿಂದ ನಿವೃತ್ತಿಯೂ ಆಗುವುದು!

"ನನ್ನ ವೈಯಕ್ತಿಕ ಜೀವನ ಅಸ್ತವ್ಯಸ್ತವಾಗಿದೆಯೆಂದು ನಾನು
ಕೊರಗುತ್ತಿಲ್ಲ" ಆಕೆಯೆಂದಳು—

ಪೂರ್ಣ ಜಗತ್ತೇ ಬೇರೆಯಾಗಿಬಿಟ್ಟಿದೆ. ಜನರು, ಜೀವನ ಮೌಲ್ಯ
ಗಳು, ಯಂತ್ರಗಳು, ಕಂಪ್ಯೂಟರ್‌ಗಳು, ದೂರವಾಣಿಯಲ್ಲಿ
ನನ್ನನ್ನು ಕರೆಯುವ ಯಂತ್ರಗಳು! "ಈ ರೀತಿ ಬದಲಾವಣೆಗಳು!
ಎಲ್ಲವೂ ಕಲಿಕೆಳಗಾಗಿ ಹೋಯಿತು!"

ಆಕೆ ನನ್ನ ಬಳಿ ಬಂದುದು ತನ್ನ ಹಣದ ವ್ಯವಸ್ಥೆಯ ಬಗ್ಗೆ ಸಲಹೆ
ಕೇಳಲು. ಆದರೆ ಅವಳ ಈ ಮಾತಿನಿಂದ ಅವಳ ಭಯಕ್ಕೆ ಕಾರಣ
ಬೇರೆ ಇದೆ ಎಂದು ಮನವರಿಕೆಯಾಯಿತು ನನಗೆ. ತನ್ನ ಜಗತ್ತು
ಈಗ ಕೈಮೀರಿಹೋಗಿದೆ ಎಂದಾಕೆ ಕಂಗಾಲಾಗಿ ಹೋಗಿದ್ದಳು.

೧೯೮೩ನೆಯ ಡಿಸೆಂಬರ್ ೩೦ಗಳ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾದ
ಜಾಕೀ ಗ್ರೀ ಅವರ "ಮೇಕ್ ಎ ಫ್ರೆಂಡ್ ಆಫ್ ಚೇಂಜ್" ಲೇಖನದ ಅನುವಾದ.

"ತಾನಿನ್ನು ಮೇಲೆ ಜಗತ್ತಿನ ಈ ಹೊಸ ಶಕ್ತಿಗಳನ್ನು ಹೇಗೆ ಎದುರಿಸಿಯೇನು? ಮೊದಲಿನಂತೆ ನಿಶ್ಚಿಂತೆಯಿಂದ ಹೇಗಿರಲಿ?"

"ಬದಲಾವಣೆಯೇ ಈ ಜಗತ್ತಿನಲ್ಲಿ ಅತಿ ಶಾಶ್ವತ." ನಾನೆಂದೆ "ಅದರೊಡನೆ ಸ್ನೇಹ ಬೆಳಸಬಾರದೇಕೆ? ನಾನು ಬೆಳೆಸಿಲ್ಲವೇ? ಮಾತಾಡುತ್ತಾ ಆಕೆಗೆ ನಾನು ಎದುರಿಸಬೇಕಾಗಿ ಬಂದ ಹಲವು ಪ್ರಸಂಗಗಳನ್ನು ವಿವರಿಸಿದೆ.

"ನನ್ನ ತಂದೆಯೇ ನನ್ನ ಆತ್ಮೀಯ ಗೆಳೆಯರಾಗಿದ್ದರು. ಸಣ್ಣದೊಂದು ಪಟ್ಟಣದಲ್ಲಿ ಪೋಸ್ಟ್ ಮಾಸ್ತರಾಗಿದ್ದ ಅವರು ನನ್ನ ಹುಡುಗಾಟಿಕೆಯ ಆನಂದದಲ್ಲಿ ಪಾಲ್ಗೊಳ್ಳಲು ಪುರುಸೊತ್ತು ಮಾಡಿಕೊಳ್ಳುತ್ತಿದ್ದರು. ಟೆಕ್ಸಾಸಿನ ಪೂರ್ವಪ್ರದೇಶದ ಗುಡ್ಡ ಕಣಿವೆಗಳಲ್ಲಿ ಬೇಟೆಯಾಡುವುದು, ಹಳ್ಳಕೊಳ್ಳಗಳಲ್ಲಿ ಈಜುವುದು ಮೀನು ಹಿಡಿಯುವುದು, ಕುದುರೆ ಸವಾರಿ ಇತ್ಯಾದಿ ಮನಬಂದಂತೆ ಮಾಡುತ್ತಿದ್ದೆವು."

"ಆದರೆ ನಾನು ಬರೇ ಹದಿಮೂರು ವರ್ಷದವಳಿದ್ದಾಗ ನನ್ನ ತಂದೆ ತೀರಿಕೊಂಡರು"—(ಈ ಮಾತನ್ನು ಹೇಳುತ್ತಿದ್ದಂತೆಯೇ, ತಂದೆ ಸತ್ತು ಅರುವತ್ತು ವರ್ಷ ಕಳೆದಿದ್ದರೂ ನನ್ನ ಕಣ್ಣುಗಳು ಕಂಬನಿದುಂಬಿದುವು.)

ತಂದೆಯ ಬಳಿಕ, ನನ್ನ ತಾಯಿಯೇ ನನ್ನ ಜೀವನಕ್ಕೆ ಆದರ್ಶಪ್ರಾಯಳಾದಳು. ಅವಳು ತಂದೆಗಾಗಿ ಅಳುತ್ತಿದ್ದಳು; ಆದರೆ ತಂದೆಯ ಮರಣದಿಂದಾಗಿ ಎದುರಿಸಲೇಬೇಕಾಗಿ ಬಂದ ಕಷ್ಟಕಾರ್ಪಣ್ಯಗಳಿಗೆ ಹೊಂದಿಕೊಂಡಳು. ದೃಢಸಂಕಲ್ಪದಿಂದ ಎದುರಿಸಿದಳು. ಸಂಗೀತ ಶಿಕ್ಷಕಿಯಾಗಿ ದುಡಿದು ನಮ್ಮ ಊಟ, ಬಟ್ಟೆಗೆ, ನನ್ನ ವಿದ್ಯಾಭ್ಯಾಸಕ್ಕೆ ಸಂಪಾದಿಸಿದಳು. ನಾನು ಟೆಕ್ಸಾಸಿನ ಮಹಿಳಾ ವಿದ್ಯಾಲಯಕ್ಕೆ ಸೇರಿಕೊಂಡಾಗ ಪ್ರಶಂಸಿಸಿ ಪ್ರೋತ್ಸಾಹಿಸಿದಳು.

ಇಷ್ಟುಹೊತ್ತಿಗಾಗಲೇ "ಬದಲಾದ ಪರಿಸ್ಥಿತಿ"ಯನ್ನು ಎದುರಿಸುವ ತಾಯಿಯ ರೀತಿಯಿಂದ ಪ್ರಭಾವಿತಳಾಗಿದ್ದೆ ನಾನು.

ಅವಳನ್ನುತ್ತಿದ್ದಳು— ನಷ್ಟವನ್ನು ಯಾರೂ ನಿವಾರಿಸಲಾರರು. ಆದರೆ ನಮಗೆ ಬೇಡವೆನಿಸುವ, ಕಷ್ಟಕ್ಕೀಡು ಮಾಡುವ ಬದಲಾವಣೆಗಳು ಕೂಡ, ನಮಗೆ ಸದವಕಾಶಗಳಿಗೆ ದಾರಿಮಾಡಿಕೊಡುತ್ತವೆ—ನಮ್ಮದೆನ್ನುವುದೇನಿದೆ? ನಮ್ಮ ಅರ್ಹತೆಗಳೇನು? ಇವನ್ನು ಮೊದಲು ನೋಡಿಕೊ; ಕಳೆದುಕೊಂಡುದನ್ನು ತುಂಬಿಕೊಳ್ಳುವ ಮಾರ್ಗ ಯಾವುದು—ಅದನ್ನು ಕಂಡುಹಿಡಿ—ಆದರೆ ಇಷ್ಟೇ ಬದುಕಿನ ಸಾಫಲ್ಯಕ್ಕೆ, ಸಂತೃಪ್ತಿಯ ಖಜಾನೆಗೆ, ಕೀಲಿಕೈಗಳಲ್ಲ. ಅದನ್ನು ಅವರವರೇ ಕಂಡುಹಿಡಿಯಬೇಕು; ತಮ್ಮದಾಗಿಸಿಕೊಳ್ಳಬೇಕು.

೧೯೩೦ರಲ್ಲಿ ಅಮೆರಿಕದಲ್ಲಿ ನಿರುತ್ಸಾಹ ತುಂಬಿ ಹೋಗಿತ್ತು. ವ್ಯಾಪಾರ ವಹಿವಾಟುಗಳಲ್ಲಿ ಜಡತೆ ನೆಲೆಯೂರಿತ್ತು. ಉದ್ಯೋಗಾವಕಾಶಗಳ ಅಭಾವ ಉಂಟಾಗಿತ್ತು. ಹಾಗಿದ್ದರೂ ಅದೃಷ್ಟವಶಾತ್ ಬ್ಯಾಂಕೊಂದರಲ್ಲಿ ನನಗೆ ಕೆಲಸ ಸಿಕ್ಕಿತು.

ಉದ್ಯೋಗಕ್ಕೆ ಸೇರಿಕೊಳ್ಳುತ್ತಿದ್ದಂತೆ, ಕೆನ್‌ಗ್ರಿಯರ್ ಎಂಬ ಯುವಕನನ್ನು ಸಂಧಿಸಿದೆ. ಆತನ ಜತೆ ಪ್ರೇಮ ಬಂಧಿತಳಾದೆ ನಮ್ಮ ಮದುವೆಯೂ ನಡೆಯಿತು. ಮುಂದೆ ಎರಡು ವರ್ಷಗಳಿಗೂ ಮೊದಲೇ ದ್ವಿತೀಯ ವಿಶ್ವಸಮರದಲ್ಲಿ ಸೇವೆ ಸಲ್ಲಿಸಲು ಕೆನ್ನನಿಗೆ

ಕರೆ ಬಂತು ಇಂಗ್ಲೆಂಡಿನ ವಿಮಾನ ಪಡೆಯಲ್ಲಿ 'ಬಿ ೧೭' ಎಂಬ ಹೆಸರಿನ ಯಾನದಲ್ಲಿ
ಗನ್ನರನಾಗಿ ಆತ ಹೊರಟು ಹೋದ.

ಮುಂದೆ ಎಂಟು ತಿಂಗಳು ಕಳೆದು ನನಗೊಂದು ತಂತಿ ವಾರ್ತೆ ಕೈಸೇರಿತು—ಕೆನ್
ನಾಪತ್ತೆಯಾಗಿದ್ದಾನೆ, ಬಹುಶಃ ಸತ್ತಿರಲೂ ಬಹುದು!

ಕೆನ್ ಸತ್ತಿರುವನೆಂದು ಪೂರ್ತಿಯಾಗಿ ಒಪ್ಪಲು ಅಸಮರ್ಥಳಾಗಿದ್ದೆ ನಾನು.
ಆದರೆ 'ಅವನಿಲ್ಲದೆ ಬದುಕು ಸಾಗಿಸಲೇಬೇಕು' ಎಂಬ ಸತ್ಯವನ್ನು ಎದುರಿಸದೆ ಗತ್ಯಂತರ
ವಿರಲಿಲ್ಲ. ಅಷ್ಟೇ ಅಲ್ಲ ಇದುವರೆಗೂ ಇಲ್ಲದಂಥ ಬೇಡಿಕೆಗಳನ್ನೂ ಪೂರೈಸಬೇಕಾಗಿತ್ತು.
ನನ್ನ ತಾಯಿ, ಅಜ್ಜಿ, ಕೆನ್ನನ ತಾಯಿ ಇವರೆಲ್ಲರನ್ನು ಸಾಕುವ ಹೊಣೆ ನನ್ನ
ಮೇಲಿತ್ತು.

ಏನಾದರೂ ಮಾಡಿ ನಾನೀಗ ನನ್ನ ಆದಾಯವನ್ನು ಹೆಚ್ಚಿಸಲೇಬೇಕು. ನನ್ನ
ಸುತ್ತೆಲ್ಲ ಬದಲಾವಣೆಗಳ ಸುಂಟರಗಾಳಿ ಸುತ್ತಿದೆ. ಇವುಗಳ ಮಧ್ಯೆ ನನ್ನ ಸಾಮರ್ಥ್ಯ
ವೆಷ್ಟೆಂದು ಅಳೆಯಬೇಕಾಗಿದೆ.

ಬ್ಯಾಂಕಿನ ಕೆಲಸವನ್ನೇ ವಿಸ್ತಾರಗೊಳಿಸಿದರೆ ಹೇಗೆ? ಬ್ಯಾಂಕ್ ಆಫೀಸರ್ ಹುದ್ದೆಗೆ
ಪ್ರಯತ್ನಿಸಲೇ? ಟೆಕ್ಸಾಸಿನ ಯಾವದೇ ದೊಡ್ಡ ಬ್ಯಾಂಕಿನ ಅಧಿಕಾರಿಯೂ
ಹೆಂಗಸೊಬ್ಬಳನ್ನು ಮ್ಯಾನೇಜರ್ ಹುದ್ದೆಗೇರಿಸಲು ಮುಂದೆ ಬಂದಾರೆಂದರೆ ನಂಬಲು
ಸಾಧ್ಯವಿಲ್ಲ. ಇನ್ನೊಂದು ಕೊರತೆಯೆಂದರೆ ಪುರುಷರಷ್ಟೇ ಸಾಮರ್ಥ್ಯದಿಂದ ಕಾರ್ಯ
ನಿರ್ವಹಿಸಲು ನನ್ನಿಂದಾದೀತೇ?

ಈಗ, ನಾನೊಬ್ಬ ಗಮನಾರ್ಹ ವ್ಯಕ್ತಿಯಾಗಲು ಪ್ರಯತ್ನಿಸತೊಡಗಿದೆ. ಬ್ಯಾಂಕ್
ಉದ್ಯಮಕ್ಕೆ ಸಂಬಂಧಿಸಿದ ಎಲ್ಲ ಸಾಹಿತ್ಯ ಕೃತಿಗಳನ್ನು—ಕೊಂಡುಕೊಳ್ಳಲು ಸಾಧ್ಯ
ವಿದ್ದಷ್ಟೂ—ಕೊಂಡು ಓದತೊಡಗಿದೆ. ಕೊನೆಗೆ ನಿಜವಾಗಿಯೂ ನನಗೊಂದು ಉತ್ತಮ
ಅವಕಾಶ ಸಿಕ್ಕಿಬಿಟ್ಟಿತು. ಒಂದು ಬೆಳಗ್ಗೆ ನಾನು ಕೆಲಸ ಮಾಡುತ್ತಿದ್ದ ಪ್ರಥಮ ರಾಷ್ಟ್ರೀಯ
ಬ್ಯಾಂಕಿನ ಅಧ್ಯಕ್ಷರನ್ನು ಕಾಣಲು ಹೋದೆ. ಅವರೊಡನೆ ನಾನೆಂದೆ—

"ದಕ್ಷಿಣದ ನಾವು ಇಂದಿನ ಕಾಲಮಾನಕ್ಕಿಂತ ಎಷ್ಟೋ ಹಿಂದುಳಿದಿದ್ದೇವೆ."
ಮುಂದೆ ವಿವರಿಸುತ್ತಾ "ನೌಕರರ ವ್ಯಕ್ತಿಗತ ಪ್ರತಿಭೆಗಳನ್ನು ಗುರುತಿಸಿ, ಅವರನ್ನು
ಪ್ರೋತ್ಸಾಹಿಸಿ, ಅವರ ಪೂರ್ಣವಿಕಾಸಕ್ಕೆ ಮಾರ್ಗಮಾಡಿ ಕೊಡಬಲ್ಲ ಹೊಸಕ್ಷೇತ್ರಗ
ನಿರ್ಮಾಣವಾಗಬೇಕು ಎಂದೆ.

ಅಲ್ಲದೆ "ನಾನು ಅಂಥ ಒಂದು ವಿಭಾಗವನ್ನು ರಚಿಸಬೇಕೆಂದಿದ್ದೇನೆ. ಆದರೆ ನನ್ನ
ಅದಕ್ಕೆ ಬೇಕಾದ ಸಾಮರ್ಥ್ಯ, ಕೌಶಲಗಳಿಲ್ಲ. ನೀವು ನನ್ನನ್ನು ತರಬೇತಿಗಾಗಿ ಪುನ
ಶಾಲೆಗೆ ಕಳುಹಿಸಬಲ್ಲಿರಾ? ಎಂದೂ ಕೇಳಿಕೊಂಡೆ.

ಅಧ್ಯಕ್ಷರು ನನ್ನ ಅಭಿಪ್ರಾಯವನ್ನು ಮತ್ತು ವಿನಂತಿಯನ್ನು ಖಂಡಿತ ಅಂಗೀಕರಿಸ
ತ್ತಾರೆಂದು ನಂಬಿದ್ದೆ. ಹಾಗೆಯೇ ಅವರು ನನ್ನನ್ನು ತರಬೇತಿಗೆ ಕಳುಹಿಸಿದರು. ಪ್ರತಿಕೂ
ಸಂಭವಗಳಿಂದ ವಿವಶಳಾಗಿದ್ದೆ ಮಾತ್ರವಲ್ಲ ವೈಧವ್ಯವು ನನ್ನ ಚೈತನ್ಯವನ್ನೆಲ್ಲಾ ಉಡುಗಿ
ಬಿಟ್ಟಿತ್ತು. ಇಂಥ ಸಂದರ್ಭದಲ್ಲಿ ನನ್ನಲ್ಲಿ ಹೊಸತನವನ್ನೂ, ಬೆಳವಣಿಗೆಯನ್ನೂ ನೀ
ಪರಿಪೂರ್ಣತೆಯೆಡೆಗೆ ಕರೆದೊಯ್ದಿತು ನನ್ನ ವಿಧಿ.

ಕ್ರಮೇಣ ನನಗೆ ಈ ಜಗದ್ವ್ಯಾಪಾರದಲ್ಲಿ ತತ್ವವೊಂದು ಕಾರ್ಯಪ್ರವೃತ್ತ ವಾಗಿರುವುದು ಗೋಚರವಾಗ ತೊಡಗಿತು. ಪ್ರತಿಯೊಂದು ಸೋಲಿಗೂ, ಪ್ರತಿ ನಷ್ಟಕ್ಕೂ, ಆ ತತ್ವವು ನಮಗೆ ಪ್ರತಿಯಾಗಿ ಇನ್ನೊಂದು ಉಡುಗೊರೆಯನ್ನು ಕೊಟ್ಟೇ ಕೊಡುತ್ತದೆ —ಆದರೆ ನೀವು ಅದಕ್ಕಾಗಿ ಶೋಧನೆ ನಡೆಸಬೇಕು, ಆ ಕೊಡುಗೆಗೆ ಪಾತ್ರರಾಗಲು, ಅರ್ಹರಾಗಲು ದುಡಿಯಬೇಕು.

ನಾನೂ ಅದೇ ರೀತಿ ಶ್ರಮಿಸಿದೆ ಮತ್ತು ನಿಶ್ಚೈಸಿಕೊಂಡಂತೆ ಬ್ಯಾಂಕ್ ಉದ್ಯೋಗಿಗಳ ಮಂಡಲಿಯನ್ನು ಸ್ಥಾಪಿಸಿದೆ, ಹೌಸ್ಟನ್‌ನ ಅತಿ ಬೃಹತ್–ಬ್ಯಾಂಕಿನ ಸರ್ವಪ್ರಥಮ ಮಹಿಳಾ ಆಫೀಸರಳಾದೆ! ಮುಂದೆ ೧೯೭೭ರಲ್ಲಿ ನನ್ನ ಅರವತ್ತೊಂಬತ್ತನೇ ವಯಸ್ಸಿನಲ್ಲಿ ನಿವೃತ್ತಿಹೊಂದುವವರೆಗೆ ಅದೇ ಬ್ಯಾಂಕ್ ಉದ್ಯಮದಲ್ಲೇ ಉಳಿದೆ.

ಅಲ್ಲಿಂದ ಹೊರಬರುವುದು ಮಾತ್ರ ನನಗೆ ಅತಿ ಕಠಿಣವೆನಿಸಿತು, ನನ್ನ ದುಡಿಮೆಯ ಆವಶ್ಯಕತೆ ಇದ್ದರೂ ನಾನು ನಿವೃತ್ತಳಾಗಲೇ ಬೇಕಾಗಿತ್ತು.

ಆಗ ಇನ್ನೊಂದು ವಿಚಿತ್ರ ಸಂದರ್ಭ ಒದಗಿಬಂತು. ನಿವೃತ್ತಿಯ ಬಳಿಕ, ನನ್ನ ಗೆಳತಿಯೂ ನಾನು ಜತೆಗೂಡಿ ಲಂಡನ್ನಿಗೆ ಹೋದೆವು. ಒಂದು ಬೆಳಗ್ಗೆ ಸುತ್ತಾಡುತ್ತಾ ಸೆಯಿಂಟ್ ಪಾವುಲ್ ಕೆಥೀಡ್ರಲ್‌ಗೆ ಬಂದೆವು. ನಮ್ಮ ಮಾರ್ಗದರ್ಶಿ ಕೆಥಿಡ್ರಲ್‌ನ್ನು ತೋರಿಸುತ್ತಾ, ಅಲ್ಲೇ ಪಕ್ಕದಲ್ಲಿರುವ ಚರ್ಚೊಂದರ ಬಗ್ಗೆ ತಿಳಿಸಿದ. ವಿಶ್ವ ಸಮರದಲ್ಲಿ ಪ್ರಾಣ ಕಳೆದುಕೊಂಡ ಅಮೆರಿಕದ ಸೇವಾದಳದವರಿಗೇ ಮೀಸಲಾಗಿದ್ದ ಪುಟ್ಟಮಂದಿರವದು.

ಆ 'ಚಾಪೆಲ್'ನೊಳಗೆ ಒಂದು ಪುಸ್ತಕದಲ್ಲಿ ಬ್ರಿಟನ್ನಿಗಾಗಿ ಯುದ್ಧದಲ್ಲಿ ಮಡಿದವರ ಹೆಸರುಗಳನ್ನೆಲ್ಲಾ ಪಟ್ಟಿಮಾಡಿ ಬರೆದಿಡಲಾಗಿತ್ತು.

ಕಳೆದ ಮೂವತ್ತೈದು ವರ್ಷಗಳಲ್ಲಿ 'ಕೆನ್' ಸತ್ತಿರುವನೆಂದು ನಾನು ಪೂರ್ತಿ ನಂಬಿರಲಿಲ್ಲ. ಅವನು ಇಂಗ್ಲೆಂಡಿನಲ್ಲಿದ್ದಾಗ ನಾಪತ್ತೆಯಾಗಿದ್ದರಿಂದ ಅವನ ಹೆಸರು ಆ ಪುಸ್ತಕದಲ್ಲಿ ಇರಬಹುದೇನೋ ಎಂದು ನೋಡಲು ಆತುರಪಟ್ಟೆ.

ಪುಸ್ತಕದ ಹೊಣೆ ಹೊತ್ತ ಕಾರಕೂನ ನನ್ನನ್ನು ಎಚ್ಚರಿಸುತ್ತಾ ಹೇಳಿದ—ನಿಮ್ಮ ಗಂಡನ ಹೆಸರು ಇದರಲ್ಲಿಲ್ಲವಾದರೆ ಮುಂದೆ ಎಂದೆಂದಿಗೂ ಆತನ ಬಗ್ಗೆ ಏನೂ ಗೊತ್ತಾಗುವ ಸಾಧ್ಯತೆ ಇಲ್ಲ. ಅದು ಇನ್ನೂ ದುಃಖಕರ. ಆದ್ದರಿಂದ ಅದರ ಬಗ್ಗೆ ನೋಡದಿರುವುದೇ ವಾಸಿ—

ಆದರೆ ನನ್ನ ಸಂಕಲ್ಪವು ದೃಢವಾಗಿತ್ತು. ಆದ್ದರಿಂದ ಪುಸ್ತಕದೆಡೆಗೆ ನನ್ನನ್ನು ಕರೆದೊಯ್ದು ; ಕೆನ್ನನ ಹೆಸರಿರುವ ಪುಟಕ್ಕೆ ತಿರುವಿದ. ಇಂದಿಗೂ, ಆ ಪುಟ, ಆ ನಿಚ್ಚಳವಾದ ಅಕ್ಷರಗಳು ನನ್ನ ಕಣ್ಣಿಗೆ ಕಾಣುತ್ತಿವೆ.—ಗ್ರಿಯರ್ ಕೆ. ಎಸ್. ಸ್ಟಾಫ್ ಸರ್ಜೆಂಟ್, ಸಂಯುಕ್ತ ಅಮೆರಿಕದ ವಾಯುಸೇನೆ.

ಆ ಪುಸ್ತಕವನ್ನು ನೋಡಿ ನನಗೆ ಸಮಾಧಾನವಾಯಿತು. ಹೃದಯ ಸಬಲವಾಯಿತು. ವಾಸ್ತವತೆಯನ್ನು ಎದುರಿಸಿದ್ದೆ ನಾನು ಒಂದು ಹೊಸ ಶಕ್ತಿಯ ಸಂಚಾರವಾದಂತಾಯಿತು ನನ್ನಲ್ಲಿ. ಉಸಿರು ಕಟ್ಟಿದ ಆಸ್ಥಮಾ ರೋಗಿಗೆ ಎಡ್ರಿನಲಿನ್ ಇಂಜೆಕ್ಷನ್ ಚೈತನ್ಯವನ್ನು, ಜೀವನವನ್ನು ನೀಡುವಂತೆ—ಆ ಅಕ್ಷರಗಳು ನನ್ನ ಮನಸ್ಸಿಗೆ ಶಕ್ತಿ

ಪ್ರಧಾನ ಮಾಡಿದುವು. ಅವು ಈ ರೀತಿ ಹೇಳಿದಂತೆ ನನಗೆ ಕೇಳಿತು—ಧೈರ್ಯದಿಂದಿರು
ಮಹಾ ಶಕ್ತಿಗಳು ನಿನ್ನ ಸಹಾಯಕ್ಕೆ ಬರಲಿವೆ!

ನಾನು ಹೌಸ್ಟನ್‌ಗೆ ಹಿಂದಿರುಗಿದ ಮೇಲೆ ಗಣರಾಜ್ಯ ಬ್ಯಾಂಕಿನ ವ್ಯವಸ್ಥಾಪಕ
ಸಿಬ್ಬಂದಿ ವರ್ಗದಿಂದ ನನಗೊಂದು ದೂರವಾಣಿ ಕರೆ ಬಂತು.

"ಶ್ರೀಮತಿ ಗ್ರಿಯರ್, ನಮ್ಮ ವಿಶ್ವಸ್ಥ ವಾಣಿಜ್ಯ ಸಂಸ್ಥೆಯಲ್ಲಿ ಕೆಲಸ ಮಾಡಲು
ಒಬ್ಬ ವಿಶಿಷ್ಟ ವ್ಯಕ್ತಿಯ ಶೋಧನೆಯಲ್ಲಿ ನಾವಿದ್ದೇವೆ. ನಮಗೆ ಬೇಕಾದ ವ್ಯಕ್ತಿ–ವೃದ್ಧ
ಜತೆ ಸಂಪರ್ಕ ಸಾಧಿಸಬಲ್ಲ, ಮಾತಾಡಿ ಮನವೊಲಿಸಬಲ್ಲ—ಸಾಮರ್ಥ್ಯ ಹೊಂದಿರಬೇಕು.
ನೀವು ನಮ್ಮಲ್ಲಿಗೆ ಬರುವಿರಾ? ಆಶ್ಚರ್ಯ ಚಕಿತಳಾದರೂ ನಾನು ಒಪ್ಪಿಕೊಂಡೆ. ಆಗ
ನಾನು ಎಪ್ಪತ್ತು ವರ್ಷದವಳಾಗಿದ್ದೆ. ಅವರು ನನ್ನನ್ನೇ ಆಯ್ಕೆಮಾಡಿದ್ದರು—ನಾನು
ವಯೋವೃದ್ಧಳಾಗಿದ್ದೇನೆಂದು. ವಯಸ್ಸೇ ನನ್ನ ಮುಖ್ಯ ಅರ್ಹತೆಯಾಗಿತ್ತು
ಸಂಪತ್ತಾಗಿತ್ತು.

ನಾನು ಪುನಃ ಕೆಲಸಕ್ಕೆ ಹೋಗತೊಡಗಿದೆ. ದೂರದರ್ಶನದಲ್ಲಿ ವೃದ್ಧ ಗಿರಾಕಿಗಳ
ಗಾಗಿ ರಚಿತವಾದ ಪ್ರಕಟಣೆಗಳನ್ನು ನೀಡುವ ಪ್ರಭಾವಿ ವ್ಯಕ್ತಿಯಾಗಿ ಮೆರೆದೆ. ವಿಚಿತ್ರ
ವೆಂದರೆ ವೃದ್ಧರು ಮಾತ್ರವಲ್ಲ, ಎಲ್ಲಾ ವಯಸ್ಸಿನ ಜನರೂ ಉತ್ತಮ ಪ್ರತಿಕ್ರಿಯೆ
ತೋರಿಸಿದರು. ಈ ಎಪ್ಪತ್ತರ ಮೇಲಿನ ಮುದಿತನದಲ್ಲೂ ಗಣರಾಜ್ಯ ವಿಶ್ವಸ್ಥ ಬ್ಯಾಂಕಿನ
ಸಾರ್ವಕಾಲಿತ ಶ್ರೇಷ್ಠ ಕಾರ್ಯಕರ್ತೆಯೆಂದು ಸನ್ಮಾನಿತಳಾದೆ.

ನನ್ನ ವಿಷಯವೇನೋ ತೃಪ್ತಿಕರವಾಗಿ ಫಲ ನೀಡಿದೆ. ಆದರೆ ಈ ನನ್ನೆದುರು
ಕುಳಿತಿರುವ, ನನ್ನಿಂದ ಹತ್ತುವರ್ಷ ಕಿರಿಯಳಾದ ಈ ವಿಧವೆ ಬದಲಾಗುತ್ತಿರುವ ಈ
ಜಗತ್ತಿನ ಬಗ್ಗೆ ಭಯ, ಸಂಶಯ, ಮುಕ್ತಳಾಗಿ ಮನಬಿಚ್ಚಿ ಮಾತಾಡಿದಳಲ್ಲಾ, ಇದು
ಅತ್ಯಂತ ಮಹತ್ವವಾದುದು.

ಆಕೆಯನ್ನು ಬೀಳ್ಕೊಡುತ್ತಾ ಲಿಫ್ಟಿನವರೆಗೆ ನಡೆದು ಹೇಳಿದೆ—ನೋಡಿ! ನೀವು
ಬದಲಾವಣೆಯನ್ನು ಕಂಡು ಎಂದೂ ಭಯಪಡಬೇಕಾಗಿಲ್ಲ. ಏನನ್ನೋ ಕಳೆದು ಕೊಂಡೆ
ನೆಂದು ಚಿಂತಿಸುತ್ತಾ ತಲೆ ಕೆಡಿಸಿಕೊಳ್ಳುತ್ತಾ ಇರಬೇಡಿ. ಹೊಸತೇನು ದೊರಕಿದೆ?
ಯಾವ ಲಾಭ ನಿಮಗಾಗಿದೆ?—ಇದನ್ನು ನೋಡುತ್ತಿರಿ.

ನನ್ನ ಕಕ್ಷಿಗಾರಳು ಮೊದಲಿಗಿಂತ ಹಗುರ ಹೆಜ್ಜೆಗಳಿಂದ ನಡೆದು ಹೋಗುತ್ತಿರು
ವಂತೆ ಭಾಸವಾಯಿತು. ಬದಲಾದ ಜಗತ್ತಿನ ಜತೆ ಆಕೆ ಗೆಳೆತನ ಮಾಡಿಕೊಂಡರೆ—
ಸಂಧಾನ ಮಾಡಿಕೊಂಡರೆ—ಆಗ ಜೀವನವೆಲ್ಲ ಗೆಳೆತನದಿಂದ—ಹೊಂದಾಣಿಕೆಯಿಂದ
ಇರಬಹುದೆಂದು ಆಕೆಯೂ ಕಂಡುಕೊಂಡರೆ ನನಗೇನೂ ಆಶ್ಚರ್ಯವಾಗಲಿಕ್ಕಿಲ್ಲ.

ಅನು : ಸರಸ್ವತಿ ಬಡೆಕ್ಕಿಲ

ಶ್ರೀಸಾಮಾನ್ಯ ಉವಾಚ—ಸಂಜೆಗಣ್ಣಿನ ಹಿನ್ನೋಟ

ಪ್ರೊ॥ ಎ. ಎನ್. ಮೂರ್ತಿರಾವ್

ಮುಂದುವರಿದುದು

ಪರಿಸ್ಥಿತಿ ಹೀಗಿತ್ತು, ಶಿವರಾಮಯ್ಯ ಎಂಬವರು ತಮ್ಮ ಚಿಕ್ಕಪ್ಪ ಸೂರ್ಯನಾರಣಪ್ಪನವರೊಡನೆ ನಮ್ಮ ಮನೆಗೆ ಬಂದಾಗ. ಅವರ ಭೇಟಿಯ ಉದ್ದೇಶ: ಸೂರ್ಯನಾರಣಪ್ಪನವರ ಎರಡನೆಯ ಮಗಳನ್ನು ನನಗೆ ತಂದುಕೊಳ್ಳಲು ನನ್ನ ತಂದೆ ತಾಯಿಯರ ಒಪ್ಪಿಗೆಯನ್ನು—ಅದಕ್ಕಿಂತ ಹೆಚ್ಚಾಗಿ ನನ್ನ ಒಪ್ಪಿಗೆಯನ್ನು—ಪಡೆಯುವುದು. ಶಿವರಾಮಯ್ಯನವರು ಮೊಟ್ಟಮೊದಲು ಮೈಸೂರಿನಲ್ಲಿ ಅಕ್ಕಿ ಮಿಷನ್ನನ್ನು ಸ್ಥಾಪಿಸಿದವರು. ಎಲ್ಲರೂ ಅವರನ್ನು 'ಕಾವೇರಿ ರೈಸ್‌ಮಿಲ್ ಶಿವರಾಮಯ್ಯ' ಎಂದೇ ಕರೆಯುತ್ತಿದ್ದರು. ನಮಗೆ ಸುಗ್ಗಿಯಲ್ಲಿ ಬಂದ ಭತ್ತವನ್ನೆಲ್ಲ ಅವರ ಮಿಲ್ಲಿನಲ್ಲಿಟ್ಟು ತಿಂಗಳು ತಿಂಗಳಿಗೆ ಬೇಕಾದಷ್ಟು ಅಕ್ಕಿಯನ್ನು ತರಿಸಿಕೊಳ್ಳುವುದು, ಉಳಿದ ಭತ್ತವನ್ನು ಅವರಿಗೇ ಮಾರಿಬಿಡುವುದು—ಈ ಪರಿಪಾಠ ಬೆಳೆದಿತ್ತಾದ್ದರಿಂದ ಶಿವರಾಮಯ್ಯ ನಮಗೆ ವೈಯಕ್ತಿಕವಾಗಿ ನನಗೆ ಕೂಡ—ಪರಿಚಿತರು. ನಮ್ಮ ಮನೆಯವರೇ ಪಂಚಮುದಳದ ಕೆಲಸ ಮಾಡಿದ್ದರಿಂದಾಗಿ ನಾನು ಮೊಂಡ, ವಿತಂಡವಾದಿ ಎಂಬ ಖ್ಯಾತಿ ಶಿವರಾಮಯ್ಯನವರಿಗೆ ತಿಳಿದಿತ್ತು. ಅವರು ಪ್ರತಿವಾದವನ್ನು ಸಿದ್ಧಪಡಿಸಿಕೊಂಡೇ ಬಂದಿದ್ದರು.

"ಎಂ.ಎ. ಮಾಡಿ ಕೆಲಸಕ್ಕೆ ಸೇರುವವರೆಗೂ ಮದುವೆ ಬೇಡ ಎಂದು ತಾನೆ, ನಿಮ್ಮ ವಾದ? ಒಂದು ದೃಷ್ಟಿಯಿಂದ ಅದು ನ್ಯಾಯವೇ. ಆದರೆ ಹೆಣ್ಣುಮಕ್ಕಳಿಗೆ ೧೦–೧೧ ವರ್ಷದೊಳಗೆ ಮದುವೆ ಮಾಡಿಯೇ ತೀರಬೇಕಷ್ಟೆ. ಅದನ್ನು ಒಪ್ಪುತ್ತೀರಿ ತಾನೆ?"

ವೈಯಕ್ತಿವಾಗಿ ನಾನು ಅದನ್ನು ಒಪ್ಪುವವನಲ್ಲ. ಆದರೆ ಅಂದಿನ ಸಮಾಜದಲ್ಲಿ ಆ ವಿಷಯ ಚರ್ಚಾಸತರ್ಕದ್ದೇ ಅಲ್ಲ, ಬಾಯಿ

ಮುಚ್ಚಿಕೊಂಡು ಒಪ್ಪಬೇಕಾದದ್ದು. ನಾನು ಉತ್ತರ ಹೇಳಿದೆ: "ಅವರು ಮದುವೆ ಮಾಡಲಿ, ನಾನು ಬೇಡ ಅಂದೆನೆ? ನಾನು ಮದುವೆ ಮಾಡಿಕೊಳ್ಳುವುದಿಲ್ಲ ಅಂದೆ, ಅಷ್ಟೆ."

"ಸರಿಯೆ, ಆದರೆ ನೀವು ಎಂ.ಎ. ಮಾಡುವ ಹೊತ್ತಿಗೆ ನಿಮಗೆ ೨೪ ವರ್ಷವಾಗಿರುತ್ತೆ. ಆಗ ನೀವು ಮದುವೆಯಾದರೆ ೧೮–೨೦ ವರ್ಷದ ಹುಡುಗಿಯನ್ನು ಮದುವೆಯಾಗಬೇಕು. ಆ ವಯಸ್ಸಾಗುವವರೆಗೆ ಯಾರಾದರೂ ಹೆಣ್ಣಿಗೆ ಮದುವೆ ಮಾಡದೆ ಕೂರಿಸಿಕೊಂಡಿರುತ್ತಾರೆಯೆ? ೧೦–೧೧ ವರ್ಷದ ಹುಡುಗಿಯನ್ನು ಇಪ್ಪತ್ತ ನಾಲ್ಕರ ಗಂಡಿಗೆ ಕೊಡಲು ಯಾರು ಒಪ್ಪುತ್ತಾರೆ?"

"ಒಪ್ಪದಿದ್ದರೆ ಬೇಡ!"—ನನ್ನ ಉತ್ತರವೇನೊ "ಒಪ್ಪದಿದ್ದರೆ ಕೆಟ್ಟರು! I don't care !" ಎಂಬ ದನಿಯಲ್ಲೇ ಬಂತು. ಆದರೆ ನನ್ನ ಮನಸ್ಸಿಗೆ ಶಿವರಾಮಯ್ಯನವರ ಮಾತು ತರ್ಕಬದ್ಧವಾದದ್ದು ಎನ್ನಿಸಿತು. ಹೆಣ್ಣಿಗೆ ಯಾವ ವಯಸ್ಸಿನಲ್ಲಿ ಮದುವೆ ಮಾಡುತ್ತಾರೆ ಎನ್ನುವುದು ಗಂಡಿನ ಮದುವೆಯ ವಯಸ್ಸನ್ನೂ ನಿರ್ಣಯಿಸುತ್ತದೆ. ಇದು ನನಗೆ ಹೊಳೆದೇ ಇರಲಿಲ್ಲ.

ಶಿವರಾಮಯ್ಯ ಸ್ವಲ್ಪ ಹಾಸ್ಯಪ್ರಕೃತಿಯವರು; ಪರಿಚಯವಿದ್ದದ್ದರಿಂದ ಸಲಿಗೆ ವಹಿಸಿ ಮಾತಾಡುವುದೂ ಅವರಿಗೆ ಸಾಧ್ಯವಾಗಿತ್ತು: "ಹಾಗಾದರೆ ಸನ್ಯಾಸ ತಗೊಳ್ಳಬೇಕು ಅಂತಿದೀರಿ? ಹೇಳಿ. ಒಂದು ಮಠ ಹುಡುಕೋಣಂತೆ. ಶೃಂಗೇರಿಯಲ್ಲದಿದ್ದರೆ ಕೂಡಲಿ ಇದೆ, ಕೂಡಲಿಯಲ್ಲದಿದ್ದರೆ ಶಿವಗಂಗೆ ಇದೆ. ನಿಮ್ಮ ತಂದೆಗೆ ಇನ್ನೂ ನಾಲ್ಕು ಜನ ಗಂಡುಮಕ್ಕಳಿದಾರೆ, ವಂಶ ಬೆಳೆಯುತ್ತೆ."

ಸೂರ್ಯನಾರಣಪ್ಪನವರು ನಡುವಣಮಾರ್ಗವೊಂದನ್ನು ಸೂಚಿಸಿದರು: "ಗಂಡು, ಹೆಣ್ಣು, ಒಬ್ಬರನ್ನೊಬ್ಬರು ನೋಡಲಿ. ಒಪ್ಪಿಗೆಯಾದರೆ ಮದುವೆ ಒಂದು ವರ್ಷ ತಡೆದೇ ಮಾಡೋಣ."

ಈ ಘಟ್ಟದಲ್ಲಿ (ನಾಟಕಕಾರರು ಹೇಳುವಂತೆ) ಪ್ರವೇಶ: ನನ್ನ ಗುರುಹಿರಿಯರು ಸರಿ, "ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡುವುದು ಗೊಡ್ಡು ವೈದಿಕ ಪದ್ಧತಿ, ಸಮಾಜಕ್ಕೆ ಹಾನಿಕರ" ಎಂದು ಚರ್ಚಾಕೂಟಗಳಲ್ಲೂ ಮನೆಯಲ್ಲೂ ಬಡಬಡಿಸುತ್ತಿದ್ದ ಸಮಾಜ ಸುಧಾಕರ, ಇನ್ನೂ ೧೯ ತುಂಬಿಲ್ಲದ ಬಚ್ಚ—ಒಲ್ಲದ ಮನಸ್ಸಿನಿಂದ (ಅಥವಾ ಒಲ್ಲದ ಮನಸ್ಸು ಎಂದುಕೊಂಡದ್ದು ಆತ್ಮವಂಚನೆಯೊ?) ವಧು ಸಂದರ್ಶನಕ್ಕೆಂದು ಕೋಲಾರಕ್ಕೆ ಹೊರಟ—೧೯೧೯ರ ಬೇಸಗೆ ರಜದಲ್ಲಿ. ಸೂರ್ಯನಾರಣಪ್ಪನವರು ಕೋಲಾರದಲ್ಲಿ 'ಡಿಸ್ಟ್ರಿಕ್ಟ್ ಟ್ರೆಸರರ್' (District Treasurer) ಕೆಲಸದಲ್ಲಿದ್ದರು.

ಮದುವೆಯಾಗುವುದಿಲ್ಲ ಎಂದು ನಿಶ್ಚಯಿಸಿದ್ದೆನಾದರೂ ಮದುವೆಯ ವಿಷಯ ನನ್ನ ಮನಸ್ಸಿನಲ್ಲಿ ಸುಳಿದಾಡಿತ್ತು. ನನ್ನ ಹೆಂಡತಿಯಾಗುವವಳು ಹೀಗಿರಬೇಕು, ಹಾಗಿರಬೇಕು, ಮಡಿಮೈಲಿಗೆ ಆಚರಿಸುವ ಹಳ್ಳಿಯ ಗೊಡ್ಡಾಗಬಾರದು, ದನಿ ಚೆನ್ನಾಗಿರಬೇಕು, ಸಂಗೀತದಲ್ಲಿ ಆಸಕ್ತಿಯಿರಬೇಕು, ಇತ್ಯಾದಿ ಇತ್ಯಾದಿ—ವಧುಪರೀಕ್ಷೆಗೊಂದು ಒರೆಗಲ್ಲು ಸಿದ್ಧವಾಗಿತ್ತು.

ನನ್ನೊಡನೆ ತಂದೆತಾಯಿಯರು ಬರಲಿಲ್ಲ. "ಈ ಎಬ್ಬಂಕನ ಜೊತೆ ಹೋದರೆ ನನಗೆ ಮಾನ ಉಳಿಯುವುದಿಲ್ಲ" ಎಂದುಕೊಂಡರೋ ಏನೊ. ನನ್ನ ತಾಯಿಯ ಚಿಕ್ಕಪ್ಪ

ಮಗ ರಂಗಸ್ವಾಮಿ(ರಂಗು)ಯನ್ನು ಜೊತೆಮಾಡಿ ನನ್ನನ್ನು ಕಳಿಸಿದರು. ರಂಗು ನನಗಿಂತ ನಾಲ್ಕೈದು ವರ್ಷ ದೊಡ್ಡವನು; ಅವನಿಗೆ ಶಿವರಾಮಯ್ಯನವರ ಅಕ್ಕನ ಮಗಳನ್ನು ಕೊಟ್ಟು ಮದುವೆಯಾಗಿತ್ತು. ಅಂದ ಮೇಲೆ ಅವನೂ ಪಂಚಮದಳದವನೇ! ಕೋಲಾರದಲ್ಲಿ ನಮಗೆ, ಮುಖ್ಯವಾಗಿ 'ಲಕ್ಷ್ಮೀನಾರಾಯಣಸ್ವರೂಪವರ' (!!) ನಾದ ನನಗೆ, ಅತ್ಯಂತ ಆದರದ ಸ್ವಾಗತ. ಸೂರ್ಯನಾರಣಪ್ಪನವರದ್ದು ಬಹಳ ಸರಳ ಸ್ವಭಾವ. ಅವತ್ತು ಔತಣದ ಊಟ. ಮಧ್ಯಾಹ್ನ ನಾಲ್ಕು ಘಂಟೆಯ ಹೊತ್ತಿಗೆ ಹಜಾರದಲ್ಲಿ ಪುಟ್ಟದೊಂದು ಸಭೆ ಏರ್ಪಟ್ಟಿತು—ನನ್ನ ಭಾವೀ ಅತ್ತೆಮಾವಂದಿರು, ಮೂರು ಮತ್ತು ಆರು ವರ್ಷದ ಇಬ್ಬರು ಪುಟ್ಟ ಹುಡುಗಿಯರು, ಹಾರ್ಮೋನಿಯಂ ಇಟ್ಟುಕೊಂಡು ಕುಳಿತಿದ್ದ ಮಧ್ಯವಯಸ್ಸಿನವರೊಬ್ಬರು—ಅವರು ವೀಣೆ ಮೇಷ್ಟರು. ಎಲ್ಲ ಸಜ್ಜಾದ ಮೇಲೆ ಇಬ್ಬರು ಹುಡುಗಿಯರು—ಈಗಿನ ಕಾಲವಾಗಿದ್ದರೆ ಅವರನ್ನು ಮಕ್ಕಳೆಂದೇ ಕರೆಯುತ್ತಿದ್ದೆವು—ಗಂಭೀರವಾಗಿ ದಯಮಾಡಿಸಿದರು. ಅವರಲ್ಲಿ ಒಬ್ಬಳು ಅದುವರೆಗೂ ನನ್ನ ಅನ್ವೇಷಣೆಯ ದೃಷ್ಟಿಗೆ ಸಿಕ್ಕದಿದ್ದ ಜಯಲಕ್ಷ್ಮಿಯಿರಬೇಕು. ಇಬ್ಬರದ್ದೂ ಹೆಚ್ಚು ಕಡಮೆ ಒಂದೇ ಎತ್ತರ ('ಎತ್ತರ' ಎಂಬ ಪದ ಆ ಸಂದರ್ಭದಲ್ಲಿ ಉಚಿತ ವಲ್ಲ ಎಂದೇ ಹೇಳಬಹುದು!); ಇಬ್ಬರೂ ಜರಿ ಅಂಚಿನ ಧರ್ಮಾವರದ ಸೀರೆ ಉಟ್ಟಿದ್ದರು. ಸೂರ್ಯನಾರಣಪ್ಪ "ಯಾವುದಾದರೂ ಎರಡು ಹಾಡು ಹೇಳಿರಮ್ಮ" ಎಂದರು.

ಇದು ಹೆಣ್ಣುನೋಡಲು ಹೋಗುವವರೆಲ್ಲರ ಅನುಭವ, ನನಗೆ ಮಾತ್ರ ಹೊಸದು. ಅಂದು ನಮಗೆ ನೀಡಿದ್ದ ಆದರದ ಸ್ವಾಗತ, ಔತಣದ ಊಟ, ಮನೆಯವರೆಲ್ಲರ ಸೌಜನ್ಯ—ಇವೆಲ್ಲ ನನ್ನನ್ನು ಆಗಲೇ ಪಳಗಿಸಿದ್ದವು. ನನಗೆ ಮುಜಗರವೋ ಮುಜಗರ. ನಾನು ಇನ್ನೂ ಕಾಲೇಜು ಮೆಟ್ಟಿಲನ್ನು ತುಳಿಯದ ಹುಡುಗ; ನನ್ನನ್ನು ಯಾರೂ ಅಷ್ಟೊಂದು ಗೌರವದಿಂದ ಉಪಚರಿಸಿರಲಿಲ್ಲ. ನಾನು ವಧುವನ್ನು ಪರೀಕ್ಷಿಸಿ ತೀರ್ಪು ಕೊಡಬೇಕಂತೆ; ಅವಳ ರೂಪಲಾವಣ್ಯಗಳನ್ನು ತೂಗಿ ನೋಡಿ "ಹೂಂ, ಪರವಾಯಿಲ್ಲ, ನನ್ನ ನಿರೀಕ್ಷೆಯ ಮಟ್ಟಕ್ಕೆ ಏರುತ್ತಾಳೆ, ಈ ಹುಡುಗಿ" ಎಂದು ಶ್ರೀಮದನುಗ್ರಹದ ದನಿಯಲ್ಲಿ ಹೇಳಬೇಕು! ಈ ಪಾತ್ರವನ್ನು ನಿರ್ವಹಿಸುವ ಯೋಗ್ಯತೆ ನನಗಿಲ್ಲ ಎಂಬ ಶಂಕೆ ನನ್ನನ್ನು ಕಾಡುತ್ತಿತ್ತು. ಮನೆಯವರೊಡನೆ ಚರ್ಚೆಯೆದ್ದಾಗ ನನ್ನಲ್ಲಿ 'ಅಹಂ' ಬೇಕಾದಷ್ಟು ಕಾಣುತ್ತಿದ್ದಿರಬಹುದು. ಉಳಿದಂತೆ ನನ್ನದು ಬಹಳ ಸಂಕೋಚದ ಪ್ರಕೃತಿ. ಕೈಲಾಸಂರವರ ರಾಮಣ್ಣ 'ಹೋಂ ರೂಲ್‌ನಲ್ಲಿ' ಮೈದಾನದ ಹೆಬ್ಬುಲಿ ಮನೆಯ ಮೂಗಿಲಿಯಾದರೆ ನಾನು ತದ್ವಿರುದ್ಧ—ಮನೆಯಲ್ಲಿ ಹೆಬ್ಬುಲಿ ಮೈದಾನದಲ್ಲಿ ಮೂಗಿಲಿ!

ಯಾರ ಮನೆಯದೋ ಹುಡುಗಿಯನ್ನು ಒರೆಗಲ್ಲಿಗೆ ಹಚ್ಚುವವನಂತೆ ದಿಟ್ಟಿಸಿ ನೋಡುವುದು ಹೇಗೆ? ಅದು ಅಸಭ್ಯತನ. ಇನ್ನೊಂದು ಕಷ್ಟ: ಈ ಇಬ್ಬರು ಹುಡುಗಿಯರಲ್ಲಿ ಮದುವಣಗಿತ್ತಿಯಾಗುವವಳು ಯಾರು? ಅವರಲ್ಲಿ ಒಬ್ಬಳಿಗೆ ಬಹುಶಃ ಆಗಲೇ ಮದುವೆಯಾಗಿರಬೇಕು; ಅವಳು ತನ್ನ ತಂಗಿಗೆ ಧೈರ್ಯಕೊಡಲು ಜೊತೆಗೆ ಬಂದಿದ್ದಾಳೆ. ಅವಳನ್ನು ದಿಟ್ಟಿಸಿ ನೋಡುವುದು ಸರಿಯಲ್ಲ. ಇನ್ನೊಬ್ಬಳನ್ನು ನೋಡ

ಬೇಕು—ಅದಕ್ಕೇ ನಾನು ಕೋಲಾರಕ್ಕೆ ಬಂದಿರುವುದು, ಆದರೆ—ಆ 'ಇನ್ನೊಬ್ಬಳು' ಯಾರು? ಸಾಮಾನ್ಯವಾಗಿ ಹೆಣ್ಣಿನ ತಂದೆ ಮದುವೆಯಾಗಬೇಕಾದವಳಿಗೆ "ಅವರಿಗೆ ನಮಸ್ಕಾರ ಮಾಡಮ್ಮ" ಎಂದು ಹೇಳುವ ಪದ್ಧತಿ. ಅವತ್ತು ಏಕೋ ಆ ಕ್ರಮವನ್ನು ಅನುಸರಿಸಲಿಲ್ಲ. ಅದನ್ನು ನಾನು ವಿರೋಧಿಸುವವನೂ ಹೌದು. ಮದುವೆಗೆ ಒಪ್ಪುತ್ತಾರೋ ಬಿಡುತ್ತಾರೋ—ನೋಡಬಂದವರಿಗೆಲ್ಲ ಆ ಬಡಪಾಯಿ ಹುಡುಗಿ ಏಕೆ ನಮಸ್ಕಾರ ಮಾಡಬೇಕು? ಇವೆಲ್ಲ ಯೋಚನೆಗಳ ಗೊಂದಲದಲ್ಲಿ ನಾನು ಕತ್ತೆತ್ತಿ ನೋಡಲೇ ಇಲ್ಲ. ಅವರಿಬ್ಬರಿಗೂ ಕಣ್ಣು ಕೈಕಾಲು ನೆಟ್ಟಗಿದ್ದಿರಬೇಕು—ಅವರು ತಡವರಿಸದೆ ಎಡವದೆ ಬಂದು ಕೂತದ್ದನ್ನು ನೋಡಿದರೆ. ಒಬ್ಬಳು ಇನ್ನೊಬ್ಬಳಿಗಿಂತ ಸ್ವಲ್ಪ ಬೆಳ್ಳಗಿದ್ದಳು. ಅಷ್ಟೇ ನನಗೆ ಗೊತ್ತಾದದ್ದು.

ಇಬ್ಬರೂ ಹಾರ್ಮೋನಿಯಂ ಶ್ರುತಿಗೆ ಹಾಡಲಾರಂಭಿಸಿದರು. ಒಬ್ಬಳ ದನಿ ಇನ್ನೊಬ್ಬಳದ್ದಕ್ಕಿಂತ ಸ್ವಲ್ಪ ಹೆಚ್ಚು ಮಧುರ. ಅದೊಂದನ್ನು ಗಮನಿಸಿದೆ. ಅವರು ಎರಡು ತ್ಯಾಗರಾಜ ಕೃತಿಗಳನ್ನು ಹಾಡಿದರು. ಮೋಹನರಾಗದ 'ಭವನುತ ನಾ ಹೃದಯಮುನ' ಮತ್ತು ಹರಿಕಾಂಭೋಜಿಯ 'ಉಂಡೇದಿ ರಾಮುಡೊಕ್ಕಡು'. ಎರಡೂ ಆ ವೇಳೆಗೆ ನನಗೆ ಪರಿಚಿತವಾಗಿದ್ದವು. 'ನನು ಪಾಲಿಂಪ', 'ಮೋಹನರಾಮ', 'ಎವರುರ ನಿನುವಿನಾ', ಇವೆಲ್ಲ 'ಭವನುತ'ವನ್ನು ಹಿಂದೂಡಿವೆ. ಆದರೂ ಅದು ತರುವ ನೆನಪಿನಿಂದಾಗಿ ಆ ಕೃತಿ ನನಗೆ ಪ್ರಿಯವಾಗಿ ಉಳಿದಿದೆ. ಹರಿಕಾಂಭೋಜಿಯ ಕೃತಿಯೂ (ಉಂಡೇದಿ ರಾಮುಡೊಕ್ಕಡು) ಈಗ ಅಷ್ಟಾಗಿ ಕೇಳಿಬರುತ್ತಿಲ್ಲ; ಕೇಳಿಬರಲೆಂಬ ಆಸೆ ನನ್ನನ್ನು ಬಾಧಿಸುತ್ತಲೂ ಇಲ್ಲ. 'ಡ' ಕಾರ ಪ್ರಧಾನವಾದ ಕರ್ಕಶ ಪಲ್ಲವಿಯನ್ನುಳ್ಳ ಆ ಕೃತಿಯನ್ನು ತ್ಯಾಗರಾಜರು ಏಕೆ ರಚಿಸಿದರೋ ಕಾಣೆ" ಎಂದುಕೊಂಡಿದ್ದೆ. ಆದರೆ ಅವರು ಅದೇ ರಾಗದ 'ದಿನಮಣಿ ವಂಶ'ವನ್ನೂ ರಚಿಸಿದ್ದಾರೆಂಬುದನ್ನು ನೆನೆದು ಉದಾರಬುದ್ಧಿಯಿಂದ ಅವರಿಗೆ ಕ್ಷಮೆಯನ್ನು ಕರುಣಿಸಿದ್ದೂ ಆಗಿತ್ತು.

ಹುಡುಗಿಯರು ತಮ್ಮ ಮಿತಿಯಲ್ಲಿ ಚೆನ್ನಾಗಿಯೇ ಹಾಡಿದರು. ಹಾಡಿದ್ದರಲ್ಲಿ ಒಂದು ಅಂಶ ಚೆನ್ನಾಗಿ ನೆನಪಿನಲ್ಲಿ ನಿಂತಿದೆ. ಹರಿಕಾಂಭೋಜಿರಾಗದ ಕೃತಿಯು 'ಚಂಡಮಾರ್ತಾಂಡ ಮಧ್ಯ' ಎಂಬ ಚರಣಕ್ಕೆ ಬಂದಾಗ ಕೃತಿಕಾರನ ಪದಗಳ ಜೊತೆಗೆ ಒಂದು 'ರೀ' ಕಾರವನ್ನು ತಂದು ಗಂಟುಹಾಕಿದರು: 'ಚಂಡಮಾರ್ತಾಂಡ ಮಧ್ಯ ರೀ'; ಅದು ಮತ್ತೆ ಕೊನೆಯ ಚರಣದಲ್ಲೂ ಬಂತು. 'ಕ್ಷೇಮ ಕರುಡು ತ್ಯಾಗರಾಜ ರೀ'. ಈ 'ರೀ' ಸೊಂಕು ಮೈಸೂರಿನ ಸಂಗೀತ ಮೇಷ್ಟರುಗಳಲ್ಲಿ ಸಾಂಕ್ರಾಮಿಕವಾಗಿದ್ದು ಅವರ ಶಿಷ್ಯ ಶಿಷ್ಯೆಯರಿಗೂ ತಗಲಿತ್ತು: 'ಪೊಡವೀ ತನಯಾ ರೀ', 'ಅಜಪುರಂದರಾದುಲಕು ರೀ', 'ಭಾಮಾ ಮರುಮಂಪು ಮುಲಕ ರೀ', ಇತ್ಯಾದಿ. ಕೋಲಾರದಲ್ಲೂ ಇದು ಕಿವಿಗೆ ಬಿದ್ದಾಗ ಬೇಸರದಿಂದ "ಇಲ್ಲಿಗೂ ಬಂದೆಯ ಜಡೆಶಂಕರ!" ಎಂದುಕೊಂಡೆ. 'ರೀ' ಇದ್ದರೆ ಸ್ವರವನ್ನು ದೀರ್ಘವಾಗಿ ಎಳೆಯಬಹುದು ಎಂದಿರಬಹುದು, ಅದನ್ನು ತರುವುದಕ್ಕೆ ಕಾರಣ.

ಕಾರಣ ಏನಾದರೂ ಆಗಲಿ. ಐದಾರು ವರ್ಷ ಕಳೆದ ಮೇಲೆ ಜಯಲಕ್ಷ್ಮಿಯನ್ನು ರೇಗಿಸುವುದಕ್ಕೆ ಅದು ಸೊಗಸಾದ ಸಾಧನವಾಯಿತು. "ಕಾಫಿಗೇ‌ೕೕ ಸಕ್ಕ

ಸಾಲ್ದು ರೀ, ಇಇಈ ಇಇಈ ಇಇಇಇ ಇಇ, ಕಾಫಿಗೇ...." ಎಂದು ಸಂಗತಿಗಳನ್ನು ಹಾಕಿಕೊಂಡು ಹಾಡಿ, ವೀಣೆಯ ಮೆಟ್ಟಿಲುಗಳಲ್ಲಿ ತಂತಿಯನ್ನು ಮೀಟಿ ಭಾವಗಳನ್ನು ಅಳವಡಿಸುವಂತೆ ನನ್ನ ಅಣಕದ ಹಾಡಿನಿಂದ ಅವಳಲ್ಲಿ ಕ್ರಮವಾಗಿ ನಗು, ಬಿಗುಮಾನ, ಮುನಿಸು, ಕೋಪ, ರೋಷ—ಇವೆಲ್ಲ ಭಾವಗಳನ್ನೂ ಕೆರಳಿಸಿ ಕೃತಕೃತ್ಯನಾದೆ. 'ರೀ' ರೋಗಕ್ಕೆ ಯಶಸ್ವಿಯಾಗಿ ಚಿಕಿತ್ಸೆ ಮಾಡಿದೆ.

ಸಂಗೀತ ಮುಗಿದ ಮೇಲೆ ಬಂತು, "ಅವರಿಗೆ ನಮಸ್ಕಾರ ಮಾಡಮ್ಮ, ಜಯ" ಎಂಬ ಆದೇಶ. ಎದ್ದು ಬಂದವಳು ಬೆಳ್ಳಗಿದ್ದ ಹುಡುಗಿಯೇ, ದನಿ ಮಧುರವಾಗಿದ್ದ ಹುಡುಗಿಯೇ—ಅಷ್ಟು ಮಾತ್ರ ಸ್ಪಷ್ಟವಾಯಿತು. ಅವಳ ನಮಸ್ಕಾರಕ್ಕೆ ನನ್ನಿಂದ ಬರಬೇಕಾದ ಪ್ರತಿಕ್ರಿಯೆ ಏನಾದರೂ ಉಂಟೆ? ಉಂಟಾದರೆ ಅದು ಎಂಥ ಪ್ರತಿಕ್ರಿಯೆ? ನನಗೆ ಆಶೀರ್ವಾದ ಮಾಡುವ ವಯಸ್ಸಲ್ಲ, ಅಲ್ಲದೆ ಅದು ತೋರಲೂ ಇಲ್ಲ. ನನ್ನ ಯೋಚನೆ ಮುಗಿಯುವುದರೊಳಗೆ ಕತ್ತು ಬಗ್ಗಿಸಿಕೊಂಡು ಬಂದಿದ್ದ ಆ ಹುಡುಗಿ ಕತ್ತು ಬಗ್ಗಿಸಿಕೊಂಡು ಹೊರಟೇಹೋಗಿದ್ದಳು! ಕೊನೆಗೂ ಹುಡುಗಿಯ ಮುಖವನ್ನು ನೋಡಲೇ ಇಲ್ಲ. ಐದು ನಿಮಿಷಗಳ ನಂತರ ಅವಳು ಬೀದಿಯಲ್ಲಿ ಸಿಕ್ಕಿದ್ದರೆ ಅವಳನ್ನು ನಾನು ಗುರುತಿಸಲಾಗುತ್ತಿರಲಿಲ್ಲ. ಅವಳ ಮುಖ ನೋಡದೆಯೇ ಮದುವೆಗೆ ಒಪ್ಪಿಕೊಂಡೆ—ಸತ್ಯವಾಗಿಯೂ! ಕಾರಣ: ಅವಳ ತಂದೆ ನಮ್ಮ ಮನೆಗೆ ಬಂದಿದ್ದಾಗ ಎಲ್ಲರನ್ನೂ ಅಷ್ಟು ಗೌರವದಿಂದ ಕಂಡಿದ್ದರು, ನನ್ನನ್ನು ಅಷ್ಟೊಂದು ಆದರದಿಂದ ಬರಮಾಡಿಕೊಂಡು, ಔತಣದ ಅಡಿಗೆ ಮಾಡಿಸಿ, ಅಷ್ಟೊಂದು ಉಪಚಾರ ಮಾಡಿದ್ದಾರೆ! 'ಬೇಡ' ಎನ್ನುವುದು, 'ನನಗೆ ಒಪ್ಪಿಗೆಯಿಲ್ಲ' ಎನ್ನುವುದು—ತೀರ ಸಣ್ಣತನ ಎನ್ನಿಸಿತು. ಇದನ್ನೆಲ್ಲ ಕಾಣಿಸಿರುವುದು ನನ್ನ ನಡತೆ ಅನುಕರಣೀಯ ಎಂಬ ಭಾವನೆಯಿಂದಲ್ಲ. ಅಂದು ನನ್ನ ನಡತೆ ಶುದ್ಧ ಮಖೇಡಿತನ; ಆತ್ಮವಂತಿಕೆ ಏನೇನೂ ಇಲ್ಲದವನ ನಡತೆ. ಹುಡುಗಿಯ ಮುಖ ನೋಡುವ ಧೈರ್ಯವಿಲ್ಲದವನು ನೋಡುವುದಕ್ಕೇಕೆ ಹೋಗಬೇಕಾಗಿತ್ತು!

ಪ್ರತಿಯೊಬ್ಬ ಮನುಷ್ಯನ ಹಿತವನ್ನೂ ನೋಡಿಕೊಳ್ಳುವುದಕ್ಕೆ ಒಬ್ಬೊಬ್ಬ ರಕ್ಷಕ ದೇವತೆ—ಗಾರ್ಡಿಯನ್ ಏಂಜಲ್ (guardian angel) ಇರುತ್ತಾನೆಂಬ ನಂಬಿಕೆ ಪಾಶ್ಚಾತ್ಯರಲ್ಲಿದೆಯಂತೆ. ನನಗೂ ಒಬ್ಬ ಗಾರ್ಡಿಯನ್ ಏಂಜಲ್ ಇದ್ದು ಅಂದು ನನ್ನ ಹಿತಕ್ಕಾಗಿ ಪ್ರೇರಿಸಿದನೇನೊ. ೧೦–೧೫ ವರ್ಷಗಳು ಕಳೆದ ಮೇಲೆ ಯಾವುದೋ ಒಂದು ದಿನ "ನಾನೇನು ನಿನ್ನ ಮುದ್ದು ಮುಖಕ್ಕೆ ಮರುಳಾಗಿ ಮದುವೆಯಾಗಲಿಲ್ಲ. ಯಾಕೆ ಒಪ್ಪಿಕೊಂಡೆನೋ ಕಾಣೆ" ಎಂದು ಕೀಟಲೆ ಮಾಡಿದಾಗ ಜಯಲಕ್ಷ್ಮಿ ನಕ್ಕು ಹೇಳಿದಳು: "ನಿಮ್ಮ ಅದೃಷ್ಟ ಚೆನ್ನಾಗಿತ್ತು, ಒಪ್ಪಿಕೊಂಡಿರಿ!"

ಹಾಸ್ಯಕ್ಕೆ ಆಡಿದ ಮಾತು; ಆದರೆ ನಿಜ. ನನ್ನ ಅದೃಷ್ಟ ಚೆನ್ನಾಗಿತ್ತು.

ನನ್ನ ಮಾವನವರು "ಬೇಕಾದರೆ ಒಂದು ವರ್ಷ ತಡೆದೇ ಮದುವೆ ಮಾಡೋಣ" ಎಂದು ಹೇಳಿದ್ದದ್ದು ಕೇವಲ ನನ್ನ ಥಿಯರಿಗೆ ಬೆಲೆ ಕೊಟ್ಟಂತಾಗಲೆಂದು ಆಡಿದ ಮಾತು. ವಾಸ್ತವವಾಗಿ ಮದುವೆ ಆ ಬೇಸಗೆಯಲ್ಲೇ ನಡೆಯಿತು. ನಾನು ಮದುವೆಗೆ ಒಪ್ಪಿದ್ದು ನನ್ನ ಥಿಯರಿಗಳಿಗೆ ವಿರುದ್ಧವಾಗಿ. ಮದುವೆ ನಡೆದ ರೀತಿಯೂ ನನ್ನ ಥಿಯರಿಗಳಿಗೆ

ವಿರುದ್ಧವಾದದ್ದೇ. ಅದಕ್ಕೆ ಕಾರಣ ನಾನೂ ಅಲ್ಲ, ನನ್ನ ಮನೆಯವರೂ ಅಲ್ಲ. ನನ್ನ ಮಾವನವರು "ಮದುವೆಯನ್ನು ಹೇಗೆ...." ಎಂದು ಹಿಂಜರಿಕೆಯಿಂದ ಮಾತನ್ನು ಆರಂಭಿಸಿದಾಗ ನನ್ನ ತಂದೆ "ನಿಮಗೆ ಹೇಗೆ ತೋರಿದರೆ ಹಾಗೆ, ಹೇಗೆ ಅನುಕೂಲವಾದರೆ ಹಾಗೆ" ಎಂದು ಒಂದೇ ಮಾತಿನಲ್ಲಿ ಆ ಪ್ರಸಂಗವನ್ನು ಮುಗಿಸಿಬಿಟ್ಟರು. ನನ್ನ ಮಾವನವರ ಮನಸ್ಸಿನಲ್ಲಿದ್ದದ್ದು ವರದಕ್ಷಿಣೆಯ ಮಾತಲ್ಲ, ಹೊಯ್ಸಳಕರ್ಣಾಟಕರಲ್ಲಿ ವರದಕ್ಷಿಣೆ ಕೇಳುವ, ಕೊಡುವ ಪದ್ಧತಿ ಯಾವಾಗಲೂ ಇರಲಿಲ್ಲ. ಹೆಣ್ಣಿನ ತಂದೆ ತಾವಾಗಿಯೇ ಕೊಡಲು ಮುಂದೆ ಬಂದರೂ ಅದನ್ನು ತೆಗೆದುಕೊಳ್ಳುವುದು ಮಾನಕ್ಕೆ ಕಡಮೆ ಎಂಬ ಭಾವನೆಯಿತ್ತು; ಈಗಲೂ ಇದೆ. ಅಪರೂಪಕ್ಕೆ ಎಲ್ಲಾದರೂ ಒಂದು ವಿನಾಯಿತಿ ಇರಬಹುದೇನೊ—ಇದ್ದರೆ ಅದು ನನಗೆ ತಿಳಿಯದ ವಿಷಯ. ವರೋಪಚಾರದ ಮಾತೂ ಇರಲಿಲ್ಲವೆಂದು ಅಷ್ಟು ಖಚಿತವಾಗಿ ಹೇಳಲಾರೆ. ನಮ್ಮ ಮನೆಯಲ್ಲಿ ಮಾತ್ರ ಅದರ ಮಾತು ಎಂದೂ ಕೇಳಿಬಂದಿಲ್ಲ. "ನನ್ನ ಮಗನ ಮದುವೆಯಲ್ಲಿ ಬೀಗರು ಅದನ್ನು ಕೊಟ್ಟರು, ಇದನ್ನು ಕೊಟ್ಟರು" ಎಂದು ಯಾರಾದರೂ ಹೇಳಿಕೊಂಡಾಗ ನನ್ನ ತಂದೆ ಅಸಹ್ಯವನ್ನು ಸೂಚಿಸುತ್ತಿದ್ದರು.

ಮದುವೆ ನನ್ನ ಥಿಯರಿಗೆ ವಿರುದ್ಧವಾಗಿ ನಡೆಯಿತು ಎಂದು ನಾನು ಮೇಲೆ ಹೇಳಿದ್ದರ ಅರ್ಥ: ಅದು ಸಂಪ್ರದಾಯಕ್ಕನುಸಾರವಾಗಿ ಕಾಶೀಯಾತ್ರೆ, ಬಟ್ಟಲು ಕದಿಯುವುದು ಮುಂತಾದ ಅರ್ಥವಿಲ್ಲದ ನಗುಪಾಟಲು ಕಲಾಪಗಳನ್ನೆಲ್ಲ ಉಳಿಸಿಕೊಂಡು ಏಳು ದಿನ ನಡೆಯಿತು ಎಂದು. ಆಗ ಮದುವೆಯ ಸಮಾರಂಭದಲ್ಲಿ ಅವಶ್ಯಕ ಎಂದು ಭಾವಿಸಿದ್ದ ಕಲಾಪಗಳಲ್ಲಿ ಬಹುಶಃ ಅರ್ಧಭಾಗ ಈಗ ಅದೃಶ್ಯವಾಗಿದೆ. ಉಳಿದಿರುವುದು ಅರ್ಥವಿಲ್ಲದ್ದು. ಆ ಪಳೆಯುಳಿಕೆಯ ಜೊತೆಗೆ ಹಿಂದಿನದಕ್ಕಿಂತ ನೂರು ಪಾಲು ಅರ್ಥಹೀನವಾದ, ಕೇವಲ ದೊಡ್ಡಸ್ತಿಕೆಗಾಗಿ, ಅಂತಸ್ತನ್ನೂ ಸಂಪತ್ತನ್ನೂ ಮೆರೆಸುವುದಕ್ಕಾಗಿ ಬೆಳೆಸಿಕೊಂಡು ಹಣವನ್ನು ನೀರಿನಂತೆ ಹರಿಸುವ ಹೊಸ ಪದ್ಧತಿಗಳು ಬಂದು ಸೇರಿಕೊಂಡಿವೆ. ಈ ವಿಷಯದಲ್ಲಿ ನಮ್ಮ ಸಮಾಜ ಮುಂದುವರಿಯುವುದಂತಿರಲಿ, ಹಿಂದುವರಿದಿದೆ ಎಂದೇ ಹೇಳಬೇಕು.

ಈಗಿನಂತೆ ಆಗಲೂ ಮದುವೆ ಸಾಮಾನ್ಯವಾಗಿ ನಡೆಯುತ್ತಿದ್ದದ್ದು ಹೆಣ್ಣಿನ ಊರಿನಲ್ಲಿ. ಏಳು ದಿನ ಗಂಡಿನವರಿಗೆ ವಸತಿಯನ್ನು ಏರ್ಪಡಿಸುವುದು, ಊಟ ತಿಂಡಿ ಮೊದಲಾದ ಉಪಚಾರ, ಸಮಾರಂಭಕ್ಕೆ ಸಂಬಂಧಪಟ್ಟ ಎಲ್ಲ ವ್ಯವಸ್ಥೆ, ಇದೆಲ್ಲಕ್ಕೂ ಬೇಕಾದ ಹಣದ ಮತ್ತು ದುಡಿತದ ಹೊರೆ ಹೆಣ್ಣಿನ ತಂದೆತಾಯಿಯರ ಮೇಲೇ ಬರುತ್ತಿತ್ತು. ಈ ಪರಿಸ್ಥಿತಿ ಇಂದೂ ಬದಲಾಯಿಸಿಲ್ಲ. ಗಂಡಿನವರದ್ದು ಪ್ರತಿಷ್ಠಿತ ಸ್ಥಾನ. ಹೆಣ್ಣಿನವರು 'ದಾಸೋಽಹಂ ತವ ದಾಸೋಽಹಂ' ಎಂದು ಹಾಡಿಕೊಂಡು ಬೀಗರ ಶ್ರೀಮದನುಗ್ರಹಕ್ಕೆ ಕಾಯುತ್ತಿರಬೇಕು. ಗಂಡಿನವರು ಒಳ್ಳೆಯ ಜನರಾದರೆ—ಅಂಥ ಜನ ಅಪರೂಪವೇನಲ್ಲ—ತಮ್ಮ ಪ್ರತಿಷ್ಠೆಯನ್ನು ಮೆರೆಸದ ಸೌಜನ್ಯದಿಂದ ನಡೆದುಕೊಳ್ಳುತ್ತಿದ್ದರು. ಆದರೆ ಅಂಥ ಸಜ್ಜನರಲ್ಲಿ ಕೂಡ "ಗಂಡಿನವರಿಗೆ ವಿಶೇಷ ಗೌರವ ಸಲ್ಲಬೇಕು" ಎಂಬ ಭಾವನೆ ಸಾಮಾನ್ಯವಾಗಿ ಕಾಣುತ್ತಿತ್ತು, ಈಗಲೂ ಕಾಣುತ್ತಿದೆ. ಮದುವೆಯ ಸಮಾರಂಭದ ಎಲ್ಲ ಹೊಣೆಗಳನ್ನೂ ಎರಡೂ ಕಡೆಯವರೂ ಹೊರಬೇಕು;

ಹೆಣ್ಣಿನ ಕಡೆಯವರು ತಗ್ಗಿ ನಡೆಯಬೇಕಾದ್ದಿಲ್ಲ ಎಂಬ ಭಾವನೆ ಇನ್ನೂ ಜನರ ಮನಸ್ಸಿಗೆ ಬಂದಿಲ್ಲ. ಹೆಣ್ಣಿಗೆ ಆರ್ಥಿಕ ಸ್ವಾವಲಂಬನೆ ಬಂದರೆ ಈ ಪರಿಸ್ಥಿತಿ ಬದಲಾಯಿಸುತ್ತದೆ.

ಗಂಡಿನವರಿಗೆ ವಿಶೇಷ ಮರ್ಯಾದೆ ಸಲ್ಲಬೇಕು ಎಂಬ ಭಾವನೆ—ತೀವ್ರವಾಗಿಯಲ್ಲದಿದ್ದರೂ—ನಮ್ಮ ಮನೆಯಲ್ಲೂ ಇತ್ತು. ಅಥವಾ "ಆ ಭಾವನೆಯಿತ್ತು" ಎನ್ನುವುದಕ್ಕಿಂತ "ಎಲ್ಲರೂ ಒಪ್ಪಿದ್ದ, ಎಲ್ಲರೂ ನಿರೀಕ್ಷಿಸುತ್ತಿದ್ದ ವ್ಯವಸ್ಥೆಗೆ ನಮ್ಮ ವಿರೋಧವೇನೂ ಇರಲಿಲ್ಲ" ಎನ್ನುವುದು ಸತ್ಯಕ್ಕೆ ಹತ್ತಿರದ ಮಾತು. ನನ್ನ ಮಾವನವರು ಮಾಡಿದ್ದ ವ್ಯವಸ್ಥೆಯಲ್ಲಿ ಏನಾದರೂ ಲೋಪದೋಷಗಳಿದ್ದಿದ್ದರೂ ನನ್ನ ತಂದೆತಾಯಿಯರು ಅವಕ್ಕೆ ಪ್ರಾಮುಖ್ಯ ಕೊಡುತ್ತಿರಲಿಲ್ಲ, ಅವನ್ನು ಎತ್ತಿ ಆಡುತ್ತಿರಲಿಲ್ಲ ಎಂದು ಖಚಿತವಾಗಿ ಹೇಳಬಲ್ಲೆ. ಮಾತ್ರವಲ್ಲ, ಆರೋಗ್ಯ ಸರಿಯಾಗಿದ್ದಿದ್ದರೆ ನನ್ನ ತಂದೆ ತಾವೇ ಮುಂದೊಡಗಿ ಹೆಣ್ಣಿನವರಿಗೆ ಸಹಾಯ ಮಾಡ ಹೊರಡುತ್ತಿದ್ದರು—ಅದು ಅವರ ಸ್ವಭಾವ.

ಆಗಿನ ಪದ್ಧತಿಯ ಪ್ರಕಾರ ಮದುವೆ ಆರು ದಿನವೋ ಏಳು ದಿನವೋ ನಡೆಯಬೇಕು. ಗಂಡಿನ ಪಾರ್ಟಿ ಹೆಣ್ಣಿನ ಊರನ್ನು ತಲುಪಿದ ದಿನ ಸಂಜೆ ವರಪೂಜೆ. ಎರಡನೆಯ ದಿನ 'ಗ್ರೇಗ್ನಾ' (ಗೃಹಯಜ್ಞ) ನಾಂದಿ. ಮೂರನೆಯ ದಿನ ಧಾರೆ, ಮಾಂಗಲ್ಯ ಧಾರಣೆ, ಸಪ್ತಪದಿ. ನಾಲ್ಕನೆಯ ದಿನ 'ಹರಿಭೂಮ'—ಅದರ ಅರ್ಥವೇನೊ, ನನಗೆ ತಿಳಿಯದು—ಅವತ್ತು ವಧೂವರರನ್ನು ಒಟ್ಟಿಗೆ ಊಟಕ್ಕೆ ಕೂರಿಸುತ್ತಾರೆ; ಅನ್ನ ಕಲಸಿ ಒಬ್ಬರಿಗೊಬ್ಬರು ತುತ್ತು ಕೊಡುವುದು ಅವತ್ತಿನ ಆಚರಣೆಯಲ್ಲಿ ಒಂದು ಭಾಗ. ಐದನೆಯ ದಿನ ನಾಗೋಲಿ. ಆರನೆಯ ದಿನ ಬೀಗರ ಔತಣ. ಏಳನೆಯ ದಿನ—ಗಂಡಿನವರು ದೊಡ್ಡ ಮನಸ್ಸು ಮಾಡಿದರೆ—ಅವರಿಂದ ಹೆಣ್ಣಿನ ಕಡೆಯುವರಿಗೆ ಔತಣ. ಅದಾದ ಮೇಲೆ ಗಂಡಿನವರು ತಮ್ಮ ಊರಿಗೆ ಪ್ರಯಾಣ ಮಾಡುತ್ತಾರೆ. ಹೆಣ್ಣಿನ ಕಡೆಯುವರು "ಸದ್ಯಕ್ಕೆ ಮುಗಿಯಿತಲ್ಲ, ಭಗವಂತ" ಎಂದುಕೊಂಡು ನಿಟ್ಟುಸಿರುಬಿಟ್ಟು ಸುಸ್ತಾಗಿ ಮಲಗುತ್ತಾರೆ. ಅವರ ದೇಹ ಮನಸ್ಸುಗಳು ಚೇತರಿಸಿಕೊಳ್ಳುವುದಕ್ಕೆ ಒಂದೆರಡು ವಾರಗಳಾದರೂ ಬೇಕು. ಅವರ ಆರ್ಥಿಕಸ್ಥಿತಿ ಚೇತರಿಸಿಕೊಳ್ಳುವುದಕ್ಕೆ ಹತ್ತು ಹದಿನೈದು ವರ್ಷಗಳಾದರೂ ಬೇಕು.

ನನ್ನ ಮದುವೆ ಮೇಲೆ ಬಣ್ಣಿಸಿದ ಪದ್ಧತಿಯನ್ನೇ ಅನುಸರಿಸಿ ನಡೆಯಿತು. ನನ್ನ ಮಾವನವರು ಮದುವೆಯ ಖರ್ಚಿಗೆ ಬೇಕಾದ ಹಣವನ್ನು ಕೆಲವು ವರ್ಷಗಳಿಂದ ಕೂಡಿಸಿಟ್ಟುಕೊಂಡಿದ್ದರಿಂದ ಅವರಿಗೆ ಸಮಾರಂಭ ನಡೆಸುವುದು ಕಷ್ಟವಾಗಲಿಲ್ಲ. ನಮ್ಮ ಕಡೆಯುವರ ಸಹಕಾರ ಸಂಪೂರ್ಣವಾಗಿ ಇದ್ದದ್ದರಿಂದ ಯಾವ ಬಗೆಯ ಮಾನಸಿಕ ಕ್ಲೇಶವೂ ಇರಲಿಲ್ಲ, ಆ ಕಾಲದ ಮದುಮಣಿಗನ ಮನಸ್ಸಿನಲ್ಲಿ ತುಂಬಿ ತುಳುಕುತ್ತಿದ್ದ ರಮ್ಯ (romantic) ಭಾವನೆಗಳನ್ನು ಮಾಸ್ತಿ ವೆಂಕಟೇಶಯ್ಯಂಗಾರ್ಯರು 'ರಂಗನ ಮದುವೆ', ರಂಗಪ್ಪನ ಕೋರ್ಟ್‌ಷಿಪ್', 'ರಂಗಪ್ಪನ ದೀಪಾವಳಿ' ಎಂಬ ಕಥೆಗಳಲ್ಲಿ ಸೊಗಸಾಗಿ ಬಣ್ಣಿಸಿದ್ದಾರೆ. ಅವರು ರಂಗಪ್ಪನ ವಿಷಯದಲ್ಲಿ ಹೇಳಿರುವುದೆಲ್ಲ ನನ್ನ ವಿಷಯದಲ್ಲೂ ನಿಜ. (ಅವರ ವಿಷಯದಲ್ಲೂ ನಿಜ ಎಂದು ಧೈರ್ಯವಾಗಿ ಹೇಳಬಹುದು! ರಂಗಪ್ಪ ನಿಜವಾಗಿ ಮಾಸ್ತಿಯವರೇ!) ಹತ್ತೊಂಬತ್ತು ವರ್ಷದವನಾದ ನಾನು ಆ

ವೇಳೆಗೆ ಬೇಕಾದಷ್ಟು ಇಂಗ್ಲಿಷ್ ಕಾದಂಬರಿಗಳನ್ನು ಓದಿದ್ದೆ. ಅವೂ ಯೌವನವು ಮನಸ್ಸಿನಲ್ಲಿ ರಮ್ಯ ಭಾವನೆಗಳನ್ನು ತುಂಬಿದ್ದವು. ನನ್ನ ಆ ಭಾವನೆಗಳನ್ನು 'ಹೆಂಡತಿಯ ಹೆಸರು' ಎಂಬ ಪ್ರಬಂಧದಲ್ಲಿ ಸ್ವಲ್ಪಮಟ್ಟಿಗೆ ವಿವರಿಸಿದ್ದೇನೆ. ಇಲ್ಲಿ ಆ ಕಾಲದ ಮದುವೆಯ 'ರೊಮ್ಯಾಂಟಿಕ್' ಮುಖವನ್ನು ಬದಿಗಿಟ್ಟು ಅದನ್ನು ವಾಸ್ತವಿಕ ದೃಷ್ಟಿಯಿಂದ ನೋಡುತ್ತಿದ್ದೇನೆ.

ನನ್ನಲ್ಲಿ ರೊಮ್ಯಾಂಟಿಕ್ ಮತ್ತು ವಾಸ್ತವಿಕ ಮನೋವೃತ್ತಿಗಳು—ಪರಸ್ಪರ ವಿರುದ್ಧವಾದ ಮನೋವೃತ್ತಿಗಳು—ಹೇಗೋ ಒಟ್ಟಿಗೆ ಮನಮಾಡಿಕೊಂಡಿವೆ ಎಂದು ತೋರುತ್ತದೆ. ಹಸೆಯ ಮೇಲೆ ಮದುವಣಿಗನಾಗಿ ಕೂತಾಗ ನನ್ನಲ್ಲಿ ಜಾಗ್ರತವಾಗಿದ್ದದ್ದು ವಾಸ್ತವಿಕ ಮನೋವೃತ್ತಿ. ಆ ದೊಡ್ಡ ಸಭೆಯಲ್ಲಿ, ಓಲಗದ ಗಲಭೆಯಲ್ಲಿ, ಜನರ ಗಜಿಬಿಜಿಯಲ್ಲಿ, ಪುರೋಹಿತರು "ಇದು ಮಾಡು ಅದು ಮಾಡು" ಎಂದು ಹೇಳುತ್ತಿರು ವಾಗ ರಮ್ಯಮನೋವೃತ್ತಿಗೆ ಅವಕಾಶವೇ ಇಲ್ಲ. ಹತ್ತು ವರ್ಷ ಕಳೆದ ಮೇಲೆ ಅಂದಿನ ಅನುಭವವನ್ನು ನೆನೆಯುವುದು ಹಿತವಾಗಬಹುದು. ಆದರೆ ಹೋಮಾಗ್ನಿಯ ಮುಂದೆ ಕೂತು ಹೊಗೆಯಿಂದ ಕಣ್ಣು ಉರಿಯುತ್ತಿರುವಾಗ ಮಧುರ ಭಾವಗಳು ಬರಲೊಲ್ಲವು. ಅಲ್ಲದೆ ನನಗೆ ರಿಚ್ಯುಯಲ್ (ritual)—ವಿಧ್ಯುಕ್ತ ಮತ್ತು ಬಹುಮಟ್ಟಿಗೆ ಯಾಂತ್ರಿಕ ವಾದ ಆಚರಣೆ—ಯಾವಾಗಲೂ ಬೇಸರ ತರುತ್ತದೆ.

ಈ ಬೇಸರ ವರಪೂಜೆಯ ದಿನವೇ ಪ್ರಾರಂಭವಾಯಿತು. ಅವತ್ತು ನಾನು "ಲಕ್ಷ್ಮೀನಾರಾಯಣ ಸ್ವರೂಪನಾದ ವರ." ಪುರೋಹಿತರು ಪೂಜೆಯ ಮಂತ್ರವನ್ನು ಹೇಳುವಾಗ "ಲಕ್ಷ್ಮೀನಾರಾಯಣ ಸ್ವರೂಪಾಯ ವರಾಯ" ಎಂದೇ ಹೇಳಿಸುತ್ತಾರೆ. ನನ್ನ ಮಾವನವರು, ಪೂಜ್ಯರಾದ ಹಿರಿಯರು, ನನ್ನ ಕಾಲು ತೊಳೆದು ನನಗೆ ಪೂಜೆ ಮಾಡಬೇಕು! ಈ ಪದ್ಧತಿ ನನಗೆ ಅಸಹ್ಯವೆನ್ನಿಸಿತು. ಅದನ್ನು ಸಮರ್ಥಿಸುವುದಕ್ಕೆ "ಈ ಪ್ರಪಂಚದಲ್ಲಿ ಎಲ್ಲೆಲ್ಲೂ ಇರುವ ದೇವರು ವರನಲ್ಲೂ ಇದ್ದಾನೆ" ಎಂದು ವೇದಾಂತ ಹೇಳಬಹುದು—ಆದರೆ ಅದು ಮದುವೆಯ ಸಮಾರಂಭದಲ್ಲಿ ಯಾರ ಮನಸ್ಸಿನಲ್ಲೂ ಜಾಗ್ರತ ವಾಗಿರುವುದಿಲ್ಲ. ನನ್ನಲ್ಲಿ ಲಕ್ಷ್ಮೀನಾರಾಯಣತ್ವ ಎಷ್ಟಿದೆ ಎನ್ನುವುದನ್ನು ನಾನು ಚೆನ್ನಾಗಿ ಬಲ್ಲೆ—ಅದನ್ನು ನೆನೆದರೆ ಆತ್ಮತಿರಸ್ಕಾರದ ನಗೆ ಬರುತ್ತದೆ! ಆ ಹಿರಿಯರಿಂದ ಕಾಲು ತೊಳೆಸಿಕೊಂಡಾಗ ನಾನು ದೊಡ್ಡ ಪಾಪ ಮಾಡುತ್ತಿದ್ದೇನೆ ಎಂಬ ಭಾವನೆ ಬಂತು.

ಹೀಗೆಯೇ 'ಕಾಶೀಯಾತ್ರೆ'ಯ ನಾಟಕ. ಎಂದೋ ಸಾವಿರಾರು ವರ್ಷಗಳ ಹಿಂದೆ ಗುರುಗಳ ಬಳಿ ಅಧ್ಯಯನ ನಡೆಸಿ ಅದು ಮುಗಿದ ಮೇಲೆ ಸ್ನಾತಕನಾದ ಯುವಕ ಕಾಶೀಯಾತ್ರೆಗೆ ಹೊರಡುತ್ತಿದ್ದನಂತೆ. ಆಗ ಕನ್ಯಾಪಿತೃವೊಬ್ಬ "ನನ್ನ ಮಗಳನ್ನು ಮದುವೆ ಮಾಡಿಕೊಂಡು ಹೋಗು" ಎನ್ನುತ್ತಿದ್ದನಂತೆ. ಆಗಲೂ ಕಾಶೀಯಾತ್ರೆಗೆ ಎಷ್ಟು ಜನ ಹೋಗುತ್ತಿದ್ದರೋ! ಆ ಕಾಲದಲ್ಲಿ ಅದು ಸುಲಭದ ಕೆಲಸವೇನಲ್ಲ! ಅಂತೂ ಅದು ಸಂಪ್ರದಾಯವಾಯಿತು. ಈಗ ಕಾಶೀಯಾತ್ರೆಗೆ ಹೊರಟ ಮದುವಣಿಗ ಉತ್ತರ ದಿಕ್ಕಿಗೂ ತಿರುಗದಿರಬಹುದು! ನಾನು ಮೌನವಾಗಿ ಈ ನಾಟಕದಲ್ಲಿ ಪಾತ್ರವಹಿಸಿದೆ. ಮೈಸೂರಿ ನಿಂದ ಹೊರಟಾಗಲೇ ನನ್ನ ತಾಯಿ "ನಿನ್ನ ಕೊಂಕುಮಾತುಗಳನ್ನೆಲ್ಲ ಅಲ್ಲೂ ತೆಗೆಯ

ಬೇಡ" ಎಂದು ಎಚ್ಚರಿಸಿದ್ದರು. "ಏನೇ ಆಗಲಿ ಒಂದು ಮಾತನ್ನೂ ಆಡದೆ ಹಿರಿಯರು ಹೇಳಿದಂತೆ ನಡೆದುಬಿಡುತ್ತೇನೆ" ಎಂದು ನಿಶ್ಚಯಿಸಿಕೊಂಡಿದ್ದೆ. ನೂರು ಜನ ಸೇರಿರುವ ಸಭೆಯಲ್ಲಿ ವಿರಸಕ್ಕೆ ಎಡೆಗೊಡಬಾರದಷ್ಟೆ. ಆ ಪ್ರತಿಜ್ಞೆಯನ್ನು ಯಶಸ್ವಿಯಾಗಿ ಪಾಲಿಸಿದೆನೆಂದೇ ಹೇಳಬೇಕು.

ಆದರೆ ಧಾರೆಯಾದ ಮೇಲೆ—ಅಂದರೆ ಮದುಮಕ್ಕಳು ಶಾಸ್ತ್ರೋಕ್ತವಾಗಿ ಗಂಡ ಹೆಂಡಿರಾದ ಮೇಲೆ—'ಉರುಟಣೆ' ಎಂಬ ಕಾರ್ಯಕ್ರಮ ಆರಂಭವಾದಾಗ ನನ್ನಲ್ಲಿ ಉಕ್ಕಿ ಬಂದ ನಗುವನ್ನು ತಡೆಯುವುದು ಕಷ್ಟವಾಯಿತು. ಇಂದಿನ ಮದುವೆಗಳಲ್ಲಿ ಉರುಟಣೆ ಅಷ್ಟಾಗಿ ಕಾಣಬರುತ್ತಿಲ್ಲ. ಅದರಲ್ಲಿ ಎರಡು ಭಾಗ: ಮದುಮಕ್ಕಳು ಪರಸ್ಪರ ಸವಿಮಾತುಗಳನ್ನಾಡಿ ಒಬ್ಬರನ್ನೊಬ್ಬರು ಪ್ರಸನ್ನರಾಗಿಸುವುದು ಮತ್ತು ಚೆಂಡಾಡುವುದು (!!). ಆ ಕಾಲದಲ್ಲಿ ಮದುಮಕ್ಕಳು ೧೦–೧೫ ವರ್ಷದೊಳಗಿನವರಷ್ಟೆ. ಆದ್ದರಿಂದ ಆ ಮಕ್ಕಳ ಬಾಯಿಂದ ಪ್ರೇಮದ ಮಾತು ಕೇಳುವುದೆಂದರೆ ಹಿರಿಯರಿಗೆ—ಮುಖ್ಯವಾಗಿ ಮಹಿಳೆಯರಿಗೆ—ವಿನೋದ. ಆದರೆ ನಾನು ೧೯ ವರ್ಷದ ಗಡವ!

ವಧೂವರರ ನಡುವೆ ವಿನಿಮಯವಾಗಬೇಕಾದ ಸವಿಮಾತುಗಳನ್ನೂ ಸಂಪ್ರದಾಯ ಪಟ್ಟಿಮಾಡಿತ್ತು. 'ಮೈದಳೆದು ಬಂದ ಅರಸಿಕತೆ' ಎನ್ನಬಹುದಾದ ಧಢೂತಿ ಮನುಷ್ಯನೊಬ್ಬ (ಪುರೋಹಿತ) ಆ ಮಾತುಗಳನ್ನು ವಧೂವರರಿಗೆ ಹೇಳಿಕೊಡುತ್ತಾನೆ. (ನನಗೆ ಪುರೋಹಿತರ ವಿಷಯದಲ್ಲಿ ಅಸಡ್ಡೆಯೇನೂ ಇಲ್ಲ. ಅಂದಿನ ಸನ್ನಿವೇಶವನ್ನು ವಾಸ್ತವ ದೃಷ್ಟಿಯಿಂದ ಬಣ್ಣಿಸುತ್ತಿದ್ದೇನೆ, ಅಷ್ಟೆ.) ವಧೂವರರು ಯಾಂತ್ರಿಕವಾಗಿ ಅವುಗಳ ಪುನರಾವರ್ತನ ಮಾಡುತ್ತಾರೆ: "ಎನ್ನರಸ (ಸಿ), ಚೆನ್ನರಸ (ಸಿ), ಚೆಲುವರಸ, (ಸಿ), ಪಟ್ಟದರಸ (ಸಿ), ಅತ್ತೆಯ ಮಗನೆ (ಳೆ) ಇತ್ಯಾದಿ ಇತ್ಯಾದಿ. ಮಧ್ಯೆಮಧ್ಯೆ ಹಾಸ್ಯವನ್ನು ಒದಗಿಸುವುದಕ್ಕಾಗಿ ಪುರೋಹಿತ ಸ್ವಲ್ಪ ಚೇಷ್ಟೆ ಮಾಡಬೇಕು: 'ಅತ್ತೆಯ ಮಗನೆ' ಆದ ಮೇಲೆ 'ಕೊತ್ತಿಯ ಮರಿಯೆ' ಎಂದು ಹೇಳಿಕೊಡುವುದೂ ಅವನ ಕರ್ತವ್ಯ ಎಂದೇ ಹೇಳಬಹುದು. ಮದುಮಕ್ಕಳು ಯಾಂತ್ರಿಕವಾಗಿ ಅದನ್ನೂ ಹೇಳಿಬಿಡುತ್ತಾರೆ, ಎಲ್ಲರೂ ನಗುತ್ತಾರೆ. ಇದೊಂದೂ ನನಗೆ ಅಪರಿಚಿತವಲ್ಲ. ಆದರೆ ನಾಟಕದಲ್ಲಿ ನಾನೇ ಪಾತ್ರಧಾರಿಯಾದಾಗ ಎಲ್ಲ ನಗುಪಾಟಲು ಎನ್ನಿಸಿತು. ಸಮಾರಂಭದ ಉಳಿದ ದಿನಗಳನ್ನು ಬೇಸರದಿಂದ ಕಳೆದೆನೋ, ಆಸಕ್ತಿಯಿಂದಲೋ....ಒಂದೂ ನೆನಪಿಲ್ಲ.

೧೨. ಮಹಾರಾಜಾ ಕಾಲೇಜಿನ ಬಿ. ಎ. ತರಗತಿಗಳಲ್ಲಿ

೧೯೧೯ರ ಜೂನ್ ತಿಂಗಳ ಆದಿಭಾಗದಲ್ಲೇ ನನ್ನ ಮಾವನವರಿಂದ ಒಂದು ಕಾಗದ ಬಂತು: "ನೀವು ಬಿ.ಎ. ಕ್ಲಾಸಿಗೆ ಸೇರುತ್ತೀರಷ್ಟೆ? ಆ ಸಂದರ್ಭದಲ್ಲಿ ನೀವು ಸ್ವಲ್ಪ ಹಣ ಹೊಂದಿಸಿಕೊಳ್ಳಬೇಕಾಗಬಹುದು. ನನ್ನ ಕೈಲಾದಷ್ಟು ಕಳಿಸಿಕೊಡಲೆ? ಹೀಗೆ ಕೇಳಿದನಲ್ಲ ಎಂದು ನೀವು ಅನ್ಯಥಾ ಭಾವಿಸಲಾಗದು. ನೀವೂ ನಾವೂ ಈಗ ಒಂದು ಸಂಸಾರದವರು, ಸುಖದುಃಖಗಳಲ್ಲಿ ಭಾಗಿಗಳು, ಎಂಬ ಭಾವನೆಯಿಂದ ಈ ಮಾತು ಬರೆಯುತ್ತಿದ್ದೇನೆ." —ಇದು ಅವರ ಕಾಗದದ ಒಕ್ಕಣೆ. (ಅವರ–ನನ್ನ ಪತ್ರ ವ್ಯವಹಾರವೆಲ್ಲ ಇಂಗ್ಲಿಷಿನಲ್ಲಿ!)

ಅವರ ಕಾಗದದಲ್ಲಿ "ನಾನು ಇವರಿಗೆ ಸಹಾಯಮಾಡುವ ಸ್ಥಿತಿಯಲ್ಲಿದ್ದೇನೆ. ನಾನು ಉಪಕಾರಿ, ಇವರು ಉಪಕೃತರು" ಎಂಬ ಶ್ರೀಮಾದನುಗ್ರಹ (condescending) ಮನೋವೃತ್ತಿ ಏನೇನೂ ಇರಲಿಲ್ಲ. ನಾನು ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂದಿದ್ದದ್ದು ಅವರಿಗೆ ಮೊದಲೇ ತಿಳಿದಿದ್ದ ವಿಷಯ. ಆದರೆ ಆಗ ನಮ್ಮ ವರ್ಗದ ಜನರಲ್ಲಿ ಅನೇಕರು ಎಸ್.ಎಸ್.ಎಲ್.ಸಿ ಯನ್ನೋ ಎಂಟ್ರೆನ್ಸನ್ನೋ (entrance) ಪ್ಯಾಸ್ ಮಾಡಿದ ಮೇಲೆ ಓದನ್ನು ಅಲ್ಲಿಗೇ ನಿಲ್ಲಿಸಿ ನೌಕರಿಗೆ ಸೇರಿಕೊಳ್ಳುತ್ತಿದ್ದರು. ನಾನು ಹಾಗೆ ಮಾಡದಿರಲಿ, ಓದುವ ಅಪೇಕ್ಷೆ ನೆರವೇರಲಿ, ಎಂದು ನನ್ನ ಮಾವನವರ ಬಯಕೆ. ವಿದ್ಯಾಭ್ಯಾಸಕ್ಕೆ ನೆರವು ಕೊಡುವುದು ಸಾಧ್ಯ ಎಂಬುದನ್ನು ಬಹಳ ನವಿರಾಗಿ ಸೂಚಿಸಿದ್ದರು. ಆ ಸೂಕ್ಷ್ಮವನ್ನು ಗ್ರಹಿಸಿ ನಾನೂ ಅಷ್ಟೇ ನವಿರಾಗಿ "ನಾನು ಕಾಲೇಜಿಗೆ ಸೇರುತ್ತೇನೆ. ಅದಕ್ಕೆ ಬೇಕಾದ ಏರ್ಪಾಟೆಲ್ಲ ನಡೆದಿದೆ. ನೆರವು ಬೇಕಾದರೆ ನಾನೇ ಕಾಗದ ಬರೆಯುತ್ತೇನೆ" ಎಂದು ಉತ್ತರ ಬರೆದೆ. ("ನೀವು ಹಿರಿಯರು. ನನ್ನನ್ನು ಬಹುವಚನದಲ್ಲಿ ಸಂಬೋಧಿಸಬಾರದು" ಎಂಬ ಮಾತನ್ನೂ ಸೇರಿಸಿದೆ ಆದರೆ ಅವರು ಕೊನೆಯವರೆಗೂ ಆ ಅಭ್ಯಾಸವನ್ನು ಬಿಡಲೇ ಇಲ್ಲ!)

"ಮಾವನವರು ಹಣ ಕಳಿಸುವ ವಿಷಯ ಕಾಗದ ಬರೆದಿದ್ದರು" ಎಂದು ತಂದೆಗೆ ತಿಳಿಸಿದಾಗ ಅವರು ಸ್ವಲ್ಪ ಗಡುಸಾಗಿ "ನೀನೇನು ಉತ್ತರ ಬರೆದೆ?" ಎಂದು ಕೇಳಿದರು. ನನ್ನ ಉತ್ತರವೇನೆಂಬುದು ತಿಳಿದ ಮೇಲೆ ಅವರ ಮುಖದಲ್ಲಿ ಸಮಾಧಾನದ ನಗೆ ಮೂಡಿತು. ವಾಸ್ತವವಾಗಿ ನನ್ನ ಕಾಲೇಜು ವಿದ್ಯಾಭ್ಯಾಸಕ್ಕೆ ಯಾರ ನೆರವೂ—ನನ್ನ ತಂದೆಯ ನೆರವು ಸಹ—ಬೇಕಾಗಲಿಲ್ಲ. ನನಗೆ ತಿಂಗಳಿಗೆ ೧೫ ರೂಪಾಯಿಗಳಂತೆ ಸಬ್ಜೆಕ್ಟ್ (subject) ಸ್ಕಾಲರ್‌ಷಿಪ್ ಬರುತ್ತಿತ್ತು; ಸ್ಕಾಲರ್‌ಷಿಪ್ ಬಂದವರಿಗೆಲ್ಲ ಫೀಸು ವಿನಾಯಿತಿಯೂ ಇತ್ತು. ಅಂದ ಮೇಲೆ ಆ ಕಾಲಕ್ಕೆ ನಾನು ಐಶ್ವರ್ಯವಂತ! ನನ್ನ ವಿದ್ಯಾರ್ಥಿ ದೆಸೆ ಮುಗಿಯುವವರೆಗೂ ನಾನು ಯಾವ ಖರ್ಚಿಗಾಗಲಿ ಯಾರ ಕೈಯನ್ನೂ ಕಾಯಬೇಕಾಗಲಿಲ್ಲ.

ಮಾವನವರ ಕಾಗದಕ್ಕೆ ನಾನು ಬರೆದ ಉತ್ತರದಲ್ಲಿ ಅವರು ಒರಟು ದನಿಯನ್ನು—'ನನಗೆ ನಿಮ್ಮ ನೆರವಿನ ಹಂಗೇನೂ ಬೇಕಿಲ್ಲ' ಎಂಬ ದನಿಯನ್ನು—ಕಂಡರೋ ಏನೊ. ನನ್ನ ಮನಸ್ಸಿನಲ್ಲಿ ಅಂಥ ಭಾವನೆಯೇನೂ ಇರಲಿಲ್ಲ; ಆದರೆ ಬಳಸಿದ್ದ ಪದಗಳಲ್ಲಿ ದೋಷವಿದ್ದಿರಬಹುದು. ದೀಪಾವಳಿ ಹಬ್ಬಕ್ಕೆ ಹೊಸ ಅಳಿಯನಾಗಿ ನಾನು ಕೋಲಾರಕ್ಕೆ ಹೋದಾಗ ಅವರು "ಹಣ ಕಳಿಸಲೆ ಎಂದು ನಾನು ಕಾಗದ ಬರೆದದ್ದರಿಂದ ನಿಮಗೇನಾದರೂ ಅಸಮಾಧಾನವಾಯಿತೆ?" ಎಂದು ಕೇಳಿದರು. "ಖಂಡಿತ ಇಲ್ಲ. ನಿಮ್ಮ ಕಾಗದದಲ್ಲಿ ಅಸಮಾಧಾನ ತರುವಂಥ ಒಂದೇ ಒಂದು ಪದವೂ ಇರಲಿಲ್ಲ; ತುಂಬು ವಿಶ್ವಾಸದಿಂದ ಕಾಗದ ಬರೆದಿದ್ದೀರಿ ಎನ್ನುವುದು ಸ್ಪಷ್ಟವಾಗಿ ಕಾಣುತ್ತಿತ್ತು. ನನಗೆ ನಿಜವಾಗಿ ಹಣದ ಆವಶ್ಯಕತೆ ಇಲ್ಲವಾದ್ದರಿಂದ 'ಬೇಡ' ಎಂದು ಬರೆದೆ, ಅಷ್ಟೆ" ಎಂದು ಒತ್ತಿ ಹೇಳಿದ ಮೇಲೆ ಅವರ ಸಂಶಯ ಕೊನೆಗಂಡಿತು.

ಮಾವನ ಮನೆಗೆ ಹೋದಾಗ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಕುರಿತು ನನ್ನ ಚಿಕ್ಕಪ್ಪಂದಿರಲ್ಲೊಬ್ಬರಿಂದ ಸಣ್ಣ ಉಪನ್ಯಾಸವನ್ನು ಕೇಳಿದ್ದೆ. "ಅವರಿಗೆಲ್ಲ ನೀನು

ಸದರಕೊಡಬಾರದು; ಅವರು ನಿನ್ನನ್ನು ಗೌರವಿಸುವಂತೆ ಗತ್ತಿನಿಂದ ನಡೆದುಕೊಳ್ಳಬೇಕು" ಎಂದು ಅವರು ಎಚ್ಚರಿಸಿದ್ದರು. ಹಾಗಿರುವುದು ಅವಶ್ಯಕವೇನೋ ಎಂದು ನಾನೂ ಭಾವಿಸಿದ್ದೆ. ಆದರೆ ಮಾವನವರ ಸರಳತೆ, ಸಲಿಗೆ, ವಿಶ್ವಾಸ ಇವೆಲ್ಲದರ ಅನುಭವ ಮೊದಲ ದಿನವೇ ಆಯಿತು. ಬಂಧುತ್ವ ಬೆಳೆದಿದ್ದರೂ ಇವರೆಲ್ಲ ಅಪರಿಚಿತರು ಎಂಬ ಭಾವನೆ ಒಂದೆರಡು ದಿನಗಳಲ್ಲೇ ಕಳೆದುಹೋಯಿತು. ಜಯಲಕ್ಷ್ಮಿ ನನ್ನ ದೃಷ್ಟಿಯ ವೇಗಕ್ಕಿಂತ ಹೆಚ್ಚು ವೇಗದಲ್ಲಿ ಉತ್ಪ್ರೇಕ್ಷೆಗೆ (ಕ್ಷಮೆಯಿರಲಿ!) ಸುಳಿಸುಳಿದು ಮಾಯವಾಗುತ್ತಿದ್ದಳು. ಅವಳ ಪುಟ್ಟ ತಂಗಿಯರು—ಗೌರ, ಚೇಚ (ಶೇಷಮ್ಮ) "ಕಥೆ ಹೇಳಿ ಭಾವ, ಅಂಗಡಿಗೆ ನನ್ನೂ ಕರೆದುಕೊಂಡು ಹೋಗಿ ಭಾವ" ಎಂದು ಪೀಡಿಸಿ ನನ್ನ ಸಂಕೋಚವನ್ನೂ ಹಿಂಜರಿಕೆಯನ್ನೂ ಹೋಗಲಾಡಿಸಿದರು. ಚೇಚ—ಆಗ ಇನ್ನೂ ೩–೪ ವರ್ಷದ ಹುಡುಗಿ—ಹಾಸ್ಯದಲ್ಲಿ ನನ್ನನ್ನು ಸೋಲಿಸಿ ನಿರುತ್ತರನನ್ನಾಗಿ ಮಾಡಿದ್ದು ಇನ್ನೂ ನೆನಪಿನಲ್ಲಿ ನಿಂತಿದೆ. ಅವರ ಮನೆಯಲ್ಲಿ ಕೋತಿಗಳ ಹಾವಳಿ ಹೆಚ್ಚು. ನಾನು ಚೇಚಳೊಡನೆ ಹರಟುತ್ತಿದ್ದಾಗ ಕಿಟಕಿಯಲ್ಲಿ ಒಂದು ಕೋತಿ ಬಂದು ಕೂತಿತ್ತು. ನಾನು "ಕೋತಿ ನಿನಗೇನಾಗಬೇಕೆ, ಚೇಚ" ಎಂದು ಕೇಳಿದ್ದಕ್ಕೆ ಆ ಪುಟ್ಟಹುಡುಗಿ ಒಂದು ಕ್ಷಣವೂ ಯೋಚಿಸದೆ "ನಮ್ಮ ಭಾವ" ಎಂದುಬಿಟ್ಟಳು! ನನಗೆ ಆ ಘಳಿಗೆಯಲ್ಲಿ ಮುಖಭಂಗವಾಯಿತು ಎಂದು ತೋರುತ್ತದೆ—ಆ ವಯಸ್ಸಿನ ಹುಡುಗಿಯಿಂದ ಅಂಥ ಉತ್ತರವನ್ನು ಯಾರು ನಿರೀಕ್ಷಿಸಿಯಾರು! ಕಳೆದ ವರ್ಷ ಆರೇಳು ದಶಕಗಳ ಹಿಂದಿನ ಆ ಕೋತಿಯ ಪ್ರಸಂಗವನ್ನು ಅವಳ ನೆನಪಿಗೆ ತಂದೆ—ತರುವುದಕ್ಕೆ ಅವಳು ಒಬ್ಬಳಾದರೂ ಇನ್ನೂ ಉಳಿದಿದ್ದಾಳೆಂಬುದು ಸಂತೋಷದ ವಿಷಯ. ಆ ಅಕ್ಕ ತಂಗಿಯರಲ್ಲಿ ಚೇಚ ಒಬ್ಬಳು ಹೊರತು ಉಳಿದವರೆಲ್ಲ ವೃದ್ಧಾಪ್ಯಕ್ಕೆ ಕಾಲಿಡದೆ ಮೊದಲೇ ತೀರಿಕೊಂಡರು.

ನಮ್ಮ ಸ್ವಂತ ಮನೆಯ ವಾತಾವರಣವೂ ೧೯೧೯–೨೦ ರ ವೇಳೆಗೆ ನನಗೆ ಅತ್ಯಂತ ಹಿತವಾಗಿತ್ತು. ತಂದೆಯನ್ನು ಕುರಿತಂತೆ ನನ್ನಲ್ಲಿ ಸ್ವಲ್ಪ ಕಾಲ ಇದ್ದ ಅಸಮಾಧಾನ—ಅದನ್ನು ರೋಷ ಎಂದೇ ಕರೆಯಬಹುದೇನೋ—ನಾನು ಕಾಲೇಜಿಗೆ ಸೇರುವ ವೇಳೆಗೆ ಸಂಪೂರ್ಣವಾಗಿ ಕಳೆದುಹೋಗಿತ್ತು. ನಾನು ತಿಂದ ಪೆಟ್ಟುಗಳ ನೆನಪು ಇರಲಿಲ್ಲವೆಂದಲ್ಲ. ಆದರೆ ತಂದೆಯ ಮಾನಸಿಕ ಸ್ಥಿತಿಯ ಅರಿವೂ ಚೆನ್ನಾಗಿಯೇ ಆಗಿತ್ತು. ಅಯ್ಯ, ಮತ್ತು ನನ್ನ ತಾಯಿಯ ಚಿಕ್ಕಪ್ಪ, ಇವರೆಲ್ಲ ಅವರನ್ನು ಎಷ್ಟು ಗೌರವದಿಂದ ಕಾಣುತ್ತಿದ್ದರು ಎಂಬುದೂ ನನ್ನ ಮೇಲೆ ಪರಿಣಾಮ ಉಂಟುಮಾಡಿತು. ತಮ್ಮ ಬಂಧುಗಳ ಮತ್ತು ಸ್ನೇಹಿತರ ಮನೆಗಳಲ್ಲಿ ಯಾವುದೇ ಸಮಾರಂಭದಲ್ಲಾಗಲಿ ನೆರವು ಅವಶ್ಯಕವೆಂದು ತೋರಿದಾಗ ನನ್ನ ತಂದೆ ಆಹ್ವಾನಕ್ಕಾಗಿ ಸಹ ಕಾಯದೆ ತಾವೇ ಮುಂದುವರಿದು ಕೈಲಾದ ಸಹಾಯವನ್ನೆಲ್ಲ ಮಾಡಿ ಅದೃಶ್ಯರಾಗುತ್ತಿದ್ದರಂತೆ. ಇದನ್ನು ನಾನು ಸ್ವತಃ ಕಂಡವನಲ್ಲ—ನನಗೆ ಬುದ್ಧಿ ತಿಳಿಯುವ ವೇಳೆಗೆ ತಂದೆ ರೋಗದಿಂದ ನರಳುತ್ತಿದ್ದರಷ್ಟೆ. ನಾನೇ ಸ್ವತಃ ಕಂಡದ್ದೆಂದರೆ ಅವರು ಕಾಲರಾ ರೋಗಿಯ ಸೇವೆಗೆ ನಿಂತದ್ದು; ಅದನ್ನು ಹಿಂದೆಯೇ ಕಾಣಿಸಿದ್ದೇನೆ. ಹೀಗೆ ನಾನಾಗಿಯೇ ಮುಂದುವರಿದು ದೇಹಶ್ರಮವನ್ನು ಲೆಕ್ಕಿಸದೆ ಇತರರಿಗಾಗಿ ದುಡಿಯುವ ಸದ್ಗುಣ ನನ್ನ ಪಾಲಿಗೆ ಬರಲಿಲ್ಲ. ಆ ಪಿತ್ರಾರ್ಜಿತ ಆಸ್ತಿಯನ್ನು ಪಡೆದು ರೂಢಿಸಿಕೊಂಡವರು ನನ್ನ ತಮ್ಮಂದಿರಾದ ಮರಿ (ಸೂರ್ಯನಾರಾಯಣ)

ಮತ್ತು ವಿಶ್ವೇಶ್ವರ. ಇದನ್ನು ಇಲ್ಲಿ ಕಾಣಿಸುವುದು ನನಗೆ ಹೆಮ್ಮೆಯ ವಿಷಯ. ಅದೇ ಹೆಮ್ಮೆಯನ್ನು ನಾನು ೧೯೧೯-೨೦ ರ ವೇಳೆಗೆ ತಂದೆಯ ವಿಷಯದಲ್ಲೂ ತಾಳಿದ್ದೆ.

ಅವರಿಗೆ ವಾಯು ಬರುವುದು ನಿಂತಿರಲಿಲ್ಲವಾದರೂ ಕಡಿಮೆಯಾಗಿತ್ತು. ಮಾತು ತೊದಲಿಲ್ಲದೆ ತಕ್ಕಮಟ್ಟಿಗೆ ಸರಾಗವಾಗಿಯೇ ಹೊರಡುತ್ತಿತ್ತು. ಸಂಧ್ಯಾವಂದನೆ, ಮಾಧ್ಯಾಹ್ನಿಕ, ಜಪ, ದೇವರ ಪೂಜೆ, ಇತ್ಯಾದಿಗಳಲ್ಲಿ ಮಗ್ನರಾಗಿ ಮನಸ್ಸನ್ನು ತಕ್ಕ ಮಟ್ಟಿಗೆ ಹದಕ್ಕೆ ತಂದುಕೊಂಡಿದ್ದಿರಬೇಕು. ಆದರೆ ಎರಡೋ ಮೂರೋ ತಿಂಗಳಿಗೆ ಒಂದೊಂದು ಸಾರಿ ವಾಯು ಬಂದಾಗ ಆ ಭಯಂಕರ ದೃಶ್ಯವನ್ನು ನೋಡುವುದೇ ಬಹು ಕಷ್ಟವಾಗುತ್ತಿತ್ತು. ಅವರ ಬಳಿಯಲ್ಲಿ ಕೂತು ಕಣ್ಣೀರು ಕರೆಯುತ್ತಿದ್ದ ಅಜ್ಜಿಯನ್ನೂ ತಾಯಿಯನ್ನೂ ನೋಡಿ ಕರುಳು ಹಿಂಡಿದಂತಾಗುತ್ತಿತ್ತು. ನನ್ನಲ್ಲಿದ್ದ ಕಾಠಿಣ್ಯವನ್ನು ಇದೆಲ್ಲ ಕರಗಿಸಿತೇನೊ!

"ಸಂಕಟದಿಂದ ಇಂಥ ಸತ್ಪರಿಣಾಮವಾಗುತ್ತದೆ, ಅದು ಜನರನ್ನು ಪಳಗಿಸುತ್ತದೆ, ಹೃದಯಕ್ಕೆ ಮಾರ್ದವ ತರುತ್ತದೆ" ಎಂದು ಸಂಕಟವನ್ನು ಸಮರ್ಥಿಸುವ ಮಾತನ್ನು ಅನೇಕರಿಂದ ಕೇಳಿದ್ದೇನೆ. ಆದರೆ....ಸಂಕಟ ಒಂದು ಮಿತಿಯನ್ನು ಮೀರಿದರೆ ಹೃದಯ ಮೃದುವಾಗುವುದಕ್ಕೆ ಬದಲು ಕಲ್ಲಾಗುತ್ತದೆ! ಆಗಿಯೇ ಆಗುತ್ತದೆ ಎಂಬುದನ್ನು ಒಪ್ಪದವರು ಹಾಗಾಗುವುದು ಸಾಧ್ಯ ಎಂದಾದರೂ ಒಪ್ಪಬೇಕು. ಒಂದು ವೇಳೆ ಮೃದುವೇ ಆಗುತ್ತದೆ ಎಂದಿಟ್ಟುಕೊಳ್ಳೋಣ. ಕಾಠಿಣ್ಯ ಕರಗಬೇಕಾದರೆ, ಹೃದಯ ಮೃದುವಾಗಬೇಕಾದರೆ, ಸಂಕಟದ ಪೀಠಿಕೆ ಇದ್ದೇ ತೀರಬೇಕೆ! ಇಂದೆಂಥ ಹೃದಯ ಶೂನ್ಯ ವ್ಯವಸ್ಥೆ! ಸರ್ವಜ್ಞನಾದ ದೇವರಿಗೆ ಇದಕ್ಕಿಂತ ಉತ್ತಮವಾದ ವ್ಯವಸ್ಥೆ ಹೊಳೆಯಲಿಲ್ಲವೆ? ಹೊಳೆದಿದ್ದರೆ—ಸರ್ವ ಶಕ್ತನಾದ ದೇವರಿಗೆ ಅದನ್ನು ಆಚರಣೆಗೆ ತರುವುದು ಕಷ್ಟವಾಯಿತೆ? ಈ ಪ್ರಶ್ನೆಗಳಿಗೆ ಯಾರಾದರೂ ಸಮರ್ಪಕವಾದ ಉತ್ತರ ಕೊಟ್ಟಿದ್ದರೆ ಅದು ನನಗೆ ತಿಳಿಯದ ವಿಷಯ.

ಇಂದಿಗೂ ನನ್ನನ್ನು ಕಾಡುವುದು ಕೇಡಿನ ಸಮಸ್ಯೆ (the problem of evil) ಗಿಂತ ಹೆಚ್ಚಾಗಿ ಸಂಕಟದ ಸಮಸ್ಯೆ. ಕೇಡಿಗ ತನ್ನ ಕೇಡಿಗತನದ ಫಲವಾಗಿ ಅನುಭವಿಸುವ ಸಂಕಟವನ್ನು ನೋಡುವುದೂ ಕಷ್ಟವೇ. ಸಜ್ಜನರಲ್ಲಾಗಲಿ ಕೇಡಿಗರಲ್ಲಾಗಲಿ, ಸಂಕಟ ಸಂಕಟವೇ. ಈ ಮಾತು ಕೇಡಿಗತನದ ಸಮರ್ಥನೆಯಾಗಬೇಕಾಗಿಲ್ಲ. ಸಂಕಟ ಎಲ್ಲೇ ಇರಲಿ, ಯಾವ ಕಾರಣದಿಂದಲೇ ಬರಲಿ ಅದಕ್ಕೆ ಸಹಾನುಭೂತಿ ಸಲ್ಲಬೇಕು ಎಂಬ ಭಾವನೆ, ಅಷ್ಟೆ.

ಕಾಲೇಜಿಗೆ ಸೇರಲು ಹೊರಟ ದಿನ ನಾನು ಕಟ್ಟಬೇಕಾಗಿದ್ದ ಹಣವನ್ನು ಕೈಯಲ್ಲಿಟ್ಟು ನನ್ನ ತಂದೆ "ಅಮ್ಮನಿಗೆ (ನನ್ನ ಅಜ್ಜಿಗೆ) ನಮಸ್ಕಾರ ಮಾಡಿ ಹೋಗು" ಎಂದರು; ಅಮ್ಮ "ಮೊದಲು ದೇವರಿಗೆ ನಮಸ್ಕಾರ ಮಾಡಪ್ಪ" ಎಂದರು. ನಾನು ದೇವರಿಗೆ ಯಾಂತ್ರಿಕವಾಗಿಯೂ ಅಜ್ಜಿ-ತಾಯಿ-ತಂದೆಯರಿಗೆ ಹೃತ್ಪೂರ್ವಕವಾಗಿಯೂ ನಮಸ್ಕರಿಸಿದೆ. ಈಗ ಇದನ್ನೆಲ್ಲ ನೆನೆದರೆ "ಕಾಲೇಜಿಗೆ ಸೇರುವುದು ಯಾವ ಮಹಾ ದೊಡ್ಡ ವಿಷಯ? ಅದಕ್ಕೆ ಇಷ್ಟೆಲ್ಲ ಕಲಾಪದ ಪೀಠಿಕೆಯೆ!" ಎಂದು ನಗುವಂತಾಗುತ್ತದೆ. ಆದರೆ ಆ ಕಾಲದಲ್ಲಿ ಕೆಳಮಧ್ಯಮವರ್ಗದ ಹುಡುಗನೊಬ್ಬ ಸಾಕಷ್ಟು ಹುಡುಕದೆ ಕಾಲೇಜಿಗೆ ಸೇರುವುದೆಂದರೆ ಮಹತ್ವದ ವಿಷಯ!

ಆಗ ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆಯಾಗಿ ಕೇವಲ ೪-೫ ವರ್ಷ ಕಳೆದಿತ್ತು. ಅದನ್ನು ಸ್ಥಾಪಿಸಿದ ಮತ್ತು ಮೊದಮೊದಲು ಬೆಳಸಿದ ಜನರಿಗೆ ಅದು ಭಾರತದ ಅತ್ಯುತ್ತಮ ವಿದ್ಯಾಪೀಠಗಳಲ್ಲಿ ಒಂದಾಗಬೇಕೆಂಬ ಉತ್ಕಟ ಆಸೆ. ಸಂಕುಚಿತ ಪ್ರಾಂತೀಯ ಭಾವನೆಗಳಿಗೆ ಎಡೆಗೊಡದೆ ಇಡೀ ಭಾರತದಲ್ಲಿ ಉದ್ದಾಮ ಪಂಡಿತರೆಂದು ಹೆಸರು ಮಾಡಿದ್ದ ರಾಧಾಕೃಷ್ಣನ್, ರಾಧಾಕುಮುದ ಮುಖರ್ಜಿ, ಕೆ.ಟಿ.ಷಾ ಮೊದಲಾದವರನ್ನೂ ಆ ವಿದ್ವಾಂಸರ ಸಮಕ್ಕೇ ನಿಂತ ಕನ್ನಡಿಗರೇ ಆದ ಎನ್. ಎಸ್. ಸುಬ್ಬರಾವ್, ಎಂ. ಹಿರಿಯಣ್ಣ ಮೊದಲಾದವರನ್ನೂ ಪ್ರಾಧ್ಯಾಪಕ ಸ್ಥಾನಕ್ಕೆ ಕರೆ ತಂದರು. ಆಕ್ಸ್‌ಫರ್ಡ್ ಮಾದರಿಯನ್ನು ಅನುಸರಿಸಿ 'ಯೂನಿವರ್ಸಿಟಿ ಯೂನಿಯನ್' ಸಂಸ್ಥೆಯನ್ನು ಸ್ಥಾಪಿಸಿದರು. ಕಾಲೇಜಿನಲ್ಲಿ ನಾಟಕ ಸಂಘವೊಂದು ರೂಪುಗೊಂಡು ನಾನು ಕಾಲೇಜಿಗೆ ಸೇರುವ ವೇಳೆಗಾಗಲೇ ಮೈಸೂರು ಮಹಾರಾಜರನ್ನು ಕೂಡ ಆಕರ್ಷಿಸುವಷ್ಟು ಖ್ಯಾತಿ ಪಡೆದಿದ್ದೆ. ಕೃಷ್ಣರಾಜ ಒಡೆಯರು ಸಂಘವನ್ನು ಅರಮನೆಗೆ ಆಹ್ವಾನಿಸಿ ಅಲ್ಲಿ ಕೆಲವು ನಾಟಕಗಳನ್ನು ಆಡಿಸಿದರು. ಆ ಸಂದರ್ಭದಲ್ಲಿ ಒಡೆಯರು ನಟರಿಗೆ ಬಹುಮಾನವಾಗಿ ಕೊಟ್ಟ ಬಹು ಸುಂದರವಾದ ಹೆನ್ರಿ, ಅರ್ವಿಂಗ್, ಎಲನ್‌ಟೆರಿ ಮುಂತಾದ ಪ್ರಸಿದ್ಧ ನಟನಟಿಯರ ಚಿತ್ರಗಳುಳ್ಳ, ಷೇಕ್ಸ್‌ಪಿಯರ್-ಸಂಪುಟವನ್ನು ನೋಡಿದ ನೆನಪಿದೆ. ನಾನು ಕಾಲೇಜಿಗೆ ಸೇರಿದ ವರ್ಷವೇ ಆಕ್ಸ್‌ಫರ್ಡ್ ಮಾದರಿಯ 'ಟ್ಯುಟೋರಿಯಲ್' ವ್ಯವಸ್ಥೆ ಜಾರಿಗೆ ಬಂತು. ಒಬ್ಬೊಬ್ಬ ಪ್ರಾಧ್ಯಾಪಕನೂ ೨೦-೨೫ ವಿದ್ಯಾರ್ಥಿಗಳಲ್ಲಿ ವಿಶೇಷ ಆಸಕ್ತಿಯನ್ನು ವಹಿಸತಕ್ಕದ್ದು ; ಅವರೊಡನೆ ಬಿಚ್ಚುಮನಸ್ಸಿನಿಂದ ಮಾತುಕಥೆ ನಡೆಸಿ ಅವರ ಮನಸ್ಸು ಅರಳಲು ನೆರವಾಗತಕ್ಕದ್ದು ; ಒಟ್ಟಿನಲ್ಲಿ ಅವರ ವ್ಯಕ್ತಿತ್ವ ಸಂಪದ್ಭರಿತವಾಗಿ ರೂಪುಗೊಳ್ಳುವಂತೆ ಎಲ್ಲ ಪ್ರಯತ್ನವನ್ನೂ ಮಾಡತಕ್ಕದ್ದು—ಇದು ಟ್ಯುಟೋರಿಯಲ್ ವ್ಯವಸ್ಥೆಯ ಗುರಿ. (ಏಕೋ ಕಾಣೆ—ಈ ವ್ಯವಸ್ಥೆ ಶೈಶವದಲ್ಲೇ ಸೊರಗಿ ಸತ್ತುಹೋಯಿತು!)

ವಿಶ್ವವಿದ್ಯಾನಿಲಯ ತನ್ನ ಗುರಿಯನ್ನು ಸಾಧಿಸಬೇಕಾದರೆ ಶಿಸ್ತು (discipline) ಅವಶ್ಯಕವೆಂದು ಅಧ್ಯಾಪಕರು, ಆಡಳಿತವರ್ಗ, ವಿದ್ಯಾರ್ಥಿಗಳು—ಎಲ್ಲರೂ ಒಪ್ಪಿದರು—ಅದು ಚರ್ಚಾಸ್ಪದವಾದ ವಿಷಯವೇ ಅಲ್ಲ ಎಂದು ಎಲ್ಲರೂ ಭಾವಿಸಿದ್ದರು. ಹುಡುಗರು ಶಿಸ್ತನ್ನು ಮುರಿಯಲೇ ಇಲ್ಲವೆಂದಲ್ಲ ; ಆಗಾಗ ಮುರಿದವರಲ್ಲಿ ನಾನೂ ಒಬ್ಬ. ಕ್ಲಾಸಿನಲ್ಲಿ—ಬಿ. ಎಂ. ಶ್ರೀ. ಯವರ ಕ್ಲಾಸಿನಲ್ಲಿ!—ಪಾಠ ನಡೆಯುತ್ತಿದ್ದಾಗ ಬಳಪದ ಆಟ ಆಡಿದ್ದುಂಟು. ಹಿಂದಿನ ಬೆಂಚಿನಲ್ಲಿ ಬಾಗಿಲ ಹತ್ತಿರ ಕುಳಿತಿದ್ದು 'ಪ್ರೆಸೆಂಟ್ ಸರ್' ಎಂದು ಹಾಜರಿ ಕೊಟ್ಟು ಅನಂತರ ತಲೆತಪ್ಪಿಸಿಕೊಂಡು ಹೋದದ್ದೂ ಉಂಟು. ರಾಜ್ಯ ವಿಜ್ಞಾನದ (political science) ಅಧ್ಯಾಪಕರಾದ ಎಚ್. ಕೃಷ್ಣರಾಯರ ಕ್ಲಾಸಿಗೆ ಎರಡು ದಿನ ತಪ್ಪಿಸಿಕೊಂಡು ಮೂರನೆಯ ದಿನ "ಸರ್, ಇವತ್ತು ಮೈಗೆ ಸ್ವಲ್ಪ ಇರಸುಮುರಸಾಗಿದೆ, ಹೋಗುವುದಕ್ಕೆ ಅಪ್ಪಣೆ ಕೊಡಬೇಕು" ಎಂದು ಕೇಳಿದ್ದು ಅವರು ನಗುತ್ತ ಬೆನ್ನ ಮೇಲೊಂದು ಪೆಟ್ಟು ಹಾಕಿ "ಹೋಗೊ ಹೋಗೊ! ನಿನ್ನೆ ಮೊನ್ನೆ ಅಪ್ಪಣೆ ತಗೊಂಡೇ ಚಕ್ಕರ್ ಕೊಟ್ಟೆಯೊ?" ಎಂದದ್ದೂ ನೆನಪಿದೆ. ಎನ್. ಎಸ್. ಸುಬ್ಬರಾಯರು "ಅಟೆಂಡೆನ್ಸ್ (ಹಾಜರಿ) ತೆಗೆದುಕೊಳ್ಳುವುದು

ಮುಗಿಯುವವರೆಗೆ ಯಾವ ವಿದ್ಯಾರ್ಥಿಯಾದರೂ ಅಪ್ಪಣೆ ಕೇಳದೆಯೇ ಒಳಗೆ ಬರಬಹುದು. ಪಾಠ ಪ್ರಾರಂಭವಾದ ಮೇಲೆ ಯಾರೂ ಬಾಗಿಲಿನಲ್ಲಿ ನಿಂತು "May I come in, sir ?" ಎಂದು ಕೇಳಕೂಡದು. ಐದು ನಿಮಿಷಕ್ಕಿಂತ ಹೆಚ್ಚು ಲೇಟ್ (late) ಆದರೆ ಕ್ಲಾಸಿಗೆ ಬರಲೇ ಬೇಡಿ" ಎಂದು ಕಟ್ಟಪ್ಪಣೆ ಮಾಡಿದ್ದರು. ನಾನು ಅಪರೂಪಕ್ಕೆ (ಸುಬ್ಬರಾಯರ ವಿಷಯದಲ್ಲಿ ಜಾಗರೂಕತೆ ಅವಶ್ಯಕ—ನಾಗರಹಾವಿನೊಡನೆ ಸರಸ ಆಡುವುದುಂಟೆ!) ಒಂದೊಂದು ದಿನ ಚಕ್ಕರ್‌ಕೊಟ್ಟು ಅವರು ಪಾಠ ಮುಗಿಸಿ ಹೊರಬರುವ ದಾರಿಯಲ್ಲಿ ಕಾಣಿಸಿಕೊಂಡು "I am sorry I was late, sir" ಎಂದದ್ದೂ ಅವರು "All right Murthy Rao. But don't make a habit of it" ಎಂದದ್ದೂ ನೆನಪಿದೆ. ಅವರು ಮನಸ್ಸಿನಲ್ಲೇ "ಇವನು ಕಳ್ಳಕೊರಮ" ಎಂದುಕೊಂಡಿದ್ದರೆ ಆಶ್ಚರ್ಯವಲ್ಲ!

ಆಗ ಒಂದೊಂದು ತರಗತಿಯಲ್ಲೂ ಸುಮಾರು ೧೫೦ ಜನ ವಿದ್ಯಾರ್ಥಿಗಳಿರುತ್ತಿದ್ದರು. ಅಷ್ಟು ಜನ ಯುವಕರು ಸೇರಿದ ಕಡೆ ಮೇಲೆ ಹೇಳಿದಂಥ ಅಕ್ರಮ ನಡೆಯತಕ್ಕದ್ದೇ. ಆದರೆ 'ಅಶಿಸ್ತು ನಮ್ಮ ಹಕ್ಕು' ಎಂಬ ಭಾವನೆ ಯಾರಲ್ಲೂ ಇರಲಿಲ್ಲ. ನಾನು ಅದೇ ಕಾಲೇಜಿನಲ್ಲಿ ಅಧ್ಯಾಪಕನಾದಾಗ—ಒಂದೆರಡು ವರ್ಷ ಪಾಠ ಹೇಳಿ ಆತ್ಮವಿಶ್ವಾಸ ಬಂದಮೇಲೆ—"ಆಸಕ್ತಿಯಿಲ್ಲದ ವಿದ್ಯಾರ್ಥಿಗಳು ಹೊರಗೆ ಹೋಗಲು ನನ್ನ ಅಭ್ಯಂತರವೇನೂ ಇಲ್ಲ. ಹಾಜರಿ ಕೊಡುತ್ತೇನೆ. ಹೋಗಲು ಇಷ್ಟವುಳ್ಳವರು ಹೋಗಬಹುದು" ಎಂದು ಹೇಳಿದ್ದುಂಟು. ಆ ಸೌಲಭ್ಯದ ದುರುಪಯೋಗವೇನೂ ನಡೆಯಲಿಲ್ಲ.

ತಾವು ಹುಡುಗರಿಂದ ನಿರೀಕ್ಷಿಸಿದ ಶಿಸ್ತನ್ನು ಅಧ್ಯಾಪಕರೂ ಪಾಲಿಸುತ್ತಿದ್ದರು. ಎನ್. ಎಸ್. ಸುಬ್ಬರಾಯರು ಪ್ರಿನ್ಸಿಪಲ್ ಆಗಿದ್ದಾಗ ವಾರಕ್ಕೆ ಎರಡು ಮೂರು ಸಾರಿಯಾದರೂ ಬೆಳಗ್ಗೆ ೮–೩೦ ಘಂಟೆಗೆ ಕಾಲೇಜಿಗೆ ಬಂದು ಎಲ್ಲ ಕೊಠಡಿಗಳೂ ಚೊಕ್ಕಟವಾಗಿವೆಯೆ ಎಂದು ನೋಡಿಕೊಂಡು ಹೋಗುತ್ತಿದ್ದರು. ಯಾವ ಮೂಲೆಯಲ್ಲಿ ಜೇಡ ಬಲೆ ಕಟ್ಟಿದ್ದರೂ ಅವರ ಗರುಡಗಣ್ಣು ಅದನ್ನು ಪತ್ತೆ ಮಾಡುತ್ತಿತ್ತು. ನಾನು ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ—ನನ್ನ ನೆನಪಿರುವ ಮಟ್ಟಿಗೆ—ಸಿಗರೆಟ್ ಸೇದುತ್ತಿದ್ದ ಅಧ್ಯಾಪಕರೆಂದರೆ ಮೂರೇ ಮೂರು ಜನ: ಜೆ. ಸಿ. ರಾಲೊ, ಎ. ಬಿ. ಮ್ಯಾಕಿಂಟಾಷ್, ಎಚ್. ಎಸ್. ನಂಜುಂಡಯ್ಯನವರು. ಮೂವರೂ ನಮ್ಮ ಇಂಗ್ಲಿಷ್ ಇಲಾಖೆಗೆ ಸೇರಿದವರು. ಇವರಲ್ಲಿ ಯಾರೊಬ್ಬರೂ ತಮ್ಮ ಕೊಠಡಿಯ ಹೊರಗೆ ಸೇದಿದ್ದನ್ನು ಕಾಣೆ. ಸಂಜೆ ಅವಿಧ್ಯುಕ್ತ ಗೋಷ್ಠಿಗಳಲ್ಲಿ ಮಾತ್ರ ಕೆಲವು ವೇಳೆ ರಾಲೊ ಸಿಗರೆಟ್ ಹಚ್ಚುತ್ತಿದ್ದರು.

ನಾನು ಬಲ್ಲಂತೆ ೧೯೪೦ ರ ವರೆಗೆ, ಬಹುಶಃ ಆಮೇಲೂ ಐದಾರು ವರ್ಷ ಪ್ರತಿ ವರ್ಷವೂ ಬೇಸಿಗೆ ರಜ ಮುಗಿದ ಮೇಲೆ ಜೂನ್ ೨೪ನೇ ತಾರೀಖು (ಅವತ್ತು ಭಾನುವಾರವಾದರೆ ಮಾರನೆಯದಿನ) ಕಾಲೇಜು ತೆರೆಯುತ್ತಿತ್ತು. ಆನೆ ಆಡಿ ಕುದುರೆ ಕುಣಿಯಲಿ—ಈ ಕ್ರಮಕ್ಕೆ ಚ್ಯುತಿಯಿಲ್ಲ. ಅವತ್ತು ಮೊದಲ ಘಂಟೆ ಏನಾದರೂ ಪಾಠದ ಶಾಸ್ತ್ರ ಮಾಡಿ ಹುಡುಗರನ್ನು ಬಿಟ್ಟು ಬಿಡುತ್ತಿದ್ದರು. ಅದೇ ದಿನ ಪ್ರತಿಯೊಂದು ಇಲಾಖೆಯಲ್ಲೂ ಅಧ್ಯಾಪಕರೆಲ್ಲ ಸೇರಿ ಯಾರು ಯಾವ ಪಾಠ ಹೇಳಬೇಕೆಂಬುದನ್ನು

ನಿರ್ಣಯಿಸಿ ಪಾಠದ ಪಟ್ಟಿಯನ್ನು ಸಿದ್ಧ ಮಾಡಿ ಪ್ರಕಟಿಸುತ್ತಿದ್ದರು. ೨೫ ನೇ ತಾರೀಖಿನಿಂದ ಎಲ್ಲ ತರಗತಿಗಳಲ್ಲೂ ಪಾಠ ಪ್ರಾರಂಭ. ವರ್ಷಾಂತ್ಯದ ಪರೀಕ್ಷೆಗಳು ಇಂಥ ದಿನದಿಂದ ಆರಂಭವಾಗಿ ನಡೆಯಬೇಕೆಂದು ನಿರ್ಣಯಿಸಿದ ಮೇಲೆ ಆ ನಿರ್ಣಯ ಬದಲಾಗುತ್ತಿರಲಿಲ್ಲ. ಜೂನ್ ತಿಂಗಳ ಆರಂಭದ ವೇಳೆಗಾಗಲೇ ಪರೀಕ್ಷೆಗಳ ಫಲಿತಾಂಶ ಪ್ರಕಟವಾಗಿರುತ್ತಿತ್ತು. ಆದ್ದರಿಂದ ೨೪ ನೇ ತಾರೀಖಿನ ಹೊತ್ತಿಗೆ ಹುಡುಗರು ತರಗತಿಗಳಿಗೆ ಸೇರಿರುವುದೂ ಪಾಠ ಪ್ರಾರಂಭವಾಗುವುದೂ ಸುಲಭ ಸಾಧ್ಯವಾಗಿತ್ತು.

ಆಗ ಬಿ. ಎ. ಆನರ್ಸ್ ವ್ಯವಸ್ಥೆ ಇರಲಿಲ್ಲ. ಮೂರು ವರ್ಷ ಓದಿದ ಮೇಲೆ ಬಿ. ಎ. ಪರೀಕ್ಷೆ; ಅನಂತರ ಎಂ. ಎ. ಗೆ ಎರಡು ವರ್ಷ. ಬಿ. ಎ. ಮಟ್ಟದಲ್ಲಿ ನಾಲ್ಕಾರು ಶಾಸ್ತ್ರಗಳ ಪರಿಚಯ ಮಾಡಿಕೊಂಡು ಅನಂತರ ಅವುಗಳಲ್ಲಿ ಯಾವುದಾದರೂ ಒಂದನ್ನು ಎಂ. ಎ. ಗೆ ವಿಶೇಷಾಧ್ಯಯನಕ್ಕಾಗಿ ಆರಿಸಿಕೊಳ್ಳಬಹುದು. ನಾನು ಓದಿದ ಶಾಸ್ತ್ರಗಳನ್ನು ಉದಾಹರಣೆಗಾಗಿ ಇಲ್ಲಿ ಕಾಣಿಸಿದ್ದೇನೆ. ಇಂದಿನ ಕಡ್ಡಾಯ ಮತ್ತು ಐಚ್ಛಿಕ ಇಂಗ್ಲಿಷು ಗಳೆರಡೂ ಸೇರಿದರೆ ಅಂದಿನ 'ಕಂಪಲ್ಸರಿ (ಕಡ್ಡಾಯ) ಇಂಗ್ಲಿಷ್' ಆಗುತ್ತಿತ್ತು. ಬಿ. ಎ. ಪರೀಕ್ಷೆಗಾಗಿ (೨ ನೇ ಮತ್ತು ೩ ನೇ ಬಿ. ಎ. ತರಗತಿಗಳಲ್ಲಿ) ನಮಗೆ ೧೨ ಇಂಗ್ಲಿಷ್ ಪುಸ್ತಕಗಳು ಪಠ್ಯವಾಗಿದ್ದವೆಂದು ನೆನಪು. ನಾಟಕ, ಕಾವ್ಯ, ಗದ್ಯ, ಕಾದಂಬರಿ—ಒಂದೊಂದು ಪ್ರಕಾರದಲ್ಲೂ ಮೂರು ಮೂರು ಗ್ರಂಥಗಳು.

ಐಚ್ಛಿಕಗಳಲ್ಲಿ ಮೊದಲ ಗುಂಪು: ಅರ್ಥಶಾಸ್ತ್ರ; ರಾಜ್ಯ ವಿಜ್ಞಾನ (deductive politics ಮತ್ತು inductive politics). ಎರಡನೆಯ ಗುಂಪು: ತತ್ವಶಾಸ್ತ್ರ II (philosophy II) ೧. ಆಧುನಿಕ ತತ್ವಶಾಸ್ತ್ರದ ಇತಿಹಾಸ, ಅಂದರೆ ಡೆಕಾರ್ಟ್, ಸ್ಪಿನೋಸ, ಲೈಬ್ನಿಟ್ಸ್ ಮೊದಲಾದವರು ಪ್ರತಿಪಾದಿಸಿದ ತತ್ವಗಳು. ೨. ರಾಜ್ಯ ತತ್ವಗಳು, ಅಂದರೆ ಪ್ಲೇಟೋವಿನಿಂದ ೧೯ ನೇ ಶತಮಾನದವರೆಗೆ ಬೆಳೆದ ರಾಜ್ಯತತ್ವಶಾಸ್ತ್ರ—political philosophy. ೩. ರಾಜ್ಯತತ್ವವನ್ನು ಕುರಿತ ಎರಡು ಪ್ರಸಿದ್ಧ ಗ್ರಂಥಗಳು. ನಾನು ಓದಿದ್ದು ಜಾನ್ ಸ್ಟೂಯರ್ಟ್ ಮಿಲ್‌ನ Liberty ಮತ್ತು ಟಿ. ಎಚ್. ಗ್ರೀನ್‌ನ Political Obligations. ಒಂದೊಂದು ಶಾಸ್ತ್ರವನ್ನೂ ಕುರಿತಂತೆ ಅನೇಕ ಪುಸ್ತಕಗಳನ್ನು ಓದಬೇಕಾಗುತ್ತಿತ್ತು. ಅಂದ ಮೇಲೆ ಅಧ್ಯಯನ ಆಳವೂ ಆಗುತ್ತಿತ್ತು, ವಿಸ್ತಾರವೂ ಆಗುತ್ತಿತ್ತು ಅಧ್ಯಯನ ಎಂ. ಎ. ಯಲ್ಲಿ ಒಂದು ಶಾಸ್ತ್ರದ ವಿಶೇಷಾಧ್ಯಯನಕ್ಕೆ ಭದ್ರವಾದ ತಳಹದಿಯಾಗುತ್ತಿತ್ತು. ಇಂಟರ್ಮೀಡಿಯೆಟ್ ಮುಗಿದೊಡನೆ ಶಾಸ್ತ್ರವೊಂದರ ವಿಶೇಷಾಧ್ಯಯನವನ್ನು ಆರಂಭಿಸುವ ಆನರ್ಸ್ ಪದ್ಧತಿಗಿಂತ ಮೇಲೆ ಬಣ್ಣಿಸಿದ ಬಿ. ಎ. ಪದ್ಧತಿಯೇ ಉತ್ತಮವೆಂದು ಈಗಲೂ ನನ್ನ ಅಭಿಪ್ರಾಯ. ಚಾಲತಿಯಲ್ಲಿಲ್ಲದಿದ್ದರೆ ಆ ಶಾಸ್ತ್ರಗಳ ವಿವರಗಳೆಲ್ಲ ಮನಸ್ಸಿನಲ್ಲಿ ಜಾಗ್ರತವಾಗಿ ಉಳಿಯದಿರಬಹುದು; ಆದರೆ ಅವುಗಳು ಕಲ್ಪಿಸುವ ಹಿನ್ನೆಲೆಯಿಂದ ಬಹಳ ಪ್ರಯೋಜನವುಂಟು. ಅವುಗಳ ಅಧ್ಯಯನದಿಂದ—ಮುಖ್ಯವಾಗಿ ತತ್ವಶಾಸ್ತ್ರದ ಅಧ್ಯಯನದಿಂದ—ಆಗುವ ಅಮೂಲ್ಯವಾದ ಪ್ರಯೋಜನವೆಂದರೆ: ನಿಷ್ಪಕ್ಷಪಾತವಾಗಿ, ತರ್ಕಬದ್ಧವಾಗಿ, ಚಿಂತನೆ ಮಾಡುವ ಪ್ರವೃತ್ತಿ. "ಯಾವ ಸಮಸ್ಯೆಯನ್ನಾಗಲಿ ಏಕಪಕ್ಷೀಯವಾಗಿ ಪರಿಶೀಲಿಸಿ ತೀರ್ಮಾನಕ್ಕೆ ಬರಬಾರದು. ನಮ್ಮ

ಮನಸ್ಸಿನಲ್ಲಿರುವ ಪೂರ್ವಗ್ರಹಗಳಿಂದಾಗಿ ಹಾಗೆ ಹಳ್ಳಕ್ಕೆ ಬೀಳುವುದು ತೀರ ಸುಲಭ! ಪೂರ್ವಪಕ್ಷದ ಪರಿಶೀಲನೆ ನಡೆಸಿ, ಅದಕ್ಕೆ ಹೇಳಬೇಕಾದ ಉತ್ತರ ಹೇಳಿ, ಅನಂತರ ಸ್ವಂತ ವಾದವನ್ನು ಮಂಡಿಸಬೇಕು. ನಮ್ಮ ವಾದಕ್ಕಿರುವ ಮಿತಿಗಳನ್ನು ಪ್ರಾಮಾಣಿಕವಾಗಿ (ಈ ಪ್ರಾಮಾಣಿಕತೆ ಸುಲಭವಲ್ಲ—'ನನ್ನದು' ಎಂಬ ಅಭಿಮಾನ ಅದಕ್ಕೆ ಅಡ್ಡ ಬರುತ್ತದೆ!) ಕಾಣಿಸಬೇಕು" ಇದು ಈ ಮನೋವೃತ್ತಿ, ನಾಲ್ಕಾರು ಶಾಸ್ತ್ರಗಳ ಅಧ್ಯಯನದಿಂದ ಆಗುವ ದೊಡ್ಡ ಪ್ರಯೋಜನ.

ನಾನು ಆಯ್ದುಕೊಂಡ 'ಫಿಲಾಸಫಿ II' ಗುಂಪಿನಲ್ಲಿ ಪ್ಲೇಟೋ ಸೇರಿರಲಿಲ್ಲ. ರಾಜ್ಯತತ್ವಗಳ (political philosophy) ಅಧ್ಯಯನ ಮಾಡುವಾಗ ಸ್ವಲ್ಪ ಮಟ್ಟಿಗೆ ಅವನ ತತ್ವಗಳ ಪರಿಚಯವಾಯಿತು. ನಾನು ಎಂ.ಎ. ಕ್ಲಾಸಿಗೆ ವಿಮರ್ಶ ತತ್ವಗಳನ್ನು (principles of criticism) ಪಾಠ ಹೇಳಲಾರಂಭಿಸಿದ ಮೇಲೆ ವಿಶೇಷ ಆಸಕ್ತಿ ಹುಟ್ಟಿತು. ಪ್ಲೇಟೋವಿನಲ್ಲಿ ಅಪ್ಪಟ ತತ್ವಶಾಸ್ತ್ರದ ಜೊತೆಗೆ ಸಾಹಿತ್ಯ-ಸೌಂದರ್ಯಗಳ ಮೀಮಾಂಸೆಯೂ ದೊರೆಯುತ್ತದೆಯಷ್ಟೆ. ಭಾರತೀಯ ತತ್ವಶಾಸ್ತ್ರ ಆಗ ನನ್ನ ಮಟ್ಟಿಗೆ ದೂರದ ಕನಸೂ ಅಲ್ಲ. ೧೯೪೧ರ ಸುಮಾರಿನಲ್ಲಿ ನಾನು ನನ್ನ ಪ್ರಿಯಸ್ನೇಹಿತ ಕಸ್ತೂರಿ ರಂಗಾಚಾರ್ಯರೂ ಶಿವಮೊಗ್ಗದಲ್ಲಿದ್ದೆವು. ಅಲ್ಲಿಯ ವಿದ್ವಾಂಸರೊಬ್ಬರ ನೆರವು ಪಡೆದು ಬ್ರಹ್ಮಸೂತ್ರ ಭಾಷ್ಯದ ಅಧ್ಯಯನವನ್ನು ಪ್ರಾರಂಭಿಸಿದೆವು. ಯಾವ ಕಾರಣದಿಂದಲೋ ಕಾಣೆ, ನಮ್ಮ ಅಧ್ಯಯನ ಎರಡು ತಿಂಗಳೂ ಸರಿಯಾಗಿ ನಡೆಯಲಿಲ್ಲ. ನಾನು ಉಪನಿಷತ್ತುಗಳ ಓದಿಗೆ ಕೈಹಾಕಿದ್ದು ೧೯೫೦ ಕಳೆದ ಮೇಲೆ. ಅವರ ವಯಸ್ಸಿನಲ್ಲಿ ವೈರಾಗ್ಯ ಬಂದು ಮನಸ್ಸು ವೇದಾಂತದ ಕಡೆಗೆ ತಿರುಗುತ್ತದೆಯಂತೆ. ನನ್ನ ಮನಸ್ಸು ಉಪನಿಷತ್ತುಗಳ ಕಡೆಗೆ ತಿರುಗಿದರೂ ವೈರಾಗ್ಯವೇನೂ ಬರಲಿಲ್ಲ. ಭಾಷ್ಯಗಳನ್ನು ಕ್ರಮವಾಗಿ ಓದಿ ಕರಗತಮಾಡಿಕೊಳ್ಳುವವರೆಗೆ 'ಉಪನಿಷತ್ತುಗಳನ್ನು ವಶಮಾಡಿಕೊಂಡೆ' ಎನ್ನುವಂತಿಲ್ಲ. ನಾನು ಭಾಷ್ಯಗಳನ್ನು ಓದಿಯೇ ಇಲ್ಲ. ಉಪನಿಷತ್ತುಗಳಲ್ಲಿ ಬರುವ ಪ್ರಸಂಗಗಳೂ ಸಾರವತ್ತಾದ ಮಂತ್ರಗಳೂ ನೆನಪಿಗೆ ಬರುತ್ತಿರುತ್ತವೆ. "ಇದಕ್ಕೆ ಹೀಗೇಕೆ ಅರ್ಥಮಾಡಬಾರದು ?" ಎಂದುಕೊಳ್ಳುತ್ತೇನೆ. ಆದರೆ ಅವುಗಳ ವಿಷಯ ಮಾತಾಡುವ ಅಥವಾ ಬರೆಯುವ ಸಾಹಸಕ್ಕೆ ಕೈಹಾಕಲೊಲ್ಲೆ.

(ಮುಂದುವರಿಯುವುದು)

ಧರ್ಮ ಇಲ್ಲದ ಮನುಷ್ಯ ಚುಕ್ಕಾಣಿ ಇಲ್ಲದ ಹಡಗಿನಂತೆ.

ಗಾಂಧೀಜಿ

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಯುದ್ಧ ಮತ್ತು ಶಾಂತಿ

ಅನುವಾದ

ಪ್ರೊ|| ದೇಜಗೌ

"ಯುದ್ಧ ಮತ್ತು ಶಾಂತಿ"ಯ ಪ್ರಥಮ ಸಂಪುಟ ಈ ಸಂಚಿಕೆಯೊಡನೆ ಮುಕ್ತಾಯವಾಯಿತು.

—ಸಂಪಾದಕ

'ಓ, ಅದು ನಿಜಕ್ಕೂ ಭಯಂಕರವಾಗಿದೆ' ಎಂದು ಪಿಯರಿ ನುಡಿದನು. 'ಅಂಥ ಭಾವನೆಗಳಿಂದ ಮನುಷ್ಯ ಹೇಗೆ ಬದುಕುತ್ತಾನೆಯೋ ತಿಳಿಯದು. ಇತ್ತೀಚೆಗೆ, ನಾನು ಮಾಸ್ಕೋದಲ್ಲಿದ್ದಾಗ, ಅನಂತರ ಪ್ರವಾಸ ಸಮಯದಲ್ಲಿ ಆ ರೀತಿ ಯೋಚಿಸುತ್ತಿದ್ದುದೂ ಉಂಟು. ಆದರೆ ಅಂಥ ಸಂದರ್ಭಗಳಲ್ಲಿ ಬದುಕಬಾರದೆನ್ನುವಷ್ಟರ ಮಟ್ಟಿಗೆ ನಾನು ಧೈರ್ಯಗುಂದುತ್ತೇನೆ. ನಾನು ಮೊದಲುಗೊಂಡು ಪ್ರತಿಯೊಂದೂ ಅಸಹ್ಯವಾಗಿ ಕಾಣುತ್ತದೆ. ಆಗ ನಾನು ತಿನ್ನುವುದಿಲ್ಲ, ಮೀಯುವುದಿಲ್ಲ....ಅಂಥ ಸಂದರ್ಭದಲ್ಲಿ ನೀವು ಹೇಗಿರುತ್ತೀರೊ, ಕಾಣೆ?....'

'ಮೀಯಬಾರದೇಕೆ? ಅದು ಸರಿಯಲ್ಲ. ಅದಕ್ಕೆ ಬದಲಾಗಿ ಜೀವನವನ್ನು ಆದಷ್ಟು ಚೆನ್ನಾಗಿಡಲು ಮನುಷ್ಯ ಪ್ರಯತ್ನಿಸಬೇಕು. ನಾನು ಬದುಕಿರುವುದು ನನ್ನ ತಪ್ಪಲ್ಲ. ಇತರರನ್ನು ನೋಯಿಸದೆ, ಅತ್ಯುತ್ತಮವಾಗಿ ಜೀವನ ನಡಸುವುದು ನನ್ನ ಕರ್ತವ್ಯ' ಎಂದು ಆಂಡ್ರ್ಯೂ ಮಾರ್ನುಡಿದನು.

'ಆದರೆ ಅಂಥ ಭಾವನೆಗಳಿಂದ ಬದುಕಲು ಪ್ರೇರಣೆ ದೊರಕುತ್ತದೆಯೆ? ದೊರಕದಿರುವಾಗ ಮನುಷ್ಯ ಅತ್ತಿತ್ತ ಚಲಿಸದೆ, ಏನೂ ಕೆಲಸ ಮಾಡದೆ ಸುಮ್ಮನೆ ಕುಳಿತಿರುತ್ತಾನೆ, ಕಾಲಹರಣ ಮಾಡುತ್ತಾನೆ.'

'ಈಗಿರುವಂತೆ ಬದುಕಿನಲ್ಲಿ ಶಾಂತಿಯಿಲ್ಲ. ಕೆಲಸದಿಂದ ಪಾರುಮಾಡಿದರೆ ಸಾಕು, ನಾನು ದೇವರಿಗೆ ವಂದನೆ ಸಲ್ಲಿಸುತ್ತೇನೆ. ಸ್ಥಳೀಯ ಕುಲೀನ ವರ್ಗ ನನ್ನನ್ನು ತನ್ನ ಪ್ರತಿನಿಧಿಯನ್ನಾಗಿ ಆರಿಸಿ, ಗೌರವ ಸಲ್ಲಿಸಿದೆ. ಅದರಿಂದ ತಪ್ಪಿಸಿಕೊಳ್ಳಲೂ ನಾನು ಪ್ರಯತ್ನಿಸಿದೆ. ಆ ಸ್ಥಾನಕ್ಕಗತ್ಯವಾದ ಅರ್ಹತೆಗಳು ನನ್ನಲ್ಲಿಲ್ಲವೆಂಬುದು ಅವರ ಬಗೆಗಣ್ಣಿಗೆ ಹೊಳೆಯಲಿಲ್ಲ. ಆ ಸ್ಥಾನಕ್ಕೆ ಬೇಕಾದ್ದು ಸತ್‌ಸ್ವಭಾವದ, ಆಡಂಬರದ ಸೋಗು. ಹಾಯಾಗಿರಲು ನನಗೊಂದು ಗೂಡು ಬೇಕು. ಅದಕ್ಕಾಗಿ ಈ ಮನೆಯನ್ನೀಗ ಕಟ್ಟಿಮುಗಿಸಬೇಕಾಗಿದೆ. ಜತೆಗೆ ಸೇನಾ ಜಮಾವಣೆ ಕೆಲಸ ಬೇರೆ.'

'ನೀವು ಸೈನ್ಯದಲ್ಲಿ ಸೇವೆ ಸಲ್ಲಿಸಬಾರದೇಕೆ?'

'ಆಸ್ಟರ್‌ಲಿಜ್ ತರುವಾಯ ಬಿಟ್ಟೆ' ಎಂದು ರಾಜಕುಮಾರ ಆಂಡ್ರ್ಯೂ ನಿರುತ್ಸಾಹದಿಂದ ನುಡಿದನು. ಕ್ರಿಯಾಶೀಲ ರಷ್ಯಾ ಸೈನ್ಯದಲ್ಲಿ ಮತ್ತೆ ಸೇವೆ ಸಲ್ಲಿಸಬಾರದೆಂದು ನಾನು ನಿರ್ಧರಿಸಿಕೊಂಡಿದ್ದೇನೆ. ನನ್ನ ನಿರ್ಧಾರ ಅಚಲ. ಬೋನಪಾರ್ಟ್ ಸ್ಮಾಲನ್‌ಸ್ಕ್ ತನಕ ಮುನ್ನುಗ್ಗಿ, ಬಾಲ್ಡ್ ಬೆಟ್ಟಗಳು ಅಪಾಯ ಸ್ಥಿತಿಯಲ್ಲಿದ್ದರೂ ನಾನು ರಷ್ಯನ್ ಸೇನೆಯನ್ನು ಸೇರಲಾರೆ.' ಅವನು ಸಮಾಧಾನ ತಂದುಕೊಂಡು 'ನಾನು ಈಗತಾನೆ ಹೇಳುತ್ತಿದ್ದಂತೆ, ಈಗ ಈ ಸೇನಾ ಜಮಾವಣೆಯ ಕೆಲಸವಿದೆ. ನನ್ನ ತಂದೆ ಮೂರನೆಯ ಜಿಲ್ಲೆಯಲ್ಲಿ ಜಮಾವಣೆಯ ಮುಖಂಡತ್ವವನ್ನು ವಹಿಸಿಕೊಂಡಿದ್ದಾರೆ. ಕ್ರಿಯಾಶೀಲ ಸೇವೆಯಿಂದ ತಪ್ಪಿಸಿಕೊಳ್ಳಲು ಅವರ ಕೈಕೆಳಗೆ ಕೆಲಸ ಮಾಡುವುದೊಂದೆ ದಾರಿ.

'ಹೇಗೂ ನಿಮ್ಮ ಸೇವೆ ನಡೆದಿದೆ.'

'ನಡೆದಿದೆ' ಎಂದು ನುಡಿದು ಮೌನ ತಾಳಿದನು.

'ಈ ಉದ್ಯೋಗವಾದರೂ ಏಕೆ?'

'ಏಕೆಂದಿರಾ? ಅದಕ್ಕೊಂದು ಕಾರಣವುಂಟು. ನಮ್ಮ ತಂದೆ ಸಮಕಾಲೀನರಲ್ಲಿ ಅಸಾಧಾರಣ ವ್ಯಕ್ತಿ. ಆದರೆ ಅವರು ಮುದುಕರಾಗುತ್ತಿದ್ದಾರೆ. ಅವರು ಕ್ರೂರಿಯೆಂದು ಹೇಳಲಾಗದಿದ್ದರೂ, ಅವರ ಶಕ್ತಿಸಾಮರ್ಥ್ಯಗಳು ಅಸಾಧಾರಣವಾದುವು. ಮಿತಿಯಿಲ್ಲದ ಅಧಿಕಾರಕ್ಕೆ ಒಗ್ಗಿಹೋಗಿರುವ ಅವರು ಭಯಂಕರ ವ್ಯಕ್ತಿ. ಈಗಂತು ಸಾರ್ವಭೌಮರೇ ಅವರನ್ನು ಸೈನ್ಯ ಸಂಗ್ರಹ ಇಲಾಖೆಯ ದಂಡಾಧಿಕಾರಿಯನ್ನಾಗಿ ನೇಮಿಸಿದ್ದಾರೆ. ಹದಿನೈದು ದಿನಗಳ ಹಿಂದೆ ನಾನು ಎರಡು ಗಂಟೆ ತಡವಾಗಿ ಹೋಗಿದ್ದರೆ ಯೂಖ್ನೋವ ದಲ್ಲಿ ವೇತನಾಧಿಕಾರಿಯ ಗುಮಾಸ್ತ ಗಲ್ಲಿಗೇರುತ್ತಿದ್ದನು. ನನ್ನ ತಂದೆಯ ಮೇಲೆ ಪ್ರಭಾವ ಬೀರಬಲ್ಲವನು ನಾನೊಬ್ಬನೇ. ಆದ್ದರಿಂದಲೇ ನಾನು ಈ ಉದ್ಯೋಗದಲ್ಲಿರ ಬೇಕಾಗಿದೆ. ಅಂತ್ಯದಲ್ಲಿ ತಂದೆಯ ಮನಸ್ಸನ್ನು ಕೊರೆಯಬಹುದಾದ ಕೃತ್ಯಗಳಿಂದ ನಾನವರನ್ನು ಆಗಾಗ್ಗೆ ಪಾರುಮಾಡುತ್ತೇನೆ.'

'ಈಗ ತಿಳಿಯಿತೆ?'

'ಹೌದು, ಆದರೆ ನಿಮ್ಮ ಕಲ್ಪನೆಯಂತಲ್ಲ' ಎಂದು ರಾಜಕುಮಾರ ಆಂಡ್ರೂ ಮಾತು ಮುಂದುವರಿಸಿದನು. ಈ ನೀಚ ಗುಮಾಸ್ತ ಹೊಸ ಸಿಪಾಯಿಗಳ ಬೂಟುಗಳನ್ನು ಕದ್ದುಕೊಂಡಿದ್ದ. ಅವನ ಬಗ್ಗೆ ನನಗೆ ಸ್ವಲ್ಪವೂ ಮರುಕವಿಲ್ಲ. ಅವನನ್ನು ಗಲ್ಲಿಗೇರಿಸಿದ್ದರೆ ನನಗೆ ಸಂತೋಷವಾಗುತ್ತಿತ್ತು. ಆದರೆ ನನ್ನ ತಂದೆಗಾಗಿ ನಾನು ವಿಷಾದಿಸಬೇಕಾಯಿತು. ಅದೂ ಕೊನೆಯಲ್ಲಿ ನನಗೋಸ್ಕರವಾಗಿಯೇ.'

ರಾಜಕುಮಾರ ಆಂಡ್ರೂ ಹೆಚ್ಚು ಹೆಚ್ಚು ಉದ್ದೀಪ್ತನಾದನು. ತನ್ನ ಕೃತ್ಯಗಳ ಮೂಲಕ ನೆರೆಯವನಿಗೆ ಉಪಕಾರ ಮಾಡಬೇಕೆಂಬ ಬಯಕೆ ತನಗಿರಲಿಲ್ಲವೆಂದು ಪಿಯರಿಯ ಮುಂದೆ ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದಾಗ ಅವನ ಕಣ್ಣು ಜ್ವರತಪ್ತ ವಾಗಿದ್ದಂತೆ ಝಗಝಗಿಸಿದುವು.

'ಇಗೋ ನೀವೀಗ ನಿಮ್ಮ ಜೀತಗಾರರನ್ನು ಮುಕ್ತಗೊಳಿಸಲು ನಿರ್ಧರಿಸಿಕೊಂಡಿ ದ್ದೀರಿ' ಎಂದು ಆಂಡ್ರೂ ಮತ್ತೆ ಮಾತು ಮುಂದುವರಿಸಿದನು. 'ಅದು ಒಳ್ಳೆಯದೆ; ಆದರೆ ನಿಮಗಾಗಿಯಲ್ಲ. ನೀವವರನ್ನು ಚಡಿಯಿಂದ ಹೊಡೆಸಿದ್ದಾಗಲಿ, ಸೈಬೀರಿಯಾಕ್ಕೆ ಕಳಿಸಿದ್ದಾಗಲಿ ಇಲ್ಲವೆಂದು ತಿಳಿದಿದ್ದೇನೆ—, ನಿಮ್ಮ ಜೀತಗಾರರಿಗಂತು ಅಲ್ಲ. ಅವರನ್ನು ಹೊಡೆಸಿದ್ದರೆ ಅಥವಾ ಸೈಬೀರಿಯಾಕ್ಕೆ ರವಾನಿಸಿದ್ದರೆ, ಅವರಿಗೇನೂ ಅಷ್ಟು ತೊಂದರೆ ಯಾಗುವಂತಿಲ್ಲ. ಸೈಬೀರಿಯಾದಲ್ಲಿ ಅವರು ಅದೇ ಪಾಶವಿಕ ಜೀವನವನ್ನು ನಡೆಸುತ್ತಾರೆ; ಅವರ ಮೈಮೇಲಣ ಬಾಸುಂಡೆಗಳು ವಾಸಿಯಾಗುತ್ತವೆ. ಹಿಂದಿನಂತೆಯೇ ಅವರು ಸುಖವಾಗಿರುತ್ತಾರೆ. ಮಾಲೀಕರಿಗೆ ಮಾತ್ರ ಅದು ಒಳ್ಳೆಯದಾಗುತ್ತದೆ. ನ್ಯಾಯ ವಾಗಿಯೋ ಅನ್ಯಾಯವಾಗಿಯೋ ಶಿಕ್ಷೆ ವಿಧಿಸಿದುದರ ಪರಿಣಾಮವಾಗಿ ಅವರು ನೈತಿಕ ವಾಗಿ ಶೂನ್ಯವಾಗುತ್ತಾರೆ, ದುಃಖ ಭಾಜನರಾಗುತ್ತಾರೆ; ಕೊನೆಗೆ ಆ ದುಃಖವನ್ನದುಮಿ ಕೊಂಡು, ಕಠಿಣರಾಗುತ್ತಾರೆ. ಅವರ ಬಗ್ಗೆ ನನಗೆ ಮರುಕವಾಗುತ್ತದೆ; ಅವರಿಗಾಗಿ ಜೀತಗಾರರನ್ನು ಮುಕ್ತಗೊಳಿಸಬೇಕಾಗುತ್ತದೆ. ಅಪರಿಮಿತಾಧಿಕಾರದ ಸಂಪ್ರದಾಯದಲ್ಲಿ ಬೆಳೆದ ಸಜ್ಜನರು ಕಾಲಾಂತರದಲ್ಲಿ ದರ್ಪಿಷ್ಠರಾಗಿ, ಕೊನೆಗೆ ಕ್ರೂರಿಗಳಾಗಿ, ದರ್ಪ ಪ್ರಜ್ಞೆಯುಳ್ಳವರಾಗಿ, ತಮ್ಮನ್ನು ತಾವು ನಿಯಂತ್ರಿಸಿಕೊಳ್ಳಲಾರದೆ, ದಿನೇದಿನೇ ಅಪಾರ

ದುಃಖಕ್ಕೊಳಗಾಗುತ್ತಾರೆಂಬುದನ್ನು ನಾನು ಕಣ್ಣಾರೆ ಕಂಡಿದ್ದೇನೆ, ನೀವೂ ಕಂಡಿರಬೇಕೆಂದು ಭಾವಿಸಿದ್ದೇನೆ.'

ರಾಜಕುಮಾರ ಆಂಡ್ರೂವಿನ ಮಾತಿನಲ್ಲಿ ಶ್ರದ್ಧೆನಿಷ್ಠೆಗಳಿದ್ದುವೆಂಬುದನ್ನು ಪಿಯರಿ ಗ್ರಹಿಸಿದನು. ಇಂಥ ಆಲೋಚನೆಗಳಿಗೆ ತನ್ನ ತಂದೆಯ ನಿದರ್ಶನವೆ ಪ್ರೇರಣೆ ನೀಡಿರಬೇಕೆಂದು ಅವನು ಭಾವಿಸಿದನು. ಅವನು ಪ್ರತ್ಯುತ್ತರ ನೀಡಲಿಲ್ಲ.

'ಈಗ ನಿಮಗೆ ನನ್ನ ಮನಸ್ಸಿನ ವಿಷಾದ ಕಾರಣದ ಅರಿವಾಗಿರಬೇಕು. ಜೀತಗಾರರ ಬೆನ್ನು ಹಣೆಗಳ ಬಗ್ಗೆ ನಾನು ವಿಷಾದಿಸುವುದಿಲ್ಲ. ಅವರ ಬೆನ್ನಿಗೆ ಚಡಿಯೇಟು ಬಿದ್ದರೂ, ಗುರುತಿಗಾಗಿ ಅವರ ತಲೆಯುರೆಯನ್ನು ಬೋಳಿಸಿದರೂ, ಅದೇ ಬೆನ್ನು ತಲೆಗಳು ಮುಂದೆಯೂ ಇರುತ್ತವೆ. ಮಾನವನ ಗೌರವಕ್ಕಾಗಿ, ಮನಶ್ಶಾಂತಿಗಾಗಿ ಹಾಗೂ ಹೃದಯ ಶುದ್ಧಿಗಾಗಿ ನಾನು ಆತಂಕಗೊಂಡಿದ್ದೇನೆ.'

'ಇಲ್ಲ, ಇಲ್ಲ. ಸಾವಿರ ಸಲ ಇಲ್ಲವೆಂದು ಸಾರುತ್ತೇನೆ. ನಿಮ್ಮ ಸಿದ್ಧಾಂತಗಳಲ್ಲಿ ನನಗೆಳ್ಳಷ್ಟು ವಿಶ್ವಾಸವಿಲ್ಲ' ಎಂದು ಪಿಯರಿ ನುಡಿದನು.

ಅಧ್ಯಾಯ ೧೨

ಸಂಜೆ ಆಂಡ್ರೂ ಪಿಯರಿಬ್ಬರೂ ತೆರೆದ ಬಂಡಿಯಲ್ಲಿ ಬಾಲ್ಡ್ ಬೆಟ್ಟಗಳಿಗೆ ಪಯಣ ಬೆಳೆಸಿದರು. ಆಂಡ್ರೂ ಆಗಾಗ್ಗೆ ಪಿಯರಿಯ ಕಡೆಗೆ ಕಣ್ಣಾಗಿ, ಮೌನ ಮುರಿದು, ಮಾತಾಡುತ್ತಿದ್ದನು. ಅವನು ಸುಪ್ರಸನ್ನನಾಗಿದ್ದನೆಂಬುದು ಅವನ ಮಾತಿನಿಂದ ವ್ಯಕ್ತವಾಗುತ್ತಿತ್ತು.

ಹೊಲಗಳ ಕಡೆಗೆ ಕೈ ತೋರಿಸುತ್ತ, ಬೇಸಾಯದಲ್ಲಿ ತಾನು ನಡಸುತ್ತಿದ್ದ ಸುಧಾರಣೆಗಳನ್ನು ಕುರಿತು ತನ್ನ ಅನುಭವಗಳನ್ನು ವಿವರಿಸಿದನು.

ನಿರುತ್ಸಾಹದ ಮೌನ ಪಿಯರಿಯ ಮುಖದಲ್ಲಿ ಕವಿದಿತ್ತು. ಏಕಾಕ್ಷರಗಳಲ್ಲಿ ಅವನ ಉತ್ತರ ಮುಗಿಯುತ್ತಿತ್ತು. ಆದರಿಂದ ಅವನು ಅಂತರ್ಮುಖಿಯಾಗಿದ್ದನೆಂಬುದು ಸ್ಪಷ್ಟವಾಗಿತ್ತು.

ರಾಜಕುಮಾರ ಆಂಡ್ರೂ, ನೆಮ್ಮದಿಯಿಂದಿರಲಿಲ್ಲವೆಂದೂ, ದಾರಿತಪ್ಪಿದ್ದನೆಂದೂ, ಅವನಿಗೆ ನಿಜವಾದ ಬೆಳಕು ಗೋಚರವಾಗಿರಲಿಲ್ಲವೆಂದೂ, ತಾನವನಿಗೆ ನೆರವು ನೀಡಿ, ಜ್ಞಾನೋದಯವುಂಟುಮಾಡಿ, ಅವನನ್ನುದ್ಧರಿಸಬೇಕೆಂದೂ ಪಿಯರಿ ಯೋಚಿಸುತ್ತಿದ್ದನು. ಆದರೆ ತಾನೇನು ಹೇಳಬೇಕೆಂದು ಯೋಚಿಸುತ್ತಿರುವಷ್ಟರಲ್ಲಿ, ಒಂದೇ ಒಂದು ಪದ ಅಥವಾ ಒಂದೇ ಒಂದು ತರ್ಕದಿಂದ ಆಂಡ್ರೂ ತನ್ನ ಉಪದೇಶವನ್ನೆಲ್ಲ ತಲೆಕೆಳಗುಮಾಡಿ ಬಿಡಬಹುದೆಂಬ ಶಂಕೆಯಿಂದ ಪಿಯರಿ ಬಾಯಿ ಬಿಡಲಿಲ್ಲ. ತನ್ನ ಮಟ್ಟಿಗೆ ಅಮೂಲ್ಯವೆಂದು ಪವಿತ್ರವೆಂದು ಕಂಡಿದ್ದ ವಿಚಾರಗಳು ಅಣಕಕ್ಕೆ ಗುರಿಯಾಗಬಹುದೆಂಬ ಭಯವೂ ಅವನ ನಾಲಗೆಯನ್ನು ತಡೆಹಿಡಿಯಿತು.

'ಇಲ್ಲ; ನೀವು ಹಾಗೇಕೆ ಯೋಚಿಸುತ್ತೀರಿ?' ಎಂದು ಪಿಯರಿ ಹಠಾತ್ತನೆ ಮೌನ ಮುರಿದನು. ತಲೆಯನ್ನು ಬಗ್ಗಿಸಿಕೊಂಡು, ಮೇಲೆ ಹಾಯುವ ಗೂಳಿಯಂತೆ ಕಾಣುತ್ತ 'ಹಾಗೇಕೆ ಯೋಚಿಸುತ್ತೀರಿ? ನಿಮ್ಮ ಆಲೋಚನೆ ಸರಿಯಿಲ್ಲ' ಎಂದವನು ನುಡಿದನು.

'ಯೋಚನೆಯೆ? ಯಾವುದರ ಬಗ್ಗೆ?' ಎಂದು ಆಂಡ್ರೂ ವಿಸ್ಮಯ ವ್ಯಕ್ತ ಪಡಿಸಿದನು.

'ಬದುಕಿನ ಬಗ್ಗೆ, ಮನುಷ್ಯನ ಅಂತ್ಯದ ಬಗ್ಗೆ ನಿಮ್ಮ ಅಭಿಪ್ರಾಯ ಸರಿಯಿಲ್ಲ. ನಾನು ಸಹ ಅಂತೆಯೇ ಯೋಚಿಸುತ್ತಿದ್ದೆ. ನನ್ನನ್ನು ರಕ್ಷಿಸಿದ್ದೇನು, ಗೊತ್ತೆ? ಸೌಭ್ರಾತೃ ಸಿದ್ಧಾಂತ! ನಗಬೇಡಿ. ಅದೊಂದು ಮತೀಯ ಸಂಪ್ರದಾಯ ಬದ್ಧ ಪಂಗಡವಲ್ಲ. ಮೊದ ಮೊದಲು ನಾನೂ ಹಾಗೆಯೇ ತಿಳಿದುಕೊಂಡಿದ್ದೆ. ಅದು ಅತ್ಯಂತ ಶ್ರೇಷ್ಠವೂ, ಶಾಶ್ವತವೂ ಆದ ಮಾನವದರ್ಶನದ ಅತ್ಯುತ್ತಮ ಅಭಿವ್ಯಕ್ತಿ.'

ತನಗೆ ತಿಳಿದಂತೆ ಆ ಸಿದ್ಧಾಂತವನ್ನು ಆಂಡ್ರೂಗೆ ವಿವರಿಸಲು ತೊಡಗಿದನು. ಸರ್ಕಾರ ಮತ್ತು ಚರ್ಚುಗಳ ಬಂಧನದಿಂದ ಮುಕ್ತಗೊಂಡ ಕ್ರಿಸ್ತೋಪದೇಶವೇ ಅದೆಂದೂ, ಸಮಾನತೆ ಭ್ರಾತೃತ್ವ ಮತ್ತು ಪ್ರೇಮಗಳೇ ಅದರ ತಿರುಳೆಂದೂ ಅವನು ವಿಶದಪಡಿಸಿದನು.

'ಜೀವನದ ಪರಮಾರ್ಥವಿರುವುದು ಪವಿತ್ರ ಭ್ರಾತೃತ್ವದಲ್ಲಿ ಮಾತ್ರ; ಉಳಿದದ್ದೆಲ್ಲ ಬರಿಯ ಕನಸು. ಈ ಮಂಡಲಿಯ ಹೊರಗಡೆ ವಂಚನೆ ವಿದ್ಯೆಗಳು ತುಂಬಿ ತುಳುಕುತ್ತಿವೆ ಯೆಂಬುದನ್ನು ಮರೆಯಬೇಡಿ, ಪ್ರಿಯ ಮಿತ್ರರೆ. ಪರರಿಗೆ ತೊಂದರೆ ಕೊಡದೆ ನಿಮ್ಮಂತೆ ಹಸನಾಗಿ ಬದುಕುವುದೆ ಮೇಧಾವಿ ಸಾತ್ವಿಕನ ಕರ್ತವ್ಯವೆಂಬ ನಿಮ್ಮ ಅಭಿಪ್ರಾಯವನ್ನು ನಾನು ಮೆಚ್ಚುತ್ತೇನೆ. ಆದರೆ ನಮ್ಮ ಮೂಲಭೂತ ತತ್ತ್ವಗಳನ್ನು ಸ್ವೀಕರಿಸಿ, ನಮ್ಮ ಸೌಭ್ರಾತೃ ಮಂಡಲಿಯನ್ನು ಸೇರಿ, ನಿಮ್ಮನ್ನು ಸಂಪೂರ್ಣವಾಗಿ ಅದಕ್ಕೆ ನಿವೇದಿಸಿ ಕೊಂಡು, ಅದರ ಮಾರ್ಗದರ್ಶನದಲ್ಲಿ ನಡೆದದ್ದಾದರೆ, ನಾನೆಂತು ನನ್ನತನವನ್ನರಿತು ಕೊಂಡಿದ್ದೇನೆಯೋ ಅಂತೆಯೇ ನೀವೂ ನಿಮ್ಮತನವನ್ನರಿತುಕೊಳ್ಳುವಿರಿ; ನೀನು ನಾನೆಲ್ಲ ಸ್ವರ್ಗಮೂಲದಲ್ಲಿ ಹುದುಗಿರುವ ಆದಿಶಕ್ತಿಯ ಅಗೋಚರ ಅನಂತತೆಯ ಅಂಶಗಳೆಂದು ತಿಳಿಯಲು ಸಾಧ್ಯವಾಗುತ್ತದೆ' ಎಂದು ಪಿಯರಿ ನುಡಿದನು.

ರಾಜಕುಮಾರ ಆಂಡ್ರೂ ತನ್ನೆದುರಿಗೆ ನೇರವಾಗಿ ದೃಷ್ಟಿಸುತ್ತ, ಪಿಯರಿಯ ಮಾತುಗಳನ್ನು ಮೌನವಾಗಿ ಆಲಿಸುತ್ತಿದ್ದನು. ಚಕ್ರಗಳ ಕರ್ಕಶ ಧ್ವನಿಯಿಂದ ಅವನ ಮಾತು ಕೇಳಿಸದಿದ್ದಾಗ, ಅವನ್ನು ಪುನರುಕ್ತಿಸುವಂತೆ ಆಂಡ್ರೂ ಹಲವು ಸಲ ಅವನನ್ನು ಜಗ್ಗುತ್ತಿದ್ದನು. ಅವನ ನೇತ್ರಗಳಲ್ಲಿ ಉಕ್ಕುತ್ತಿದ್ದ ವಿಶಿಷ್ಟಕಾಂತಿಯಿಂದ, ಅವನ ಮೌನ ದಿಂದ, ತನ್ನ ಮಾತು ವ್ಯರ್ಥವಾಗುವುದಿಲ್ಲವೆಂದೂ, ಆಂಡ್ರೂ ಮಧ್ಯೆ ಬಾಯಿ ಹಾಕುವು ದಿಲ್ಲವೆಂದೂ ಅಥವಾ ತನ್ನ ಮಾತನ್ನಣಕಿಸುವುದಿಲ್ಲವೆಂದೂ ಪಿಯರಿಗೆ ಮನವರಿಕೆ ಯಾಯಿತು.

ಪಡ ವಿಾರಿ ಹರಿಯುತ್ತಿದ್ದ ನದಿಯ ದಂಡೆಯನ್ನು ಸಮೀಪಿಸಿದಾಗ ಅವರು ಹರಿಗೋಲಿನಲ್ಲಿ ದಾಟಬೇಕಾಯಿತು. ಗಾಡಿ ಮತ್ತು ಕುದುರೆಗಳೊಂದಿಗೆ ಅವರು ತೆಪ್ಪ ವೇರಿದರು.

ಆಂಡ್ರೂ ತೆಪ್ಪದ ಕೈಪಿಡಿಯ ಮೇಲೆ ಕೈಯೂರಿ ಬಾಗಿಕೊಂಡು, ಮುಳುಗುವ ಸೂರ್ಯನ ಕೆಂಗಾಂತಿಯಲ್ಲಿ ರಗರಗಿಸುತ್ತಿದ್ದ ಪ್ರವಾಹವನ್ನು ಮೌನದಿಂದೀಕ್ಷಿಸುತ್ತಿದ್ದನು.

‘ಅ್ಞ ಆ ಬಗ್ಗೆ ನಿಮ್ಮ ಅಭಿಪ್ರಾಯವೇನು? ಏಕೆ ಮೌನವಾದಿರಿ?’ ಎಂದು ಪಿಯರಿ ಪ್ರಶ್ನಿಸಿದನು.

‘ನನ್ನ ಅಭಿಪ್ರಾಯವೆ? ನಿಮ್ಮ ಮಾತನ್ನು ಕಿವಿಗೊಟ್ಟು ಕೇಳುತ್ತಿದ್ದೇನೆ. ಎಲ್ಲ ಸರಿಯಾಗಿದೆ....ನಮ್ಮ ಸೌಭ್ರಾತೃ ಸಮಾಜವನ್ನು ಸೇರಿ, ಬದುಕಿನ ಗುರಿಯನ್ನೂ, ಮಾನವನ ಹಣೆ ಬರಹವನ್ನೂ, ಜಗತ್ತನ್ನಾಳುತ್ತಿರುವ ನಿಯತಿಯನ್ನೂ ಮನದಟ್ಟು ಮಾಡಿಕೊಡುವುದಾಗಿ ನೀವು ಹೇಳುತ್ತಿದ್ದಿರಿ. ಆದರೆ ನಾವು ಯಾರು? ಮಾನವರು. ನಿಮಗೆಲ್ಲವೂ ತಿಳಿದಿದೆಯೆಂದು ಹೇಗೆ ಹೇಳುತ್ತೀರಿ? ನಿಮಗೆ ಕಂಡದ್ದು ನನಗೆ ಕಾಣಿಸುವುದಿಲ್ಲವೇಕೆ? ಈ ಭೂಮಿಯ ಮೇಲೆ ಸತ್ಯಧರ್ಮಗಳು ಪ್ರಭುತ್ವ ನಡೆಸುತ್ತಿರುವ ಸಂಗತಿ ನಿಮ್ಮ ಕಣ್ಣಿಗೆ ಕಾಣಿಸುತ್ತಿದೆ. ಆದರೆ ಅದು ನನಗೆ ಕಾಣಿಸುತ್ತಿಲ್ಲ.’

ಪಿಯರಿ ನಡುವೆ ಬಾಯಿ ಹಾಕಿದನು. ‘ಮುಂದಿನ ಜನ್ಮದಲ್ಲಿ ನಿಮಗೆ ನಂಬಿಕೆ ಯಿದೆಯೆ?’

‘ಮುಂದಿನ ಜನ್ಮವೆ?’ ಎಂದು ಆಂಡ್ರ್ಯೂ ಮತ್ತೆ ಉಚ್ಚರಿಸಿದನು. ಅವನು ನಾಸ್ತಿಕವಾದಿಯೆಂಬುದನ್ನು ಜ್ಞಾಪಿಸಿಕೊಂಡ ಪಿಯರಿ ಅವನ ಉತ್ತರಕ್ಕೂ ಅವಕಾಶ ಕೊಡದೆ ಅವನ ಪುನರಾವೃತ್ತಿಯಲ್ಲಿ ನಿರಾಕರಣೆಯ ಭಾವವನ್ನೂಹಿಸಿಕೊಂಡನು.

‘ಭೂಮಿಯ ಮೇಲೆ ಸತ್ಯಧರ್ಮಗಳ ಪ್ರಭುತ್ವವನ್ನು ಕಾಣಲಾಗದೆಂದು ನೀವು ಹೇಳುತ್ತೀರಿ. ಇಲ್ಲಿಯ ನಮ್ಮ ಬದುಕೇ ಎಲ್ಲದರ ಕೊನೆಯೆಂದು ನಾವು ಭಾವಿಸುವುದಾದರೆ ನಾನಾಗಲಿ ನೀವಾಗಲಿ ಆ ಪ್ರಭುತ್ವವನ್ನು ನೋಡಲಾರೆವು. ಈ ಭೂಮಿಯ ಮೇಲೆ, ಇಲ್ಲಿ ನಾವಿರುವೆಡೆಯಲ್ಲಿಯೇ (ಪಿಯರಿ ಹೊಲಗಳ ಕಡೆಗೆ ಕೈತೋರಿದನು) ಸತ್ಯವನ್ನು ಕಾಣಲಾಗದು. ಎಲ್ಲವೂ ಮಿಥ್ಯೆಯೆಂದು, ಕೇಡೆಂದು ತೋರದಿರಲಾರದು. ಆದರೆ ವಿಶ್ವದಲ್ಲಿ, ಇಡೀ ವಿಶ್ವದಲ್ಲಿ ಸತ್ಯಸಾಮ್ರಾಜ್ಯವಿದೆ. ಈ ಭೂಮಿಯ ಮಕ್ಕಳಾದ ನಾವು ಇಡೀ ವಿಶ್ವದ ಚಿರಂತನ ಶಿಶುಗಳು. ನಾನು ಈ ಸುಸಂಗತ ಅನಂತ ವಿಶ್ವದ ಒಂದಂಶವೆಂದು ನನ್ನ ಚೇತನ ಅರಿಯಲಾರದೆ? ಭಗವಂತ—ಬೇಕಾದರೆ ನೀವು ಸರ್ವಶಕ್ತನೆಂದೇ ಕರೆಯಿರಿ—ಅಭಿವ್ಯಕ್ತಗೊಳ್ಳುವ ಅಸಂಖ್ಯಾತ ಪ್ರಾಣಿಗಳ ಸುಸಂಗತ ಸಮುದಾಯದಲ್ಲಿರುವ ಮೇಲು ಕೀಳು ಪ್ರಾಣಿಗಳ ನಡುವೆ ನಾನೊಂದು ಕೊಂಡಿ, ಒಂದು ಮೆಟ್ಟಿಲೆಂಬುವ ಭಾವನೆ ನನಗಿರಬಾರದೆ? ಸಸ್ಯವರ್ಗದಿಂದ ಮನುಷ್ಯವರ್ಗದ ತನಕ ಸಂಬಂಧ ಕಲ್ಪಿಸುವ ಏಣಿಯನ್ನು ನೋಡುವಾಗ,—ನನಗದು ಸುಸ್ಪಷ್ಟ—ಅದು ಅಲ್ಲಿಗೇ ನಿಂತು ಹೋಗುತ್ತದೆ, ಮುಂದೆ ಸಾಗುವುದಿಲ್ಲವೆಂದು ನಾನೇಕೆ ಭಾವಿಸಿಕೊಳ್ಳಬೇಕು? ಈ ಜಗತ್ತಿನಿಂದ ಯಾವುದೂ ಅಳಿಸಿಹೋಗುವುದಿಲ್ಲವಾದ್ದರಿಂದ, ನಾನು ಸಹ ನಶಿಸಿಹೋಗುವುದಿಲ್ಲವೆಂಬ ವಿಶ್ವಾಸ ನನಗಿದೆ. ನಾನು ಹಿಂದೆಯೂ ಇದ್ದೆ; ಮುಂದೆ ಯಾವಾಗಲೂ ಇದ್ದೇ ಇರುತ್ತೇನೆ. ನನ್ನಿಂದಾಚೆಗೆ, ನನ್ನ ಮೇಲೆ, ಎಲ್ಲೆಲ್ಲಿಯೂ ಚೇತನಗಳಿವೆಯೆಂಬುದನ್ನು ಬಲ್ಲೆ. ಈ ಜಗತ್ತಿನಲ್ಲಿ ಸತ್ಯವಿದೆಯೆಂಬುದೂ ನನಗೆ ಗೊತ್ತಿದೆ.’

‘ಹೌದು, ಅದು ಹರ್ಡರ್ ಸಿದ್ಧಾಂತ’ ಎಂದು ರಾಜಕುಮಾರ ಆಂಡ್ರ್ಯೂ ನುಡಿದನು. ‘ಆದರೆ ಅದು ನನಗೊಪ್ಪಿಗೆಯಾಗಿಲ್ಲ, ಮಿತ್ರರೆ. ಜನನ ಮರಣಗಳು ಯಾರಿಗಾದರೂ ಅರ್ಥವಾಗುತ್ತವೆ ತನ್ನ ಬದುಕಿನೊಡನೆ ಬೆಸೆದುಕೊಂಡಿರುವ, ತನ್ನ ಹೃದಯಕ್ಕೆ

ಹತ್ತಿರವಾದೊಂದು ಜೀವಿಯೆಂದಿಟ್ಟುಕೊಳ್ಳೋಣ. ಅದನ್ನು ತಪ್ಪಾಗಿ ತಿಳಿದುಕೊಂಡಿದ್ದು, ಆ ತಪ್ಪನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಗಲೇ (ರಾಜಕುಮಾರನ ಧ್ವನಿ ಕಂಪಿಸುತ್ತಿರಲಾಗಿ, ಬೇರೆ ಕಡೆಗೆ ಮುಖವಾದನು) ಅದು ಯಾತನೆ ಸಂಕಟಗಳಿಗೊಳಗಾಗಿ, ಕಣ್ಮರೆಯಾಗುತ್ತದಲ್ಲ.... ಏಕೆ? ಈ ಸಮಸ್ಯೆಗೆ ಉತ್ತರವಿಲ್ಲವೆಂದು ನಾನು ತಿಳಿದಿಲ್ಲ. ಉತ್ತರವಿದೆ....ಅದು ಯಾರಿಗಾದರೂ ಅರ್ಥವಾಗುತ್ತದೆ; ನನಗಂತು ಅದು ಮನದಟ್ಟಾಗಿದೆ.'

'ಹೌದೌದು, ನಿಜ. ನಾನು ಹೇಳುತ್ತಿರುವುದು ಅದೇ ಅಲ್ಲವೆ?' ಎಂದು ಪಿಯುರಿ ತಿಳಿಸಿದನು.

'ಇಲ್ಲ. ಮುಂದಿನ ಜನ್ಮದ ಆವಶ್ಯಕತೆಯನ್ನು ಮನದಟ್ಟು ಮಾಡಿಕೊಡುವಂಥದು ಬರಿಯ ವಾದವಲ್ಲವೆಂಬುದೇ ನನ್ನ ತಿಳಿವಳಿಕೆ. ಬೇರೆಯಾವುದಿರಬೇಕು? ಕೈ ಕೈ ಹಿಡಿದುಕೊಂಡು ಒಬ್ಬರ ಜತೆಯಲ್ಲಿ ಹೋಗುತ್ತಿರುವಾಗ, ಹಠಾತ್ತನೆ ಆ ವ್ಯಕ್ತಿ ಕಣ್ಮರೆಯಾದಾಗ, ಕಾಣದ ಲೋಕದಲ್ಲಿ ಮಂಗಮಾಯವಾದಾಗ, ನೀವೊಬ್ಬರೇ ಆ ನರಕ ಕೂಪದ ಕಡೆಗೆ ಮುಖಮಾಡಿಕೊಂಡು ನಿಲ್ಲಬೇಕಾದ ಪರಿಸ್ಥಿತಿಯೊದಗಿದಾಗ, ಸೃಷ್ಟಿಯ ರಹಸ್ಯ ಮನವರಿಕೆಯಾಗುತ್ತದೆ. ನನಗಿದೆಲ್ಲ ಅನುಭವವಾಗಿದೆ....'

'ಹಾಗಾದರೆ ಅದೇ ಸರಿ! ಆಚೆಯೊಂದಿದೆ, ಅದರಲ್ಲಿ ಯಾರೋ ಇದ್ದಾರೆಂಬುದು ನಿಮಗೆ ತಿಳಿದಿದೆ. ಆ ಆಚೆಯೇ ಮುಂದಿನ ಜನ್ಮ. ಆ ಯಾರೋ ಎನ್ನುವುದೇ ದೇವರು.'

ರಾಜಕುಮಾರ ಆಂಡ್ರ್ಯೂ ಮಾರ್ನುಡಿಯಲಿಲ್ಲ. ಆ ಹೊತ್ತಿಗಾಗಲೇ ಗಾಡಿ ಮತ್ತು ಕುದುರೆಗಳು ಆಚೆಯ ದಡದಲ್ಲಿದ್ದುವು. ಕುದುರೆಗಳನ್ನು ಗಾಡಿಗೆ ಹೂಡಲಾಗಿತ್ತು. ದಿಗಂತದಲ್ಲಿ ಸೂರ್ಯನ ಅರೆಬಿಂಬ ಕಾಣಿಸುತ್ತಿತ್ತು. ದೋಣಿಯ ಬಳಿಯ ಹಳ್ಳಗಳ ಮಂಜು ಹರಳುಗಳು ನಕ್ಷತ್ರಗಳಿಂದ ಅಲಂಕೃತವಾಗಿದ್ದಂತೆ ಶೋಭಿಸುತ್ತಿದ್ದುವು. ಆದರೆ ಮತ್ತೂ ತೆಪ್ಪದ ಮೇಲೆ ನಿಂತು ಮಾತಾಡುತ್ತಿದ್ದ ಪಿಯುರಿ ಮತ್ತು ಆಂಡ್ರ್ಯೂರವರನ್ನು ನೋಡಿ ಆಳುಗಳು, ಗಾಡಿಯಾಳುಗಳು ಮತ್ತು ಅಂಬಿಗರು ಅಚ್ಚರಿಗೊಂಡಿದ್ದರು.

'ದೇವರು ಮತ್ತು ಮುಂದಿನ ಜನ್ಮಗಳಿವೆಯೆಂದಾದರೆ, ಸತ್ಯಧರ್ಮಗಳೂ ಇವೆಯೆಂದಾಗುತ್ತದೆ. ಮನುಷ್ಯ ಅಪೇಕ್ಷಿಸಬಹುದಾದ ಪರಮ ಸುಖವೆಂದರೆ ಅವುಗಳ ಸಾಕ್ಷಾತ್ಕಾರ. ನಾವು ಬದುಕಬೇಕು, ಪ್ರೀತಿಸಬೇಕು; ಈ ನೆಲದ ಹೋಳಿನ ಮೇಲೆ ಇಂದು ಮಾತ್ರವಲ್ಲ, ಹಿಂದೆಯೂ ಬದುಕಿದ್ದೆವು, ಮುಂದೆಂದೂ ಇಡಿಯ ಭಾಗವಾಗಿ ಬದುಕುತ್ತೇವೆಂಬುದನ್ನು ನಂಬಬೇಕು' ಎಂದು ಪಿಯುರಿ ನುಡಿದು, ಗಗನದ ಕಡೆಗೆ ಕೈ ತೋರಿದನು.

ರಾಜಕುಮಾರ ಆಂಡ್ರ್ಯೂ ತೆಪ್ಪದ ಕೈಪಿಡಿಯನ್ನಾನಿಸಿಕೊಂಡು, ಪಿಯುರಿಯ ಮಾತುಗಳನ್ನಾಲಿಸುತ್ತಿದ್ದನು. ನೀಲಿನೀರಿನಲ್ಲಿ ಪ್ರತಿಫಲಿಸುತ್ತಿದ್ದ ಸೂರ್ಯನ ರಕ್ತಬಿಂಬದಲ್ಲಿಯೇ ಅವನ ದಿಟ್ಟಿ ಕೀಲಿಸಿತ್ತು. ನೀರವತೆ ಸರ್ವತ್ರ ತಾಂಡವವಾಡುತ್ತಿತ್ತು. ಪಿಯುರಿಯೂ ಮೌನತಾಳಿದನು. ದೋಣಿ ನಿಂತು ಬಹಳ ಹೊತ್ತಾಗಿತ್ತು. ಪ್ರವಾಹದ

ಅಲೆಗಳುಮಾತ್ರ ಮೃದುವಾಗಿ ಅದರ ತಳವನ್ನು ಬಡಿಯುತ್ತಿದ್ದವು. 'ಅದು ನಿಜ, ನಂಬು' ಎಂದು ತರಂಗಧ್ವನಿಗಳು ಪಿಯರಿಯ ಮಾತುಗಳಿಗೆ ಪಲ್ಲವಿ ನುಡಿಯುತ್ತಿದ್ದಂತೆ ಆಂಡ್ರೂವಿಗೆ ಭಾಸವಾಯಿತು.

ಅವನು ಸುಮ್ಮನು; ಥಳಥಳಿಸುವ ಶಿಶು ಸದೃಶ ಕೋಮಲದೃಷ್ಟಿಯಿಂದ ಪಿಯರಿಯ ಕಡೆ ನೋಡಿದನು; ಕೆಂಪೇರಿದ ಅವನ ಮುಖದಲ್ಲಿ ಆನಂದ ತುಂಬಿ ತುಳುಕುತ್ತಿತ್ತು. ಆದರೂ ತನಗಿಂತಲೂ ಉತ್ತಮನಾಗಿದ್ದ ಪಿಯರಿಯ ಮುಂದೆ ನಾಚಿಕೆಯ ಮುಳ್ಳಾದನು.

'ಅದು ಹಾಗಿದ್ದರೆ ಮಾತ್ರ ಹೌದೆನ್ನುವೆ' ಎಂದು ರಾಜಕುಮಾರ ನುಡಿದನು. 'ಹೊತ್ತಾಯ್ತು; ಈಗ ಈ ಜಾಗ ಬಿಡಬೇಕಾಗಿದೆ' ಎಂದವನು ತೆಪ್ಪದಿಂದ ಹೊರಗೆ ಹೆಜ್ಜೆಯಿಡುತ್ತ, ಪಿಯರಿ ತೋರಿಸಿದ ಆಕಾಶದ ಕಡೆಗೆ ಕಣ್ಣಾದನು. ಆಸ್ಟರ್‌ಲಿಜ್ ಕದನ ಭೂಮಿಯಲ್ಲಿ ಮಲಗಿಕೊಂಡು, ಕಂಡಿದ್ದ ಅನಂತ ಅಂತರಿಕ್ಷದ ಭವ್ಯತೆಯನ್ನವನು ಮತ್ತೆ ಪ್ರಥಮ ಬಾರಿ ಕಾಣುತ್ತಿದ್ದನು. ಬಹುಕಾಲದಿಂದ ತನ್ನ ಅಂತರಂಗದಲ್ಲಿ ಸುಪ್ತಗೊಂಡಿದ್ದ, ತನ್ನ ಚೈತನ್ಯದ ಸಾರಸರ್ವಸ್ವದಂತಿದ್ದ ಶಕ್ತಿಯೊಂದು ಹಠಾತ್ತನೆ ಜಾಗೃತಗೊಂಡಿತು; ತನ್ನಂತರಾತ್ಮದಲ್ಲಿ ಆನಂದ ಚಿರಯೌವನಗಳು ಸ್ಫುರಿಸಿದಂತಾದುವು. ಜೀವನದ ವಾಸ್ತವಸ್ಥಿತಿಗೆ ಮರಳಿದಾಗ ಅದೆಲ್ಲ ಮಂಗಮಾಯವಾಯಿತು. ಆ ಭಾವನೆಯನ್ನೆಂತು ಪೋಷಿಸಬೇಕೆನ್ನುವ ಹರುವು ಅವನಿಗೆ ಹೊಳೆಯದಿದ್ದರೂ, ಅದು ತನ್ನಂತರಂಗದಲ್ಲಿ ಹುದುಗಿತ್ತೆಂಬುದಂತು ಅವನಿಗರಿವಾಗಿತ್ತು. ಪಿಯರಿಯ ಭೇಟಿ ರಾಜಕುಮಾರ ಆಂಡ್ರೂವಿನ ಬದುಕಿನಲ್ಲಿ ಹೊಸ ಶಕೆಯ ಪ್ರಾರಂಭಕ್ಕೆ ಕಾರಣವಾಗಿತ್ತು. ಅವನ ಬದುಕು ಹಳೆಯ ಜಾಡಿನಲ್ಲಿಯೇ ಸಾಗುತ್ತಿದ್ದಂತೆ ಹೊರಗಣ್ಣಿಗೆ ತೋರುತ್ತಿದ್ದರೂ, ಅವನ ಅಂತಶ್ಚೇತನ ನವೀನ ಮಾರ್ಗವನ್ನು ಕಂಡುಕೊಂಡಿತ್ತು.

ಅಧ್ಯಾಯ ೧೩

ರಾಜಕುಮಾರ ಆಂಡ್ರೂ ಮತ್ತು ಪಿಯರಿ ಬಾಲ್ಡ್ ಬೆಟ್ಟದ ಮನೆಯ ಮುಂದಣ ಪ್ರವೇಶದ್ವಾರವನ್ನು ತಲುಪುವ ಹೊತ್ತಿಗೆ ಮುಸ್ಸಂಜೆಯಾಗಿತ್ತು. ಮನೆ ಸಮೀಪಿಸುತ್ತಿದ್ದಂತೆ ಹಿಂದಣ ಮುಖಮಂಟಪದಲ್ಲಿ ನಡೆಯುತ್ತಿದ್ದ ಗಡಿಬಿಡಿಯ ಕಡೆಗೆ ನಗುನಗುತ್ತ ಆಂಡ್ರೂ ಪಿಯರಿಯ ಗಮನ ಸೆಳೆದನು. ಬೆನ್ನಿನ ಮೇಲೆ ಹಸುಬೆಯಿದ್ದ, ವಯಸ್ಸಿನಿಂದ ಸೊಂಟ ಬಾಗಿದ್ದೊಬ್ಬ ಹೆಂಗಸೂ, ಕಪ್ಪುವಸ್ತ್ರ ಧರಿಸಿದ್ದ, ಉದ್ದಗೂದಲಿನ ಕುಳ್ಳ ಯುವಕನೂ ಬಾಗಿಲಕಡೆಗೆ ಬರುತ್ತಿದ್ದ ಗಾಡಿಯನ್ನು ಕಂಡು ಹಿಂದಕ್ಕೆ ಧಾವಿಸಿದರು. ಅವರ ಹಿಂದೆ ಇಬ್ಬರು ಹೆಂಗಸರು ಗಾಡಿಯನ್ನು ಕಂಡದ್ದೆ ತಡ ಗಾಬರಿಯಿಂದ ಹಿಂದಣ ಮುಖಮಂಟಪದ ಮೆಟ್ಟಿಲನ್ನು ಸರಸರನೆ ಏರಿದರು.

'ಅವರು ಮೇರಿಯ ದೇವರ ಮನುಷ್ಯರು' ಎಂದು ರಾಜಕುಮಾರ ಆಂಡ್ರೂ ನುಡಿದನು. 'ಗಾಡಿಯಲ್ಲಿ ಬರುತ್ತಿರುವವರು ನಮ್ಮ ತಂದೆಯೆಂದು ಅವರು ತಪ್ಪು ತಿಳಿದುಕೊಂಡಿದ್ದಾರೆ. ಆಕೆ ತಂದೆಯ ಮಾತನ್ನುಲ್ಲಂಘಿಸುವ ಪ್ರಕರಣ ಇದೊಂದೇ. ಈ

ಯಾತ್ರಾರ್ಥಿಗಳನ್ನು ಓಡಿಸಬೇಕೆಂದು ತಂದೆ ಆಜ್ಞೆ ಮಾಡಿದರೆ, ಅವಳವರಿಗೆ ಸ್ವಾಗತ ನೀಡುತ್ತಾಳೆ.

'ದೇವರ ಮನುಷ್ಯರೆಂದರೇನು?' ಎಂದು ಪಿಯರಿ ಪ್ರಶ್ನಿಸಿದನು.

ಅವನ ಪ್ರಶ್ನೆಗೆ ಉತ್ತರ ನೀಡಲು ಆಂಡ್ರೂವಿಗೆ ಸಮಯವಿರಲಿಲ್ಲ. ಅವನನ್ನು ಸ್ವಾಗತಿಸುವ ಸಲುವಾಗಿ ಆಳುಗಳು ಮುತ್ತಿಕೊಂಡರು. ತಂದೆ ಬಂದಿದ್ದಾರೆಯೆ? ಬರದಿದ್ದರೆ, ಯಾವಾಗ ಬರುತ್ತಾರೆಂದು ಆಂಡ್ರೂ ಅವರನ್ನು ವಿಚಾರಿಸಿದನು.

ಪೇಟೆಗೆ ಹೋಗಿದ್ದ ಹಿರಿಯ ರಾಜಕುಮಾರ ಯಾವ ಕ್ಷಣದಲ್ಲಾದರೂ ಹಿಂದಿರುಗ ಬಹುದೆಂದು ಅವರು ನಿರೀಕ್ಷಿಸಿಕೊಂಡಿದ್ದರು.

ರಾಜಕುಮಾರ ಆಂಡ್ರೂ ಪಿಯರಿಯನ್ನು ತನ್ನ ಕೋಣೆಗೆ ಕರೆದೊಯ್ದನು. ಅವನಿಗಾಗಿಯೇ ಮೀಸಲಾಗಿದ್ದ ಆ ಕೋಣೆ ಯಾವಾಗಲೂ ಸಜ್ಜುಗೊಂಡು, ವಾಸಕ್ಕೆ ಸಿದ್ಧವಾಗಿರುತ್ತಿತ್ತು. ಒಡನೆಯೆ ಅವನು ಕೂಸುಕೋಣೆಗೆ ಹೋದನು.

'ನನ್ನ ತಂಗಿಯ ಬಳಿಗೆ ಹೋಗೋಣ ಬನ್ನಿ' ಎಂದವನು ಕೂಸುಕೋಣೆಯಿಂದ ಮರಳಿದ ನಂತರ ಪಿಯರಿಯನ್ನು ಕರೆದನು. 'ಅವಳಿನ್ನೂ ನನಗೆ ಸಿಕ್ಕಿಲ್ಲ. ಎಲ್ಲಿಯೋ ತಲೆಮರೆಸಿಕೊಂಡಿದ್ದಾಳೆ. ತನ್ನ "ದೇವರ ಮನುಷ್ಯ"ರ ಬಳಿ ಕುಳಿತಿರಬೇಕೆಂದು ತೋರುತ್ತದೆ. ನಾನವಳ ಬಳಿ ಹೋದ ಕೂಡಲೇ ಅವಳಿಗೆ ಗಾಬರಿಯಾಗುತ್ತದೆ. ಅಲ್ಲಿ ನೀನವಳ "ದೇವರ ಮನುಷ್ಯ"ರನ್ನು ನೋಡಬಹುದು. ಅದು ನಿಜಕ್ಕೂ ವಿಚಿತ್ರ?

'"ದೇವರ ಮನುಷ್ಯ"ರೆಂದರೆ ಯಾರು?' ಎಂದು ಪಿಯರಿ ಪ್ರಶ್ನಿಸಿದನು.

'ಬನ್ನಿ, ತೋರಿಸುತ್ತೇನೆ; ನೀವೇ ಅವರನ್ನು ನೋಡಬಹುದು.'

ಅವರು ಒಳಗೆ ಪ್ರವೇಶಿಸಿದಾಗ ರಾಜಕುಮಾರಿ ಮೇರಿ ನಿಜಕ್ಕೂ ತಬ್ಬಿಬ್ಬಾದಳು; ಅವಳ ಮುಖದ ಮೇಲೆ ಕೆಂಪು ಮಚ್ಚೆಗಳು ಕಾಣಿಸಿಕೊಂಡುವು. ಅವಳ ಬೆಚ್ಚನೆಯ ಕೋಣೆಯಲ್ಲಿ ವಿಗ್ರಹದ ಮುಂದೆ ದೀಪ ಉರಿಯುತ್ತಿದ್ದುವು; ಉದ್ದ ಮೂಗು ಕೂದಲು ಗಳ, ಸನ್ಯಾಸಿಯ ನಿಲುವಂಗಿಯನ್ನು ಧರಿಸಿದ್ದ ತರುಣನೊಬ್ಬ ಟೀ ಪಾತ್ರೆಯ ಹಿಂದಿದ್ದ ಸೋಫಾದ ಮೇಲೆ ಅವಳ ಪಕ್ಕದಲ್ಲಿ ಕುಳಿತಿದ್ದನು. ಅವರ ಹತ್ತಿರದಲ್ಲಿದ್ದ ತೋಳ್ಕುರ್ಚಿ ಯಲ್ಲಿ ಸುರುಟಿಕೊಂಡಿದ್ದ, ಕೃಶಗಾತ್ರದ ಮುದುಕಿಯೊಬ್ಬಳು ಕುಳಿತಿದ್ದಳು. ಶಿಶು ಸದೃಶವಾದ ಅವಳ ಮುಖದಲ್ಲಿ ದೈನ್ಯಭಾವ ಅಚ್ಚೊತ್ತಿದಂತಿತ್ತು.

'ಆಂಡ್ರೂ, ಮೊದಲೇ ಬರುವ ಸುದ್ದಿಯನ್ನೇಕೆ ತಿಳಿಸಲಿಲ್ಲ?' ಎಂದು ತನ್ನ ಮರಿಗಳ ಮುಂದಿದ್ದ ಕೋಳಿಯಂತೆ ಯಾತ್ರಾರ್ಥಿಗಳ ಮುಂದೆ ನಿಂತಿದ್ದ ಮೇರಿ ಅಣ್ಣ ನನ್ನು ಮೆಲ್ಲಗೆ ತರಾಟೆಗೆ ತೆಗೆದುಕೊಂಡಳು.

'ನಿಮ್ಮನ್ನು ನೋಡಿ ತುಂಬ ಸಂತೋಷವಾಯಿತು' ಎಂದವಳು ಪಿಯರಿಯನ್ನು ಬರಮಾಡಿಕೊಂಡಳು. ಪಿಯರಿ ಅವಳ ಮುಂಗೈಯನ್ನು ಚುಂಬಿಸಿದನು. ಮೇರಿ ಅವನನ್ನು ಚಿಕ್ಕಂದಿನಿಂದ ನೋಡಿದ್ದಳು. ಅಣ್ಣನ ಗೆಳೆತನದಿಂದಾಗಿ, ಸತೀಸಂಬಂಧದ ದುರ್ದೈವದಿಂದಾಗಿ, ಎಲ್ಲಕ್ಕಿಂತಲೂ ಮಿಗಿಲಾಗಿ ಅವನ ಸರಳ ಮುಗ್ಧ ಮುಖದಿಂದಾಗಿ, ಅವಳು ಅವನ ಬಗ್ಗೆ ವಿಶ್ವಾಸಾದರಗಳನ್ನು ತಳೆದಿದ್ದಳು. ಪ್ರಶಾಂತವಾದ ಅವಳ

ಸುಂದರ ನೇತ್ರಗಳು ಅವನಲ್ಲಿ ನಾಟಿದ್ದುವು. 'ನಿಮ್ಮನ್ನು ಕಂಡರೆ ನನಗೆ ತುಂಬ ಇಷ್ಟ. ಆದರೆ ದಯೆಯಿಟ್ಟು ನನ್ನ ಜನರನ್ನು ನೋಡಿ ನಗಬೇಡಿ' ಎಂಬ ಭಾವನೆ ಅವಳ ನೇತ್ರಗಳಲ್ಲಿ ಹೊರಹೊಮ್ಮುವಂತಿತ್ತು. ಪರಸ್ಪರ ಕುಶಲ ಸಂಭಾಷಣೆ ಮುಗಿದ ನಂತರ ಎಲ್ಲರೂ ಕುಳಿತರು.

'ಅಹಾ, ಇವಾನುಷ್ಕ ಕೂಡ ಇಲ್ಲೀ ಇದ್ದಾಳೆ!' ಎಂದು ಆಂಡ್ರ್ಯೂ ಯುವ ಯಾತ್ರಾರ್ಥಿಯ ಕಡೆಗೆ ದೃಷ್ಟಿ ಹೊರಳಿಸಿದನು.

'ಆಂಡ್ರ್ಯೂ' ಎಂದು ರಾಜಕುಮಾರಿ ದೈನ್ಯದಿಂದ ಪ್ರಾರ್ಥಿಸಿಕೊಂಡಳು.

'ಈ ವ್ಯಕ್ತಿ ಹೆಣ್ಣೆಂದು ನಿಮಗೆ ತಿಳಿಯಿತು ತಾನೆ?' ಎಂದು ಆಂಡ್ರ್ಯೂ ಪಿಯರಿಗೆ ಸೂಚಿಸಿದನು.

'ಪ್ರಿಯ ಆಂಡ್ರ್ಯೂ, ದೇವರಾಣೆ ಹಾಗೆಲ್ಲ ಮಾತಾಡಬೇಡ' ಎಂದು ಮೇರಿ ತನ್ನ ಪ್ರಾರ್ಥನೆಯನ್ನು ಪುನರಾವರ್ತಿಸಿದಳು.

ಆ ಯಾತ್ರಾರ್ಥಿಗಳ ಬಗೆಗಿನ ಆಂಡ್ರ್ಯೂವಿನ ವಿಡಂಬನೆಯೂ, ಅವರನ್ನು ಪೋಷಿಸಬೇಕೆನ್ನುವ ಮೇರಿಯ ಹಂಬಲವೂ ಎಂದೂ ತಪ್ಪಿದ್ದಲ್ಲ. ಅದು ತಪ್ಪಿದ್ದಲ್ಲವೆಂಬುದು ಇಬ್ಬರಿಗೂ ಗೊತ್ತಿತ್ತು.

'ಪ್ರಿಯ ತಂಗಿ, ನಿನಗೇಕೆ ಈ ಇರಿಸು ಮುರಿಸು? ಈ ಯುವಕನ ಬಗ್ಗೆ ನಿನಗಿರುವ ಆತ್ಮೀಯತೆಯನ್ನು ಪಿಯರಿಗೆ ವಿವರಿಸಿ ಹೇಳಿದ್ದಕ್ಕಾಗಿ, ನೀನು ನನಗೆ ಕೃತಜ್ಞಳಾಗಿರಬೇಕೆ ಹೊರತು, ಅನ್ಯಥಾ ಭಾವಿಸಬಾರದು' ಎಂದು ರಾಜಕುಮಾರ ಆಂಡ್ರ್ಯೂ ತಂಗಿಯ ಮೇಲೆ ಪ್ರೀತಿಯ ಮಳೆಗರೆದನು.

'ನಿಜವೆ?' ಎಂದು ಪಿಯರಿ ಕುತೂಹಲ ಶ್ರದ್ಧೆಯಿಂದ ತನ್ನ ಕನ್ನಡಕದ ಮೂಲಕ ಇವಾನುಷ್ಕಳ ಮುಖದ ಕಡೆಗೆ (ಅದಕ್ಕಾಗಿ ಮೇರಿ ಅವನಿಗೆ ಕೃತಜ್ಞತೆ ವ್ಯಕ್ತಪಡಿಸಿದಳು.) ನೋಡಿದನು. ತನ್ನ ಬಗ್ಗೆ ಮಾತಾಡಿಕೊಳ್ಳುತ್ತಿದ್ದಾರೆಂಬುದನ್ನರಿತ ಇವಾನುಷ್ಕ ಸುತ್ತಮುತ್ತ ಕೃತ್ರಿಮ ದೃಷ್ಟಿ ಬೀರಿದಳು.

ತನ್ನ ಜನರ ಬಗೆಗಿನ ಮೇರಿಯ ಕಿರಿಕಿರಿ ಅನವಶ್ಯವಾಗಿತ್ತು. ಆ ಜನರೆಂದೂ ಮುಖ ಮುರಿದುಕೊಂಡವರಲ್ಲ. ಅಧೋನೇತ್ರೆಯಾದ ವೃದ್ಧೆ ಹೊಸಬರನ್ನು ಓರೆಯಾಗಿ ನೋಡುತ್ತ, ತನ್ನ ಲೋಟವನ್ನು ತಲೆಕೆಳಕಾಗಿ ತಿರುಗಿಸಿಟ್ಟು, ಅದರ ಪಕ್ಕದಲ್ಲಿ ಸವೆದ ಸಕ್ಕರೆಯ ಚೂರನ್ನಿರಿಸಿ, ಮತ್ತೊಂದು ಲೋಟ ಟೀ ಸಿಗಬಹುದೆಂಬ ಆಸೆಯಿಂದ ತೋಳ್ಕುರ್ಚಿಯಲ್ಲಿ ಸದ್ದಿಲ್ಲದೆ ಕುಳಿತಿದ್ದಳು. ಬಟ್ಟಲ ತಟ್ಟೆಯಿಂದ ಟೀ ಚಪ್ಪರಿಸುತ್ತಿದ್ದ ಇವಾನುಷ್ಕ ಹುಬ್ಬುಗಳ ಕೆಳಗೆ ಹೊಳೆಯುತ್ತಿದ್ದ ಸ್ತ್ರೀಸಹಜವಾದ ಕೃತ್ರಿಮ ನೇತ್ರಗಳಿಂದ ಯುವಕರನ್ನು ನೋಡುತ್ತಿದ್ದಳು.

'ಎಲ್ಲಿಗೆ ಹೋಗಿದ್ದೆ? ಕೀವ್‌ಗೇನು?' ಎಂದು ರಾಜಕುಮಾರ ಆಂಡ್ರ್ಯೂ ಮುದುಕಿಯನ್ನು ಕೇಳಿದನು.

'ಹೌದು ಪ್ರಭು' ಎಂದು ಮುದುಕಿ ಗಳಹತೊಡಗಿದಳು. 'ಸಂತಮಂದಿರವಲ್ಲಿ ನಡೆದ ಸ್ವರ್ಗೀಯ ಪವಿತ್ರಾರಾಧನೆಯಲ್ಲಿ ಪಾಲ್ಗೊಳ್ಳುವುದೊಂದು ಭಾಗ್ಯವೆಂದು ತಿಳಿದು, ಕ್ರಿಸ್‌ಮಸ್ ಸಮಯದಲ್ಲಿ ಹೋಗಿದ್ದೆ. ಈಗ ಕೊಲ್ಯಾಜಿನ್‌ನಿಂದ ಬಂದೆ

ದಣಿಗಳೆ. ಅಲ್ಲಿ ನೋಡಿ, ಅತ್ಯದ್ಭುತವಾದ ಮಹಾಸಂಗತಿಯೊಂದು ಪ್ರಕಾಶಕ್ಕೆ ಬಂದಿದೆ.'

'ಇವಾನುಷ್ಕ ಸಹ ನಿನ್ನೊಡನಿದ್ದಳೆ?'

'ನಾನೊಬ್ಬಳೇ ಹೋಗುತ್ತೇನೆ, ಧರ್ಮಪ್ರಭುಗಳೆ' ಎಂದು ಇವಾನುಷ್ಕ ಮಂದ್ರ ಧ್ವನಿಯಲ್ಲಿ ಸೊಲ್ಲಿಸಿದಳು. 'ಯೂಖ್ನೊವದಲ್ಲಿ ಪೆಲಗೇಯ ಭೆಟ್ಟಿಯಾದಳು.'

ಪೆಲಗೇಯ ಮಧ್ಯೆ ಬಾಯಿಹಾಕಲು ಪ್ರಯತ್ನಿಸಿದಳು. ತಾನು ನೋಡಿದ್ದನ್ನೆಲ್ಲ ವಿವರಿಸಬೇಕೆಂದು ಅವಳು ಹಂಬಲಿಸುತ್ತಿದ್ದಳು. 'ದಣಿಗಳೆ, ಕೊಲ್ಯಾಜಿನ್‌ನಲ್ಲಿ ಅದ್ಭುತವಾದ ವರಪ್ರಸಾದ ಪ್ರಕಾಶಕ್ಕೆ ಬಂದಿದೆ.'

'ಏನದು? ಸಾಧುಸಂತರ ಅವಶೇಷಗಳೇನು?' ಎಂದು ಆಂಡ್ರೂ ಪ್ರಶ್ನಿಸಿದನು.

'ಆಂಡ್ರೂ, ಅದೆಲ್ಲ ಮರೆತುಬಿಡಣ್ಣ. ಪೆಲಗೇಯ, ಆ ಕತೆಯೆಲ್ಲ ಈಗ ಬೇಡ, ನಿಲ್ಲಿಸು' ಎಂದು ಮೇರಿ ನುಡಿದಳು.

'ಏಕೆ ಬೇಡ? ನನ್ನೊಡತಿ. ಏಕೆ ಬೇಡ? ಅವರನ್ನು ಕಂಡರೆ ನನಗೆ ಇಷ್ಟ. ಅವರು ದಯಾಳು. ದೇವರಿಗೆ ಬೇಕಾದವರು. ಆಶ್ರಯದಾತರು. ನನಗೊಮ್ಮೆ ಅವರು ಹತ್ತು ರೂಬಲ್ ಕೊಟ್ಟರು. ಅದೆಲ್ಲ ನನಗೆ ನೆನಪಿದೆ. ನಾನು ಕೀವ್‌ನಲ್ಲಿದ್ದಾಗ, ಕ್ರೇಜಿಸಿರಿಲ್ ಹೇಳುತ್ತಾರೆ, (ಅವರು ದೇವರೆ ಸರಿ. ಬಿಸಿಲಾಗಲಿ ಚಳಿಯಾಗಲಿ ಬರುಗಾಲಲ್ಲಿ ನಡೆಯುತ್ತಾರೆ.) ಅವರು ಹೇಳುತ್ತಾರೆ, "ಸರಿಯಾದ ಸ್ಥಳಕ್ಕೇಕೆ ನೀನು ಹೋಗಬಾರದು? ದೇವಮಾತೆಯ ಅದ್ಭುತ ವಿಗ್ರಹವೊಂದು ಪ್ರತ್ಯಕ್ಷವಾಗಿರುವ ಕೊಲ್ಯಾಜಿನ್‌ಗೆ ಹೋಗು" ಎಂದು. ಆ ಮಾತು ಕೇಳಿದ ಕೂಡಲೆ ನಾನು ಪವಿತ್ರಾತ್ಮರಿಗೆ ವಿದಾಯ ಹೇಳಿ ಹೊರಟೆ.'

ಎಲ್ಲರೂ ತೆಪ್ಪಗಿದ್ದರು. ಸ್ತ್ರೀಯಾತ್ರಿ ಮಾತ್ರ ಉಸಿರು ನುಂಗಿ, ಕ್ರಮಗತಿಯಲ್ಲಿ ಮಾತು ಮುಂದುವರಿಸಿದಳು. 'ನಾನಿಲ್ಲಿಗೆ ಬಂದದ್ದು ಹೀಗೆ, ದಣಿಗಳೆ. ಜನ ನನ್ನೊಡನೆ ಹೇಳುತ್ತಾರೆ: "ಮಹಾಪ್ರಸಾದದ ಅನುಗ್ರಹವಾಗಿದೆ. ಪವಿತ್ರ ಮಾತೆಯ, ದೇವರ ಪವಿತ್ರ ಕನ್ಯಾಮಾತೆಯ ಕೆನ್ನೆಗಳಿಂದ ಪವಿತ್ರ ತೈಲ ತೊಟ್ಟಿಕ್ಕುತ್ತಿದೆ" ಎಂದು.'

'ಸರಿ, ಸರಿ. ಅದನ್ನೆಲ್ಲ ಅನಂತರ ನಮಗೆ ಹೇಳುವೆಯಂತೆ' ಎಂದು ಕೆನ್ನೆ ಕೆಂಪೇರಿದ ರಾಜಕುಮಾರಿ ನುಡಿದಳು.

'ನಾನೊಂದು ಪ್ರಶ್ನೆ ಕೇಳುತ್ತೇನೆ. ಅದನ್ನೆಲ್ಲ ನೀನೇ ಕಣ್ಣಾರೆ ನೋಡಿದೆಯಾ?' ಎಂದು ಪಿಯೆರಿ ಕೇಳಿದನು.

'ಓ, ಹೌದು, ದಣಿಗಳೆ. ಅಂಥ ಭಾಗ್ಯ ನನ್ನದಾಗಿದೆ. ಸ್ವರ್ಗಜ್ಯೋತಿಯೇ ಆ ಮುಖವನ್ನು ಬೆಳಗುತ್ತಿದೆ. ಪವಿತ್ರ ಮಾತೆಯ ಕೆನ್ನೆಯಿಂದ ಅದು ತೊಟ್ಟಿಕ್ಕುತ್ತಿದೆ, ನಿರಂತರವಾಗಿ ತೊಟ್ಟಿಕ್ಕುತ್ತಿದೆ....'

'ಆದರೆ, ತಾಯಿ, ಅದೆಲ್ಲ ಮೋಸವಿರಬೇಕು!' ಎಂದು ಯಾತ್ರಿಯ ಕತೆಯನ್ನು ಕಿವಿಗೊಟ್ಟು ಕೇಳಿದ ಪಿಯೆರಿ ಮುಚ್ಚುಮರೆಯಿಲ್ಲದೆ ನುಡಿದನು.

'ಅಯ್ಯೋ, ಇದೇನು ದಣಿಗಳೆ, ನೀವು ಹೇಳೋದು?' ಎಂದು ಭಯೋದ್ವಿಗ್ನೆಯಾದ ಪೆಲಗೇಯ ಒದರಲುತ್ತ, ಬೆಂಬಲಕ್ಕಾಗಿ ರಾಜಕುಮಾರಿ ಮೇರಿಯ ಕಡೆಗೆ ತಿರುಗಿದಳು.

'ಸ್ವಪ್ರಯೋಜನಕ್ಕಾಗಿ ಜನರನ್ನು ಹಾಗೆ ವಂಚಿಸುತ್ತಾರೆ' ಎಂದು ಪಿಯರಿ ತನ್ನ ಧೋರಣೆಯನ್ನು ಪುನರುಕ್ತಿಸಿದನು.

'ಓ ಪ್ರಭು ಜೇಸುವೆ! ಕ್ರಿಸ್ತಪ್ರಭುವೆ!' ಎಂದು ಸ್ತ್ರೀಯಾತ್ರಿ ಶಿಲುಬೆಯಾಕಾರದಲ್ಲಿ ವಕ್ಷದ ಮೇಲೆ ಕೈಯಿಟ್ಟುಕೊಂಡಳು. 'ಓ, ಹಾಗೆಲ್ಲ ಮಾತಾಡಬೇಡಿ, ಪ್ರಭುವೆ. ಅದನ್ನು ನಂಬದ ಸಂದೇಹಿ ಸೇನಾನಿಯೊಬ್ಬನಿದ್ದ. "ಸನ್ಯಾಸಿಗಳು ಮೋಸಗಾರರು" ಎಂದವನು ನುಡಿಯುತ್ತಿದ್ದಂತೆಯೇ ಅವನು ಕಣ್ಣು ಕಳೆದುಕೊಂಡ. ಕೀವ್ ಸಮಾಧಿಗುಹೆಯ ಪವಿತ್ರ ಕನ್ಯಾಮಾತೆ ಅವನಿಗೆ ಕನಸಿನಲ್ಲಿ ಕಾಣಿಸಿಕೊಂಡು "ನನ್ನಲ್ಲಿ ವಿಶ್ವಾಸವಿಡು, ನೀನು ಎಂದಿನಂತಾಗುತ್ತೀಯೆ" ಎಂದು ನುಡಿದಳು. "ನನ್ನನ್ನವಳಲ್ಲಿಗೆ ಕರೆದೊಯ್ಯಿರಿ, ಕರೆದೊಯ್ಯಿರಿ" ಎಂದವನು ಹಲುಬಿದ. ನಾನು ಹೇಳುತ್ತಿರುವುದೆಲ್ಲ ವಾಸ್ತವ ಸತ್ಯ. ನಾನೇ ಅದನ್ನು ಕಣ್ಣಾರೆ ನೋಡಿದ್ದೇನೆ. ಆ ಕುರುಡನನ್ನು ನೇರವಾಗಿ ಅವಳ ಸನ್ನಿಧಿಗೆ ಕೊಂಡೊಯ್ಯಲಾಯಿತು. ಅವನು ಅವಳ ಪಾದ ಮೂಲದಲ್ಲಿ ಬಿದ್ದುಕೊಂಡು "ನನ್ನ ಕಣ್ಣು ಬರಿಸು, ತಾಯಿ. ತ್ಸಾರ್ ನನಗೇನು ಅನುಗ್ರಹಿಸಿದ್ದಾರೆಯೋ ಅದನ್ನೆಲ್ಲ ನಿನಗೆ ಸಮರ್ಪಿಸಿಬಿಡುತ್ತೇನೆ" ಎಂದವನು ಪ್ರಾರ್ಥಿಸುತ್ತಾನೆ. ಅದನ್ನೆಲ್ಲ ನಾನೆ ಕಣ್ಣಾರೆ ಕಂಡೆ, ಪ್ರಭುಗಳೆ. ಒಡನೆಯೆ ನಕ್ಷತ್ರ ವಿಗ್ರಹದಲ್ಲಿ ಬೆಸುಗೆಗೊಂಡಿತು. ಆಮೇಲೇನಾಯಿತು, ಗೊತ್ತೆ? ಅವನಿಗೆ ಕಣ್ಣು ಬಂತು! ಅಸಂಬದ್ಧವಾಗಿ ಮಾತಾಡುವುದು ಪಾಪ. ದೇವರು ನಿಮ್ಮನ್ನು ಶಿಕ್ಷಿಸುತ್ತಾನೆ.' ಎಂದವಳು ಪಿಯರಿಯ ಕಡೆಗೆ ತಿರುಗಿ, ಅವನನ್ನೆಚ್ಚರಿಸಿದಳು.

'ನಕ್ಷತ್ರ ವಿಗ್ರಹದಲ್ಲಿ ಬೆಸೆದುಗೊಂಡ ಬಗೆ ಹೇಗೆ?' ಎಂದು ಪಿಯರಿ ಪ್ರಶ್ನಿಸಿದನು.

'ಪವಿತ್ರಮಾತೆ ಸೇನಾನಿಯ ಸ್ಥಾನಕ್ಕೆ ಬಡ್ತಿ ಪಡೆದಳೇನು?' ಎಂದು ರಾಜಕುಮಾರ ಆಂಡ್ರೂ ನಕ್ಕನು.

ಪೆಲಗೇಯ ಒಡನೆಯೆ ಕಳೆಗುಂದಿದಳು, ತನ್ನ ಕೈಗಳನ್ನು ಹಿಸುಕಿಕೊಂಡಳು. 'ಅಯ್ಯೋ ದಣಿಗಳೆ! ಏನು ಹೇಳಿದಿರಿ? ಮಹಾಪಾಪ! ಮಗನಿರುವವರು ಹೀಗೆ ಮಾತಾಡಬಹುದೆ?' ಎಂದವಳು ಸಿಡುಕಿದಳು. ಬಿಳಿಚಿಕೊಂಡಿದ್ದ ಅವಳ ಮುಖ ರಂಗೇರಿತು. 'ಏನು ಹೇಳಿದಿರಿ, ದಣಿಗಳೆ? ದೇವರು ನಿಮ್ಮನ್ನು ಕ್ಷಮಿಸಲಿ!' ಎಂದವಳು ಶಿಲುಬೆಯಾಕಾರದಲ್ಲಿ ಕೈಜೋಡಿಸಿದಳು. 'ದೇವರೆ, ಇವರನ್ನು ಮನ್ನಿಸು! ಪ್ರಿಯ ರಾಜಕುಮಾರಿ, ಅದರರ್ಥವೇನು?....' ಎಂದವಳು ಮೇರಿಯ ಕಡೆಗೆ ತಿರುಗಿಕೊಂಡು ಕೇಳಿದಳು. ಅವಳು ಮೇಲೆದ್ದು, ಅಳುವವಳಂತೆ ಮುಖ ಮಾಡಿಕೊಂಡು, ತನ್ನ ಹಸುಬೆಯನ್ನು ಸರಿಪಡಿಸತೊಡಗಿದಳು. ಅವಳು ನಿಜಕ್ಕೂ ಭಯಕಾತರೆಯಾದಳು. ಅಂಥ ಮಾತುಕತೆ ನಡೆಯುವ ಮನೆಯಲ್ಲಿ ದಾನ ಸ್ವೀಕಾರ ನಾಚಿಕೆಗೇಡೆಂದೂ, ಅಂತೆಯೇ ಈ ಮನೆಯ ದಾನದ ತಿರಸ್ಕಾರ ದುಃಖದಾಯಕವೆಂದೂ ಅವಳು ನುಡಿದಳು.

‘ತಿರಸ್ಕಾರವೇಕೆ? ನೀನು ನನ್ನಲ್ಲಿಗೆ ಬಂದದ್ದಾದರೂ ಏಕೆ?’ ಎಂದು ಮೇರಿ ಕೇಳಿದಳು.

‘ಬಾ, ಪೆಲಗೇಯ, ನಾನು ತಮಾಷೆಗೆ ಹಾಗೆ ಹೇಳಿದೆ’ ಎಂದು ಪಿಯರಿ ಮೆಲ್ಲ ನುಸುರಿದನು. ‘ಆಣೆಮಾಡಿ ಹೇಳುತ್ತೇನೆ, ಅವಳ ಮನಸ್ಸು ನೋಯಿಸಬೇಕೆಂದಿಲ್ಲ, ರಾಜಕುಮಾರಿಯವರೆ. ದುರುದ್ದೇಶದಿಂದ ಹೇಳಿದ್ದಲ್ಲ. ವಿನೋದಕ್ಕಾಗಿ ಹೇಳಿದ್ದು’ ಎಂದವನು ತನ್ನ ತಪ್ಪನ್ನು ಮರೆಸುವ ಸಲುವಾಗಿ ಸಂಕೋಚದಿಂದ ನುಡಿದನು. ‘ತಪ್ಪೆಲ್ಲ ನನ್ನದು. ಆಂಡ್ರೂವಿನ ಉದ್ದೇಶವೂ ತಮಾಷೆಯೇ!’

ಪೆಲಗೇಯ ಸಂಶಯದಿಂದ ನಿಂತು, ಪಿಯರಿಯ ಮುಖದ ಕಡೆಗೆ ಕಣ್ಣು ಹಾಯಿಸಿದಳು. ಅವನ ಕಣ್ಣಿನಲ್ಲಿ ಪ್ರಾಮಾಣಿಕ ಪಶ್ಚಾತ್ತಾಪದ ಭಾವ ಎದ್ದು ಕಾಣುತ್ತಿತ್ತು. ರಾಜಕುಮಾರ ಆಂಡ್ರೂ ಅವಳ ಕಡೆಗೊಮ್ಮೆ, ಪಿಯರಿಯ ಕಡೆಗೊಮ್ಮೆ ದೈನ್ಯದಿಂದ ನೋಡಿದನು. ಕ್ರಮೇಣ ಅವಳ ಸಂದೇಹ ಪರಿಹಾರವಾಯಿತು.

ಅಧ್ಯಾಯ ೧೪

ಸ್ತ್ರೀ ಯಾತ್ರಿಯ ಮನಸ್ಸಿಗೆ ಸಮಾಧಾನವಾಯಿತು. ಅವಳು ಮತ್ತೆ ಆತ್ಮ ವಿಶ್ವಾಸದಿಂದ ತನ್ನ ಕತೆ ಮುಂದುವರಿಸಿದಳು. ಪವಿತ್ರ ಜೀವನದ ಪರಿಣಾಮವಾಗಿ ಪಾದ್ರಿ ಆಂಫಿಲೋಕಸ್‌ನ ಕೈಗಳಿಂದ ಸದಾ ಸುಗಂಧ ಎರಚುತ್ತಿತ್ತೆಂದು ಅವನ ಪವಾಡ ಸದೃಶ ಧರ್ಮಕಾರ್ಯಗಳನ್ನು ಪ್ರಶಂಸಿಸಿದಳು. ಕಳೆದ ಸಲ ಕೀವ್‌ಗೆ ಭೇಟಿ ಕೊಟ್ಟಿದ್ದಾಗ ತನಗೆ ಗೊತ್ತಿದ್ದ ಸನ್ಯಾಸಿಗಳು ಸಮಾಧಿ ಗುಹೆಗಳ ಬೀಗದ ಕೈ ಕೊಟ್ಟಿದ್ದನ್ನೂ ಒಂದೆರಡು ಚೂರು ಒಣರೊಟ್ಟಿಯಿಂದಲೇ ತಾನು ಸಂತರೊಡನೆ ಎರಡು ದಿನ ಸಮಾಧಿ ಗುಹೆಗಳಲ್ಲಿ ಕಾಲಕಳೆದದ್ದನ್ನೂ ಹೆಮ್ಮೆಯಿಂದ ವಿವರಿಸಿದಳು. ‘ತುಸು ಹೊತ್ತು ಒಬ್ಬರ ಮುಂದೆ ಪ್ರಾರ್ಥನೆ ಸಲ್ಲಿಸಿ, ಧ್ಯಾನಮಗ್ನಳಾಗುತ್ತಿದ್ದೆ. ಅನಂತರ ಬೇರೊಬ್ಬರ ಬಳಿಗೆ ಹೋಗುತ್ತಿದ್ದೆ. ತುಸುವೇ ಕಣ್ಣು ಮುಚ್ಚುತ್ತಿದ್ದೆ. ಅನಂತರ ಪ್ರಸಾದಾವಶೇಷಗಳಿಗೆ ಮುತ್ತಿಡುತ್ತಿದ್ದೆ. ಎಲ್ಲಿ ನೋಡಿದರೂ ದಿವ್ಯಶಾಂತಿ, ದಿವ್ಯಾನಂದ. ಆದರಿಂದಾಗಿ ಅಲ್ಲಿಂದ ಹೊರ ಬರುವುದೇ ಇಷ್ಟವಿಲ್ಲ. ಸ್ವರ್ಗದ ಜ್ಯೋತಿಯೂ ಬೇಡವೆನಿಸುತ್ತದೆ’

ಪಿಯರಿ ಶ್ರದ್ಧಾಸಕ್ತಿಗಳಿಂದ ಅವಳ ಮಾತುಗಳನ್ನಾಲಿಸಿದನು. ರಾಜಕುಮಾರ ಆಂಡ್ರೂ ಹೊರಗೆ ನಡೆದನು. ‘ದೇವರ ಮಕ್ಕಳು’ ಟೀ ಮುಗಿಸಲೆಂದು ಮೇರಿ ಪಿಯರಿಯನ್ನು ದಿವಾನ್ ಖಾನೆಗೆ ಕರೆದೊಯ್ದಳು.

‘ನೀವು ತುಂಬ ಒಳ್ಳೆಯವರು’ ಎಂದವಳು ಮಾತು ತೆಗೆದಳು.

‘ನಿಜಕ್ಕೂ ನಾನವಳ ಮನಸ್ಸನ್ನು ನೋಯಿಸಬೇಕೆಂದಿರಲಿಲ್ಲ. ಅವಳ ಭಾವನೆಗಳು ನನಗರ್ಥವಾಗುತ್ತವೆ. ಅವುಗಳ ಬಗ್ಗೆ ನನಗೆ ಗೌರವವಿದೆ.’

ರಾಜಕುಮಾರಿ ಮೇರಿ ಸಂತೋಷದಿಂದ ಅವನನ್ನು ದಿಟ್ಟಿಸಿ, ಸ್ನೇಹದ ನಗೆ ಬೀರಿದಳು. ‘ನಿಮ್ಮನ್ನು ಬಹಳ ದಿನಗಳಿಂದ ಬಲ್ಲೆ. ನನ್ನ ಸಹೋದರನಂತೆಯೇ ನಿಮ್ಮನ್ನು

ಪ್ರೀತಿಸುತ್ತೇನೆ. ಆಂಡ್ರ್ಯೂ ಬಗ್ಗೆ ನಿಮ್ಮ ಅಭಿಪ್ರಾಯವೇನು?' ಎಂದವಳು ತನ್ನ ಸ್ನೇಹ ಶೀಲದ ಮಾತುಗಳಿಗೆ ಉತ್ತರ ಕೊಡಲು ಅವನಿಗವಕಾಶ ಕೊಡದೆ, ಬೇರೊಂದು ಪ್ರಶ್ನೆಯ ಕಡೆಗೆ ಅವನ ಗಮನ ಸೆಳೆದಳು.'ಅವನ ಆರೋಗ್ಯದ ಬಗ್ಗೆ ನನಗೆ ಯಾವಾಗಲೂ ಆತಂಕ. ಚಳಿಗಾಲದಲ್ಲಿ ಅವನ ಆರೋಗ್ಯ ಉತ್ತಮವಾಗಿತ್ತು. ಆದರೆ ಕಳೆದ ವಸಂತ ಮಾಸದಲ್ಲಿ ಅವನ ಹುಣ್ಣು ಕೆದರಿತ್ತು. ಅದರ ಚಿಕಿತ್ಸೆಗಾಗಿ ಹೊರಗೆ ಹೋಗುವುದೆ ಮೇಲೆಂದು ವೈದ್ಯರು ಸೂಚಿಸಿದರು. ಅವನ ಧಾರ್ಮಿಕ ವಿಚಾರಗಳ ಬಗ್ಗೆಯೂ ನನಗೆ ತವಕವುಂಟು. ನಮ್ಮಂಥ ಸ್ತ್ರೀಯರ ಗುಣ ಅವನಲ್ಲಿಲ್ಲ. ಯಾತನೆಯಾದಾಗ ಅತ್ತುಬಿಟ್ಟು ನಮ್ಮ ಸಂಕಟಗಳನ್ನು ಮರೆಯುತ್ತೇವೆ. ಅವನಾದರೊ ಅವುಗಳನ್ನು ಎದೆಯಲ್ಲಿ ಬಚ್ಚಿಟ್ಟುಕೊಂಡು ಕೊರಗುತ್ತಾನೆ. ಈ ಹೊತ್ತು ಅವನು ಗೆಲವಾಗಿದ್ದಾನೆ; ಹುರುಪಿನಿಂದಿದ್ದಾನೆ. ನಿಮ್ಮ ಭೇಟಿಯೇ ಅದಕ್ಕೆ ಕಾರಣವಿರಬೇಕು. ಯಾವಾಗಲೂ ಅವನು ಹೀಗಿರುವುದಿಲ್ಲ. ವಿದೇಶ ಪ್ರವಾಸ ಕೈಗೊಳ್ಳುವಂತೆ ನೀವವನಿಗೆ ಪ್ರೇರಣೆ ನೀಡಲಾರಿರಾ? ಅವನಿಗೇನಾದರೂ ಚಟುವಟಿಕೆ ಬೇಕಾಗಿದೆ. ಕ್ರಮ ಬದ್ಧವಾದ ಪ್ರಶಾಂತ ಜೀವನ ಅವನಿಗಾಗದು. ಅವನ ನಡೆವಳಿ ನನಗೆ ಗೊತ್ತಾಗುವಂತೆ ಇತರರಿಗಾಗದು.'

ಹತ್ತು ಗಂಟೆಯ ಸಮಯದಲ್ಲಿ ಹಿರಿಯ ರಾಜಕುಮಾರನ ಬಂಡಿಯ ಗಂಟೆಸದ್ದು ಕೇಳಿ ಗಂಡಾಳುಗಳು ಮುಂಬಾಗಿಲಿಗೆ ಓಡಿದರು. ಆಂಡ್ರ್ಯೂ ಪಿಯುರಿಯರಿಬ್ಬರೂ ದ್ವಾರ ಮಂಟಪದ ಕಡೆಗೆ ನಡೆದರು.

'ಯಾರವರು?' ಎಂದು ಹಿರಿಯ ರಾಜಕುಮಾರ ಬಂಡಿಯಿಳಿಯುತ್ತಿದ್ದಂತೆ ಪಿಯುರಿಯ ಕಡೆಗೆ ಕಣ್ಣಾಗಿ ಪ್ರಶ್ನಿಸಿದನು. ಹೊಸಬನ ವಿಷಯ ತಿಳಿಯುತ್ತಿದ್ದಂತೆ ಅವನು 'ಆಹ, ತುಂಬ ಸಂತೋಷ. ಇಗೋ ಚುಂಬಿಸು' ಎಂದು ನುಡಿದನು. ಅವನ ಮನಸ್ಸು ಸಮಾಧಾನವಾಗಿತ್ತು, ಪಿಯುರಿಯ ಬಗ್ಗೆ ಉದಾರವಾಗಿತ್ತು.

ಊಟಕ್ಕೆ ಮುಂಚೆ ಆಂಡ್ರ್ಯೂ ತಂದೆಯ ಅಧ್ಯಯನ ಮಂದಿರಕ್ಕೆ ಬಂದಾಗ, ತಂದೆ ಪಿಯುರಿಯೊಡನೆ ನಡಸುತ್ತಿದ್ದ ಬಿಸಿಬಿಸಿ ಚರ್ಚೆಯನ್ನು ಗಮನಿಸಿದನು. ಯುದ್ಧಗಳೇ ಇಲ್ಲದ ಕಾಲ ಬಂದೇ ಬರುತ್ತದೆಂದು ಪಿಯುರಿ ವಾದಿಸುತ್ತಿದ್ದನು. ಅದು ಸಾಧ್ಯವಿಲ್ಲವೆಂದು ಹಿರಿಯ ರಾಜಕುಮಾರ ಕೋಪಗೊಳ್ಳದೆ ಜೋರಾಗಿ ಸಮರ್ಥಿಸಿಕೊಳ್ಳುತ್ತಿದ್ದನು.

'ಪುರುಷರ ಧಮನಿಗಳಲ್ಲಿರುವ ರಕ್ತವನ್ನು ಬಸಿದು, ಅದರ ಬದಲಿಗೆ ನೀರನ್ನು ತುಂಬಿದ್ದಾದರೆ ಯುದ್ಧಗಳು ಸ್ಥಗಿತಗೊಳ್ಳಬಹುದು. ಇದೆಲ್ಲ ಮುದುಕಿಯರ ಹುಚ್ಚು ಕಲ್ಪನೆ! ಮುದುಕಿಯರ ಹುಚ್ಚುಕಲ್ಪನೆ!' ಎಂದವನು ಪುನರುಕ್ತಿಸಿದನು. ಆದರೂ ಅವನು ಪಿಯುರಿಯ ಭುಜವನ್ನು ಪ್ರೀತಿಯಿಂದ ತಟ್ಟಿದನು. ಸಂವಾದದಲ್ಲಿ ಪಾಲ್ಗೊಳ್ಳಲಿಚ್ಛಿಸದೆ, ಪೇಟೆಯಿಂದ ತಂದೆ ತಂದಿದ್ದ ಪತ್ರಿಕೆಗಳ ಮೇಲೆ ಕಣ್ಣು ಹಾಯಿಸುತ್ತ ಕುಳಿತಿದ್ದ ಆಂಡ್ರ್ಯೂವಿನ ಬಳಿಗೆ ಅವನು ಸರಿದು, ವ್ಯವಹಾರಗಳ ಪ್ರಸ್ತಾಪವೆತ್ತಿಕೊಂಡನು.

'ಸೈನ್ಯಾಧಿಕಾರಿ, ಶ್ರೀಮಂತ ರೊಸ್ತೋವ್ ತನ್ನ ದಳದಲ್ಲರ್ಧವನ್ನೂ ಕಳುಹಿಸಿಲ್ಲ. ನಗರಕ್ಕೆ ಬಂದ ಅವನು ನನ್ನನ್ನು ಭೋಜನಕ್ಕಾಹ್ವಾನಿಸಲು ಪ್ರಯತ್ನಿಸಿದನು. ನಾನೇ

ಅವನಿಗೊಂದು ಚೊಕ್ಕ ಭೋಜನವನ್ನೇರ್ಪಡಿಸಿದೆ....ಅಗೋ ಅಲ್ಲಿ....ಈ ಕಡೆ ನೋಡು, ಮಗನೆ' ಎಂದು ಹಿರಿಯ ರಾಜಕುಮಾರ ತನ್ನ ಮಗನೊಡನೆ ಮಾತಾಡುತ್ತ, ಪಿಯರಿಯ ಭುಜವನ್ನು ತಟ್ಟುತ್ತಿದ್ದನು. 'ನಿನ್ನ ಗೆಳೆಯ ಪರವಾಯಿಲ್ಲ. ಚುರುಕಾಗಿದ್ದಾನೆ. ನಾನು ಮೆಚ್ಚಿಕೊಂಡಿದ್ದೇನೆ. ಅವನು ನನ್ನನ್ನು ಪ್ರಚೋದಿಸುತ್ತಾನೆ. ಬೇರೆಯವರು ಚಾಲಾಕಿ ನಿಂದ ಮಾತಾಡುತ್ತಾರೆ; ಆದರೆ ಅವರ ಮಾತುಕೇಳಲು ಇಷ್ಟವಾಗುವುದಿಲ್ಲ. ಈ ಮನುಷ್ಯ ಅಸಂಬದ್ಧವಾಗಿ ಮಾತಾಡುತ್ತಾನೆ; ಆದರೂ ಮುದುಕನನ್ನು ಕೆರಳಿಸುತ್ತಾನೆ. ಒಳ್ಳೆಯದು! ಈಗ ಏಳಿ. ಮುಂದಿನ ಕೆಲಸ ನಡೆಯಲಿ. ನಾನೂ ಬಂದು ನಿಮ್ಮೊಡನೆ ಕುಳಿತುಕೊಳ್ಳುತ್ತೇನೆ. ಮತ್ತೇನಾದರೂ ಚರ್ಚಿಸೋಣ. ನನ್ನ ಪುಟ್ಟ ಮಗಳಿದ್ದಾಳಲ್ಲ. ರಾಜಕುಮಾರಿ ಮೇರಿ, ಅವಳೊಡನೆ ಸ್ನೇಹ ಬೆಳೆಸಿ' ಎಂದವನು ಪಿಯರಿ ಬಾಗಿಲ ಮೂಲಕ ಹೋಗುತ್ತಿದ್ದಂತೆ ಕೂಗಿ ಹೇಳಿದನು.

ಬಾಲ್ಡ್ ಬೆಟ್ಟಕ್ಕೆ ಈಸಲ ಭೇಟಿ ಕೊಟ್ಟಾಗ ಮಾತ್ರ ಪಿಯರಿಗೆ ರಾಜಕುಮಾರ ಆಂಡ್ರೂವಿನ ಗೆಳೆತನದ ಮೋಹಕತೆ ಮತ್ತು ತೀಕ್ಷ್ಣತೆಗಳು ಅರ್ಥವಾದುವು. ಅವ ನೊಡನೆಯ ಸಂಬಂಧದಲ್ಲಿ ಆ ಮೋಹಕತೆ ಸ್ಪಷ್ಟವಾಗಿ ಮೊಗದೋರದಿದ್ದರೂ, ಅವನ ಕುಟುಂಬದ ಬಂಧುಗಳಲ್ಲಿ ಮತ್ತು ಸಿಬ್ಬಂದಿವರ್ಗದಲ್ಲಿ ಎದ್ದು ಕಾಣುತ್ತಿತ್ತು. ನಿಷ್ಠುರ ಪ್ರಕೃತಿಯ ಹಿರಿಯ ರಾಜಕುಮಾರನ ಗುರುತಾಗಲಿ ಅಥವಾ ಕೋಮಲಸ್ವಭಾವದ ಅಂಜುಕುಳಿ ರಾಜಕುಮಾರಿ ಮೇರಿಯ ಪರಿಚಯವಾಗಲಿ ಅವನಿಗೆ ಗಾಢವಾಗಿ ದೊರಕಿರ ಲಿಲ್ಲ. ಆದರೂ ಅವನು ಒಮ್ಮೆಗೆಯೇ ಆ ಕುಟುಂಬದ ಗೆಳೆಯನಾದನು. ಎಲ್ಲರೂ ಅವನನ್ನು ಪ್ರೀತಿಸುತ್ತಿದ್ದರು. ಯಾತ್ರಾರ್ಥಿಗಳೊಂದಿಗೆ ವಿನಯದಿಂದ ನಡೆದುಕೊಂಡಿದ್ದರಿಂದ, ರಾಜಕುಮಾರಿ ಮೇರಿಯ ಚಾರುಮಂದಹಾಸ ಅವನ ಮೇಲೆ ಹರಿದಿತ್ತು. ಜತೆಗೆ ಒಂದು ವರ್ಷದ ಕೂಸು 'ರಾಜಕುಮಾರ ನಿಕೊಲಾಸ್' (ಅದು ತಾತ ಕರೆಯುತ್ತಿದ್ದ ಹೆಸರು) ಸಹ ಪಿಯರಿಯನ್ನು ಕಂಡ ಕೂಡಲೆ ಮುಗುಳುನಗೆ ಸೂಸಿ, ಕೈ ಚಾಚಿದ ಕೂಡಲೇ ಒಡರಿಕೊಂಡು ಅವನ ತೋಳ್ತೊಟ್ಟಿಲು ಸೇರಿದ್ದನು. ಹಿರಿಯ ರಾಜಕುಮಾರನೊಡನೆ ಮಾತಾಡುತ್ತಿದ್ದಾಗ, ಮೈಕೇಲ್ ಇವಾನೊವಿಚ್ ಮತ್ತು ಕುಮಾರಿ ಬೌರಿಯನ್ನೆ ಅವನನ್ನೆ ಹರ್ಷವದನರಾಗಿ ನೋಡುತ್ತಿದ್ದರು.

ಪಿಯರಿಯ ಸಲುವಾಗಿ ಹಿರಿಯ ರಾಜಕುಮಾರನೂ ಭೋಜನಕ್ಕೆ ಹಾಜರಾದನು. ಆ ತರುಣನ ಎರಡು ದಿನಗಳ ಭೇಟಿಯ ಸಮಯದಲ್ಲಿ ಅವನು ಸೌಹಾರ್ದಭಾವದಿಂದ ನಡೆದುಕೊಂಡನು. ಮತ್ತೆ ಬರುವಂತೆ ಪಿಯರಿಗೆ ಆಹ್ವಾನ ನೀಡಿದನು.

ಹೊಸಬ ತಮ್ಮ ಮನೆಗೆ ಬಂದು, ಬೀಳ್ಕೊಂಡ ನಂತರ ಜನ ಸಾಮಾನ್ಯವಾಗಿ ಅವನ ಬಗ್ಗೆ ಮಾತಾಡಿಕೊಳ್ಳುವಂತೆ ಪಿಯರಿಯ ನಿರ್ಗಮನಾನಂತರ, ಮನೆಯವರೆಲ್ಲ ಒಂದೆಡೆ ಸೇರಿದಾಗ ಅವನ ಬಗ್ಗೆ ತಂತಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡಿ ಕೊಂಡರು. ಯಾವಾಗಲೂ ಎಲ್ಲರಬಗ್ಗೆಯೂ ಜನರಿಂದ ಒಳ್ಳೆಯ ಮಾತು ನಿರೀಕ್ಷಿಸು ವಂತಿಲ್ಲ. ಆದರೆ ಪಿಯರಿಯ ಬಗ್ಗೆ ಕುಟುಂಬದವರ ಬಾಯಿಂದ ಒಳ್ಳೆಯ ಮಾತಲ್ಲದೆ ಅಪಶ್ರುತಿ ಹೊರಡಲಿಲ್ಲ.

ಅಧ್ಯಾಯ ೧೫

ರೊಸ್ತೋವ್ ರಜೆಯಿಂದ ಹಿಂದಿರುಗುವಾಗ, ಡೆನಿಸೋವ್ ಮತ್ತು ಇಡೀ ದಳದೊಡನೆ ತನ್ನನ್ನು ಬೆಸೆದಿದ್ದ ಸ್ನೇಹ ಸಂಬಂಧ ಎಷ್ಟು ಗಾಢವಾದುದೆಂಬುದು ಪ್ರಥಮ ಬಾರಿಗೆ ಅವನಿಗರಿವಾಯಿತು.

ಮಾಸ್ಕೋನಗರದ ತನ್ನ ಮನೆ ಸನ್ನಿಹಿತವಾದಾಗ ಅವನೆಂತು ಭಾವವಶನಾಗಿದ್ದನೋ ಅಂತೆಯೇ ತನ್ನ ದಳ ಸಮೀಪಿಸುತ್ತಿದ್ದಂತೆ ಭಾವಾನಂದದಲ್ಲಿ ಮುಳುಗಿದನು. ತನ್ನ ದಳದ ಗುಂಡಿಹಾಕದ ಸಮವಸ್ತ್ರಧಾರಿ ಅಶ್ವಾರೋಹಿಯನ್ನು ಮೊದಲು ಕಂಡಾಗ, ಕೆಂಗೂದಲ ದೆಮೆಂತ್ಯೇವ್‌ನನ್ನು ಗುರುತಿಸಿ, ಕೆಂಗಂದು ಕುದುರೆಗಳ ದಸಿಹಗ್ಗಗಳನ್ನು ನೋಡಿದಾಗ, “ಶ್ರೀಮಂತರು ದಯಮಾಡಿಸಿದ್ದಾರೆ” ಎಂದು ಲವ್ರೂಷ್ಕ ಹರ್ಷೋದ್ರೇಕದಿಂದ ಕೂಗಾಡಿದಾಗ, ತನ್ನ ಹಾಸುಗೆಯ ಮೇಲೆ ಗಾಢನಿದ್ರೆಯಲ್ಲಿದ್ದ ಡೆನಿಸೋವ್ ತನ್ನನ್ನು ಅಪ್ಪಿಕೊಳ್ಳುವುದಕ್ಕಾಗಿ ತಲೆಬಟ್ಟೆ ಕೆದರಿಕೊಂಡೇ ಮಣ್ಣಿನ ಬೀಡಿನಿಂದ ಓಡಿಬಂದಾಗ, ತನ್ನನ್ನು ಸ್ವಾಗತಿಸುವ ಸಲುವಾಗಿ ಅಧಿಕಾರಿಗಳು ಜಮಾಯಿಸಿದಾಗ ರೊಸ್ತೋವ್‌ನಿಗಾದ ಭಾವಾನುಭವ ಅವರ್ಣನೀಯ. ತನ್ನ ತಾಯಿ ತಂದೆ ತಂಗಿಯರನ್ನಾಲಿಂಗಿಸಿಕೊಂಡಾಗ ಆದ ಆನಂದಾನುಭವವೇ ಈಗಲೂ ಅವನಿಗಾಯಿತು. ಆನಂದಾಶ್ರುಗಳಿಂದ ಗಂಟಲು ಕಟ್ಟಿದಂತಾಗಿ, ಅವನ ಬಾಯಿಂದ ಮಾತು ಹೊರಡಲಿಲ್ಲ. ಅವನ ದಳವೇ ಅವನ ಮನೆಯಾಗಿತ್ತು. ತಂದೆ ತಾಯಿಯರ ಮನೆಯಷ್ಟೇ ಅಮೂಲ್ಯವಾದುದಾಗಿತ್ತು, ಆನಂದದಾಯಕವಾಗಿತ್ತು.

ತನ್ನ ದಳದ ನಾಯಕನ ಮುಂದೆ ಹಾಜರಾಗಿ, ಹಿಂದಿನ ಪಡೆಗೆ ಮತ್ತೆ ನಿಯಮಿತನಾಗಿ, ಮೇವು ಸಂಗ್ರಹಿಸುವ ಕರ್ತವ್ಯದಲ್ಲಿ ನಿರತನಾಗಿದ್ದಾಗ, ತನ್ನ ದಳದ ಸಣ್ಣ ಪುಟ್ಟ ಯೋಗಕ್ಷೇಮಗಳನ್ನು ವಿಚಾರಿಸಿಕೊಳ್ಳುತ್ತ, ಸ್ವಾತಂತ್ರ್ಯ ಕಳೆದುಕೊಂಡಂತಾಗಿ, ಇಕ್ಕಟ್ಟಾದ ಬದಲಾವಣೆಯಿಲ್ಲದ ಚೌಕಟ್ಟನಲ್ಲಿ ಕಟ್ಟುಗೊಂಡಂತಿದ್ದಾಗ ಅವನು ತಂದೆ ತಾಯಿಯರ ಆಸರೆಯಲ್ಲಿ ಎಂಥ ಶಾಂತಿಯನ್ನು ನೈತಿಕ ಸುಖವನ್ನನುಭವಿಸಿದ್ದನೋ ಇಲ್ಲಿಯೂ ಅಂಥದೇ ಸುಖಶಾಂತಿಗಳನ್ನನುಭವಿಸಿದ್ದನು. ಈ ಸ್ಥಳವನ್ನು ತನ್ನ ಮನೆಯೆಂದೇ ತಿಳಿದುಕೊಂಡಿದ್ದನು. ಆದರೆ ತನ್ನ ನಿಜವಾದ ಸ್ಥಾನವೇ ಗೊತ್ತಿರದ, ತಪ್ಪು ನಿರ್ಣಯಗಳನ್ನು ತೆಗೆದುಕೊಳ್ಳುವಂತಿದ್ದ ವಿಶಾಲ ಜಗತ್ತಿನ ಗಲಭೆ ಗದ್ದಲಗಳು ಇಲ್ಲಿರಲಿಲ್ಲ; ಸೋನ್ಯಳಿಗೆ ವಿವರಣೆ ನೀಡಬೇಕಾದ ಅಥವಾ ಬೇಕಿಲ್ಲದ ಆವಶ್ಯಕತೆ ಇಲ್ಲಿರಲಿಲ್ಲ; ಕೆಲವು ಸ್ಥಳಗಳಿಗೆ ಹೋಗಬೇಕಾದ, ಮತ್ತೆ ಕೆಲವು ಸ್ಥಾನಗಳಿಗೆ ಹೋಗಬೇಕಿಲ್ಲದ ಸಾಧ್ಯತೆ ಸಹ ಇಲ್ಲಿಲ್ಲ; ಒಂದಲ್ಲ ಹಲವಾರು ರೀತಿಗಳಲ್ಲಿ ದಿನದ ಇಪ್ಪತ್ತನಾಲ್ಕು ಗಂಟೆಗಳನ್ನು ಕಳೆಯಬೇಕಾದ ಪರಿಸ್ಥಿತಿಯೂ ಇಲ್ಲಿಲ್ಲ; ತನಗೆ ಹತ್ತಿರದಲ್ಲೂ ಇಲ್ಲದ, ಅತಿದೂರದಲ್ಲೂ ಇಲ್ಲದ, ಅಸಂಖ್ಯಾತ ಜನ ಸಮೂಹವೂ ಇಲ್ಲಿಲ್ಲ; ತನ್ನ ತಂದೆಯ ಸಂಗಡದ ಅನಿಶ್ಚಿತವೂ ಅಪರೀಕ್ಷಿತವೂ ಆದ ಧನವ್ಯವಹಾರಗಳಾಗಲಿ, ದೋಲೊಖೊವ್‌ನಿಂದಾಗಿ ತಾನನುಭವಿಸಿದ ಭೀಕರ ನಷ್ಟವಾಗಲಿ ಇಲ್ಲಿರಲಾರವು. ಇಲ್ಲಿ, ಈ ದಳದಲ್ಲಿ ಎಲ್ಲವೂ ಸ್ಪಷ್ಟ, ಸರಳ. ಇಡೀ ಜಗತ್ತು ಎರಡು ಅಸಮ ಭಾಗಗಳಾಗಿ ವಿಂಗಡಣೆಗೊಂಡಿತ್ತು : ಒಂದು ಪಾವ್ಲೊಗ್ರಾಡ್ ದಳ; ಎರಡು, ಉಳಿದದ್ದು. ಉಳಿದದ್ದು ತನಗೆ

ಸಂಬಂಧಿಸಿದ್ದಲ್ಲ. ದಳದಲ್ಲಿ ಪ್ರತಿಯೊಂದೂ ನಿಶ್ಚಿತವಾಗಿತ್ತು: ಯಾರು ಲೆಫ್ಟಿನೆಂಟ್, ಯಾರು ಕ್ಯಾಪ್ಟನ್, ಯಾರು ಒಳ್ಳೆಯವ, ಯಾರು ಕೆಟ್ಟವ, ಎಲ್ಲಕ್ಕಿಂತ ಮಿಗಿಲಾಗಿ, ಯಾರು ಗೆಳೆಯ ಎಂಬುದು ಸ್ಪಷ್ಟವಾಗಿತ್ತು. ಹೋಟೆಲು ಮಾಲೀಕ ಸಂಬಳ ಕೊಡುತ್ತಿದ್ದ; ಪ್ರತಿ ನಾಲ್ಕು ತಿಂಗಳಿಗೊಮ್ಮೆ ಸಂಬಳ ಸಲೀಸಾಗಿ ಬರುತ್ತಿತ್ತು; ಆಲೋಚಿಸಬೇಕಾದ ಅಥವಾ ನಿರ್ಣಯ ತೆಗೆದುಕೊಳ್ಳಬೇಕಾಗಿದ್ದ ಅಗತ್ಯವೂ ಇರಲಿಲ್ಲ; ಪಾವ್‌ಲೊಗ್ರಾಡ್ ದಳದಲ್ಲಿ ಯಾವುದು ನಿಷಿದ್ಧವಾಗಿತ್ತೋ ಅದನ್ನು ಮಾಡದಿದ್ದರೆ ಅಷ್ಟೇ ಸಾಕಾಗಿತ್ತು; ಸ್ಪಷ್ಟವೂ, ಸಂದೇಹ ದೂರವೂ, ನಿಶ್ಚಿತವೂ ಆದ ಆಜ್ಞೆಯನ್ನು ಪರಿಪಾಲಿಸುವುದಷ್ಟೆ ಪ್ರತಿಯೊಬ್ಬನ ಕರ್ತವ್ಯವಾಗಿತ್ತು. ಇಷ್ಟಿದ್ದರೆ ಎಲ್ಲವೂ ಒಳ್ಳೆಯದೇ.

ಮತ್ತೊಮ್ಮೆ ಸೈನಿಕ ಜೀವನದ ನಿಸ್ಪೃಷ್ಟ ವಾತಾವರಣವನ್ನು ಪ್ರವೇಶಿಸಿದಾಗ, ರೊಸ್ತೋವ್ ಹರ್ಷದಿಂದ ಉಬ್ಬಿದನು; ಬಳಲಿದ ಮನುಷ್ಯ ವಿಶ್ರಾಂತಿಗಾಗಿ ಮಲಗಿಕೊಂಡಾಗ ಆಗುವ ನೆಮ್ಮದಿ ಅವನಿಗುಂಟಾಯಿತು. ಈ ದಂಡಯಾತ್ರೆಯ ಕಾಲದಲ್ಲಿ ಅವನ ಸೈನಿಕ ಜೀವನ ಹಿಂದಿಗಿಂತ ಆಹ್ಲಾದಕಾರಿಯಾಗಿತ್ತು. ಏಕೆಂದರೆ, ದೋಲೊಖೊವ್‌ನ ಜತೆ ಸೇರಿ ಅಪಾರ ಹಣವನ್ನು ಕಳೆದುಕೊಂಡ ನಂತರ (ಈ ಬಗ್ಗೆ ಬಂಧು ಮಿತ್ರರು ತನ್ನನ್ನು ಸಾಂತ್ವನಗೊಳಿಸಲು ಪ್ರಯತ್ನಿಸಿದ್ದರೂ, ಅವನು ಮಾತ್ರ ತನ್ನ ತಪ್ಪನ್ನು ಮರೆತಿರಲಿಲ್ಲ.) ಹಿಂದಿನಂತಲ್ಲದೆ, ಕರ್ತವ್ಯಶ್ರದ್ಧೆಯಿಂದ ಪ್ರಾಮಾಣಿಕ ಸೇವೆ ಸಲ್ಲಿಸುವ ಮೂಲಕ, ಪ್ರಥಮ ದರ್ಜೆಯ ಸಂಗಾತಿ ಮತ್ತು ಅಧಿಕಾರಿ ಎನ್ನಿಸಿಕೊಳ್ಳುವ ಮೂಲಕ, ತನ್ನ ತಪ್ಪಿಗೆ ತಕ್ಕ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ಮನಸ್ಸಿನಲ್ಲಿ ನಿರ್ಧರಿಸಿಕೊಂಡಿದ್ದನು. ಒಟ್ಟಿನಲ್ಲಿ ಶ್ರೇಷ್ಠ ಮಾನವನಾಗಬೇಕೆಂಬುದೇ ಅವನ ಉದ್ದೇಶವಾಗಿತ್ತು. ಜಗತ್ತಿನಲ್ಲಿ ಕಷ್ಟವೆಂದು ತೋರುತ್ತಿದ್ದ ಆ ಉದ್ದೇಶ ಸಾಧನೆ ಸೈನ್ಯದಲ್ಲಿ ಸುಲಭ ಸಾಧ್ಯವೆಂದು ತೋರುತ್ತಿತ್ತು.

ತನ್ನ ನಷ್ಟಾನುಭವದ ತರುವಾಯ ಐದು ವರ್ಷಗಳಲ್ಲಿ ತಂದೆ ನೀಡಿದ್ದ ಋಣವನ್ನು ತೀರಿಸುವುದಾಗಿ ಅವನು ನಿರ್ಧರಿಸಿಕೊಂಡಿದ್ದನು. ಅವನು ಹತ್ತು ಸಾವಿರ ರೂಬಲ್ ವರ್ಷಾಶನ ಪಡೆಯುತ್ತಿದ್ದನಷ್ಟೆ. ಅದರಲ್ಲಿ ಕೇವಲ ಎರಡು ಸಾವಿರ ರೂಬಲ್ ಮಾತ್ರ ತೆಗೆದುಕೊಂಡು, ಉಳಿದದ್ದನ್ನು ತಂದೆಯ ಸಾಲಕ್ಕೆ ಉತ್ತಾರ ಹಾಕುವುದೆಂದು ನಿಶ್ಚಯಿಸಿಕೊಂಡನು.

* * *

ಮೇಲಾಮೇಲಿನ ಹಿಂಜರಿತ ಮತ್ತು ಮುಂದುವರಿತಗಳನಂತರ, ಪುಲ್‌ತೂಸ್ಕ್ ಮತ್ತು ಪ್ರಷೀಶ್ಚ್ ಐಲಾವು ಕದನಗಳ ತರುವಾಯ ರಷ್ಯನ್ ಸೈನ್ಯ ಬರ್ತೆನ್‌ಸ್ಟೀನ್ ಬಳಿ ಕೇಂದ್ರೀಕೃತವಾಗಿತ್ತು.

ಗಲಂಚರ ದಂಡಯಾತ್ರೆಯಲ್ಲಿ ಕಾರ್ಯಪ್ರವೃತ್ತವಾಗಿದ್ದ ಪಾವ್ಲೊಗ್ರಾಡ್‌ದಳ ರಷ್ಯಾದಲ್ಲಿ ಹೊಸಸಿಪಾಯಿಗಳನ್ನು ಸಂಗ್ರಹಿಸಿಕೊಂಡು ಬರುವಷ್ಟೊತ್ತಿಗೆ ದಂಡಯಾತ್ರೆಯ ಪ್ರಥಮ ಕಾರ್ಯಾಚರಣೆ ಮುಗಿದುಹೋಗಿತ್ತೆಂದೇ ಹೇಳಬಹುದು. ಅದು ಪುಲ್‌ತೂಸ್ಕ್‌ನ

ಲ್ಲಾಗಲಿ, ಪ್ರಷೀರ್ಶ್ಟ್–ಐಲಾವಿನಲ್ಲಾಗಲಿ ಭಾಗವಹಿಸಲಾಗಲಿಲ್ಲ. ದಂಡಯಾತ್ರೆಯ ಎರಡನೆಯ ಹಂತದಲ್ಲಿ ರಣಕಣವನ್ನು ಸೇರಿದಾಗ ಅದನ್ನು ಪ್ಲಾತೊವ್‌ನ ವಿಭಾಗಕ್ಕೆ ಲಗತ್ತಿಸಲಾಯಿತು.

ಪ್ಲಾತೊವ್‌ನ ವಿಭಾಗ ಪ್ರಧಾನ ಸೈನ್ಯದೊಡನೆ ಸೇರದೆ ಸ್ವತಂತ್ರ ಕಾರ್ಯಾಚರಣೆಯಲ್ಲಿ ತೊಡಗಿತ್ತು. ಹಲವು ಸಲ ಪಾವ್ಲೊಗ್ರಾಡ್ ದಳ ಶತ್ರುಗಳ ಮೇಲೆ ಗುಂಡು ಹಾರಿಸಿ, ಕೆಲವು ಮಂದಿ ಶತ್ರುಗಳನ್ನು ಸೆರೆಹಿಡಿದಿತ್ತು. ಅಷ್ಟೇ ಅಲ್ಲ, ಮಾರ್ಷಲ್ ಔ ದಿನಾತ್‌ನ ರಥಗಳನ್ನು ಸಹ ತನ್ನ ವಶಕ್ಕೆ ತೆಗೆದುಕೊಂಡಿತ್ತು. ಏಪ್ರಿಲ್ ಮಾಹೆಯಲ್ಲಿ ಕೆಲವು ವಾರ ಪಾವ್ಲೊಗ್ರಾಡ್ ಸೈನಿಕರು ಸರ್ವನಾಶಕ್ಕೊಳಗಾಗಿ ಪಾಳಾಗಿದ್ದ ಜರ್ಮನ್ ಹಳ್ಳಿಯ ಬಳಿ ಚಲನೆಯಿಲ್ಲದೆ ನಿಲ್ಲಬೇಕಾಯಿತು.

ಹಿಮಶಾಖ ಅದೆ ತಾನೆ ಪ್ರಾರಂಭವಾಗಿತ್ತು. ಎಲ್ಲೆಲ್ಲೂ ಕೆಸರು, ತಂಡಿ. ನದಿಯ ಮೇಲಣ ಮಂಜು ಬಿರುಕು ಬಿಟ್ಟಿತ್ತು. ರಸ್ತೆಗಳು ಸಂಚಾರ ಯೋಗ್ಯವಾಗಿರಲಿಲ್ಲ. ಹಲವು ದಿನಗಳ ತನಕ ಸೈನಿಕರಿಗೆ ಆಹಾರ ಸಾಮಗ್ರಿಗಳನ್ನಾಗಲಿ, ಕುದುರೆಗಳಿಗೆ ಮೇವನ್ನಾಗಲಿ ಒದಗಿಸಿರಲಿಲ್ಲ. ವಾಹನಗಳು ಬರುವಂತಿರಲಿಲ್ಲವಾದ್ದರಿಂದ ಸೈನಿಕರು ಚೆಲ್ಲಾಪಿಲ್ಲಿಯಾಗಿದ್ದರು. ತೊರೆದುಬಿಟ್ಟಿದ್ದ ಪಾಳುಹಳ್ಳಿಗಳಲ್ಲಿ ಆಲೂಗೆಡ್ಡೆಗಾಗಿ ಅಲೆದಾಡುತ್ತಿದ್ದರು. ಅದು ಸಹ ಅವರಿಗೆ ಸಾಕಷ್ಟು ಸಿಗಲಿಲ್ಲ.

ಸಿಕ್ಕಿದ್ದನ್ನೆಲ್ಲ ತಿಂದು, ಏನೂ ಉಳಿಸದೆ ನಿವಾಸಿಗಳು ಊರು ಬಿಟ್ಟು ಓಡಿಹೋಗಿದ್ದರು. ಓಡಿಹೋಗಲಾರದೆ ಉಳಿದಿದ್ದವರಲ್ಲಿ ಅಲ್ಲೊಬ್ಬ ಇಲ್ಲೊಬ್ಬ ತಿರುಕರಿಗಿಂತ ಕಡೆಯಾಗಿದ್ದರು. ಅವರಿಂದ ಏನೇನೂ ಸಿಗುವಂತಿರಲಿಲ್ಲ. ಸಾಮಾನ್ಯವಾಗಿ ಕರುಣೆಯಿಲ್ಲದ ಸೈನಿಕರು ಅವರಿಂದ ಏನನ್ನಾದರೂ ಕಸಿದುಕೊಳ್ಳುವುದಿರಲಿ, ತಮ್ಮ ಪಡಿತರದಿಂದಲೂ ಕೊನೆಯ ತುಣುಕುಗಳನ್ನು ಅವರಿಗೆ ಹಲವು ಸಲ ಕೊಟ್ಟದ್ದುಂಟು.

ಯುದ್ಧದಲ್ಲಿ ಗಾಯಗೊಂಡ ಪಾವ್‌ಲೊಗ್ರಾಡ್ ದಳದ ಸೈನಿಕರು ಇಬ್ಬರೇ ಮಾತ್ರ. ಆದರೆ ಅದರ ಅರ್ಧದಷ್ಟು ಜನ ಸತ್ತದ್ದು ಹಸಿವು ಕಾಯಿಲೆಗಳಿಂದ. ಆಸ್ಪತ್ರೆಗಳಲ್ಲಿ ಸಾವು ಖಚಿತವಾಗಿದ್ದುದರಿಂದ, ಜ್ವರದ ಕಾರಣವಾಗಿ ಹಾಗೂ ಕೆಟ್ಟ ಆಹಾರದ ಪರಿಣಾಮವಾಗಿ ಸಂಭವಿಸಿದ ಊತದಿಂದಾಗಿ ಸಂಕಟಪಡುತ್ತಿದ್ದ ಸೈನಿಕರು ಕಾರ್ಯಾಚರಣೆಯಲ್ಲಿ ತೊಡಗಿರಲು ಇಷ್ಟಪಡುತ್ತಿದ್ದರು. ಆಸ್ಪತ್ರೆಗಳಿಗೆ ಹೋಗುವುದಕ್ಕಿಂತ ಮುಂಚೂಣಿಗೆ ಹೋಗುವುದೆ ಸುಖವೆಂದು ಅವರು ಕಾಲೆಳೆದುಕೊಂಡು ಹೋಗುತ್ತಿದ್ದರು. ವಸಂತ ಋತು ಬಂದಕೂಡಲೇ ಆಸ್ಪರ್‍ಯಾಗಸ್‌ನಂತೆ ಕಾಣುತ್ತಿದ್ದ ಗಿಡ ಭೂಮಿಯಲ್ಲಿ ಮೊಳೆಯುತ್ತಿತ್ತು. ಯಾವುದೋ ಕಾರಣಕ್ಕಾಗಿ ಸೈನಿಕರು 'ಮಾಷ್ಕಳ ಸಿಹಿಗೆಣಸು' ಎಂದದನ್ನು ಕರೆಯುತ್ತಿದ್ದರು. ಅದು ತುಂಬ ಕಹಿಯಾಗಿತ್ತು. ಆದರೆ ಅವರು ಅದನ್ನೆ ಹುಡುಕುತ್ತ ಬಯಲಿನಲ್ಲೆಲ್ಲ ಅಲೆದಾಡುತ್ತಿದ್ದರು. ಅದು ಅನಾರೋಗ್ಯಕರವಾದ ಕೆಟ್ಟ ಗಿಡವೆಂದು ಸಹ ಸೈನ್ಯಾಡಳಿತದ ಆಜ್ಞೆಯನ್ನು ಘೋಷಿಸಲಾಗಿದ್ದರೂ, ಅವರು ತಮ್ಮ ಕುಡುಗತ್ತಿಗಳಿಂದ ಅದನ್ನಗೆದು ತಿನ್ನುತ್ತಿದ್ದರು. ಆ ವಸಂತ ಕಾಲದಲ್ಲಿ ಹೊಸದೊಂದು ಕಾಯಿಲೆ ಸೈನಿಕರನ್ನಪ್ಪಿಕೊಂಡಿತು. ಕೈಕಾಲು ಮೋರೆಗಳ ಊತವೇ ಅದು. ಅದಕ್ಕೆ ಗೆಣಸೇ ಕಾರಣವೆಂದು ವೈದ್ಯರು ಘೋಷಿಸಿದರು. ಆದರೂ ಡೆನಿಸೋವ್ ದಳದ ಸೈನಿಕರು

ವಿಧಿಯಿಲ್ಲದೆ ಆ ಮಾಷ್ಕ ಸಿಹಿಗೆಣಸನ್ನೆ ಬಳಸುತ್ತಿದ್ದರು. ಏಕೆಂದರೆ, ತಲಾ ಅರ್ಧ ಪೌಂಡಿನಂತೆ ಅವರಿಗೆ ಬಿಸ್ಕತ್ತು ಹಂಚಿ ಎರಡುವಾರಗಳ ಮೇಲಾಗಿತ್ತು. ಕೊನೆಯಲ್ಲಿ ಕೊಟ್ಟ ಆಲೂಗೆಡ್ಡೆ ಮೊಳೆತು, ಹಿಮಬಿದ್ದು ಕಲ್ಲಾಗಿದ್ದುವು.

ಹದಿನೈದು ದಿನಗಳಿಂದ ಕುದುರೆಗಳಿಗೂ ಚಾವಣಿಯ ಒಣಕಡ್ಡಿಗಳೆ ಆಹಾರವಾಗಿದ್ದುವು. ಚಳಿಗಾಲದ ಕೇಸರ ಕವಿದುಕೊಂಡಿದ್ದರೂ ಅವು ಅತಿಕೃಶವಾಗಿದ್ದುವು.

ಇಂಥ ರಿಕ್ತಪರಿಸ್ಥಿತಿಯಲ್ಲಿಯೂ ಸೈನಿಕರು ಮತ್ತು ಅಧಿಕಾರಿಗಳು ಎಂದಿನಂತೆ ತಮ್ಮ ಬದುಕು ನಡಸುತ್ತಿದ್ದರು. ಮುಖ ರಕ್ತಹೀನವಾಗಿ ಊದಿಕೊಂಡಿದ್ದರೂ, ಸಮವಸ್ತ್ರ ಚಿಂದಿಚಿಂದಿಯಾಗಿದ್ದರೂ ಅಶ್ವಾರೋಹಿಗಳು ಹಾಜರಿಕರೆಗಾಗಿ ಸಾಲುಗೂಡುತ್ತಿದ್ದರು; ತಂತಮ್ಮ ಸಾಮಾನುಗಳನ್ನು ಅಣಿಯಾಗಿಡುತ್ತಿದ್ದರು; ಕುದುರೆಗಳಿಗೆ ಮಾಲೀಸುಮಾಡುತ್ತಿದ್ದರು; ಆಯುಧಗಳಿಗೆ ಮೆರುಗು ಕೊಡುತ್ತಿದ್ದರು; ಮೇವಿಗಾಗಿ ಮುರಿದ ಚಾವಣಿಗಳಿಂದ ಹುಲ್ಲು ಕಡ್ಡಿಯನ್ನು ತರುತ್ತಿದ್ದರು; ಊಟಕ್ಕೆಂದು ಕೊಪ್ಪರಿಗೆ ಕಡಾಯಿಗಳ ಮುಂದೆ ಕೂಡುತ್ತಿದ್ದರು; ಹಸಿವು ಹೊಲಸನ್ನಗಳ ಬಗ್ಗೆ ಗೇಲಿಮಾಡುತ್ತ ಮೇಲೇಳುತ್ತಿದ್ದರು. ವಾಡಿಕೆಯಂತೆ ಅವರು ಬಿಡುವು ವೇಳೆಯಲ್ಲಿ ಉತ್ಸವಾಗ್ನಿಯನ್ನು ಹೊತ್ತಿಸಿ, ತಮ್ಮ ಬೆತ್ತಲೆ ಮೈಗಳನ್ನು ಕಾಯಿಸಿಕೊಳ್ಳುತ್ತಿದ್ದರು; ಹೊಗೆ ಸೇದುತ್ತಿದ್ದರು; ಮೊಳೆತ ಕೊಳೆತ ಆಲೂಗೆಡ್ಡೆಗಳನ್ನಾರಿಸಿ, ಸುಡುತ್ತಿದ್ದರು; ಪೊತೆಂಕಿನ್ ಮತ್ತು ಸುವೊರೊವ್‌ರ ದಂಡಯಾತ್ರೆಯ ಕತೆಗಳನ್ನು ಪುರೋಹಿತನ ಕಾರ್ಮಿಕ ಮಿಕೋಲ್ಕನಿಗೆ ಅಥವಾ ಅಲೇಷಾ ದಿ ಸ್ಲೈಗೆ ಸಂಬಂಧಿಸಿದ ಪುರಾಣಕಥೆಗಳನ್ನು ಹೇಳಿಸಿ, ಕೇಳುತ್ತಿದ್ದರು.

ಅರೆಮುರಿದ, ಮೇಲ್ಚಾವಣಿಯಿಲ್ಲದ ಮನೆಗಳಲ್ಲಿ ಅಧಿಕಾರಿಗಳು ರೂಢಿಯಂತೆ ಇಬ್ಬರೋ ಮೂವರೋ ವಾಸಿಸುತ್ತಿದ್ದರು. ಜ್ಯೇಷ್ಠಾಧಿಕಾರಿಗಳು ಸೈನಿಕರಿಗೆ ಬೇಕಾದ ಸಾಮಾನು ಸರಂಜಾಮುಗಳನ್ನು ಸಂಗ್ರಹಿಸಲು ಪ್ರಯತ್ನಿಸುತ್ತಿದ್ದರು. ಮುನ್ನಿನಂತೆ ತರುಣರಲ್ಲಿ ಕೆಲವರು ಇಸ್ಪೀಟಾಟದಲ್ಲಿ ನಿರತರಾದರೆ (ಆಹಾರ ಸಿಗದಿದ್ದರೂ ಹಣ ಹೇರಳವಾಗಿತ್ತು.) ಮತ್ತೆ ಕೆಲವರು ಸರಳವಾದ ಬಳೆಯೆಸೆತದ ಆಟ ಮತ್ತು ಬಿಲ್ಲೆ ಗೂಟದ ಆಟಗಳಲ್ಲಿ ಮಗ್ನರಾಗುತ್ತಿದ್ದರು. ದಂಡಯಾತ್ರೆಯ ದಿಕ್ಕು ಸ್ಪಷ್ಟವಾಗಿ ತಿಳಿಯುತ್ತಿರಲಿಲ್ಲವಾದ್ದರಿಂದ, ತಮಗೆ ವಿರುದ್ಧವಾಗಿ ಅದು ಸಾಗುತ್ತಿದೆಯೆಂಬ ಅಸ್ಪಷ್ಟ ಸಂದೇಹ ಕವಿದುಕೊಂಡಿದ್ದುದದರಿಂದ ಆ ಬಗ್ಗೆ ಯಾರೂ ಮಾತೆತ್ತುತ್ತಿರಲಿಲ್ಲ.

ರಜೆಯ ತರುವಾಯ ಹಿಂದಿರುಗಿದ ರೊಸ್ತೋವ್ ಮತ್ತು ಡೆನಿಸೋವ್‌ರ ಸ್ನೇಹ ಸಂಬಂಧ ಹಿಂದಿಗಿಂತ ಗಾಢವಾಯಿತು. ಅವರಿಬ್ಬರೂ ಒಟ್ಟಿಗೆ ವಾಸಿಸುತ್ತಿದ್ದರು. ಡೆನಿಸೋವ್ ರೊಸ್ತೋವ್ ಕುಟುಂಬದ ಪ್ರಸ್ತಾಪವನ್ನೆಂದೂ ಎತ್ತಿದವನಲ್ಲ. ತಮ್ಮಿಬ್ಬರ ನಡುವಣ ಸ್ನೇಹ ಗಾಢವಾಗಲು, ನತಾಷಳ ಮೇಲಣ ಹಿರಿಯ ಅಶ್ವಾರೋಹಿಯ ಅದೃಷ್ಟಹೀನ ಪ್ರೇಮವೇ ಕಾರಣವೆಂದು ರೊಸ್ತೋವ್ ಭಾವಿಸಿದನು. ಡೆನಿಸೋವ್ ಕ್ವಚಿತ್ತಾಗಿ ಮಾತ್ರ ರೊಸ್ತೋವ್‌ನನ್ನು ಅಪಾಯಕ್ಕೆ ಗುರಿಪಡಿಸುತ್ತಿದ್ದುದುಂಟು. ಕಾರ್ಯಾಚರಣೆಯ ನಂತರ ರೊಸ್ತೋವ್ ಕ್ಷೇಮದಿಂದ ಹಿಂದಿರುಗಿದ್ದಕ್ಕಾಗಿ ಹರ್ಷಸಂಭ್ರಮದಿಂದ ಡೆನಿಸೋವ್ ಅವನಿಗೆ ಸ್ವಾಗತ ನೀಡುತ್ತಿದ್ದನು. ಒಮ್ಮೆ ರೊಸ್ತೋವ್ ಮೇವು ಹುಡು

ಕುತ್ತ ಪಾಳುಬಿದ್ದಿದ್ದೊಂದು ಹಳ್ಳಿಗೆ ಹೋಗಿದ್ದಾಗ, ಪೋಲಿಷ್ ಕುಟುಂಬವೊಂದು ಅವನ ಕಣ್ಣಿಗೆ ಬಿತ್ತು. ಆ ಕುಟುಂಬದಲ್ಲಿದ್ದವರು ಒಬ್ಬ ಮುದುಕ, ಅವನ ಮಗಳು ಮತ್ತು ಅವಳ ಕಂಕುಳಲ್ಲಿದ್ದೊಂದು ಹಸುಗೂಸು. ಅವರು ಅರೆನಗ್ನರಾಗಿದ್ದರು. ಹಸಿವಿನಿಂದ ನರಳುತ್ತಿದ್ದರು. ನಡೆಯಲು ನಿತ್ರಾಣರಾಗಿದ್ದರು. ಅವರಿಗೆ ವಾಹನ ಸಿಗುವ ಸಂಭವವೂ ಇರಲಿಲ್ಲ. ರೊಸ್ತೋವ್ ಅವರನ್ನು ತನ್ನ ವಸತಿಗೆ ಕರೆತಂದು, ಕೆಲವು ವಾರ ತನ್ನ ಬಿಡದಿಯಲ್ಲಿಯೇ ಉಳಿಸಿಕೊಂಡನು. ಮುದುಕ ಚೇತರಿಸಿಕೊಳ್ಳುತ್ತಿದ್ದನು. ತಮ್ಮೆಲ್ಲರಿಗಿಂತ ರೊಸ್ತೋವ್ ಕುತಂತ್ರಿಯೆಂದೂ, ಅವನು ರಕ್ಷಿಸಿದ್ದ ಪೋಲಿಷ್ ಹುಡುಗಿಯನ್ನು ತಮ್ಮೆಲ್ಲರಿಗೂ ಪರಿಚಯ ಮಾಡಿಕೊಡುವುದಾದರೆ ಸಲೀಸಾಗುವುದೆಂದೂ, ಹೆಂಗಸರ ಬಗ್ಗೆ ಏನೇನೋ ಮಾತಾಡಿಕೊಳ್ಳುತ್ತಿದ್ದ ಅವನ ಸಂಗಾತಿಗಳಲ್ಲೊಬ್ಬ ಅವನನ್ನು ತಮಾಷೆ ಮಾಡುತ್ತಿದ್ದನು. ರೊಸ್ತೋವ್ ತಮಾಷೆಯನ್ನು ನಿಂದೆಯೆಂದು ತಿಳಿದು, ಕೋಪದಿಂದ ಉರಿದನು ; ಅಧಿಕಾರಿಯ ಬಗ್ಗೆ ಸಲವಲ್ಲದ ಅಹಿತಕರವಾದ ಮಾತುಗಳನ್ನು ಕಾರಿದನು. ಡೆನಿಸೋವ್ ಇಲ್ಲದಿದ್ದ ಪಕ್ಷದಲ್ಲಿ ದ್ವಂದ್ವ ಯುದ್ಧ ನಡೆದುಹೋಗುತ್ತಿತ್ತು. ಪೋಲಿಷ್ ಹುಡುಗಿಯಲ್ಲಿ ರೊಸ್ತೋವ್ ಯಾವ ಬಗೆಯ ಸಂಬಂಧವಿಟ್ಟುಕೊಂಡಿದ್ದನೆಂಬ ಸಂಗತಿ ಡೆನಿಸೋವ್‌ಗೆ ಗೊತ್ತಿರಲಿಲ್ಲ. ಅಧಿಕಾರಿ ಹೊರಗೆ ಹೋದ ನಂತರ ರೊಸ್ತೋವ್‌ನ ಸಿಡುಕಿಗಾಗಿ ಡೆನಿಸೋವ್ ಅವನನ್ನು ತರಾಟೆಗೆ ತೆಗೆದುಕೊಂಡನು.

'ನಿಮಗಿಷ್ಟ ಬಂದದ್ದು ಹೇಳಿ....ಅವಳು ನನಗೆ ತಂಗಿಯಂತಿದ್ದಾಳೆ. ನನ್ನ ಮನಸ್ಸಿಗಾದ ವ್ಯಥೆಯನ್ನು ವಿವರಿಸಲಾರೆ....ಏಕೆಂದರೆ....ಆ ಕಾರಣಕ್ಕಾಗಿ....' ಎಂದು ರೊಸ್ತೋವ್ ಉತ್ತರಿಸಿದನು.

ಡೆನಿಸೋವ್ ಅವನ ಭುಜ ತಟ್ಟಿದನು. ರೊಸ್ತೋವ್ ಕಡೆಗೆ ನೋಡದೆಯೆ, ಕೋಣೆಯಲ್ಲಿ ಬಿರುಬಿರನೆ ಶತಪಥ ತಿರುಗುತ್ತಿದ್ದನು. ಭಾವ ಗಾಢವಾದಾಗ ಅವನ ಚರ್ಯೆಯೇ ಹಾಗಿರುತ್ತಿತ್ತು. 'ಅಹ, ರೊಸ್ತೋವ್, ಜನ ಎಂಥ ಹುಚ್ಚರು!' ಎಂದವನು ಗೊಣಗಿದನು. ಅವನ ಕಣ್ಣುಗಳಲ್ಲಿ ನೀರು ಹರಿಯುತ್ತಿದ್ದುದನ್ನವನು ಗಮನಿಸಿದನು.

ಅಧ್ಯಾಯ ೧೬

ಏಪ್ರಿಲ್ ತಿಂಗಳಲ್ಲಿ ಚಕ್ರವರ್ತಿಯ ಆಗಮನವಾರ್ತೆ ಸೈನಿಕರನ್ನು ಸಚೇತನಗೊಳಿಸಿತ್ತು. ಬಾರ್ತೆನ್‌ಸ್ಟೀನ್‌ನಲ್ಲಿ ಚಕ್ರವರ್ತಿಯ ಪರಿಶೀಲನೆ ನಡೆಯಲಿದ್ದುದರಿಂದ, ದೂರದ ಗಡಿಪ್ರದೇಶದಲ್ಲಿ ಪಾವ್‌ಲೊಗ್ರಾಡ್ ದಳದಲ್ಲಿರಬೇಕಾಗಿದ್ದ ರೊಸ್ತೋವ್‌ಗೆ ಅವನನ್ನು ನೋಡುವ ಅವಕಾಶವಿರಲಿಲ್ಲ.

ರಾತ್ರಿಯೆಲ್ಲ ಅವರು ಶತ್ರುವನ್ನು ಕಾಯಬೇಕಾಗಿತ್ತು. ಡೆನಿಸೋವ್ ಮತ್ತು ರೊಸ್ತೋವ್ ನೆಲಮಾಳಿಗೆಯಲ್ಲಿ ವಾಸಿಸುತ್ತಿದ್ದರು. ಸೈನಿಕರು ನೆಲವನ್ನು ತೋಡಿ, ಮರದ ಕೊಂಬೆ ಮತ್ತು ಹುಲ್ಲುಗಳಿಂದ ಚಾವಣಿಯನ್ನು ನಿರ್ಮಿಸಿ, ಅವರ ವಾಸಕ್ಕೆ ಅನುವುಮಾಡಿಕೊಟ್ಟಿದ್ದರು. ಆಗಿನ ಕಾಲದ ರೂಢಿಗನುಸಾರವಾಗಿಯೇ ಆ ಗುಡಿಸ

ಲನ್ನು ತಯಾರಿಸಿದ್ದರು. ಮೂರೂವರೆ ಅಡಿ ಅಗಲದ, ನಾಲ್ಕಡಿ ಎಂಟು ಅಂಗುಲ ಆಳದ, ಎಂಟಡಿ ಉದ್ದದ ಹಳ್ಳವನ್ನು ತೋಡಿ, ಒಂದು ಕೊನೆಯಲ್ಲಿ ಮೆಟ್ಟಿಲನ್ನು ಕೊರೆಯುತ್ತಿದ್ದರು. ಆ ಮೆಟ್ಟಲುಗಳ ಭಾಗವೇ ದ್ವಾರಪ್ರದೇಶ ಹಾಗೂ ಮುಖ ಮಂಟಪವಾಗುತ್ತಿತ್ತು. ಆ ಹಳ್ಳವೇ ಕೋಣೆ. ಪ್ರವೇಶದ್ವಾರದೆದುರಿಗಿನ ಮತ್ತೊಂದು ಕೊನೆಯಲ್ಲಿ ದಸಿದೂಲದ ಮೇಲಿಟ್ಟಿದ್ದ ಹಲಗೆಯೇ ಮೇಜು. ದಳನಾಯಕರಂಥ ಅದೃಷ್ಟ ಶಾಲಿಗಳಿಗೆ ಮಾತ್ರ ಅಂಥ ಸೌಕರ್ಯ ಒದಗುತ್ತಿತ್ತು. ಹಳ್ಳದ ಪ್ರತಿ ಪಕ್ಕದಲ್ಲಿ ಕೊರೆದ ನೆಲವೇ ಮಂಚ. ಕಂದಕದ ಮಧ್ಯದಲ್ಲಿ ನಿಂತರೆ ತಲೆ ತಾಕದಷ್ಟು ಎತ್ತರವಾಗಿ ಚಾವಣಿ ಯನ್ನು ನಿರ್ಮಿಸಲಾಗಿತ್ತು. ಮೇಜಿನ ಬಳಿ ಮಂಚದ ಮೇಲೆ ಕುಳಿತುಕೊಂಡಾಗಲೂ ತಲೆ ಚಾವಣಿಗೆ ತಾಕುತ್ತಿರಲಿಲ್ಲ. ಸೈನಿಕರ ಪ್ರೀತಿಗೆ ಪಾತ್ರನಾಗಿದ್ದುದರಿಂದ ಡೆನಿ ಸೋವ್‌ನ ಜೀವನ ಸುಖಕರವಾಗಿತ್ತೆಂದೇ ಹೇಳಬಹುದಿತ್ತು. ಚಾವಣಿಯ ಒಂದು ಕೊನೆಯಲ್ಲಿದ್ದ ಹಲಗೆಗೆ ಸೇರಿಸಿದ್ದ ಗಾಜು (ಒಡೆದುಹೋಗಿದ್ದುದನ್ನು ಸರಿಪಡಿಸಲಾ ಗಿತ್ತು) ಕಿಟಕಿಯ ಕೆಲಸ ಮಾಡುತ್ತಿತ್ತು. ಚಳಿ ಜಾಸ್ತಿಯಾದಾಗ, ಸೈನಿಕರ ಶಿಬಿರಾಗ್ನಿ ಯಿಂದ ಕೆಂಡಗಳನ್ನು ತಂದು 'ಸ್ವಾಗತಕೋಣೆಯು'–ಆ ಗುಡಿಸಿಲಿನ ಒಂದು ಭಾಗವನ್ನು ಡೆನಿಸೋವ್ ಹಾಗೆ ಕರೆಯುತ್ತಿದ್ದನು–ಮೆಟ್ಟಿಲುಗಳ ಮೇಲಿದ್ದ ಕಬ್ಬಿಣದ ಕೊಂಕು ತಗ ಡಿನ ಮೇಲೆ ಇಡಲಾಗುತ್ತಿತ್ತು. ಆಗ ನೆಲಮಾಳಿಗೆಯೆಲ್ಲ ಬೆಚ್ಚಗಾಗುತ್ತಿದ್ದುದರಿಂದ, ಡೆನಿಸೋವ್ ಮತ್ತು ರೊಸ್ತೋವ್‌ರ ಸಂಗಡಿಗರಿಗೆ ಶರಟೆ ಸಾಕಾಗುತ್ತಿತ್ತು.

ಏಪ್ರಿಲ್ ತಿಂಗಳಲ್ಲಿ ರೊಸ್ತೋವ್ ಆಜ್ಞಾವಾಹಕನ ಕೆಲಸವನ್ನು ನೆರವೇರಿಸ ಬೇಕಿತ್ತು. ಒಂದು ದಿನ ಬೆಳಗ್ಗೆ ಏಳು–ಎಂಟುಗಂಟೆಯೊಳಗೆ, ರಾತ್ರಿಯೆಲ್ಲ ನಿದ್ರೆಯಿಲ್ಲದೆ ಹಿಂದಿರುಗಿದಾಗ ಅವನು ಬೆಂಬೂದಿಗಾಗಿ ಹೇಳಿಕಳಿಸಿದನು; ಮಳೆಯಿಂದ ನೆನೆದಿದ್ದ ಒಳಪಾವಡೆಗಳನ್ನು ಬದಲಾಯಿಸಿದನು; ಪ್ರಾರ್ಥನೆ ಸಲ್ಲಿಸಿದನು; ಟೀ ಕುಡಿದು ಬೆಚ್ಚಗಾದನಂತರ, ಮೇಜಿನ ಮೇಲಿದ್ದ ಸಾಮಾನುಗಳನ್ನು ಓರಣಗೊಳಿಸಿ, ತನ್ನ ಮಂಚ ವನ್ನು ಸರಿಗೊಳಿಸಿದನು. ಗಾಳಿಗೊಡ್ಡಿದ್ದ ಅವನ ಮುಖ ಹೊಳೆಯುತ್ತಿತ್ತು; ತೋಳು ಗಳನ್ನು ತಲೆದಿಂಬು ಮಾಡಿಕೊಂಡು, ಬೆನ್ನಡಿಯಾಗಿ ಮಲಗಿದನು. ತನ್ನ ಹಿಂದಿನ ಬೇಹುಗಾರಿಕೆಯ ದಂಡಯಾತ್ರೆಯ ಆಧಾರದ ಮೇಲೆ ಕೆಲವು ದಿನಗಳಲ್ಲಿಯೇ ಬಡ್ತಿ ದೊರೆಯುವ ಸಾಧ್ಯತೆಯ ಬಗ್ಗೆ ಸವಿಗನಸುಗಳನ್ನು ಕಾಣುತ್ತಿದ್ದನು. ಹೊರಗೆ ಹೋಗಿದ್ದ ಡೆನಿಸೋವ್‌ನೊಡನೆ ಮಾತಾಡುವ ಕಾತರತೆಯಿಂದ, ಅವನ ಆಗಮನಕ್ಕಾಗಿ ಕಾಯುತ್ತಿದ್ದನು.

ನೆಲಮಾಳಿಗೆ ನಡುಗುವಂತೆ ಭಾವೋದ್ರೇಕದಿಂದ ಬೊಬ್ಬೆಹಾಕುತ್ತಿದ್ದ ಡೆನಿ ಸೋವ್ ಧ್ವನಿ ಹಠಾತ್ತನೆ ಅವನ ಕಿವಿದೆರೆಯನ್ನು ತಾಕಿತು. ಅವನು ಯಾರೊಂದಿಗೆ ಮಾತಾಡುತ್ತಿರಬಹುದೆಂದು ತಿಳಿಯುವ ಸಲುವಾಗಿ ರೊಸ್ತೋವ್ ಕಿಟಕಿಯಲ್ಲಿಣುಕಿ, ದಳನಾಯಕ ತೊಪ್ಚೀಂಕೊ ಎಂಬುದನ್ನರಿತನು.

'ಮಾಷ್ಕ ಗೆಡ್ಡೆಯನ್ನು ಯಾರೂ ತಿನ್ನಗೊಡಕೂಡದೆಂದು ನಾನು ಆಜ್ಞೆ ಮಾಡಿರಲಿಲ್ಲವೆ? ಲಜರ್‌ಚೂಕ್ ಹೊಲದಿಂದ ಅವುಗಳನ್ನು ತಂದದ್ದನ್ನು ನಾನೇ ಕಣ್ಣಾರೆ ನೋಡಿದೆ' ಎಂದು ಡೆನಿಸೋವ್ ಕೂಗುತ್ತಿದ್ದನು.

'ನಾನು ಸಹ ಮೇಲಿಂದ ಮೇಲೆ ಆಜ್ಞೆ ಮಾಡಿದ್ದೇನೆ, ಸ್ವಾಮಿ. ಆದರೆ ಯಾರೂ ನನ್ನ ಮಾತು ಕೇಳುವುದಿಲ್ಲ' ಎಂದು ದಳನಾಯಕ ನುಡಿದನು.

ರೊಸ್ತೋವ್ ಮತ್ತೆ ಹಾಸುಗೆಯ ಮೇಲೆ ಬಿದ್ದುಕೊಂಡು, ಸಂತುಷ್ಟಚಿತ್ತನಾಗಿ, ಆಲೋಚನೆಗಳನ್ನು ಮೆಲುಕು ಹಾಕುತ್ತಿದ್ದನು: 'ಅವನು ಕೂಗಾಡಿಕೊಂಡಿರಲಿ. ನನ್ನ ಕೆಲಸ ಮುಗಿದಿದೆ. ನಾನು ಹಾಯಾಗಿ ಮಲಗುತ್ತೇನೆ. ಡೆನಿಸೋವ್‌ನ ಕೆಚ್ಚೆದೆಯ ನರಿಬುದ್ಧಿಯ ಅಂಗಸೇವಕ ಲವ್ರೂಷ್ಕನ ಮತ್ತು ದಳನಾಯಕನ ಮಾತುಗಳು ಅವನಿಗೆ ಕೇಳಿಸುತ್ತಿದ್ದುವು. ಸಾಮಾನು ತರಲು ಹೊರಗೆ ಹೋಗಿದ್ದಾಗ, ತುಂಬಿದ ಬಂಡಿಗಳನ್ನೂ, ಬಿಸ್ಕತ್ತುಗಳನ್ನೂ, ಎತ್ತುಗಳನ್ನೂ ಕಂಡುದಾಗಿ ಲವ್ರೂಷ್ಕ ವಿವರಿಸುತ್ತಿದ್ದನು.

ಅನಂತರ ಡೆನಿಸೋವ್‌ನ ಅಬ್ಬರ ದೂರದಿಂದ ಕೇಳಿಸತೊಡಗಿತು. 'ಎರಡನೆಯ ತುಕಡಿಯವರು ಸಜ್ಜಾಗಿರಿ.'

'ಈಗವರು ಎಲ್ಲಿಗೆ ಹೋಗುತ್ತಿದ್ದಾರೆ?' ಎಂದು ರೊಸ್ತೋವ್ ಪ್ರಶ್ನಿಸಿಕೊಂಡನು.

ಐದು ನಿಮಿಷಗಳನಂತರ ಗುಡಿಸಿಲಿಗೆ ಹಿಂದಿರುಗಿದ ಡೆನಿಸೋವ್ ಕೆಸರಿಡಿದ ಬೂಟುಗಳಲ್ಲಿಯೇ ಹಾಸುಗೆಯ ಮೇಲೆ ಕುಳಿತು, ಚುಂಗಾಣಿಯನ್ನು ಹೊತ್ತಿಸಿಕೊಂಡನು, ತನ್ನ ಸಾಮಾನುಗಳನ್ನೆಲ್ಲ ಚೆಲ್ಲಾಪಿಲ್ಲಿಯಾಗಿ ಒಗೆದನು, ಲೋಹದ ಚಾವಟಿಯನ್ನು ಕೈಗೆತ್ತಿಕೊಂಡು ಕುಡುಗತ್ತಿಯನ್ನು ನಡುಪಟ್ಟಿಯ ಕೊಕ್ಕೆಗೆ ಸಿಕ್ಕಿಸಿಕೊಂಡು, ಹೊರಗೆ ಹೊರಟನು. ಎಲ್ಲಿಗೆ ಹೋಗುವುದೆಂದು ರೊಸ್ತೋವ್ ಕೇಳಿದಾಗ, ಕೆಲಸವಿದೆಯೆಂದವನು ಅಸ್ಪಷ್ಟವಾಗಿ ಸಿಡಿಗುಟ್ಟಿದನು.

'ದೇವರು ಮತ್ತು ನಮ್ಮ ಮಹಾಪ್ರಭು ನನ್ನನ್ನು ಕೊನೆಯಲ್ಲಿ ಪರೀಕ್ಷಿಸಲಿ!' ಎಂದು ಡೆನಿಸೋವ್ ಹೊರಗೆ ಹೆಜ್ಜೆ ಹಾಕುತ್ತ ಗೊಣಗಿಕೊಂಡನು. ಕೆಸರು ಸಿಡಿಸಿಕೊಂಡು ಹೋಗುತ್ತಿದ್ದ ಖುರಪುಟಧ್ವನಿ ರೊಸ್ತೋವ್‌ಗೆ ಕೇಳಿಸಿತು. ಡೆನಿಸೋವ್ ಎಲ್ಲಿಗೆ ಹೋದನೆಂಬುದನ್ನರಿಯಲು ಸಹ ಅವನು ತೊಂದರೆ ತೆಗೆದುಕೊಳ್ಳಲಿಲ್ಲ. ಬೆಚ್ಚನೆಯ ಮೂಲೆಯಲ್ಲಿ ಸೊಗಸಾಗಿ ನಿದ್ದೆಮಾಡಿದನು. ಸಂಜೆಯ ತನಕ ಅವನು ನೆಲಮಾಳಿಗೆಯಿಂದ ಹೊರಗೆ ಹೋಗಲಿಲ್ಲ. ಡೆನಿಸೋವ್ ಅಷ್ಟರೊಳಗೆ ಹಿಂದಿರುಗಲಿಲ್ಲ. ಆಕಾಶ ನಿರ್ಮಲವಾಗಿತ್ತು. ನೆಲಮಾಳಿಗೆಯ ಬಳಿ ಇಬ್ಬರು ಅಧಿಕಾರಿಗಳು ಸ್ವಾಯ್ಕ ಆಡುತ್ತಿದ್ದರು. ಅಟ್ಟಹಾಸದಿಂದ ಅವರು ಎಸೆದ ಸಾಮಾನು ಕೆಸರಿನಲ್ಲಿ ಹೂತುಕೊಂಡಿತು. ರೊಸ್ತೋವ್ ಸಹ ಅವರೊಡನೆ ಸೇರಿಕೊಂಡನು. ಆಟವಾಡುತ್ತಿದ್ದಾಗ, ಬಡಕಲು ಕುದುರೆಗಳ ಮೇಲೆ ಕುಳಿತಿದ್ದ ಸಿಪಾಯಿಗಳ ಬೆಂಗಾವಲಿನಲ್ಲಿ ಕೆಲವು ಬಂಡಿಗಳು ಬರುತ್ತಿದ್ದುದನ್ನು ಅಧಿಕಾರಿಗಳು ಗಮನಿಸಿದರು. ದಸಿಹಗ್ಗಗಳ ಬಳಿಗೆ ಬಂಡಿಗಳು ಬಂದದ್ದೇ ತಡ, ಅಶ್ವಾರೋಹಿಗಳ ತಂಡ ಅವನ್ನು ಸುತ್ತುಬಳಸಿತು.

'ಈಗಲ್ಲಿ ಡೆನಿಸೋವ್ ಒದ್ದಾಡುತ್ತಿದ್ದಾನೆ; ಇಲ್ಲಿ ಆಹಾರ ಪದಾರ್ಥಗಳು ಬಂದಿವೆ' ಎಂದು ರೊಸ್ತೋವ್ ನುಡಿದನು.

'ಅಂತು ಅವು ಬಂದಿವೆ; ಸೈನಿಕರಿಗೆ ಸಂತೋಷವಾಗುತ್ತಿದೆ!' ಎಂದು ಇತರ ಅಧಿಕಾರಿಗಳು ಉದ್ಗರಿಸಿದರು.

ಅಶ್ವಾರೋಹಿಗಳಿಗೆ ತುಸು ಹಿಂದೆಯೇ ಡೆನಿಸೋವ್ ಬಂದನು. ಜತೆಗೂಡಿ ಬಂದ ಇಬ್ಬರು ಪದಾತಿದಳದ ಅಧಿಕಾರಿಗಳೊಡನೆ ಮಾತಾಡುತ್ತಿದ್ದನು. ಅವರನ್ನು ಭೇಟಿ ಮಾಡಲು ರೊಸ್ತೋವ್ ಮುಂದೆ ನಡೆದನು.

'ಕಪ್ತಾನರೆ, ನಿಮಗೆ ಎಚ್ಚರಿಕೆ ನೀಡುತ್ತಿದ್ದೇನೆ.' ಎಂದು ಅಧಿಕಾರಿಗಳಲ್ಲೊಬ್ಬ ತೆಳ್ಳನೆಯ ಕುಳ್ಳ ಕೋಪದಿಂದ ನುಡಿದನು.

'ಅವರನ್ನು ಬಿಟ್ಟುಕೊಡಲಾರೆನೆಂದು ನಿಮಗೆ ಹೇಳಲಿಲ್ಲವೆ?' ಎಂದು ಡೆನಿಸೋವ್ ಉತ್ತರಿಸಿದನು.

'ನೀವು ಅದರ ಜವಾಬ್ದಾರಿ ಹೊರಬೇಕಾಗುತ್ತದೆ, ಕಪ್ತಾನರೆ. ನಮ್ಮದೇ ಸೈನ್ಯದ ವಾಹನವನ್ನಪಹರಿಸಿದ್ದು ದಂಗೆಯೆನಿಸಿಕೊಳ್ಳುತ್ತದೆ. ಎರಡು ದಿನಗಳಿಂದ ನಮ್ಮ ಜನರ ಉಣಿಸಿಗೆ ಏನೇನೂ ಇಲ್ಲ.'

'ನಮ್ಮವರಿಗೆ ಎರಡು ವಾರಗಳಿಂದ ಏನೂ ಗತಿಯಿಲ್ಲ' ಎಂದು ಡೆನಿಸೋವ್ ನುಡಿದನು.

'ಇದು ದರೋಡೆ. ಅದರ ಜವಾಬ್ದಾರಿ ಪೂರ್ತಿ ನಿಮ್ಮದೇ' ಎಂದು ಪದಾತಿದಳದ ಅಧಿಕಾರಿ ದನಿಯೇರಿಸಿದನು.

'ಈಗ ನೀವೇಕೆ ನನ್ನನ್ನು ಕಾಡುತ್ತಿದ್ದೀರಿ?' ಎಂದು ಡೆನಿಸೋವ್ ಕೂಡಲೇ ತಾಳ್ಮೆ ಕಳೆದುಕೊಂಡು ಕೂಗಾಡಿದನು. 'ಅದಕ್ಕೆ ನಾನೇ ಉತ್ತರ ಹೇಳುತ್ತೇನೆ. ಆದರೆ ನಿಮಗಲ್ಲ. ಇಲ್ಲಿ ಸುಮ್ಮನೆ ಎಗರಾಡಬೇಡಿ. ಅದರಿಂದ ತೊಂದರೆಯಾಗ ಬಹುದು. ಇಲ್ಲಿಂದ ಹೊರಡಿ, ಹೊರಟುಹೋಗಿ' ಎಂದವನು ಅಧಿಕಾರಿಗಳ ಮೇಲೆ ಸಿಡಿದನು.

'ಸರಿ ಹಾಗಾದರೆ. ನೀವು ದರೋಡೆ ಮಾಡಲು ನಿರ್ಧರಿಸಿಕೊಂಡಿದ್ದರೆ, ನಾನು....' ಎಂದು ಕುಬ್ಜ ಅಧಿಕಾರಿ ಅಭೀತನಾಗಿ ನುಡಿದನೇ ಹೊರತು, ಅಲ್ಲಿಂದ ಚಲಿಸಲಿಲ್ಲ.

'ನೀವು ಹಾಳಾಗ! ನಿಮ್ಮ ಕ್ಷೇಮ ಸುಭದ್ರವಾಗಿರಬೇಕಿದ್ದರೆ, ನಿಮ್ಮ ಹೆಜ್ಜೆ ಚುರುಕಾಗಲಿ' ಎಂದು ಡೆನಿಸೋವ್ ಅಧಿಕಾರಿಯಮೇಲೆ ಕುದುರೆ ಹಾಯಿಸಿದನು.

'ಸರಿ, ನೋಡ್ಕೊಳ್ತೀನಿ' ಎಂದು ಅಧಿಕಾರಿ ಭಯಂಕರವಾಗಿ ಗರ್ಜಿಸಿ, ತನ್ನ ಕುದುರೆಯನ್ನು ತಿರುಗಿಸಿ, ಹಲ್ಲಣದ ಮೇಲೆ ಕುಲುಕಾಡುತ್ತ, ಕುಕ್ಕುಲೋಟದಲ್ಲಿ ಓಡಿಸಿದನು.

'ನಾಯಿ ಕಾಲು ಮುದುರಿಕೊಂಡು ಓಡಿತು! ನಿಜವಾಗಿ ಅದೊಂದು ನಾಯಿಯೆ!' ಎಂಬ ಡೆನಿಸೋವ್‌ನ ಬಯ್ಗುಳ (ಅಶ್ವಾರೋಹಿ ಪದಾತಿದಳದ ಸವಾರನಿಗೆ ಬಳಸುವ ಅತ್ಯಂತ ಹೀನಾಯವಾದ ಮಾತು) ಅಧಿಕಾರಿಯನ್ನು ಹಿಂಬಾಲಿಸಿತು.

ಡೆನಿಸೋವ್ ರೊಸ್ತೋವ್‌ನ ಬಳಿಸಾರಿ, ಗಹಗಹಿಸಿ ನಕ್ಕನು; 'ಪದಾತಿದಳದಿಂದ ಬಲಾತ್ಕಾರವಾಗಿ ವಾಹನಗಳನ್ನು ಕಸಿದುಕೊಂಡು ಬಂದಿದ್ದೇನೆ. ಏನೇ ಆಗಲಿ, ನನ್ನ ಜನರನ್ನು ಸಾಯಗೊಡಲಾರೆ' ಎಂದವನು ನುಡಿದನು.

ಈಗ ರಾಹುತದಳದ ಕಡೆಗೆ ತಂದಿದ್ದ ಬಂಡಿಗಳು ಪದಾತಿದಳ ಸೇರತಕ್ಕದ್ದೆಂದು ಗೊತ್ತಾಗಿತ್ತು. ಬಂಡಿಗಳಿಗೆ ಕಾವಲಿಲ್ಲವೆಂಬ ಸುದ್ದಿ ಟೆಲ್ಯಾನಿನ್‌ನ ಮೂಲಕ ತಿಳಿಯು

ಲಾಗಿ, ಡೆನಿಸೋವ್ ತನ್ನ ರಾವುತರ ಸಹಾಯದಿಂದ ಬಲಾತ್ಕಾರವಾಗಿ ಅವನ್ನು ತನ್ನ ದಳದ ಕಡೆಗೆ ತಿರುಗಿಸಿದ್ದ. ಸೈನಿಕರು ಬಿಸ್ಕತ್ತುಗಳನ್ನು ತಮ್ಮೊಳಗೆ ಧಾರಾಳವಾಗಿ ಹಂಚಿಕೊಂಡದ್ದಲ್ಲದೆ, ಇತರ ಪಡೆಗಳಿಗೂ ವಿತರಿಸಿದರು.

ಮಾರನೆಯ ದಿನ ದಳನಾಯಕ ಡೆನಿಸೋವ್‌ನನ್ನು ಕರೆಕಳಿಸಿ, ಅವನ ಕಣ್ಮುಂದೆ ತನ್ನ ಬೆರಳುಗಳನ್ನಗಲಿಸಿ, ದೂರು ನುಡಿದನು : 'ಈ ಪ್ರಕರಣದ ಬಗ್ಗೆ ನನ್ನ ಅಭಿಪ್ರಾಯ ಏದು; ಅದರ ಬಗ್ಗೆ ನನಗೇನೂ ಗೊತ್ತಿಲ್ಲ. ಆದ್ದರಿಂದ ವಿಚಾರಣೆ ನಡಸುವುದಿಲ್ಲ. ಮೋತಿಖಾನೆಯ ಇಲಾಖೆಗೆ ಹೋಗಿ, ಅಲ್ಲಿಯ ಸಿಬ್ಬಂದಿ ವರ್ಗದೊಡನೆ ವ್ಯವಹಾರವನ್ನು ಫೈಸಲು ಮಾಡಿಕೊಳ್ಳಿರೆಂಬುದೇ ನನ್ನ ಸಲಹೆ. ಸಾಧ್ಯವಾದರೆ, ನೀವು ಪಡೆದ ಸಾಮಾನಿಗೆ ಒಂದು ಪಾವತಿಯನ್ನು ರುಜು ಮಾಡಿಕೊಡಿ. ಇಲ್ಲವಾದರೆ, ಆ ಪದಾರ್ಥಗಳೆಲ್ಲ ಪದಾತಿ ದಳದ ಹೆಸರಿಗೆ ದಾಖಲಾಗಿರುವುದರಿಂದ ಗಲಾಟೆಯಾಗಿ, ಪ್ರಕರಣ ದುಷ್ಪರಿಣಾಮದಲ್ಲಿ ಕೊನೆಗೊಳ್ಳಬಹುದು.'

ಆ ಬುದ್ಧಿವಾದವನ್ನು ಪ್ರಾಮಾಣಿಕವಾಗಿ ನಡಸುವ ಇಚ್ಛೆಯಿಂದ ಡೆನಿಸೋವ್ ನೇರವಾಗಿ ಮೋತಿಖಾನೆಗೆ ಸವಾರಿಸಿದನು. ಸಂಜೆ ನೆಲಮಾಳಿಗೆಗೆ ಹಿಂದಿರುಗಿದಾಗ, ಹಿಂದೆಂದೂ ನೋಡಿರದ ಸ್ಥಿತಿಯಲ್ಲಿ ಅವನು ರೊಸ್ತೋವ್‌ಗೆ ಗೋಚರಿಸಿದನು. ಡೆನಿಸೊವ್ ಏದುಸಿರು ಬಿಡುತ್ತ, ಮಾತಾಡಲು ಸಾಧ್ಯವಾಗುತ್ತಿರಲಿಲ್ಲ. ವಿಷಯವೇನೆಂದು ರೊಸ್ತೋವ್ ಪ್ರಸ್ತಾಪಿಸಿದಾಗ, ದುರ್ಬಲ ಸ್ವರದಲ್ಲಿ ಅಸಂಬದ್ಧ ಆಣೆ ಬೆದರಿಕೆಗಳನ್ನು ವಟಗುಟ್ಟಿದನು.

ಡೆನಿಸೋವ್‌ನ ಸ್ಥಿತಿಯಿಂದ ಗಾಬರಿಗೊಂಡ ರೊಸ್ತೋವ್, ಬಟ್ಟೆಬಿಚ್ಚಿ, ನೀರು ಕುಡಿದು, ವೈದ್ಯನಿಗೆ ಹೇಳಿ ಕಳಿಸುವುದೆಂದು ಅವನಿಗೆ ಸೂಚಿಸಿದನು.

'ದರೋಡೆಯ ಅಪರಾಧವನ್ನು ನನ್ನ ಮೇಲೆ ಹೊರಿಸಲಾಗುವುದಂತೆ....ಓ! ಮತ್ತಷ್ಟು ನೀರು ತಾ....ವಿಚಾರಣೆ ನಡಸಲಿ....ನಾನು ಈ ನೀಚರನ್ನು ಮುಗಿಸಿಬಿಡು ತ್ತೇನೆ. ಚಕ್ರವರ್ತಿಗಳ ಗಮನಕ್ಕೆ ತರುತ್ತೇನೆ.. ಐಸ್....' ಎಂದು ಡೆನಿಸೋವ್ ಗೊಣಗುಟ್ಟಿದನು.

ಸೈನ್ಯದ ವೈದ್ಯ ಬಂದು, ಡೆನಿಸೋವ್‌ನ ಮೈಯಿಂದ ರಕ್ತ ತೆಗೆಯಬೇಕೆಂದು ಸಲಹೆ ಮಾಡಿದನು. ಅವನ ಕೂದಲಿಡಿದಿದ್ದ ತೋಳಿನಿಂದ ಒಂದು ಬಟ್ಟಲ ತಟ್ಟೆಯಷ್ಟು ಕಪ್ಪು ರಕ್ತವನ್ನು ತೆಗೆಯಲಾಯಿತು. ಅನಂತರ ಮಾತ್ರ ನಡೆದದ್ದನ್ನೆಲ್ಲ ವಿವರಿಸಲು ಅವನು ಶಕ್ತನಾದನು.

'ನಾನಲ್ಲಿಗೆ ಹೋಗುತ್ತೇನೆ' ಎಂದು ಡೆನಿಸೋವ್ ಪ್ರಾರಂಭಿಸಿದನು. "ನಿಮ್ಮ ನಾಯಕರ ಬೀಡೆಲ್ಲಿದೆ?" ಅದನ್ನು ತೋರಿಸಲಾಯಿತು. "ದಯೆಯಿಟ್ಟು ತುಸು ಕಾಯಿರಿ." "ನಾನು ಇಪ್ಪತ್ತು ಮೈಲಿಯಿಂದ ಬಂದಿದ್ದೇನೆ. ಜರೂರು ಕೆಲಸವಿದೆ. ಕಾಯಲು ಸಮಯವಿಲ್ಲ. ನಾನು ಬಂದಿದ್ದೇನೆಂದು ತಿಳಿಸಿ.' ಸರಿ, ಅವರ ಕಳ್ಳರೊಡೆಯ ಹೊರಬಂದನು. ಉಪನ್ಯಾಸ ಪ್ರಾರಂಭಿಸಿದನು. "ಅದು ದರೋಡೆ!" 'ಯಾರು ತನ್ನ ಜೇಬುಗಳನ್ನು ತುಂಬಿಕೊಳ್ಳಲು ಸಾಮಗ್ರಿಗಳನ್ನು ಕಸಿದುಕೊಳ್ಳುತ್ತಾನೆಯೋ ಅವನು ದರೋಡೆಕಾರ. ತನ್ನ ಸೈನಿಕರಿಗೆ ಸಾಮಗ್ರಿಯನ್ನು ಕೊಂಡೊಯ್ದರೆ ದರೋಡೆಯಾಗದು

ಎಂದು ನಾನು ಹೇಳುತ್ತೇನೆ. "ದಯೆಯಿಟ್ಟು ಸುಮ್ಮಗಿರುವಿರಾ ?" "ಆಗಲಿ" "ಹೋಗಿ, ಇಲಾಖೆಯ ಅಧಿಕಾರಿಗೆ ಪಾವತಿ ಕೊಡಿ. ಆದರೆ ಈ ನಿಮ್ಮ ವ್ಯವಹಾರವನ್ನು ಕೇಂದ್ರ ಕಾರ್ಯಾಲಯಕ್ಕೆ ತಿಳಿಸಲಾಗುತ್ತದೆ" ಎಂದವನು ಹೇಳುತ್ತಾನೆ. ನಾನು ಅಧಿಕಾರಿಯ ಬಳಿಗೆ ಹೋಗುತ್ತೇನೆ. ನಾನು ಒಳಗೆ ಪ್ರವೇಶಿಸಿ, ಮೇಜಿನ ಮುಂದೆ ನಿಂತೆ....'ಇದಕ್ಕೆಲ್ಲ ಯಾರು ಕಾರಣ ? ತುಸು ತಡೆಯಿರಿ....ನಮ್ಮ ಹಸಿವಿಗೆ ಯಾರು ಕಾರಣ ?' ಎಂದು ಡೆನಿಸೋವ್ ಕೂಗಾಡುತ್ತ, ರಕ್ತ ತೆಗೆದ ಕೈಯ ಮುಷ್ಟಿಯಿಂದ ಮೇಜನ್ನು ಬಲವಾಗಿ ಕುಟ್ಟಿದನು. ಅದರ ರಭಸಕ್ಕೆ ಮೇಜು ಬಿರುಕು ಬಿಟ್ಟಿತು; ಅದರ ಮೇಲಿದ್ದ ಲೋಟಗಳು ಕೆಳಗೆ ಬಿದ್ದುವು. 'ತೆಲ್ಯಾನಿನ್ ! "ಏನು ? ನಮ್ಮನ್ನು ಹಸಿವಿನಿಂದ ಸಾಯಿಸುತ್ತಿರುವವರು ನೀವೆ ತಾನೆ! ಹೌದೆ? ಅದಕ್ಕಾಗಿ ಇಗೋ, ಇದು ನಿಮಗೆ! ತೆಗೆದುಕೊಳ್ಳಿ' ಎಂದು ನುಡಿದು ನಾನವರ ಮೂತಿಯ ಮೇಲೆ ಕೊಟ್ಟೆ....'ಅಹ' ಎಂಥ ...ಎಂಥ....!" ಅವನನ್ನು ತೀಡಲು ತೊಡಗಿದೆ....'ಅದೊಂದು ತಮಾಷೆಯ ಆಟ' ಎಂದು ಡೆನಿಸೋವ್ ಉಲ್ಲಾಸ ಬೆರೆತ ಕೋಪದಿಂದ ಗರ್ಜಿಸಿದನು. ಅವನ ಕರಿಮೀಸೆಯ ಕೆಳಗಿನಿಂದ ಬಿಳಿಯ ಹಲ್ಲು ಕಾಣಿಸುತ್ತಿದ್ದುವು. 'ಅವನನ್ನೆಳೆದುಕೊಂಡು ಹೋಗದಿದ್ದರೆ ನಾನು ಕೊಂದೇ ಬಿಡುತ್ತಿದ್ದೆ.'

'ಹೋಗಲಿ, ನೀವೇಕೆ ಹೀಗೆ ಅರಚಿಕೊಳ್ಳುತ್ತೀರಿ ? ತಾಳ್ಮೆಯಿಂದಿರಿ' ಎಂದು ರೊಸ್ತೋವ್ ನುಡಿದನು. 'ನಿಮ್ಮ ತೋಳಿನಲ್ಲಿ ಮತ್ತೆ ರಕ್ತ ಸುರಿಯುತ್ತಿದೆ. ಅದನ್ನು ಕಟ್ಟುವ ತನಕ ತಡೆಯಿರಿ.'

ಡೆನಿಸೋವ್‌ನ ತೋಳಿಗೆ ಮತ್ತೆ ಪಟ್ಟಿಕಟ್ಟಿ, ಮಲಗಿಸಿದರು. ಮಾರನೆಯ ಬೆಳಗ್ಗೆ ಎದ್ದಾಗ ಅವನ ಮುಖ ಶಾಂತಿಯಿಂದ ಪ್ರಸನ್ನವಾಗಿತ್ತು.

ಮಧ್ಯಾಹ್ನದ ಹೊತ್ತಿಗೆ ನಿಷ್ಠುರ ಗಂಭೀರವದನದ ಸಹಾಯಾಧಿಕಾರಿಯೊಬ್ಬ ರೊಸ್ತೋವ್—ಡೆನಿಸೋವ್‌ರ ನೆಲಮಾಳಿಗೆಗೆ ಬಂದು, ದಳನಾಯಕ ಮೇಜರ್ ಡೆನಿಸೋವ್‌ನಿಗೆ ಬರೆದಿದ್ದ ಪತ್ರವೊಂದನ್ನು ತಲುಪಿಸಿ, ತನ್ನ ಸಂತಾಪವನ್ನು ವ್ಯಕ್ತಪಡಿಸಿದನು. ಅದರ ಪ್ರಕಾರ ನಿನ್ನೆ ನಡೆದ ಘಟನೆಯ ಬಗ್ಗೆ ವಿಚಾರಣೆ ನಡಸಲಾಗಿತ್ತು. ಆ ಪ್ರಕರಣ ಕೆಟ್ಟ ತಿರುವು ತೆಗೆದುಕೊಳ್ಳಬಹುದೆಂದು ಸಹಾಯಾಧಿಕಾರಿ ಸೂಚಿಸಿದನು. ಸೈನಿಕ ನ್ಯಾಯಾಸ್ಥಾನ ನೇಮಕಗೊಂಡಿತ್ತೆಂದೂ, ಕೊಳ್ಳೆ ಮತ್ತು ಅವಿಧೇಯತೆಗಳು ಅತ್ಯಂತ ತೀವ್ರವಾಗಿ ಪರಿಗಣನೆಗೊಂಡಿದ್ದುದರಿಂದ ಹಿಂಬಡ್ತಿಯ ಶಿಕ್ಷೆ ಅನಿವಾರ್ಯವೆಂದೂ ಅವನು ನುಡಿದನು.

ಸಾಗಣೆಯನ್ನು ಕಸಿದುಕೊಂಡ ನಂತರ ಡೆನಿಸೋವ್ ಕುಡಿದು, ಮುಖ್ಯ ನಾಯಕನ ಬಳಿ ಹೋದುದಾಗಿಯೂ, ಯಾವ ಪ್ರಚೋದನೆಯೂ ಇಲ್ಲದೆ ಅವನನ್ನು ಕಳ್ಳನೆಂದು ಕರೆದು, ಹೊಡೆಯಲು ಬೆದರಿಸಿದುದಾಗಿಯೂ, ಹೊರಗೆ ಕಳಿಸಿದ ನಂತರ ಕಚೇರಿಗೆ ಧಾವಿಸಿ, ಇಬ್ಬರು ನೌಕರರನ್ನು ಬಡಿದು, ಅವರಲ್ಲೊಬ್ಬನ ತೋಳನ್ನು ತಿರುಚಿದುದಾಗಿಯೂ ನೊಂದವರು ಮೊಕದ್ದಮೆ ಹೂಡಿದ್ದರು.

ರೊಸ್ತೋವ್ ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ ಡೆನಿಸೋವ್ ನಗುನಗುತ್ತ ಕೊಟ್ಟ ಉತ್ತರವಿದು: ಇದರಲ್ಲಿ ಬೇರೆ ಯಾರದೋ ಕೈವಾಡವಿದ್ದಂತೆ ತೋರುತ್ತಿದೆ;

ಅದೆಲ್ಲ ಅವಿವೇಕದ್ದು, ಕಸಕ್ಕಿಂತ ಕಡೆಯಾದದ್ದು; ಆ ವಿಚಾರದಿಂದ ತನಗೆ ಸುತರಾಂ ಅಂಜಿಕೆಯಿಲ್ಲ; ಆ ನೀಚರೇನಾದರೂ ತನ್ನ ಮೇಲೆ ಬಿದ್ದುದಾದರೆ, ಅವರೆಂದೂ ಸುಲಭವಾಗಿ ಮರೆಯಲಾಗದಂಥ ಉತ್ತರ ಕೊಡುತ್ತೇನೆ.

ಡೆನಿಸೋವ್ ಇಡೀ ಪ್ರಕರಣವನ್ನು ಕುರಿತು ತಾತ್ಸಾರದಿಂದ ಮಾತಾಡಿದನು. ಹೊರಗಡೆ ತೋರಿಸಿಕೊಳ್ಳದಿದ್ದರೂ, ಸೈನಿಕ ನ್ಯಾಯಾಲಯದ ವಿಚಾರಣೆಯ ಬಗ್ಗೆ ಅವನು ಒಳಗೊಳಗೆ ಹೆದರಿಕೊಂಡಿದ್ದನೆಂದೂ, ಕೆಟ್ಟ ತಿರುವನ್ನು ಹಿಡಿದಿದ್ದ ಇಡೀ ಪ್ರಕರಣ ಅವನನ್ನು ನಿತ್ರಾಣಗೊಳಿಸಿತ್ತೆಂದೂ, ಅವನನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದ ರೊಸ್ತೋವ್ ಕಂಡುಕೊಂಡಿದ್ದನು. ಪ್ರತಿನಿತ್ಯವೂ ಶೋಧನೆ ಸೂಚನೆಗಳನ್ನು ಕುರಿತಂತೆ ನ್ಯಾಯಾಲಯದಿಂದ ಕಾಗದ ಬರುತ್ತಿದ್ದುವು. ಮೇ ತಿಂಗಳ ಮೊದಲ ತೇದಿಯಂದು ಪಡೆಯ ಹೊಣೆಯನ್ನು ತನ್ನ ನಂತರದ ಜ್ಯೇಷ್ಠಾಧಿಕಾರಿಗೆ ವಹಿಸಿಕೊಟ್ಟು, ಮೋತಿಖಾನೆಯ ಕಚೇರಿಯಲ್ಲಿ ನಡೆದ ಬಲಪ್ರಯೋಗದ ಬಗ್ಗೆ ತನ್ನ ವಿಭಾಗದ ಸಹಾಯಾಧಿಕಾರಿ ವರ್ಗದ ಮುಂದೆ ವಿವರಣೆ ನೀಡಲು ಹಾಜರಾಗತಕ್ಕದ್ದೆಂದೂ ಅವನಿಗೆ ಆಜ್ಞಾಪಿಸಲಾಯಿತು. ಹಿಂದಿನ ದಿನ ಪ್ಲಾತೊವ್ ಎರಡು ಅಶ್ವಾರೋಹಿದಳ ಮತ್ತು ಎರಡು ರಾವುತ ಕಾವಲುಪಡೆಗಳೊಡನೆ ಪೂರ್ವಭಾವಿ ಪರಿಶೀಲನೆ ನಡಸಿದ್ದನು. ಡೆನಿಸೋವ್ ತನ್ನ ಸ್ವಭಾವಕ್ಕೆ ತಕ್ಕಂತೆ ತನ್ನ ಧೈರ್ಯವನ್ನು ಪ್ರದರ್ಶಿಸುತ್ತ ಗಡಿಪ್ರದೇಶದಲ್ಲಿ ಸವಾರಿಸುತ್ತಿದ್ದನು. ಫ್ರೆಂಚ್ ಗುರಿಗಾರನೊಬ್ಬ ಹಾರಿಸಿದ ಗುಂಡು ಅವನ ಕಾಲಿನ ಮಾಂಸಲ ಭಾಗಕ್ಕೆ ತಗುಲಿತು. ಬೇರೆ ಸಮಯದಲ್ಲಾಗಿದ್ದರೆ ಅಂಥ ಸಣ್ಣ ಗಾಯದ ನೆಪವೊಡ್ಡಿ, ಅವನು ದಳವನ್ನು ತ್ಯಜಿಸುತ್ತಿರಲಿಲ್ಲ; ಈಗಲಾದರೊ ಸಹಾಯಾಧಿಕಾರ ವರ್ಗದ ವಿಚಾರಣೆಯಿಂದ ಪಾರಾಗುವ ಸಲುವಾಗಿ, ಅವನು ಆಸ್ಪತ್ರೆಯಲ್ಲಿ ದಾಖಲಾದನು.

ಅಧ್ಯಾಯ ೧೭

ಜೂನ್ ತಿಂಗಳಲ್ಲಿ ನಡೆದ ಫ್ರೀಡ್‌ಲ್ಯಾಂಡ್ ಕದನದಲ್ಲಿ ಪಾವ್‌ಲೊಗ್ರಾಡ್ ದಳ ಪಾಲ್ಗೊಳ್ಳಲಿಲ್ಲ. ತದನಂತರ ಶಸ್ತ್ರವಿರಾಮ ಘೋಷಿತವಾಯಿತು. ಗೆಳೆಯನ ಅಗಲಿಕೆಯಿಂದ ರೊಸ್ತೋವ್‌ಗೆ ತುಂಬ ಬೇಸರವಾಯಿತು. ಅವನು ಅಗಲಿದಾಗಿನಿಂದ ಅವನ ಬಗೆಗಿನ ಸುದ್ದಿಯಿಲ್ಲದೆ, ಅವನ ಗಾಯದ ಬಗ್ಗೆ ಕಾತರಗೊಂಡು, ಅವನ ವ್ಯವಹಾರಗಳ ಬಗ್ಗೆ ಕುತೂಹಲವುಳ್ಳವನಾಗಿ ರೊಸ್ತೋವ್ ಶಸ್ತ್ರವಿರಾಮದ ಪ್ರಯೋಜನವನ್ನು ಪಡೆದುಕೊಂಡು, ಆಸ್ಪತ್ರೆಯಲ್ಲಿದ್ದ ಡೆನಿಸೋವ್‌ನನ್ನು ಭೇಟಿ ಮಾಡಲು ಅನುಮತಿ ದೊರಕಿಸಿಕೊಂಡನು.

ಆಸ್ಪತ್ರೆಯಿದ್ದದ್ದು ಸಣ್ಣದೊಂದು ಪ್ರಷ್ಯಾ ದೇಶದ ಪಟ್ಟಣದಲ್ಲಿ. ಅದು ರಷ್ಯನ್ ಮತ್ತು ಫ್ರೆಂಚ್ ಸೈನ್ಯಗಳಿಂದ ಎರಡು ಸಾರಿ ಧ್ವಂಸಗೊಂಡಿತ್ತು. ಬೇಸಗೆಯ ಕಾರಣವಾಗಿ ಹೊಲಗಳೆಲ್ಲ ಸುಮನೋಹರವಾಗಿದ್ದುವು. ಆದರೆ ಮುರಿದ ಛಾವಣಿ ಮತ್ತು, ಗೋಡೆಗಳಿಂದ, ಗಬ್ಬು ನಾರುತ್ತಿದ್ದ ಬೀದಿಗಳಿಂದ, ಚಿಂದಿ ಬಟ್ಟೆಯ ನಿವಾಸಿಗಳಿಂದ

ಅಲೆದಾಡುತ್ತಿದ್ದ ರೋಗಪೀಡಿತರಾದ ಮತ್ತು ಕುಡಿದು ಅಮಲೇರಿದ ಸೈನಿಕರಿಂದ ಇಡೀ ಪಟ್ಟಣ ಸ್ಮಶಾನದಂತಿತ್ತು.

ಕಿಟಕಿಯ ಚೌಕಟ್ಟು ಮತ್ತು ಹಲಗೆಗಳು ಮುರಿದುಬಿದ್ದಿದ್ದ ಇಟ್ಟಿಗೆ ಕಟ್ಟಡದಲ್ಲಿ ಆಸ್ಪತ್ರೆ ನಡೆಯುತ್ತಿತ್ತು. ಚೂರುಚೂರಾಗಿದ್ದ ಮರದ ಗೋಡೆಯ ಅವಶೇಷಗಳಿಂದ ಅಂಗಣವನ್ನು ಸುತ್ತುವರಿದಿತ್ತು. ಪಟ್ಟಿಕಟ್ಟಿಕೊಂಡಿದ್ದ, ರಕ್ತಹೀನವಾಗಿ ಊದಿಕೊಂಡಿದ್ದ ಮುಖಗಳ ಹಲವು ಯೋಧರು ಅಂಗಳದ ಬಿಸಿಲಿನಲ್ಲಿ ಕುಳಿತಿರುತ್ತಿದ್ದರು, ಇಲ್ಲವೆ ತಿರುಗಾಡುತ್ತಿದ್ದರು.

ಬಾಗಿಲ ಮೂಲಕ ಪ್ರವೇಶಿಸುತ್ತಿದ್ದಂತೆ, ಆಸ್ಪತ್ರೆಯ ನಾತಗಾಳಿಗಳು ಅವನನ್ನು ಸ್ವಾಗತಿಸಿದುವು. ಮೆಟ್ಟಲೋಣಿಯಲ್ಲಿ ಚುಟ್ಟಾ ಸೇದುತ್ತಿದ್ದ ರಷ್ಯಾ ಸೈನ್ಯದ ವೈದ್ಯ ಅವನಿಗೆದುರಾದನು. ವೈದ್ಯನ ಸಹಾಯಕ ಅವನನ್ನು ಹಿಂಬಾಲಿಸುತ್ತಿದ್ದನು.

'ನನ್ನನ್ನು ಸುತ್ತಮುತ್ತ ಕಿತ್ತು ತಿನ್ನಲಾಗುತ್ತಿದೆ. ಸಂಜೆ ಮಕಾರ್ ಅಲೆಕ್ಸೀವಿಚ್ ಬಳಿ ಬನ್ನಿ. ನಾನಲ್ಲಿರುತ್ತೇನೆ' ಎಂದು ವೈದ್ಯ ತನ್ನ ಸಹಾಯಕನಿಗೆ ಹೇಳುತ್ತಿದ್ದನು. ಸಹಾಯಕ ಮತ್ತೆ ಕೆಲವು ಪ್ರಶ್ನೆಗಳನ್ನು ಕೇಳುತ್ತಿದ್ದನು.

'ಓ, ನಿಮಗೆಷ್ಟು ಸಾಧ್ಯವೋ ಅಷ್ಟು ಮಾಡಿ. ಎಲ್ಲ ಒಂದೆಯಲ್ಲವೆ?' ಎಂದು ಹೇಳುತ್ತಿರುವಾಗ ವೈದ್ಯ ಮೆಟ್ಟಲೇರಿ ಬರುತ್ತಿದ್ದ ರೊಸ್ತೋವ್‌ನನ್ನು ಗಮನಿಸಿದನು.

'ನಿಮಗೇನು ಬೇಕು? ನಿಮಗೇನು ಬೇಕು? ಗುಂಡುಗಳು ನಿಮ್ಮನ್ನು ಮಾಫಿ ಮಾಡಿದಂತಿದೆ. ಟೈಫಸ್ ಜ್ವರಕ್ಕಾಗಿ ಕಾತರರಾಗಿದ್ದೀರಾ? ಇದೊಂದು ಅಂಟುಜಾಡ್ಯದ ಮನೆ, ಸ್ವಾಮಿ' ಎಂದು ವೈದ್ಯ ನುಡಿದನು.

'ಅದು ಹೇಗೆ?' ಎಂದು ರೊಸ್ತೋವ್ ಕೇಳಿದನು.

'ಸನ್ನಿಜ್ವರ, ಸ್ವಾಮಿ. ಅದೊಂದು ಯಮಲೋಕದ ಬಾಗಿಲು. ಇಲ್ಲಿ ನಾವಿಬ್ಬರು ಮಾತ್ರ (ತನ್ನ ಸಹಾಯಕ ಮಕೀವ್‌ನನ್ನು ತೋರಿಸಿದನು) ಹೇಗೋ ಬದುಕನ್ನು ಸಾಗಿಸುತ್ತಿದ್ದೇವೆ. ಈ ಜಾಗದಲ್ಲಿ ಐದು ಮಂದಿ ವೈದ್ಯರು ಈಗಾಗಲೇ ಘನಾವಾದರು. ಇಲ್ಲಿಗೆ ಬರುವ ಹೊಸಬನ ಕತೆ ಒಂದು ವಾರದಲ್ಲಿ ಮುಗಿದಂತೆಯೇ ಸರಿ' ಎಂದು ವೈದ್ಯ ಸಮಾಧಾನದಿಂದ ನುಡಿದನು. 'ಪ್ರಷ್ಯಾದ ವೈದ್ಯರನ್ನಿಲ್ಲಿಗೆ ಆಹ್ವಾನಿಸಲಾಗಿದೆ. ಅವರೆ ಮಿತ್ರ ಕೂಟಕ್ಕೆ ಅವರು ಬೇಕಿಲ್ಲ.'

ಗಾಯಗೊಂಡಿದ್ದ ಅಶ್ವದಳದ ಮೇಜರ್ ಡೆನಿಸೋವ್‌ನನ್ನು ನೋಡಬೇಕೆಂದು ರೊಸ್ತೋವ್ ತನ್ನ ಪರಿಚಯವನ್ನು ವಿವರಿಸಿದನು.

'ನನಗೆ ಗೊತ್ತಿಲ್ಲ. ಆ ಬಗ್ಗೆ ನಾನೇನೂ ಹೇಳಲಾರೆ, ಸ್ವಾಮಿ. ನನ್ನ ಕಷ್ಟವನ್ನು ಸಹ ನೀವು ನೋಡಬೇಕು. ನಾನೂರಕ್ಕಿಂತಲೂ ಹೆಚ್ಚು ರೋಗಿಗಳಿರುವ ಮೂರು ಆಸ್ಪತ್ರೆಗಳನ್ನು ನಾನೊಬ್ಬನೇ ನೋಡಿಕೊಳ್ಳಬೇಕಾಗಿದೆ. ಪ್ರತಿ ತಿಂಗಳೂ ಪ್ರಷ್ಯಾದ ಉದಾರ ಮನೋಭಾವದ ಮಹಿಳೆಯರು ಎರಡು ಪೌಂಡ್ ಕಾಫಿಯನ್ನೂ, ಗಾಯದ ಬಟ್ಟೆಗಳನ್ನೂ ಕಳುಹಿಸಿಕೊಡುತ್ತಿರುವುದರಿಂದ ಎಷ್ಟೋ ವಾಸಿ; ಇಲ್ಲವಾಗಿದ್ದರೆ ನಾವೆಲ್ಲ ಮುಗಿದುಹೋಗುತ್ತಿದ್ದೆವು' ಎಂದವನು ನಕ್ಕನು. 'ಅಷ್ಟಲ್ಲ, ಇಷ್ಟಲ್ಲ, ನಾನೂರು ಸ್ವಾಮಿ. ಇಷ್ಟು ಸಾಲದೇಬಂತೆ ಪ್ರತಿನಿತ್ಯ ಹೊಸಬರನ್ನು ಕಳಿಸುತ್ತಿದ್ದಾರೆ. ಈಗ

ನಾನೂರು ಮಂದಿ ರೋಗಿಗಳಿದ್ದಾರೆ, ಅಲ್ಲವೆ?' ಎಂದವನು ತನ್ನ ಸಹಾಯಕನ ಕಡೆಗೆ ತಿರುಗಿಕೊಂಡು ಪ್ರಶ್ನಿಸಿದನು.

ಸಹಾಯಕ ತುಂಬ ದಣಿದಿದ್ದಂತೆ ಕಂಡನು. ಹರಟೆಮಲ್ಲ ವೈದ್ಯ ಹೋದರೆ ಸಾಕೆಂದು ಅವನು ತಾಳ್ಮೆಗೆಟ್ಟು ಚಡಪಡಿಸುತ್ತಿದ್ದನು.

'ಮೇಜರ್ ಡೆನಿಸೋವ್. ಅವನು ಗಾಯಗೊಂಡಿದ್ದು ಮೊಲ್ಲಿತೆನ್‌ನಲ್ಲಿ' ಎಂದು ರೊಸ್ತೋವ್ ಮತ್ತೆ ವಿನಂತಿಸಿಕೊಂಡನು.

'ನನ್ನ ಊಹೆಯ ಪ್ರಕಾರ ಅವನು ಸತ್ತುಹೋಗಿದ್ದಾನೆ. ಏನಯ್ಯಾ, ಮಕೀವ್?' ಎಂದು ವೈದ್ಯ ತಾತ್ಸಾರ ಧ್ವನಿಯಲ್ಲಿ ಪ್ರಶ್ನಿಸಿದನು.

ಹೇಗೂ ವೈದ್ಯನ ಮಾತನ್ನು ಸಹಾಯಕ ಸಮರ್ಥಿಸಲಿಲ್ಲ.

'ಅವನು ಉದ್ದವಾಗಿದ್ದಾನೆಯೆ? ಅವನ ಕೂದಲು ಕೆಂಪಗಿದೆಯೆ?' ಎಂದು ವೈದ್ಯ ಕೇಳಿದನು.

ಡೆನಿಸೋವನ ಚಹರೆಯನ್ನು ರೊಸ್ತೋವ್ ಬಣ್ಣಿಸಿದನು.

'ಆ ಚಹರೆಯನ್ನು ಹೋಲುವ ವ್ಯಕ್ತಿಯನ್ನು ನೋಡಿದ್ದಂತೆ ನೆನಪು' ಎಂದು ವೈದ್ಯ ತೃಪ್ತಿ ವ್ಯಕ್ತಪಡಿಸಿದನು. 'ಅವನು ಸತ್ತುಹೋದನೆಂದೇ ನನ್ನ ಊಹೆ. ಏನೇ ಆಗಲಿ, ಪಟ್ಟಿಯನ್ನು ನೋಡುತ್ತೇನೆ. ನಮ್ಮ ಬಳಿ ಒಂದು ಪಟ್ಟಿ ಇತ್ತಲ್ಲ, ಏನಾಯಿತು? ಮಕೀವ್.'

'ಮಕಾರ್ ಅಲೆಕ್ಸೀವಿಚ್‌ರ ಬಳಿಯಿದೆ' ಎಂದು ಸಹಾಯಕ ಉತ್ತರಿಸಿ, ರೊಸ್ತೋವ್ ಕಡೆ ತಿರುಗಿ 'ಅಧಿಕಾರಿಗಳ ಕೊಟಡಿಗೆ ಹೋದರೆ, ನೀವೇ ಅದನ್ನು ಅವಲೋಕಿಸಬಹುದು' ಎಂದನು.

'ನೀವಲ್ಲಿಗೆ ಹೋಗದಿರುವುದೇ ಮೇಲು, ಸ್ವಾಮಿ. ಅಥವಾ ನೀವಿಲ್ಲಿಯೇ ನಿಲ್ಲಬೇಕಾಗಿಬರಬಹುದು' ಎಂದು ವೈದ್ಯ ನುಡಿದನು.

ಆದರೆ ರೊಸ್ತೋವ್ ವೈದ್ಯನಿಗೆ ಮಣಿದು, ದಾರಿತೋರಿಸೆಂದು ಸಹಾಯಕನನ್ನು ಕೇಳಿಕೊಂಡು, ಮುಂದೆ ನಡೆದನು.

'ನೀವು ಮಾತ್ರ ನನ್ನನ್ನು ದೂರಬಾರದು' ಎಂದು ವೈದ್ಯ ಕೂಗಿ ಹೇಳಿದನು.

ರೊಸ್ತೋವ್ ಮತ್ತು ಸಹಾಯಕರಿಬ್ಬರೂ ಕತ್ತಲಿಡಿದ ಮೊಗಸಾಲೆಯನ್ನು ಪ್ರವೇಶಿಸಿದರು. ಅಲ್ಲಿಯ ಕಟುವಾಸನೆಯಿಂದಾಗಿ ರೊಸ್ತೋವ್ ಬಿಗಿಯಾಗಿ ಮೂಗು ಮುಚ್ಚಿಕೊಂಡನು. ತುಸು ನಿಂತು, ತನ್ನೆಲ್ಲ ಶಕ್ತಿಯನ್ನು ಕೂಡಿಸಿಕೊಂಡು ಮುಂದೆ ನಡೆದನು. ಬಲಗಡೆಯಲ್ಲಿದ್ದ ಬಾಗಿಲ ಕಡೆಗೆ ತಿರುಗಿದಾಗ, ಒಳ ಉಡುಪು ಮಾತ್ರ ಧರಿಸಿ, ಊರೆಕೊಟ್ಟುಕೊಂಡು ಬರುಗಾಲಿನಲ್ಲಿ ಕುಂಟುತ್ತಿದ್ದ, ಕ್ಷಯರೋಗಿಯಂತೆ ಬಿಳಿಚಿಕೊಂಡಿದ್ದ ವ್ಯಕ್ತಿಯೊಬ್ಬ ಅವನ ಕಣ್ಣಿಗೆ ಬಿದ್ದನು. ಆ ವ್ಯಕ್ತಿ ಬಾಗಿಲ ಚೌಕಟ್ಟಿನ್ನೊರಗಿಕೊಂಡು, ತನ್ನ ಮುಂದೆ ಓಡಾಡುತ್ತಿದ್ದವರನ್ನು ಮಾತ್ಸರ್ಯ ದೃಷ್ಟಿಯಿಂದ ನೋಡುತ್ತಿದ್ದನು. ರೊಸ್ತೋವ್ ಬಾಗಿಲಲ್ಲಿಣುಕಿದಾಗ, ನೆಲದ ಮೇಲೆ ಬಿದ್ದಿದ್ದ ರೋಗಿಗಳೂ ಗಾಯಾಳುಗಳೂ ಕಣ್ಣಿಗೆ ಬಿದ್ದರು. ಒಣಹುಲ್ಲು ಮತ್ತು ಮೇಲಂಗಿಗಳೇ ಆ ರೋಗಿಗಳಿಗೆ ಹಾಸುಗೆಯಾಗಿದ್ದುವು.

'ನಾನು ಒಳಗೆ ಹೋಗಿ, ನೋಡಬಹುದೆ?'

'ನೋಡಲು ಒಳಗೇನಿದೆ?' ಎಂದು ಸಹಾಯಕ ಕೇಳಿದನು.

ಒಳಗೆ ಹೋಗಕೂಡದೆಂದು ಸಹಾಯಕ ನುಡಿದದ್ದರಿಂದಲೇ ರೊಸ್ತೋವ್ ಸೈನಿಕರ ಕೊಟಡಿಯನ್ನು ಪ್ರವೇಶಿಸಿದನು. ಮೊಗಸಾಲೆಯಲ್ಲಿ ಮೂಗಿಗೆ ಬಡಿಯುತ್ತಿದ್ದ ದುರ್ನಾತ ಇಲ್ಲಿ ವಾಕರಿಕೆ ತರುವಷ್ಟರ ಮಟ್ಟಿಗೆ ಅಸಹ್ಯವಾಗಿತ್ತು. ಅದು ಭಿನ್ನ ವಾಗಿದ್ದರೂ, ತೀಕ್ಷ್ಣವಾಗಿತ್ತು. ಆ ಕೊಟಡಿಯೇ ದುರ್ನಾತದ ಮೂಲವೆಂದು ಅವನಿಗನಿಸಿತು.

ದೊಡ್ಡ ಕಿಟಕಿಗಳ ಮೂಲಕ ತೂರಿ ಬರುತ್ತಿದ್ದ ಸೂರ್ಯನ ಕಿರಣಗಳಿಂದ ಆ ಉದ್ದನೆಯ ಕೊಟಡಿಯಲ್ಲಿ ಬೆಳಕು ಸಮೃದ್ಧವಾಗಿತ್ತು. ಗೋಡೆಗಳ ಕಡೆಗೆ ತಲೆ ಹಾಕಿಕೊಂಡು, ಎರಡು ಸಾಲುಗಳಲ್ಲಿ ರೋಗಿಗಳು ಮತ್ತು ಗಾಯಾಳುಗಳು ಮಲ ಗಿದ್ದರು. ಎರಡು ಸಾಲುಗಳ ನಡುವೆ ಓಣಿಯಿತ್ತು. ಅನೇಕರಿಗೆ ಪ್ರಜ್ಞೆಯಿಲ್ಲದ್ದರಿಂದ, ಹೊಸಬರನ್ನು ಗಮನಿಸುತ್ತಿರಲಿಲ್ಲ. ಅರಿವಿದ್ದವರು ಮೇಲೆದ್ದು, ತಮ್ಮ ತೆಳ್ಳನೆಯ ಹಳದಿ ಮೋರೆಗಳನ್ನು ಮೇಲೆತ್ತಿ ರೊಸ್ತೋವ್ ಕಡೆಗೆ ದೃಷ್ಟಿ ಹಾಯಿಸುತ್ತಿದ್ದರು. ಆ ದೃಷ್ಟಿಯಲ್ಲಿ ಭರವಸೆಯ, ಸಮಾಧಾನದ, ಆಕ್ಷೇಪದ, ಜತೆಗೆ ಪರರ ಆರೋಗ್ಯದ ಬಗೆಗಿದ್ದ ಮಾತ್ಸರ್ಯದ ಭಾವನೆ ಎದ್ದು ಕಾಣುತ್ತಿತ್ತು. ರೊಸ್ತೋವ್ ಕೊಟಡಿಯ ಮಧ್ಯಭಾಗದಲ್ಲಿ ನಿಂತು, ತೆರೆದ ಬಾಗಿಲುಗಳ ಮೂಲಕ ಪಕ್ಕದ ಕೋಣೆಗಳ ಕಡೆಗೆ ಕಣ್ಣು ಹಾಯಿಸಿದನು. ಅಲ್ಲಿಯೂ ಅದೇ ಪರಿಸ್ಥಿತಿಯಿತ್ತು. ಸದ್ದಿಲ್ಲದೆ ಸುತ್ತಲೂ ದೃಷ್ಟಿ ಹರಿಸಿದನು. ಅವನೆಂದೂ ಅಂಥ ದೃಶ್ಯವನ್ನು ನಿರೀಕ್ಷಿಸಿರಲಿಲ್ಲ. ತನ್ನ ಕಣ್ಮುಂದೆಯೇ, ಓಣಿಯ ಬಳಿಯಲ್ಲಿಯೇ ಬರು ನೆಲದ ಮೇಲೆ ಬಿದ್ದಿದ್ದ ರೋಗಿಯ ಕಡೆಗೆ ಅವನ ದೃಷ್ಟಿ ಹೋಯಿತು. ಕೂದಲ ಕತ್ತರಣೆಯ ಪರಿಯಿಂದ, ರೋಗಿ ತುರುಕ ರಾಹುತನಿರಬೇಕೆಂದು ಊಹಿಸಿದನು. ಬೆನ್ನಡಿಯಾಗಿ ಬಿದ್ದಿದ್ದ ಅವನ ದೊಡ್ಡ ಕೈಕಾಲುಗಳು ಅಗಲವಾಗಿ ಚಾಚಿಕೊಂಡಿದ್ದುವು. ಅವನ ಮುಖದಲ್ಲಿ ಕೆನ್ನೀಲಿ ಬಣ್ಣ ವಿತ್ತು. ತೇಲುಗಣ್ಣಿನಿಂದಾಗಿ ಬಿಳಿಯ ಗುಡ್ಡೆಗಳು ಮಾತ್ರ ಕಾಣುತ್ತಿದ್ದುವು. ಅವನ ಕೆಂಪಗಿನ ಬೆತ್ತಲೆಯ ಕೈಕಾಲುಗಳ ರಕ್ತನಾಳಗಳು ಹುರಿಯಂತೆ ತೋರುತ್ತಿದ್ದುವು. ತನ್ನ ಹಿಂದಲೆಯನ್ನವನು ನೆಲಕ್ಕೆ ಬಡಿಯುತ್ತಿದ್ದನು. ಏನೇನೋ ಮಾತುಗಳನ್ನವನು ಮೇಲಿಂದ ಮೇಲೆ ಗೊರಗುಟ್ಟುತ್ತಿದ್ದನು. ಎಚ್ಚರಿಕೆಯಿಂದ ಕೇಳಿಸಿಕೊಂಡಾಗ ರೊಸ್ತೋವ್‌ನಿಗೆ ಆ ಮಾತು ಅರ್ಥವಾಯಿತು. 'ನೀರು, ನೀರು, ನೀರು' ಎಂದವನು ಒದ್ದಾಡುತ್ತಿದ್ದನು. ಅವನನ್ನು ಹಿಂದಿನ ಜಾಗದಲ್ಲಿ ಮಲಗಿಸಿ, ನೀರು ತಂದುಕೊಡು ವವರು ಯಾರಾದರೂ ಇದ್ದಾರೆಯೇ ಎಂದು ರೊಸ್ತೋವ್ ಸುತ್ತಮುತ್ತ ನೋಡಿ ದನು. 'ಇಲ್ಲಿ ರೋಗಿಗಳನ್ನು ನೋಡಿಕೊಳ್ಳುವವರು ಯಾರು?' ಎಂದವನು ಸಹಾಯಕನನ್ನು ಪ್ರಶ್ನಿಸಿದನು.

ಅಷ್ಟರಲ್ಲಿ ಪಕ್ಕದ ಕೋಣೆಯಿಂದ ಆಸ್ಪತ್ರೆಯ ಆಯನಾಗಿದ್ದ ಮೋಠಖಾನೆಯ ಸೈನಿಕ ಶಿಸ್ತಿನ ನಡಗೆಯಲ್ಲಿ ಬಂದು ರೊಸ್ತೋವ್‌ನೆದುರಿನಲ್ಲಿ ನೆಟ್ಟಗೆ ನಿಂತನು. 'ನಮ ಸ್ಕಾರ, ಮಾನ್ಯರೆ' ಎಂದು ಗಟ್ಟಿಯಾಗಿ ನುಡಿದು, ರೊಸ್ತೋವ್‌ನ ಮೇಲೆ ಕಣ್ಣು

ಹೊರಳಿಸಿದನು. ರೊಸ್ತೋವ್ ಆಸ್ಪತ್ರೆಯ ಅಧಿಕಾರಿಯಾಗಿರಬೇಕೆಂದು ಅವನು ತಪ್ಪಾಗಿ ತಿಳಿದುಕೊಂಡನು.

'ಅವನನ್ನು ಸರಿಯಾಗಿ ಮಲಗಿಸು, ನೀರು ತಂದುಕೊಡು' ಎಂದು ರೊಸ್ತೋವ್ ತುರುಕ ರಾಹುತನ ಕಡೆಗೆ ಕೈತೋರಿಸಿದನು.

'ಆಗಲಿ, ಮಾನ್ಯರೆ' ಎಂದು ಸೈನಿಕ ನಿರಾತಂಕವಾಗಿ ಉತ್ತರಿಸಿ, ಕಣ್ಣುಗಳನ್ನು ಅತ್ತಿತ್ತ ಹೊರಳಿಸಿ, ಸೆಡೆದುಕೊಂಡು ನಿಂತನೇ ಹೊರತು, ಅಲುಗಾಡಲಿಲ್ಲ.

'ಇಲ್ಲ. ಇಲ್ಲಿ ಏನುಮಾಡಲೂ ಸಾಧ್ಯವಿಲ್ಲ' ಎಂದು ರೊಸ್ತೋವ್ ಕೆಳಗಣ್ಣಾಗಿ, ಹೊರಗೆ ಹೊರಡುವುದರಲ್ಲಿದ್ದಾಗ, ತನ್ನ ಬಲಗಡೆಯಿಂದ, ತನ್ನಲ್ಲಿಯೇ ಕೀಲಿಸಿದ ತೀಕ್ಷ್ಣದೃಷ್ಟಿಯಿಂದ ಚಕಿತನಾಗಿ, ಆ ಕಡೆಗೆ ಮುಖವಾದನು. ಮೂಲೆಗೆ ಸಮೀಪ ವಾಗಿ, ಅಸ್ಥಿಪಂಜರಕ್ಕಿಂತ ಕೃಶವಾದ, ಬೋಳಿಸದ ಬೂದುಗಡ್ಡದ ಮುದುಕ ಮೇಲಂಗಿಯ ಮೇಲೆ ಕುಳಿತಿದ್ದನು. ಹಳದಿ ಬಣ್ಣದ ಅವನ ಮುಖ ಕಠೋರವಾಗಿತ್ತು; ಅವನ ಕಣ್ಣುಗಳು ರೊಸ್ತೋವ್‌ನಲ್ಲಿಯೇ ನಾಟಿದ್ದುವು. ಅವನ ಪಕ್ಕದಲ್ಲಿದ್ದವನೊಬ್ಬ ರೊಸ್ತೋವ್‌ನ ಕಡೆಗೆ ಕೈತೋರಿಸುತ್ತ, ಏನನ್ನೋ ಅವನ ಕಿವಿಯಲ್ಲಿ ಪಿಸುಗುಟ್ಟು ತ್ತಿದ್ದನು. ತನ್ನೊಡನೆ ಮಾತಾಡಲು ಮುದುಕ ಇಷ್ಟಪಟ್ಟಿದ್ದಂತೆ ರೊಸ್ತೋವ್‌ನಿಗೆ ಅರಿಕೆಯಾಯಿತು. ಅವನ ಹತ್ತಿರ ಸರಿದು ನೋಡಲಾಗಿ, ತನಗಿದ್ದ ಒಂದೇ ಒಂದು ಕಾಲನ್ನು ಮಡಿಚಿಕೊಂಡು, ಅದರ ಮೇಲೆ ಮುದುಕ ಕುಳಿತಿದ್ದನು. ಅವನ ಮತ್ತೊಂದು ಕಾಲನ್ನು ಮೊಣಕಾಲಿನ ಮೇಲೆ ಕತ್ತರಿಸಲಾಗಿತ್ತು. ಆ ಮುದುಕನ ಮತ್ತೊಂದು ಪಕ್ಕದಲ್ಲಿ ಗಿಡ್ಡಮೂಗಿನ ತರುಣ ಸೈನಿಕ ತಲೆಯನ್ನು ಹಿಂದಕ್ಕೆ ಚಾಚಿ ಕೊಂಡು ತುಸು ದೂರದಲ್ಲಿ ಮಲಗಿದ್ದನು. ಬಿಳಿಚಿಕೊಂಡಿದ್ದ ಅವನ ಮೆದು ಮೋರೆ ಯಲ್ಲಿ ಮಚ್ಚೆಗಳು ಎದ್ದುಕಾಣುತ್ತಿದ್ದುವು. ಅವನ ಕಣ್ಣು ತೇಲುತ್ತಿದ್ದುವು. ರೊಸ್ತೋವ್ ತರುಣ ಸೈನಿಕನ ಕಡೆಗೆ ದಿಟ್ಟಿಹರಿಸಿದಾಗ, ಅವನ ಬೆನ್ನುಹುರಿ ನರದಲ್ಲಿ ಕುಳಿರ್ ಕೊರೆತ ಹರಿದಂತಾಯಿತು.

'ಇವನೇಕೆ ಹೀಗೆ ಕಾಣು....?' ಎಂದವನು ಸಹಾಯಕನ ಕಡೆಗೆ ತಿರುಗಿಕೊಂಡು ಪ್ರಶ್ನಿಸಿದನು.

'ನಾವು ಅಂಗಲಾಚಿ ಬೇಡಿಕೊಳ್ಳುತ್ತಿದ್ದೇವೆ, ಮಾನ್ಯರೆ' ಎಂದು ಮುದುಕ ನುಡಿಯುವಾಗ ಅವನ ದವಡೆ ನಡುಗುತ್ತಿತ್ತು. 'ಅವನು ಮುಂಜಾನೆಯೇ ಸತ್ತ. ಆ ಕಡೆ ತಿರುಗಿ ನೋಡುವವರಿಲ್ಲ. ಎಷ್ಟಾದರೂ ನಾವು ಮಾನವರು, ನಾಯಿಗಳಲ್ಲ.'

'ಯಾರನ್ನಾದರೂ ಕೂಡಲೇ ಕಳಿಸುತ್ತೇನೆ. ಹೆಣವನ್ನು ಬೇಗ ಸಾಗಿಸಲು ಏರ್ಪಾಡು ಮಾಡುತ್ತೇನೆ. ಈಗ ಹೋಗೋಣ, ಮಾನ್ಯರೆ' ಎಂದು ಸಹಾಯಕ ರೊಸ್ತೋವ್‌ನನ್ನು ಅವಸರಿಸಿದನು.

'ಹೌದ್ಹೌದು, ಹೊರಡೋಣ' ಎಂದು ರೊಸ್ತೋವ್ ಸಹ ತವಕಿಸಿದನು. ಕಣ್ಣು ಗಳನ್ನು ಕೆಳಗಿಳಿಸಿಕೊಂಡು, ಶರೀರವನ್ನು ಸಂಕುಚಿಸಿಕೊಂಡು, ಯಾರ ಗಮನಕ್ಕೂ ಬೀಳದಂತೆ, ತನ್ನಲ್ಲಿಯೇ ನಾಟಿದ್ದ ಮಾತ್ಸರ್ಯಪೂರಿತ ನಿಂಗಣ್ಣುಗಳ ಪಂಕ್ತಿಗಳ ನಡುವೆ ಸರಿದು, ಕೋಣೆಯಿಂದ ಹೊರಬಿದ್ದನು.

ಅಧ್ಯಾಯ ೧೪

ನಡುವೆಯಲ್ಲಿ ಸಾಗುತ್ತ ಸಹಾಯಕ ರೊಸ್ತೊವ್‌ನನ್ನು ಅಧಿಕಾರಿಗಳ ಆವಾರದ ಕಡೆಗೆ ಕರೆದೊಯ್ದನು. ಆ ಆವಾರದಲ್ಲಿ ಬಾಗಿಲು ತೆರೆದಿದ್ದ ಮೂರು ಕೋಣೆಗಳಿದ್ದುವು. ಆ ಕೋಣೆಗಳಲ್ಲಿ ಹಾಸುಗೆಗಳಿದ್ದುವು. ರೋಗಿಗಳು ಮತ್ತು ಗಾಯಾಳುಗಳು ಅವುಗಳ ಮೇಲೆ ಮಲಗಿದ್ದರು, ಇಲ್ಲವೆ ಕುಳಿತಿದ್ದರು. ಕೆಲವರು ಆಸ್ಪತ್ರೆಗಳ ಮೇಲಂಗಿಗಳನ್ನು ತೊಟ್ಟು, ಕೋಣೆಗಳಲ್ಲಿಯೇ ತಿರುಗಾಡುತ್ತಿದ್ದರು. ರೊಸ್ತೋವ್ ಮೊದಲು ಭೇಟಿ ಮಾಡಿದವನು ಒಂದೆ ತೋಳಿನ ತೆಳ್ಳನೆಯ ವ್ಯಕ್ತಿ. ಇರುಳು ಟೋಪಿಯನ್ನು ಆಸ್ಪತ್ರೆಯ ಮೇಲಂಗಿಯನ್ನು ಧರಿಸಿದ್ದ, ಹಲ್ಲುಗಳೆಡೆಯಲ್ಲಿ ಚುಂಗಾಣಿ ಸಿಕ್ಕಿಸಿಕೊಂಡಿದ್ದ ಆ ವ್ಯಕ್ತಿ ಮೊದಲನೆಯ ಕೋಣೆಯಲ್ಲಿ ಶತಪಥ ತಿರುಗುತ್ತಿದ್ದನು. ಅವನನ್ನು ಹಿಂದೆ ಭೇಟಿ ಮಾಡಿದ್ದೆಲ್ಲಿ ಎನ್ನುವುದನ್ನು ನೆನಪಿಗೆ ತಂದುಕೊಳ್ಳುವ ಸಲುವಾಗಿ ರೊಸ್ತೋವ್ ಅವನಲ್ಲಿ ಕಣ್ಣಿಟ್ಟು ನೋಡಿದನು.

'ಮತ್ತೆ ನಾವೆಲ್ಲಿ ಸಂಧಿಸಿದ್ದೇವೆ, ನೋಡಿ? ತೂಷಿನ್, ಷಾನ್ ಗ್ರಾ ಬರ್ನ್‌ನಲ್ಲಿ ನಿಮಗೆ ಸಹಾಯಮಾಡಿದ ತೂಷಿನ್ ನಿಮ್ಮ ನೆನಪಿಗೆ ಬರಲಿಲ್ಲವೆ? ನನ್ನ ಶರೀರದ ತುಸು ಭಾಗ ಕತ್ತರಿಸಿಹೋಗಿದೆ. ಇಗೋ ನೋಡಿ....' ಎಂದವನು ನಗುತ್ತ, ಮೇಲಂಗಿಯ ಖಾಲಿ ತೋಳನ್ನು ತೋರಿಸಿದನು. 'ನೀವು ಯಾರನ್ನು ಹುಡುಕುತ್ತಿದ್ದೀರಾ? ವಸಿಲಿ ದಿಮಿತ್ರಿಚ್ ಡೆನಿಸೋವ್‌ರೇನು? ನನ್ನ ನೆರೆಯವರೆ ಅವರು. ಇಗೊ, ಇಲ್ಲೆ, ಬನ್ನಿ' ಎಂದು ತೂಷಿನ್ ಅವನನ್ನು ಪಕ್ಕದ ಕೋಣೆಗೆ ಕರೆದೊಯ್ದನು. ಅದೇ ಸಮಯಕ್ಕೆ ಗಟ್ಟಿ ನಗುಗಳ ಸದ್ದು ಕೋಣೆಯಿಂದ ತೂರಿ ಬರುತ್ತಿತ್ತು.

'ಇಂಥ ಸ್ಥಳದಲ್ಲಿ ಈ ಜನ ನಗುತ್ತಾರಲ್ಲ, ಹೇಗೆ? ಇಲ್ಲಿ ವಾಸಿಸುವುದಾದರೂ ಹೇಗೆ?' ಎಂದು ರೊಸ್ತೋವ್ ಸೈನಿಕರ ಆವಾರದಲ್ಲಿ ಕೊಳೆತು ನಾರುತ್ತಿದ್ದ ಮಾಂಸದ ಕಟು ವಾಸನೆ ಇನ್ನೂ ತನ್ನ ಮೂಗನ್ನು ಬಿಡದಿದ್ದಾಗ ತನ್ನೊಳಗೆ ಆಲೋಚಿಸಿದನು. ಎರಡು ಕಡೆಗಳಿಂದಲೂ ತನ್ನನ್ನು ಹಿಂಬಾಲಿಸಿದ್ದ ಮಾತ್ಸರ್ಯಪೂರಿತ ದೃಷ್ಟಿಗಳು ಹಾಗೂ ಯುವ ಸೈನಿಕನ ತೇಲುಗಣ್ಣುಗಳ—ಮುಖ ಅವನ ಕಣ್ಣರಿಕೆಯಿಂದ ಮರೆಯಾಗಿರಲಿಲ್ಲ.

ಮಧ್ಯಾಹ್ನವಾಗಿದ್ದರೂ, ಕಂಬಳಿಯೊಳಗೆ ಮುಖವನ್ನು ಸಹ ಮುಚ್ಚಿಕೊಂಡು, ಡೆನಿಸೋವ್ ಹಾಸುಗೆಯ ಮೇಲೆ ಗಾಢ ನಿದ್ರೆಯಲ್ಲಿದ್ದನು.

'ಹಾ, ರೊಸ್ತೋವ್, ಹೇಗಿದ್ದಿರಿ? ಹೇಗಿದ್ದೀರಿ?' ಎಂದು ಡೆನಿಸೋವ್ ಕೂಗಿಕೊಂಡನು. ಆ ಕೂಗಿನಲ್ಲಿ ದಳದಲ್ಲಿದ್ದಾಗ ಅಭ್ಯಾಸವಾಗಿದ್ದ ಧ್ವನಿಯೇ ಅನುರಣನಗೊಂಡಿತು. ಆದರೂ ಆ ರೂಢಿಯ ಉತ್ಸಾಹ ಉಲ್ಲಾಸಗಳ ಹಿಂದೆ ಅವನ ಮುಖಭಾವದಲ್ಲಿ ಹಾಗೂ ಅವನ ಧ್ವನಿಯಲ್ಲಿ ವಿನೂತನ ಕುಟಿಲ ಭಾವ ಹುದುಗಿದ್ದಂತೆ ರೊಸ್ತೋವ್‌ನಿಗೆ ಭಾಸವಾಗಿ, ವಿಷಾದಗೊಂಡನು.

ಗಾಯಗೊಂಡು ಆರುವಾರಗಳಾಗಿದ್ದರೂ, ಆ ಗಾಯ ಸಣ್ಣದಾಗಿದ್ದರೂ, ಅದು ವಾಸಿಯಾಗಿರಲಿಲ್ಲ. ಅವನ ಮುಖ ಆಸ್ಪತ್ರೆಯ ಇತರ ರೋಗಿಗಳ ಮುಖಗಳಂತೆ ಊದಿ

ಕೊಂಡು, ರಕ್ತಹೀನವಾಗಿತ್ತು. ಆದರೆ ಅದರಿಂದ ಅವನ ಮನಸ್ಸಿಗೆ ನೋವಾಗಲಿಲ್ಲ. ತಾನು ಬಂದದ್ದು ಡೆನಿಸೋವ್‌ನಿಗೆ ಹಿಡಿಸಲಿಲ್ಲವೆಂಬುದು ಅವನ ಕೃತಕ ಮಂದಹಾಸ ದಿಂದ ಮನವರಿಕೆಯಾಗಿ ರೊಸ್ತೋವ್‌ನ ಮನಸ್ಸು ಆಘಾತಕ್ಕೊಳಗಾಯಿತು. ದಳದ ಯೋಗಕ್ಷೇಮವನ್ನಾಗಲಿ, ಒಟ್ಟಿನ ವ್ಯವಹಾರಗಳ ಆಗುಹೋಗುಗಳನ್ನಾಗಲಿ ಡೆನಿಸೋವ್ ವಿಚಾರಿಸಲಿಲ್ಲ; ರೊಸ್ತೋವ್ ಆ ವಿಷಯಗಳ ಪ್ರಸ್ತಾಪವೆತ್ತಿದಾಗ, ಅವನು ಕೇಳಿಸಿ ಕೊಳ್ಳಲಿಲ್ಲ.

ದಳದ ವಿಚಾರವನ್ನಾಗಲಿ, ಆಸ್ಪತ್ರೆಯ ಹೊರಗಿನ ಸ್ವತಂತ್ರ ಜೀವನದ ವಿಷಯ ವನ್ನಾಗಲಿ ಯಾರೂ ಜ್ಞಾಪಿಸಬಾರದೆಂಬಂತೆ ಡೆನಿಸೋವ್ ವರ್ತಿಸುತ್ತಿದ್ದನೆಂಬುದು ರೊಸ್ತೋವ್‌ನ ಊಹೆಯನ್ನು ತಾಕಿತ್ತು. ಪೂರ್ವಜೀವನವನ್ನು ಮರೆಯಲು ಪ್ರಯತ್ನಿಸಿ, ಮೋಠಿಖಾನೆಯ ಅಧಿಕಾರಿಗಳಿಗೆ ಸಂಬಂಧಿಸಿದ ವ್ಯವಹಾರಗಳಲ್ಲಿ ಮಾತ್ರ ಡೆನಿಸೋವ್ ಆಸಕ್ತನಾಗಿದ್ದಂತೆ ತೋರುತ್ತಿತ್ತು. ಆ ವ್ಯವಹಾರ ಯಾವ ಹಂತದಲ್ಲಿದೆ ಯೆಂದು ರೊಸ್ತೋವ್ ವಿಚಾರಿಸಲಾಗಿ, ವಿಚಾರಣಾ ಆಯೋಗದಿಂದ ಬಂದಿದ್ದ ಪತ್ರ ವನ್ನೂ, ಅದಕ್ಕೆ ಉತ್ತರರೂಪದಲ್ಲಿ ಸಿದ್ಧಪಡಿಸಿದ್ದ ಕರಡನ್ನೂ ಅವನು ಕೂಡಲೇ ತಲೆ ದಿಂಬಿನಡಿಯಿಂದ ಹೊರಗೆ ತೆಗೆದನು. ಆ ಕರಡನ್ನೋದುವಾಗ ಅವನ ಉಲ್ಲಾಸ ಕಾವೇರಿತು; ತನ್ನ ಶತ್ರುಗಳಿಗೆ ನೀಡಿದ ಚುರುಕುಗುಟ್ಟಿಸುವ ಪ್ರತ್ಯುತ್ತರಗಳ ಕಡೆಗೆ ರೊಸ್ತೋವ್‌ನ ವಿಶೇಷ ಗಮನವನ್ನು ಸೆಳೆದನು. ಹೊರಗಣ ಪ್ರಪಂಚದಿಂದ ಹೊಸ ದಾಗಿ ಬಂದಿದ್ದ ರೊಸ್ತೋವ್‌ನನ್ನು ನೋಡಲು ಅವನ ಸುತ್ತ ಗುಂಪುಗೂಡಿದ್ದ ಆಸ್ಪತ್ರೆಯ ಸಂಗಾತಿಗಳು ಡೆನಿಸೋವ್ ತನ್ನ ಕರಡು ಓದಲು ಪ್ರಾರಂಭಿಸುತ್ತಿದ್ದಾಗಲೆ ಕ್ರಮೇಣ ಕಾಲ್ತೆಗೆದರು. ಮೊದಲೇ ಹಲವು ಸಲ ಆ ಕತೆಯನ್ನು ಕೇಳಿ, ಬೇಸರ ವಾಗಿದ್ದ ಜನ ದೂರ ಸರಿದಿರಬೇಕೆಂದು ರೊಸ್ತೋವ್ ಅವರ ಮುಖಭಾವದಿಂದ ಮನದಟ್ಟು ಮಾಡಿಕೊಂಡನು. ಪಕ್ಕದ ಹಾಸುಗೆಯ ದಡೂತಿ ಈಟಿ ರಾವುತ ಮಾತ್ರ ಖಿನ್ನತೆಯಿಂದ ಹುಬ್ಬುಗಂಟಿಕ್ಕಿಕೊಂಡು, ಚುಂಗಾಣಿಯನ್ನು ಸೇದುತ್ತ ತನ್ನ ಹಾಸು ಗೆಯ ಮೇಲೆ ಕುಳಿತಿದ್ದನು. ಒರ್ದೋಳಿನ ಸಣ್ಣ ತೂಷಿನ್ ಅಸಮ್ಮತಿಸೂಚಕವಾಗಿ ತಲೆಯೊಲೆಯುತ್ತ, ಇನ್ನೂ ಆಲಿಸುತ್ತಿದ್ದನು. ವಾಚನದ ಮಧ್ಯದಲ್ಲಿ ಈಟಿರಾವುತ ನಡುವೆ ಬಾಯಿ ಹಾಕಿದನು.

'ಚಕ್ರವರ್ತಿಗಳಿಗೆ ಕ್ಷಮಾಯಾಚನೆಯ ಮನವಿಯನ್ನು ಸಲ್ಲಿಸುವುದೇ ಸರಳವಾದ ಉತ್ತಮೋತ್ತಮ ಮಾರ್ಗವೆಂಬುದು ನನ್ನ ಮತ. ಅನೇಕ ಪ್ರಶಸ್ತಿಗಳನ್ನು ಇಷ್ಟರಲ್ಲೇ ಹಂಚಲಾಗುವುದಂತೆ. ಅಂದಮೇಲೆ ಕ್ಷಮಾದಾನ ಖಚಿತ'....ಎಂದವನು ರೊಸ್ತೋವ್ ಕಡೆಗೆ ತಿರುಗಿಕೊಂಡು ನುಡಿದನು.

'ನಾನೆ? ಚಕ್ರವರ್ತಿಗಳಿಗೆ ನಾನು ಅರ್ಜಿ ಸಲ್ಲಿಸುವುದೆ?' ಎಂದು ಡೆನಿಸೋವ್ ಉದ್ಗಾರ ತೆಗೆದನು. ಆ ಉದ್ಗಾರದಲ್ಲಿ ಹಿಂದಿನ ಕಾವುಕಸುವುಗಳನ್ನು ತುಂಬಲು ಅವನು ಪ್ರಯತ್ನಿಸಿದನು. ಆದರೆ ತಟ್ಟನೆ ರೇಗುವ ಸ್ವಭಾವವುಳ್ಳ ನಿಶ್ಯಕ್ತಿಯ ಅಭಿವ್ಯಕ್ತಿ ಯಾಗಿ ಆ ಪ್ರಯತ್ನ ಕೊನೆಗೊಂಡಿತು. 'ಏತಕ್ಕಾಗಿ? ನಾನೊಬ್ಬ ದರೋಡೆಕೋರ ನಾಗಿದ್ದರೆ ಕ್ಷಮೆ ಕೇಳಬಹುದಿತ್ತು, ಸಿಜ. ದರೋಡೆಕೋರರನ್ನು ಹಿಡಿದಿದ್ದಕ್ಕಾಗಿ

ನನ್ನನ್ನು ಸೈನಿಕ ವಿಚಾರಣೆಗೆ ಗುರಿಪಡಿಸಲಾಗಿದೆ. ಅವರು ವಿಚಾರಣೆ ನಡೆಸಲಿ. ನಾನು ಯಾರಿಗೂ ಹೆದರಬೇಕಾಗಿಲ್ಲ. ನಾನು ಚಕ್ರವರ್ತಿಗಳಿಗೂ ನಾಡಿಗೂ ಗೌರವಾದರಗಳಿಂದ ಸೇವೆ ಸಲ್ಲಿಸಿದ್ದೇನೆ. ನಾನು ಕಳ್ಳತನ ಮಾಡಿಲ್ಲ. ಇದಕ್ಕಾಗಿ ನನಗೆ ಹಿಂಬತ್ತಿಯೇ?....ಇಗೋ ನೋಡಿ, ನಾನವರಿಗೆ ನೇರವಾಗಿ ಬರೆಯುತ್ತೇನೆ. ನಾನು ಹೇಳುವುದಿದು: "ನಾನೇನಾದರೂ ಖಜಾನೆಯನ್ನು ಲೂಟಿಮಾಡಿದ್ದರೆ........"'

'ಈ ಪ್ರತ್ಯುತ್ತರ ನಿಜಕ್ಕೂ ತರ್ಕಬದ್ಧವಾಗಿದೆ. ಆದರೆ ನನ್ನ ಉದ್ದೇಶವೇ ಬೇರೆ, ವಸಿಲಿ ದಿಮಿತ್ರಿಚ್‌ರವರೆ' ಎಂದು ನುಡಿದ ತೂಷಿನ್ ರೊಸ್ತೋವ್ ಕಡೆಗೆ ತಿರುಗಿಕೊಂಡು 'ವಿಧೇಯತೆ ತಪ್ಪಲ್ಲ. ಅದು ವಸಿಲಿ ದಿಮಿತ್ರಿಚ್‌ರವರಿಗೆ ಇಷ್ಟವಿಲ್ಲ. ಆದರೆ ಇದು ಅನುಕೂಲವಾಗುವ ವ್ಯವಹಾರವಲ್ಲವೆಂದು ವಿಚಾರಕ ಇವರೊಡನೆ ಮಾತಾಡಿದ್ದಾನೆ' ಎಂದು ವಿಶದಪಡಿಸಿದನು.

'ಆಗಲಿ, ಅದರಿಂದ ನನಗೆ ಕೇಡ್ಬಿದ್ದೇ ಆಗಲಿ' ಎಂದು ಡೆನಿಸೋವ್ ನುಡಿದನು.

'ವಿಚಾರಕ ಮೇಲ್ಮನವಿಯ ಕರಡನ್ನು ಸಿದ್ಧಪಡಿಸಿ, ನಿಮ್ಮ ಸಹಿಗಾಗಿ ಕೊಟ್ಟಿದ್ದಾನೆ. ಈ ನಿಮ್ಮ ಸ್ನೇಹಿತರು ಅದನ್ನು ಕೊಂಡೊಯ್ದು ಸಲ್ಲಿಸಲಿ. ಇವರಿಗೆ ಅಯೋಧ ಸಿಬ್ಬಂದಿವರ್ಗದಲ್ಲಿ ಪರಿಚಯದವರಿದ್ದಾರೆ. ಇದಕ್ಕಿಂತ ಉತ್ತಮವಾದ ಅವಕಾಶ ನಿಮಗೆ ಸಿಗಲಾರದು' ಎಂದು ತೂಷಿನ್ ತನ್ನ ಮಾತು ಮುಂದುವರಿಸಿದನು.

'ನಾನು ಯಾರ ಕಾಲನ್ನೂ ಕಟ್ಟಲು ಸಿದ್ಧನಾಗಿಲ್ಲವೆಂದು ನಾನಾಗಲೇ ಸ್ಪಷ್ಟಪಡಿಸಿಲ್ಲವೆ?' ಎಂದು ಡೆನಿಸೋವ್ ಮಧ್ಯೆ ಬಾಯಿಹಾಕಿ, ತನ್ನ ಓದು ಮುಂದುವರಿಸಿದನು.

ತೂಷಿನ್ ಮತ್ತು ಇತರ ಅಧಿಕಾರಿಗಳ ಬುದ್ಧಿವಾದ ಅತ್ಯಂತ ಕ್ಷೇಮಕರವಾದದ್ದೆಂದು ಅವನ ಒಳದನಿ ಮಿಡಿಯುತ್ತಿದ್ದರೂ, ಡೆನಿಸೋವ್‌ಗೆ ಏನು ಸೇವೆಯನ್ನಾದರೂ ಸಂತೋಷದಿಂದ ಸಲ್ಲಿಸಲು ಸಿದ್ಧವಾಗಿದ್ದರೂ, ಡೆನಿಸೋವ್‌ನನ್ನು ಒಡಂಬಡಿಸಿಕೊಳ್ಳುವ ಧೈರ್ಯ ರೊಸ್ತೋವ್‌ಗೆ ಇರಲಿಲ್ಲ. ಡೆನಿಸೋವ್‌ನ ನೇರವಾದ ಆತುರದ ಬುದ್ಧಿಯನ್ನೂ, ಅವನ ಹಠಸ್ವಭಾವವನ್ನೂ ಅವನು ಬಲ್ಲವನಾಗಿದ್ದನು.

ಡೆನಿಸೋವ್ ತನ್ನ ಘೋರ ಪ್ರತ್ಯುತ್ತರವನ್ನು ಓದಿ ಮುಗಿಸಬೇಕಾದರೆ ಒಂದು ಗಂಟೆಯೇ ಹಿಡಿಯಿತು. ತರುವಾಯ ರೊಸ್ತೋವ್ ಬಾಯಿ ತೆರೆಯಲಿಲ್ಲ. ನಿರುತ್ಸಾಹದ ಮನಸ್ಸಿನಿಂದ ತನ್ನ ಸುತ್ತ ನೆರೆದ ಡೆನಿಸೋವ್‌ನ ಆಸ್ಪತ್ರೆಯ ಸಂಗಾತಿಗಳೊಡನೆ ತನಗೆ ಗೊತ್ತಿದ್ದ ವಿಷಯವನ್ನವರಿಗೆ ವಿವರಿಸುತ್ತ, ಅವರ ಕತೆಗಳನ್ನು ಕೇಳುತ್ತ ಅವನು ಉಳಿದ ದಿನಾರ್ಧಭಾಗವನ್ನು ಕಳೆದನು; ಇಡೀ ಸಂಜೆಯೆಲ್ಲ ಡೆನಿಸೋವ್ ಚಿಂತಾಕುಲನಾಗಿ ಮೌನದಿಂದಿದ್ದನು.

ಸಂಜೆ ಹೊತ್ತಾಗಿ ಹೊರಡಲು ಸಿದ್ಧನಾದಾಗ ರೊಸ್ತೋವ್ ಅವನ ಪರವಾಗಿ ತಾನು ಮಾಡಬೇಕಾದ ಕೆಲಸವೇನಾದರೂ ಇದೆಯೇ ಎಂದು ಡೆನಿಸೋವ್‌ನನ್ನು ಕೇಳಿದನು.

'ಹೌದು, ತುಸು ತಡೆ' ಎಂದು ಡೆನಿಸೋವ್ ಅಧಿಕಾರಿಗಳ ಕಡೆ ಕಣ್ಣು ಹಾಯಿಸಿ, ತಲೆದಿಂಬಿನೆಡೆಯಿಂದ ಕಾಗದ ಪತ್ರಗಳನ್ನು ತೆಗೆದುಕೊಂಡು, ಮಸಿಕುಡಿಕೆಯಿದ್ದ ಕಿಟಕಿಯ ಬಳಿ ಸರಿದು ಬರೆಯಲು ಕುಳಿತುಕೊಂಡನು.

'ಗೋಡೆಗೆ ತಲೆ ಢಿಕ್ಕಿ ಹೊಡೆಯುವುದರಿಂದ ಪ್ರಯೋಜನವಿಲ್ಲವೆಂದು ತೋರುತ್ತದೆ' ಎಂದವನು ದೊಡ್ಡದೊಂದು ಲಕೋಟೆಯನ್ನು ರೊಸ್ತೋವ್ ಕೈಗೆ ಕೊಟ್ಟನು. ಅದರೊಳಗೆ ವಿಚಾರಕ ಚಕ್ರವರ್ತಿಗೆಂದು ತಯಾರಿಸಿಕೊಟ್ಟಿದ್ದ ಮನವಿ ಪತ್ರವಿತ್ತು. ಆ ಮನವಿಯಲ್ಲಿ ಮೋತಿಖಾನೆಯ ಅಧಿಕಾರಿಗಳ ಅಪರಾಧಗಳನ್ನು ಪ್ರಸ್ತಾಪಿಸದೆಯೆ, ಕ್ಷಮೆ ಕೇಳಿಕೊಳ್ಳಲಾಗಿತ್ತು.

'ಇದನ್ನು ಕೈಗೆತ್ತಿಕೊ. ನನ್ನ ಮನಸ್ಸಿಗೆ ಅದು....' ಎಂದು ಡೆನಿಸೋವ್ ಮಾತು ಮುಗಿಸದೆಯೆ, ಮುಗುಳುನಗೆ ನಕ್ಕನು. ಆ ನಗೆಯಲ್ಲಿ ನೋವಿತ್ತು, ಅಸಹಜತೆಯಿತ್ತು.

ಅಧ್ಯಾಯ ೧೯

ತನ್ನ ದಳಕ್ಕೆ ಮರಳಿ, ನಾಯಕನಿಗೆ ಡೆನಿಸೋವ್‌ನ ವ್ಯವಹಾರಗಳ ಪರಿಸ್ಥಿತಿಯನ್ನು ವಿವರಿಸಿದ ನಂತರ, ರೊಸ್ತೋವ್ ಚಕ್ರವರ್ತಿಗೆ ಆ ಕಾಗದವನ್ನು ತಲುಪಿಸುವ ಸಲುವಾಗಿ ತಿಲ್‌ಸಿತ್‌ಕಡೆಗೆ ಸವಾರಿಸಿದನು.

ಜೂನ್ ೧೩ ರಂದು ಫ್ರಾನ್ಸ್ ಮತ್ತು ರಷ್ಯಾ ಚಕ್ರವರ್ತಿಗಳು ತಿಲ್‌ಸಿತ್‌ಗೆ ಆಗಮಿಸಿದರು. ತಿಲ್‌ಸಿತ್‌ನಲ್ಲಿ ತಂಗಲನುಕೂಲವಾಗುವಂತೆ ಚಕ್ರವರ್ತಿಯ ಪರಿವಾರದಲ್ಲಿ ತನ್ನ ಹೆಸರು ಸೇರಿಸುವಂತೆ ತಾನು ಸೇವಿಸುತ್ತಿದ್ದ ಪ್ರಮುಖ ವ್ಯಕ್ತಿಯ ಬಂದೆ ಬೋರಿಸ್ ದ್ರುಬೆತ್‌ಸ್ಕಾಯ್ ವಿನಂತಿ ಮಾಡಿಕೊಂಡಿದ್ದನು. 'ಆ ಮಹಾ ಪುರುಷನನ್ನು ನೋಡಬೇಕೆಂದು ಮನಸ್ಸು ಹಾತೊರೆಯುತ್ತಿದೆ' ಎಂದವನು ನೆಪೋಲಿಯನ್ನನನ್ನು ಹೆಸರಿಸಿದನು. ಅಲ್ಲಿಯತನಕ ಅವನು ಇತರರಂತೆ ನೆಪೋಲಿಯನ್ನನನ್ನು ಬೋನಪಾರ್ಟ್ ಎಂದೇ ಸದಾ ಕರೆಯುತ್ತಿದ್ದನು.

'ನೀವು ಹೇಳುತ್ತಿರುವುದು ಬೋನಪಾರ್ಟ್ ವಿಷಯ ತಾನೆ?' ಎಂದು ಸೇನಾನಿ ಕೇಳಿದನು.

ಬೋರಿಸ್ ಕುತೂಹಲದಿಂದ ಸೇನಾನಿಯ ಕಡೆ ನೋಡಿದನು. ತನ್ನನ್ನು ಸೇನಾನಿ ಪರೀಕ್ಷಿಸುತ್ತಿದ್ದುದಾಗಿ ಅವನಿಗೆ ತೋರಿತು.

'ಚಕ್ರವರ್ತಿ ನೆಪೋಲಿಯನ್ ಕುರಿತು ಹೇಳುತ್ತಿದ್ದೇನೆ' ಎಂದವನು ಉತ್ತರಿಸಿದನು. ಸೇನಾನಿ ನಗುಮೊಗನಾಗಿ ಅವನ ಭುಜವನ್ನು ಚಪ್ಪರಿಸಿದನು. 'ನೀನೂ ಬರುವಿಯಂತೆ' ಎಂದವನು ನುಡಿದು, ತನ್ನೊಡನೆ ತಿಲ್‌ಸಿತ್‌ಗೆ ಕರೆದುಕೊಂಡು ಹೋದನು.

ನೀಮೆನ್ ನದಿಯ ಬಳಿ ಇಬ್ಬರು ಚಕ್ರವರ್ತಿಗಳು ಸಂಧಿಸಿದ ದಿನ ಹಾಜರಿದ್ದ ಕೆಲವರ ಪೈಕಿ ಬೋರಿಸ್‌ನೂ ಒಬ್ಬ. ಅಕ್ಷರಗಳ ಹೆಣಿಗೆಯಿಂದಲಂಕೃತವಾದ ತೆಪ್ಪವನ್ನವನು ನೋಡಿದನು; ನದಿಯ ಮತ್ತೊಂದು ದಡದಲ್ಲಿ ಫ್ರೆಂಚ್ ಅಂಗರಕ್ಷಕದಳದ ಮುಂದೆ ಶಿಸ್ತಿನ ಗತಿಯಲ್ಲಿ ಸಾಗುತ್ತಿದ್ದ ನೆಪೋಲಿಯನ್ನನನ್ನು ವೀಕ್ಷಿಸಿದನು; ನೀಮೆನ್ ದಡದ ಹೋಟಲಿನಲ್ಲಿ ಸದ್ದಿಲ್ಲದೆ ನೆಪೋಲಿಯನ್ನನಿಗಾಗಿ ಕಾಯುತ್ತ, ಕುಳಿತಿದ್ದ ಚಿಂತಾಕ್ರಾಂತ ಮುಖದ ಚಕ್ರವರ್ತಿ ಅಲೆಕ್ಸಾಂಡರನನ್ನು ನೋಡಿದನು; ಚಕ್ರವರ್ತಿಗಳಿಬ್ಬರೂ ದೋಣಿ

ಹೊಕ್ಕಿದ್ದನ್ನು ಗಮನಿಸಿದನು; ಮೊದಲು ತೆಪ್ಪವನ್ನು ಸೇರಿ, ಅಲೆಕ್ಸಾಂಡರನನ್ನು ಸ್ವಾಗತಿಸುವ ಸಲುವಾಗಿ ಬಹುಬೇಗ ಮುಂದೆ ಚಿಗಿದು, ಅವನಿಗೆ ಹಸ್ತಲಾಘವ ನೀಡಿದ ನೆಪೋಲಿಯನ್ನನನ್ನು ಗುರುತಿಸಿದನು; ಅವರಿಬ್ಬರೂ ಡೇರೆಯೊಳಗೆ ಮರೆಯಾದದ್ದನ್ನು ಕಂಡನು. ಉನ್ನತ ವಲಯಗಳಲ್ಲಿ ಓಡಾಡುತ್ತಿದ್ದ ಬೋರಿಸ್ ತನ್ನ ಸುತ್ತಮುತ್ತ ನಡೆಯುತ್ತಿದ್ದುದನ್ನೆಲ್ಲ ಸೂಕ್ಷ್ಮವಾಗಿ ವೀಕ್ಷಿಸಿ, ನೋಡಿದ್ದನ್ನು ಟಿಪ್ಪಣಿಮಾಡಿಕೊಳ್ಳುವ ಅಭ್ಯಾಸ ಅವನಿಗೆ ರಕ್ತಗತವಾಗಿತ್ತು. ತಿಲ್‌ಸಿತ್ ಸಭೆಯ ಸಮಯದಲ್ಲಿ ನೆಪೋಲಿಯನ್ನನೊಡನೆ ಬಂದಿದ್ದವರ ಹೆಸರುಗಳನ್ನೂ, ಅವರು ಧರಿಸಿದ್ದ ಸಮವಸ್ತ್ರಗಳ ವಿವರಗಳನ್ನೂ ಕೇಳಿ ತಿಳಿದುಕೊಂಡು, ಪ್ರಮುಖ ವ್ಯಕ್ತಿಗಳ ಮಾತುಕತೆಗಳನ್ನು ಸಾವಧಾನವಾಗಿ ಆಲಿಸಿದನು. ಚಕ್ರವರ್ತಿಗಳಿಬ್ಬರೂ ಡೇರೆಯನ್ನು ಹೊಕ್ಕಾಗ ಗಡಿಯಾರ ನೋಡಿಕೊಂಡವನು, ಅಲೆಕ್ಸಾಂಡರ್ ಹೊರಗೆ ಬಂದಾಗ ಅದರ ಕಡೆಗೆ ಮತ್ತೆ ನೋಡುವುದನ್ನು ಮರೆಯಲಿಲ್ಲ. ಒಂದು ಗಂಟೆ ಐವತ್ತು ಮೂರು ನಿಮಿಷಗಳಕಾಲ ಅವರ ಭೇಟಿ ಸಾಗಿತ್ತು. ಚಾರಿತ್ರಿಕ ಪ್ರಾಮುಖ್ಯವಿದ್ದ ಇತರ ಸಂಗತಿಗಳ ಜತೆಗೆ ವೇಳೆಯ ವಿಷಯವನ್ನು ಅದೇ ದಿನ ಸಂಜೆ ಗುರುತು ಹಾಕಿಕೊಂಡನು. ಚಕ್ರವರ್ತಿಯ ಮಿತ ಪರಿವಾರದಲ್ಲಿ ಸೇರಿಕೊಂಡರೆ, ಅವನ ದೃಷ್ಟಿ ತನ್ನ ಮೇಲೆ ಬಿದ್ದು, ಸೇವೆಯಲ್ಲಿ ಯಶಸ್ಸು ದೊರೆಯಬಹುದೆಂದು ಯೋಚಿಸಿದ್ದ ಬೋರಿಸ್, ತಿಲ್‌ಸಿತ್‌ನಲ್ಲಿ ನಡೆದ ಚಕ್ರವರ್ತಿದ್ವಯರ ಸಭೆಯ ಸಮಯದಲ್ಲಿ ಪ್ರವೇಶ ದೊರಕಿಸಿಕೊಂಡಿದ್ದನು. ಅದರಿಂದಾಗಿ ತನ್ನ ಮುಂದಿನ ಸ್ಥಾನಮಾನಗಳು ಖಚಿತವೆಂದು ಅವನು ಬಗೆದಿದ್ದನು. ಅವನು ಎಲ್ಲರ ಗಮನಕ್ಕೆ ಬಂದದ್ದಲ್ಲದೆ, ಎಲ್ಲರ ಜತೆಯಲ್ಲಿ ಒಗ್ಗಿಕೊಂಡಿದ್ದನು, ಎಲ್ಲರಿಗೂ ಬೇಕಾದವನಾಗಿದ್ದನು. ಒಂದೆರಡು ಸಾರಿ ಕಾರ್ಯಭಾರಕ್ಕಾಗಿ ಚಕ್ರವರ್ತಿಯ ಬಳಿ ಹೋಗಬೇಕಾಗಿದ್ದುದರಿಂದ, ಚಕ್ರವರ್ತಿಗೂ ಅವನ ಮುಖದ ಪರಿಚಯವಿತ್ತು. ಮೊದಮೊದಲು ಹೊಸಬನೆಂದು ಕಡೆಗಣಿಸಿದ್ದ ಆಸ್ಥಾನದ ಜನ ಈಚೀಚೆಗೆ ಅವನು ಗೈರುಹಾಜರಾದರೆ ಸಾಕು, ವಿಸ್ಮಯಗೊಳ್ಳುತ್ತಿದ್ದರು.

ಮತ್ತೊಬ್ಬ ಸಹಾಯಾಧಿಕಾರಿ ಪೋಲಿಷ್ ಶ್ರೀಮಂತ ಝಿಲಿನ್‌ಸ್ಕಿಯೊಡನೆ ಬೋರಿಸ್ ತಂಗಿದ್ದನು. ಪ್ಯಾರಿಸ್‌ನಲ್ಲಿ ಬೆಳೆದಿದ್ದ ಆ ಶ್ರೀಮಂತನಿಗೆ ಫ್ರೆಂಚರೆಂದರೆ ಅಪಾರ ಮಮತೆ. ತಿಲ್‌ಸಿತ್ ತಂಗಣೆಯ ಕಾಲದಲ್ಲಿ ಫ್ರೆಂಚ್ ಅಂಗರಕ್ಷಕದಳದ ಮತ್ತು ಕೇಂದ್ರ ಕಾರ್ಯಾಲಯದ ಅಧಿಕಾರಿಗಳು ಪ್ರತಿನಿತ್ಯ ಮಧ್ಯಾಹ್ನ ಮತ್ತು ರಾತ್ರಿ ಅವನ ಮತ್ತು ಬೋರಿಸ್‌ರ ಜತೆಯಲ್ಲಿ ಊಟಮಾಡುತ್ತಿದ್ದರು.

ಜೂನ್ ತಿಂಗಳ ೨೪ ರಂದು ರಾತ್ರಿ ಶ್ರೀಮಂತ ಝಿಲಿನ್‌ಸ್ಕಿ ತನ್ನ ಫ್ರೆಂಚ್ ಗೆಳೆಯರಿಗೆ ಭೋಜನಕೂಟ ಏರ್ಪಡಿಸಿದ್ದನು. ನೆಪೋಲಿಯನ್ನನ ಅಂಗರಕ್ಷಕ ಗೌರವಾನ್ವಿತ ಅತಿಥಿಯಾಗಿದ್ದನು. ಅಂಗರಕ್ಷಕದಳದ ಹಲವು ಫ್ರೆಂಚ್ ಅಧಿಕಾರಿಗಳು ಆ ಭೋಜನ ಕೂಟದಲ್ಲಿ ಪಾಲ್ಗೊಂಡಿದ್ದರು. ಅವರ ಜತೆಯಲ್ಲಿ ನೆಪೋಲಿಯನ್ನನ ಬಾಲ ಪರಿಚಾರಕನೂ ಇದ್ದನು. ಅವನು ಹಿಂದಿನ ಶ್ರೀಮಂತ ಫ್ರೆಂಚ್ ಕುಟುಂಬಕ್ಕೆ ಸೇರಿದವನು. ಅಯೋಗ್ಯ ಉಡುಪಿನಲ್ಲಿದ್ದ ತನ್ನ ಗುರುತು ಯಾರಿಗೂ ಸಿಗಬಾರದೆಂದು ಆ ದಿನ ಕತ್ತಲೆಯಲ್ಲಿ

ರೊಸ್ತೋವ್ ತಿಲ್‌ಸಿತ್ ಪ್ರವೇಶಿಸಿ ಬೋರಿಸ್ ಮತ್ತು ರ್ಶಿಲಿನ್‌ಸ್ಕಿಯರು ತಂಗಿದ್ದ ವಸತಿ ಗೃಹವನ್ನು ಸೇರಿದನು.

ತನ್ನ ಕಡೆಯ ಸೈನಿಕವೃಂದದಂತೆ, ನೆಪೋಲಿಯನ್ ಹಾಗೂ ಫ್ರೆಂಚರ ಬಗ್ಗೆ ರೊಸ್ತೋವ್‌ನ ಭಾವನೆ ಬದಲಾಗಿರಲಿಲ್ಲ. ನಿನ್ನೆ ಶತ್ರುಗಳಾಗಿದ್ದ ಫ್ರೆಂಚರು ತಟಕ್ಕನೆ ಗೆಳೆಯರಾಗಿದ್ದರು. ಕೇಂದ್ರ ಕಾರ್ಯಾಲಯ ಮತ್ತು ಬೋರಿಸ್‌ನ ಮನಸ್ಸು ಭಾವನಾ ಪರಿವರ್ತನೆಗೆ ಸಿದ್ಧವಾಗಿದ್ದುವು. ನೆಪೋಲಿಯನ್ ಮತ್ತು ಫ್ರೆಂಚರ ಬಗ್ಗೆ ಸೈನ್ಯದಲ್ಲಿನ್ನೂ ಕೋಪ ತಾತ್ಸಾರ ಮತ್ತು ಭಯಗಳ ಸಮ್ಮಿಶ್ರಭಾವ ಆವರಿಸಿಕೊಂಡಿತ್ತು. ನೆಪೋಲಿಯನ್ ಏನಾದರೂ ಸೆರೆಸಿಕ್ಕಿದ್ದಾದರೆ, ಅವನನ್ನು ಚಕ್ರವರ್ತಿಯಂತೆ ಉಪಚರಿಸಲಾಗದೆಂದೂ, ಅಪರಾಧಿಯಂತೆ ಕಾಣಬೇಕಾಗುತ್ತದೆಂದೂ ಇತ್ತೀಚೆಗೆ ತಾನೆ ರೊಸ್ತೋವ್ ಪ್ಲಾತೊವ್ನ ತುರುಕ ರಾಹುತ ಪಡೆಯ ಅಧಿಕಾರಿಗಳೊಡನೆ ವಾದಿಸಿದ್ದನು. ಧರ್ಮ ಸಮ್ಮತ ಸಾರ್ವಭೌಮ ಮತ್ತು ಅಪರಾಧಿ ನೆಪೋಲಿಯನ್ನರ ನಡುವೆ ಶಾಂತಿ ಸಂಧಾನ ಅಸಾಧ್ಯವೆಂದು ನಿನ್ನೆತಾನೆ ದಾರಿಯಲ್ಲಡ್ಡಲಾದ ಕರ್ನಲ್ ದರ್ಜೆಯ ಫ್ರೆಂಚ್ ಗಾಯಾಳಿನ ಜತೆಯಲ್ಲಿ ರೊಸ್ತೋವ್ ರೋಷಾವೇಶದಿಂದ ತರ್ಕಿಸಿದ್ದನು. ಆದ್ದರಿಂದ ಬೋರಿಸ್‌ನ ವಸತಿಯಲ್ಲಿದ್ದ ಫ್ರೆಂಚ್ ಅಧಿಕಾರಿಗಳನ್ನು ಕಂಡು ರೊಸ್ತೋವ್‌ಗೆ ಖೇದ ವಾಯಿತು. ಗಡಿಪ್ರದೇಶದಲ್ಲಿದ್ದಾಗ ಫ್ರೆಂಚ್ ಅಧಿಕಾರಿಗಳ ಸಮವಸ್ತ್ರವನ್ನು ನೋಡಿ ದಾಗಲೆಲ್ಲ ಅವನ ರಕ್ತಕುದಿಯುತ್ತಿತ್ತು. ಬಾಗಿಲಲ್ಲಿ ತೂರಿಸಿದ ಫ್ರೆಂಚ್ ಅಧಿಕಾರಿಯ ತಲೆಯನ್ನು ನೋಡಿದ ಕೂಡಲೇ ಶತ್ರುವನ್ನು ಕಂಡಾಗಲೆಲ್ಲ ಅವನನುಭವಿಸುತ್ತಿದ್ದ ಕಲಹಸರವೈರ ಭಾವನೆ ಹಠಾತ್ತನೆ ಅವನ ಮನಸ್ಸನ್ನೆಲ್ಲ ಆಕ್ರಮಿಸಿಕೊಂಡಿತು. ಅವನು ಹೊಸ್ತಿಲಲ್ಲಿಯೇ ನಿಂತು, ದ್ರುಬೆತ್‌ಸ್ಕಾಯ್ ಒಳಗಿದ್ದಾರೆಯೇ ಎಂದು ರಷ್ಯನ್ ಭಾಷೆಯಲ್ಲಿ ವಿಚಾರಿಸಿದನು. ಮುಂಗೋಣೆಯಿಂದ ಬಂದ ವಿಚಿತ್ರ ಧ್ವನಿಯನ್ನು ಕೇಳಿಸಿ ಕೊಂಡ ಬೋರಿಸ್ ಅವನನ್ನು ನೋಡುವ ಸಲುವಾಗಿ ಹೊರಗೆ ಬಂದನು. ರೊಸ್ತೋವ್‌ನನ್ನು ಗುರುತಿಸಿದ ಪ್ರಥಮದಲ್ಲಿ ಒಂದು ಕ್ಷಣ ಅವನ ಮುಖದ ಮೇಲೆ ಜಿಗುಪ್ಸೆ ಮೊಗದೋರಿತು.

'ಓಹೋ, ನೀವೊ? ನಿಮ್ಮನ್ನು ನೋಡಿದ್ದು ತುಂಬ ಸಂತೋಷ' ಎಂದವನು ಮುಗುಳು ನಗೆಯನ್ನು ಸೂಸುತ್ತ ಅವನೆಡೆಗೆ ಬಂದನು. ಆದರೆ ಮೊದಲಸಲ ಅವನ ಮುಖದಲ್ಲಿ ಸುಳಿದ ಭಾವನೆ ರೊಸ್ತೋವ್ ಗಮನಕ್ಕೆ ಬಾರದಿರಲಿಲ್ಲ.

'ನಾನೀಗ ಬಂದದ್ದು ಸರಿಯಲ್ಲವೆಂದು ತೋರುತ್ತದೆ. ಈಗ ಬರಬಾರದಿತ್ತು. ಆದರೆ ನನಗೊಂದು ಕೆಲಸವಿದೆ' ಎಂದವನು ಬೇಸರದಿಂದ ನುಡಿದನು.

'ಹಾಗೇನೂ ಇಲ್ಲ. ನೀವು ದಳ ಬಿಟ್ಟು ಹೇಗೆ ಬಂದಿರೆಂಬುದೇ ಸೋಜಿಗದ ವಿಷಯ ವಾಗಿದೆ. ಒಂದು ನಿಮಿಷದಲ್ಲಿ ಬಂದುಬಿಡುತ್ತೇನೆ' ಎಂದವನು ಯಾರೋ ಕರೆಯಲಾಗಿ ಉತ್ತರಿಸಿದನು.

'ಹೇಳದೆ ಕೇಳದೆ ನಾನು ಬರಬಾರದಿತ್ತು' ಎಂದು ರೊಸ್ತೋವ್ ಪುನರುಕ್ತಿಸಿದನು.

ಬೋರಿಸ್‌ನ ಮುಖದಿಂದ ಮೊದಲ ಬೇಸರ ಮಾಯವಾಗಿತ್ತು; ತುಸು ಆರಯ್ದು, ಹೇಗೆ ವರ್ತಿಸಬೇಕೆಂಬುದನ್ನು ಬೇಗ ನಿರ್ಧರಿಸಿಕೊಂಡು, ರೊಸ್ತೋವ್‌ನ ಎರಡು

ಕೈಗಳನ್ನು ಹಿಡಿದುಕೊಂಡು, ಪಕ್ಕದ ಕೋಣೆಗೆ ಕರೆದೊಯ್ದನು. ಸಂಪ್ರದಾಯಬದ್ಧತೆಯ ನೀಲಿ ಕನ್ನಡಕಗಳಿಂದ ಮರೆಮಾಡಿದಂತೆ, ಗಂಭೀರವಾಗಿಯೂ ಶಿಷ್ಟಲವಾಗಿಯೂ ರೊಸ್ತೋವ್‌ನ ಮುಖವನ್ನೆ ನೋಡುತ್ತಿದ್ದ ಅವನ ಕಣ್ಣುಗಳನ್ನು ಯಾವುದೋ ವಸ್ತು ಆಚ್ಛಾದಿಸಿಕೊಂಡಂತೆ ಕಾಣುತ್ತಿತ್ತು. ಆ ಸಮಯದಲ್ಲಿ ರೊಸ್ತೋವ್‌ನ ಕಣ್ಣಿಗೆ ಕಂಡದ್ದು ಹಾಗೆ.

'ಬನ್ನಿ, ಒಳಗೆ ಬನ್ನಿ. ನೀವು ಸರಿಯಾದ ವೇಳೆಯಲ್ಲಿ ಬರಲಿಲ್ಲ' ಎಂದು ಬೋರಿಸ್ ನುಡಿಯುತ್ತ ಅವನನ್ನು ಭೋಜನಶಾಲಿಗೆ ಕರೆದೊಯ್ದು, ಅತಿಥಿಗಳಿಗೆ ಪರಿಚಯಿಸಿ ಕೊಟ್ಟನು. ಅವನು ಅಯೋಧ ಪ್ರಜೆಯಲ್ಲವೆಂದೂ, ಅವನೊಬ್ಬ ಅಶ್ವಾರೋಹಿದಳದ ಅಧಿಕಾರಿಯೆಂದೂ, ತನ್ನ ಹಳೆಯ ಗೆಳೆಯನೆಂದೂ ಬೋರಿಸ್ ವಿವರಿಸಿದನು. 'ಇವರೇ ಶ್ರೀಮಂತ ಝಿಲಿನ್‌ಸ್ಕಿಯವರು, ಇವರು ಶ್ರೀಮಂತ ಎನ್. ಎನ್. ಇವರು ಕಫ್ತಾನ್ ಎಸ್. ಎಸ್. ಎಂದು ಮುಂತಾಗಿ ಅವನು ಒಬ್ಬೊಬ್ಬರನ್ನೇ ರೊಸ್ತೋವ್‌ಗೆ ಪರಿಚಯಿಸಿದನು. ರೊಸ್ತೋವ್ ಹುಬ್ಬು ಗಂಟಿಕ್ಕಿಕೊಂಡೇ ಮನಸ್ಸಿಲ್ಲದ ಮನಸ್ಸಿನಿಂದ ಫ್ರೆಂಚರಿಗೆ ನಮಸ್ಕರಿಸಿ, ತೆಪ್ಪಗಾದನು.

ಈ ಹೊಸ ರಷ್ಯನ್ ಯುವಕನನ್ನು ತನ್ನ ವೃತ್ತದಲ್ಲಿ ಸೇರಿಸಿಕೊಳ್ಳಲು ಝಿಲಿನ್‌ಸ್ಕಿಗೆ ಮನಸ್ಸಿರಲಿಲ್ಲ; ಅವನು ರೊಸ್ತೋವ್‌ನನ್ನು ಮಾತಾಡಿಸಲೂ ಇಲ್ಲ. ಆಗಂತುಕನಿಂದುಂಟಾದ ಕಿರಿಕಿರಿಯನ್ನು ಗಮನಿಸಿದಂತೆ ಬೋರಿಸ್ ತೋರಿಸಿಕೊಳ್ಳಲಿಲ್ಲ. ರೊಸ್ತೋವ್‌ನನ್ನು ಭೇಟಿಮಾಡಿದ್ದಾಗಿನ ಅದೇ ಆಚ್ಛಾದಿತ ದೃಷ್ಟಿ ಮತ್ತು ಸಮಾಧಾನ ಭಾವಗಳಿಂದ ಸಂವಾದವನ್ನು ಚುರುಕುಗೊಳಿಸಲು ಅವನು ಪ್ರಯತ್ನಿಸಿದನು. ತನ್ನ ನಾಡಿನ ಸಂಸ್ಕೃತಿಗೆ ಸಹಜವಾದ ಮರ್ಯಾದೆಯಿಂದ ಫ್ರೆಂಚರಲ್ಲೊಬ್ಬ ಆಗ್ರಹಪೂರ್ವಕವಾದ ಮೌನದಿಂದ ಬಿಗಿತುಕೊಂಡಿದ್ದ ರೊಸ್ತೋವ್‌ನನ್ನು ಮಾತಾಡಿಸಿ, ಪ್ರಾಯಶಃ ಅವನು ಚಕ್ರವರ್ತಿಯನ್ನು ನೋಡುವ ಸಲುವಾಗಿ ತಿಲ್‌ಸಿತ್‌ಗೆ ಬಂದಿರಬೇಕಲ್ಲವೆ ಎಂದು ನುಡಿದನು.

'ಇಲ್ಲ. ಕೆಲಸದ ಮೇಲೆ ಬಂದಿದ್ದೇನೆ' ಎಂದು ರೊಸ್ತೋವ್ ಚುಟುಕದಲ್ಲಿ ಉತ್ತರಿಸಿದನು.

ಬೋರಿಸ್‌ನ ಮುಖದ ಮೇಲೆ ಅತೃಪ್ತಿಯ ಮನೋಭಾವವನ್ನು ಗಮನಿಸಿದ ಕ್ಷಣದಿಂದ ರೊಸ್ತೋವ್‌ನ ಮನಸ್ಸು ಕೆಟ್ಟುಹೋಗಿತ್ತು. ಮನಸ್ಸು ಕೆಟ್ಟಾಗ ಎಲ್ಲರಿಗೂ ಆಗುವಂತೆ, ತನ್ನ ಮುಂದಿದ್ದ ಪ್ರತಿಯೊಬ್ಬರೂ ತನ್ನನ್ನು ಜಿಗುಪ್ಸೆಯಿಂದ ಕಾಣುತ್ತಿದ್ದಂತೆ, ತಾನವರ ದಾರಿಯಲ್ಲಿ ಅಡ್ಡ ನಿಂತಿದ್ದಂತೆ ಅವನಿಗೆ ಭಾಸವಾಗುತ್ತಿತ್ತು. ವಾಸ್ತವವಾಗಿ ಅವನು ಅವರ ದಾರಿಗಡ್ಡಲಾಗಿದ್ದನು. ಏಕೆಂದರೆ ಅವರ ಒಟ್ಟಿನ ಮಾತುಕತೆಗಳಲ್ಲಿ ತಾನೊಬ್ಬ ಮಾತ್ರ ಭಾಗಿಯಾಗದೆ ಗುಮ್ಮಗುಸಕನಂತಿದ್ದನು. 'ಅವನೇತಕ್ಕಿಲ್ಲಿ ಕುಳಿತಿದ್ದಾನೆ?' ಎಂಬುದಾಗಿ ಅತಿಥಿಗಳ ದೃಷ್ಟಿ ನುಡಿಯುತ್ತಿದ್ದಂತೆ ಅವನಿಗೆ ತೋರಿ, ಮೇಲೆದ್ದು, ಬೋರಿಸ್‌ನ ಬಳಿಗೆ ಹೋದನು.

'ಅಂತು ನಾನು ನಿಮಗೆ ಅಡ್ಡಿಯಾಗಿದ್ದೇನೆ. ನನ್ನ ಕೆಲಸದ ಬಗ್ಗೆ ಮಾತು ಮುಗಿಸಿ ಹೋಗುತ್ತೇನೆ, ಸ್ವಲ್ಪ ಬನ್ನಿ' ಎಂದವನು ಮೆಲ್ಲಗೆ ಅವನ ಕಿವಿಯಲ್ಲಿ ಉಸುರಿದನು.

'ಅದು ಸಾಧ್ಯವಿಲ್ಲ. ನಿಮಗೆ ಆಯಾಸವಾಗಿದ್ದರೆ, ಬನ್ನಿ, ನನ್ನ ಕೊಟಡಿಯಲ್ಲೊರಗಿಕೊಂಡು, ವಿಶ್ರಾಂತಿ ತೆಗೆದುಕೊಳ್ಳಿ' ಎಂದು ಬೋರಿಸ್ ನುಡಿದನು.

'ಆಗಲಿ, ನಿಜಕ್ಕೂ ಆಗಲಿ.'

ಬೋರಿಸ್‌ನ ಸಣ್ಣ ಮಲಗುಕೋಣೆಗೆ ಅವರಿಬ್ಬರೂ ಹೋದರು. ರೊಸ್ತೋವ್ ಕುಳಿತುಕೊಳ್ಳದೆಯೆ, ಸಿಡುಕಿನಿಂದಲೆ (ಬೋರಿಸ್‌ನೇ ಒಂದು ದೃಷ್ಟಿಯಿಂದ ಕಾರಣವೆಂಬಂತೆ) ಡೆನಿಸೋವ್‌ನ ಪ್ರಕರಣವನ್ನು ಕೂಡಲೆ ವಿವರಿಸತೊಡಗಿದನು. ಅವನ ಸೇನಾನಿಯ ಮೂಲಕ ಡೆನಿಸೋವ್‌ನ ಪರವಾಗಿ ಮಧ್ಯಸ್ಥಿಕೆವಹಿಸಿ, ಡೆನಿಸೋವ್‌ನ ಮನವಿಯನ್ನು ಚಕ್ರವರ್ತಿಗೆ ಮುಟ್ಟಿಸಲು ಸಾಧ್ಯವೆ ಎಂದು ರೊಸ್ತೋವ್ ವಿನಂತಿಸಿಕೊಂಡನು. ತಾವಿಬ್ಬರೂ ಏಕಾಂತದಲ್ಲಿದ್ದಾಗ, ಅವಿಕಾರ ಭಾವದಿಂದ ಬೋರಿಸ್‌ನ ಮುಖವನ್ನು ನೋಡಲು ಸಾಧ್ಯವಿಲ್ಲವೆಂಬುದನ್ನವನು ಮೊಟ್ಟಮೊದಲಿಗೆ ಕಂಡುಕೊಂಡನು. ಒಂದು ಕಾಲಿನ ಮೇಲೆ ಮತ್ತೊಂದು ಕಾಲನ್ನು ಅಡ್ಡಲಾಗಿ ಕೂಡಿಸಿಕೊಂಡು, ಎಡ ಅಂಗೈಯನ್ನು ಬಲಗೈಯ ಸಪುರ ಬೆರಳುಗಳಿಂದ ತಟ್ಟುತ್ತ, ಕೆಳಗಿನ ನೌಕರನಿಂದ ವರದಿಯೊಪ್ಪಿಸಿಕೊಳ್ಳುವ ಸೇನಾನಿಯಂತೆ, ಒಮ್ಮೆ ಪಕ್ಕಕ್ಕೆ ನೋಡುತ್ತ, ಮತ್ತೊಮ್ಮೆ ಅದೇ ಆಚ್ಛಾದಿತ ದೃಷ್ಟಿಯಿಂದ ನೇರವಾಗಿ ರೊಸ್ತೋವ್‌ನ ಕಣ್ಣುಗಳನ್ನು ದಿಟ್ಟಿಸುತ್ತ, ಬೋರಿಸ್ ರೊಸ್ತೋವ್‌ನ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದನು. ಬೋರಿಸ್ ತನ್ನ ಕಡೆ ನೋಡಿದಾಗಲೆಲ್ಲ ರೊಸ್ತೋವ್‌ಗೆ ಕಷ್ಟವಾಗಿ, ಅಧೋನೇತ್ರನಾಗುತ್ತಿದ್ದನು.

'ಅಂಥ ಪ್ರಕರಣಗಳನ್ನು ನಾನೆಷ್ಟೋ ಕೇಳಿದ್ದೇನೆ. ಅಂಥವುಗಳ ಬಗ್ಗೆ ಚಕ್ರವರ್ತಿ ಕಠೋರವಾಗಿರುತ್ತಾರೆ. ಈ ವಿಷಯವನ್ನು ಚಕ್ರವರ್ತಿಗಳ ಗಮನಕ್ಕೆ ತರದೆ, ದಳನಾಯಕನಿಗೆ ಅರ್ಜಿ ಸಲ್ಲಿಸುವುದೆ ಮೇಲೆಂದು ತೋರುತ್ತದೆ....ಆದರೆ ಸಾಧಾರಣವಾಗಿ ನನಗನ್ನಿಸುತ್ತದೆ....'

'ಹಾಗಾದರೆ ಉಪಕಾರ ಮಾಡುವ ಇಷ್ಟ ನಿಮಗಿಲ್ಲವಷ್ಟೆ? ಹಾಗೆಂದು ಸ್ಪಷ್ಟವಾಗಿ ಹೇಳಿಬಿಡಿ' ಎಂದು ರೊಸ್ತೋವ್ ಬೋರಿಸ್‌ನ ಕಡೆಗೆ ಕಣ್ಣು ಹಾಯಿಸದೆಯೆ ಗಟ್ಟಿಯಾಗಿ ಕೂಗಿಕೊಂಡನು.

ಬೋರಿಸ್ ನಕ್ಕನು. 'ಅದಕ್ಕೆ ಪ್ರತಿಯಾಗಿ, ನಾನೇನು ಮಾಡಬಲ್ಲೆನೊ, ಅಷ್ಟನ್ನು ಮಾಡುತ್ತೇನೆ. ನಾನು ಯೋಚಿಸಿದ್ದೇನೆಂದರೆ....'

ಅಷ್ಟರಲ್ಲಿ ಝಿಲಿನ್‌ಸ್ಕಿ ಬೋರಿಸ್‌ನನ್ನು ಕರೆದ ಸದ್ದು ಕೇಳಿಸಿತು.

'ಸರಿ ಹಾಗಾದರೆ, ನೀವು ಹೋಗಿ, ಹೋಗಿ, ಹೊರಡಿ....' ಎಂದು ರೊಸ್ತೋವ್ ನುಡಿದನು. ಊಟ ಬೇಕಿಲ್ಲವೆಂದು ಹೇಳಿ, ಕೋಣೆಯಲ್ಲಿ ತಾನೊಬ್ಬನೇ ಉಳಿದನು. ಬಹು ಹೊತ್ತು ಶತಪಥ ತಿರುಗುತ್ತಿದ್ದು, ಪಕ್ಕದ ಕೋಣೆಯಲ್ಲಿ ನಡೆಯುತ್ತಿದ್ದ ಲಘು ಸಂಭಾಷಣೆಯನ್ನವನು ಕೇಳಿಸಿಕೊಳ್ಳುತ್ತಿದ್ದನು.

ಅಧ್ಯಾಯ ೨೦

ರೊಸ್ತೋವ್ ತಿಲ್‌ಸಿತ್‌ಗೆ ಬಂದ ದಿನ ಡೆನಿಸೋವ್‌ನ ಪರವಾಗಿ ಮನವಿ ಸಲ್ಲಿಸಲು ಅತ್ಯಂತ ಅನನುಕೂಲವಾಗಿತ್ತು. ತಾನು ಮಫ್ತಿಯಲ್ಲಿದ್ದುದರಿಂದ, ಅನುಮತಿಯಿಲ್ಲದೆ

ತಿಲ್‌ಸಿತ್‌ಗೆ ಬಂದಿದ್ದುದರಿಂದ ಅವನು ಚಕ್ರವರ್ತಿಯ ಹಾಜರಿಯಲ್ಲಿದ್ದ ಸೇನಾನಿಯನ್ನು ತಾನೇ ಭೇಟಿ ಮಾಡುವಂತಿರಲಿಲ್ಲ. ಆ ದಿನ ಜೂನ್ ೨೭ರಂದು ಪೀಠಿಕಾ ರೂಪದ ಶಾಂತಿಪತ್ರಗಳಿಗೆ ರುಜು ಹಾಕಬೇಕಿತ್ತು. ಚಕ್ರವರ್ತಿಗಳು ಬಿರುದು ಬಾವಲಿಗಳನ್ನು ವಿನಿಮಯಿಸಿಕೊಂಡರು: ದಿ ಕ್ರಾಸ್ ಆಫ್ ದಿ ಲೀಜನ್ ಆಫ್ ಅನರ್ ಎಂಬ ಪ್ರಶಸ್ತಿಯನ್ನು ಅಲೆಕ್ಸಾಂಡರನೂ, ದಿ ಆರ್ಡರ್ ಆಫ್ ಸೆಯಿಂಟ್ ಆಂಡ್ರೂ ಆಫ್ ದಿ ಫರ್ಸ್ಟ್ ಡಿಗ್ರಿ ಎಂಬ ಬಿರುದನ್ನು ನೆಪೋಲಿಯನ್ನನೂ ಸ್ವೀಕರಿಸಿದರು. ಪ್ರಿಯೊ ಬ್ರಝೋನ್‌ಸ್ಕ್ ದಳದ ಫ್ರೆಂಚ್ ಕಾವಲು ಪಡೆ ಆ ದಿನ ಸಂಜೆ ಭೋಜನ ಕೂಟವನ್ನು ಏರ್ಪಡಿಸಿತ್ತು. ಚಕ್ರವರ್ತಿಗಳು ಆ ಔತಣ ಕೂಟದಲ್ಲಿ ಭಾಗವಹಿಸುತ್ತಿದ್ದರು.

ಬೋರಿಸ್‌ನ ಬಗ್ಗೆ ರೊಸ್ತೋವ್‌ನಿಗೆ ಎಷ್ಟು ಅಸಮಾಧಾನವಾಗಿತ್ತೆಂದರೆ, ಭೋಜನಾನಂತರ ಬೋರಿಸ್ ಹಿಂದಿರುಗಿ ಅವನನ್ನು ಮಾತಾಡಿಸಿದಾಗ, ಅವನು ಗಾಢ ನಿದ್ರೆಯಲ್ಲಿದ್ದಂತೆ ಸೋಗುಹಾಕಿದನು. ಮಾರನೆಯ ಬೆಳಗ್ಗೆ ಬೋರಿಸ್‌ನಿಗೆ ಹೇಳದೆ ಕೇಳದೆ ಅವನು ಹೊರಟುಹೋದನು. ಗುಂಡನೆಯ ಟೋಪಿ ಧರಿಸಿ, ಅಯೋಧ ವಸ್ತ್ರದಲ್ಲಿದ್ದ ಅವನು ಪೇಟೆಬೀದಿಯಲ್ಲೆಲ್ಲ ಸುತ್ತಾಡಿದನು. ಫ್ರೆಂಚರ ಮತ್ತು ಅವರ ಸಮವಸ್ತ್ರಗಳ ಕಡೆಗೆ ಚಿರುಗಣ್ಣು ಹಾಯಿಸಿದನು. ಫ್ರೆಂಚ್ ಮತ್ತು ರಷ್ಯನ್ ಚಕ್ರವರ್ತಿಗಳು ತಂಗಿದ್ದ ಮನೆಗಳ ಮುಂದೆ ನಿಂತುಕೊಂಡು, ವಿಸ್ಮಯದೃಷ್ಟಿ ಹರಿಸಿದನು. ಒಂದು ಚೌಕದಲ್ಲಿ ಭೋಜನ ಕೂಟಕ್ಕೆಂದು ನಡೆಯುತ್ತಿದ್ದ ವ್ಯವಸ್ಥೆಯನ್ನೂ, ಜೋಡಣೆಗೊಳ್ಳುತ್ತಿದ್ದ ಮೇಜುಗಳನ್ನೂ ಈಕ್ಷಿಸಿದನು; ಬೀದಿಗಳಲ್ಲಿ ಕಮಾನಿನಂತೆ ಅಲಂಕೃತವಾಗಿದ್ದ ರಷ್ಯನ್ ಮತ್ತು ಫ್ರೆಂಚ್ ಬಾವುಟಗಳನ್ನೂ ಎ ಮತ್ತು ಎನ್ ಅಕ್ಷರಗಳ ದೊಡ್ಡ ಫಲಕಗಳನ್ನೂ ಅವನು ಪರಿವೀಕ್ಷಿಸಿದನು. ಮನೆಗಳ ಬಾಗಿಲು ಕಿಟಕಿಗಳನ್ನು ಬಾವುಟ ತೋರಣಗಳಿಂದ ಸಿಂಗರಿಸಲಾಗಿತ್ತು.

'ನನಗೆ ಸಹಾಯ ಮಾಡಲು ಬೋರಿಸ್‌ನಿಗಿಷ್ಟವಿಲ್ಲ; ಅವನನ್ನು ಅಂಗಲಾಚಿ ಬೇಡಿಕೊಳ್ಳುವುದೂ ಇಲ್ಲ. ಅದೆಲ್ಲ ಮುಗಿದಿದೆ' ಎಂದು ನಿಕೊಲಾಸ್ ಮನದಲ್ಲೆಣಿಸಿಕೊಂಡನು. 'ನಮ್ಮಿಬ್ಬರ ನಡುವೆ ಎಲ್ಲ ಮುಗಿದಂತೆಯೇ ಲೆಕ್ಕ. ಆದರೆ ಶಕ್ತಿಮೀರಿ ಡೆನಿಸೋವ್‌ನಿಗೆ ಸಹಾಯ ಮಾಡದೆ, ಚಕ್ರವರ್ತಿಗೆ ಮನವಿಯನ್ನು ಮುಟ್ಟಿಸದೆ, ನಾನಿಷ್ಟಕ್ಕೆ ತೆಪ್ಪಗೆ ಕೂರಲಾರೆ. ಚಕ್ರವರ್ತಿ!....ಅವರಿಲ್ಲಿಯೇ ಇದ್ದಾರೆ!' ಎಂದು ರೊಸ್ತೋವ್ ಯೋಚಿಸುತ್ತಿದ್ದಂತೆ, ತನಗರಿವಿಲ್ಲದೆಯೇ ಅಲೆಕ್ಸಾಂಡರನ ತಂಗುದಾಣವನ್ನು ಎಡಹಿದ್ದನು.

ಸಜ್ಜುಗೊಂಡಿದ್ದ ಕುದುರೆಗಳು ಮನೆಯ ಮುಂದೆ ನಿಂತಿದ್ದುವು. ಚಕ್ರವರ್ತಿ ಹೊರಗೆ ಬರುವುದನ್ನೆ ಪರಿವಾರದ ಜನ ಕಾಯುತ್ತಿದ್ದರು.

'ಯಾವ ಕ್ಷಣದಲ್ಲಾದರೂ ನಾನವರನ್ನು ನೋಡಬಹುದು' ಎಂದು ರೊಸ್ತೋವ್ ಯೋಚಿಸಿದನು. 'ನಾನವರನ್ನು ನೇರವಾಗಿ ಕಂಡು, ಅವರ ಕೈಗೆ ಪತ್ರವನ್ನು ಕೊಟ್ಟು, ವಿವರಿಸಬಹುದಾದರೆ....ಅಯೋಧ ಉಡುಪಿಗಾಗಿ ನನ್ನನ್ನು ಇಲ್ಲಿಯ ಜನ ಬಂಧಿಸಲು ಸಾಧ್ಯವೆ? ಖಂಡಿತ ಸಾಧ್ಯವಿಲ್ಲ! ಯಾರ ಪಕ್ಷದಲ್ಲಿ ನ್ಯಾಯವಿದೆಯೆಂಬುದು ಅವರಿಗರ್ಥ

ವಾಗುತ್ತದೆ. ಅವರಿಗಿಂತ ನ್ಯಾಯಪರರಾದ ಹಾಗೂ ಅವರಿಗಿಂತ ಘನವಾದ ವ್ಯಕ್ತಿ ಯಾರಿದ್ದಾರೆ? ನಾನಿಲ್ಲಿರುವ ಕಾರಣಕ್ಕಾಗಿ ಬಂಧಿಸುವುದಾದರೆ ನನಗಾಗುವ ನಷ್ಟವೇನು?' ರಾಜವೇಶ್ಮವನ್ನು ಪ್ರವೇಶಿಸುತ್ತಿದ್ದ ಅಧಿಕಾರಿಯ ಕಡೆಗೆ ನೋಡುತ್ತ 'ಎಷ್ಟು ಹೇಳಿದರೂ ಜನ ಒಳಗೆ ಹೋಗುತ್ತಿದ್ದಾರೆ....ಇದೆಲ್ಲ ಅವಿವೇಕ! ನಾನು ಒಳಗೆ ಹೋಗುತ್ತೇನೆ. ನಾನೇ ಖುದ್ದಾಗಿ ಚಕ್ರವರ್ತಿಯ ಕೈಗೆ ಕಾಗದ ಕೊಡು ತ್ತೇನೆ. ದ್ರುಬೆತ್‌ಸ್ಕಾಯ್ ನನ್ನನ್ನು ಹೊರಗಟ್ಟಿದರೆ ಏನಾಗುತ್ತದೆ, ನೋಡ್ತೀನಿ' ಎಂದವನು ತನಗೆಯೇ ಅರಿವಿಲ್ಲದಂತೆ ಕೃತಸಂಕಲ್ಪನಾದನು. ತನ್ನ ಜೇಬಿನಲ್ಲಿದ್ದ ಕಾಗದವನ್ನು ಮುಟ್ಟಿ ನೋಡಿಕೊಂಡು, ಅವನು ನೇರವಾಗಿ ಮನೆಯೊಳಗೆ ಪ್ರವೇಶಿ ಸಿದನು.

'ಇಲ್ಲ, ಆಸ್ಟರ್‌ಲಿಜ್ ತರುವಾಯ ದೊರೆತ ಅವಕಾಶವನ್ನು ಕಳೆದುಕೊಂಡಂತೆ, ಈಗ ಕಳೆದುಕೊಳ್ಳಲಾರೆ' ಎಂದವನು ಮತ್ತೆ ನಿರ್ಧರಿಸಿಕೊಂಡನು. ಹಾಗೆ ನಿರ್ಧಾರಕ್ಕೆ ಬರುತ್ತಿರುವಾಗಲೆ ರಕ್ತ ತನ್ನ ಹೃದಯಕ್ಕೆ ನುಗ್ಗುತ್ತಿದ್ದುದು ಗೊತ್ತಾಯಿತು. ಇನ್ನೇನು ಚಕ್ರವರ್ತಿಯನ್ನು ನೋಡಿಬಿಡುತ್ತೇನೆಂದು ಅವನು ಕ್ಷಣಕ್ಷಣವೂ ನಿರೀಕ್ಷೆಯ ಮೊನೆ ಯಲ್ಲಿದ್ದನು. 'ಅವರ ಕಾಲಿನ ಮೇಲೆ ಬೀಳುತ್ತೇನೆ; ಪ್ರಾರ್ಥಿಸಿಕೊಳ್ಳುತ್ತೇನೆ. ಅವರು ನನ್ನನ್ನು ಹಿಡಿದು ಮೇಲೆತ್ತುತ್ತಾರೆ. ಅಷ್ಟೇ ಅಲ್ಲ, ನನಗೆ ಧನ್ಯವಾದ ಹೇಳುತ್ತಾರೆ. "ಒಳ್ಳೆಯದನ್ನು ಮಾಡಲು ನನಗೆ ಸಂತೋಷವಾಗುತ್ತದೆ; ಆದರೆ ಅನ್ಯಾಯವನ್ನು ಸರಿಪಡಿಸುವುದಕ್ಕಿಂತ ಹೆಚ್ಚಿನ ಆನಂದವಿಲ್ಲ"' ಎಂದು ರೊಸ್ತೋವ್ ಚಕ್ರವರ್ತಿಯೇ ಮಾತಾಡುತ್ತಿದ್ದಂತೆ ಊಹಿಸಿಕೊಂಡನು. ತನ್ನ ಕಡೆಯೆ ಕುತೂಹಲ ದೃಷ್ಟಿಯಿಂದ ನೋಡುತ್ತಿದ್ದ ಜನರನ್ನು ದಾಟಿ, ಅವನು ರಾಜವೇಶ್ಮದ ಮುಖಮಂಟಪವನ್ನು ಪ್ರವೇಶಿ ಸಿದನು.

ಅಗಲವಾದ ಸೋಪಾನ ಶ್ರೇಣಿ ದ್ವಾರಪ್ರದೇಶದಿಂದಲೇ ನೇರವಾಗಿ ಮಹಡಿಯ ಕಡೆಗೆ ಹರಿದಿತ್ತು. ಅವನ ಬಲಗಡೆಯ ಬಾಗಿಲು ಮುಚ್ಚಿತ್ತು. ಆ ಸೋಪಾನ ಶ್ರೇಣಿಯ ಕೆಳಗೆ ಕೆಳಗಣಹಂತಕ್ಕೆ ಹೋಗುವ ಬಾಗಿಲಿತ್ತು.

'ಯಾರು ಬೇಕು?' ಎಂದು ಯಾರೋ ಪ್ರಶ್ನಿಸಿದರು.

'ಮಹಾಪ್ರಭುಗಳಿಗೊಂದು ಪತ್ರವನ್ನು, ಅಲ್ಲ ಮನವಿಯನ್ನು ಸಲ್ಲಿಸಬೇಕಾಗಿದೆ' ಎಂದು ನಿಕೊಲಾಸ್ ಕಂಪಿತ ಸ್ವರದಲ್ಲಿ ನುಡಿದನು.

'ಮನವಿಯೆ? ಈ ಕಡೆ, ಕೆಲಸದ ಮೇಲೆ ಹಾಜರಿರುವ ಅಧಿಕಾರಿಯ ಬಳಿ ಹೋಗಿ (ಕೆಳಗಣ ಹಂತಕ್ಕೆ ಹೋಗುತ್ತಿದ್ದ ಬಾಗಿಲನ್ನವನು ತೋರಿಸಿದನು.) ಆದರೆ ಅದನ್ನವರು ಸ್ವೀಕರಿಸಲಾರರು.'

ಆ ನಿರ್ಲಕ್ಷ್ಯದ ಧ್ವನಿಯನ್ನು ಕೇಳಿದ ರೊಸ್ತೋವ್ ತಾನೆಸಗುತ್ತಿದ್ದ ಕೃತ್ಯವನ್ನು ನೆನೆದು ಜರ್ಝರಿತನಾದನು. ಯಾವ ಕ್ಷಣದಲ್ಲಾದರೂ ಚಕ್ರವರ್ತಿಯನ್ನು ನೋಡ ಬಹುದೆಂಬ ಯೋಚನೆ ಮನಮೋಹಕವಾಗಿದ್ದಂತೆ ಭಯಂಕಾರಕವಾಗಿಯೂ ಇತ್ತು. ಆ ಭಯದಿಂದ ಓಡಿಹೋಗಲು ಅಣಿಯಾಗುತ್ತಿರುವಷ್ಟರಲ್ಲಿ ಅವನನ್ನು ಪ್ರಶ್ನಿಸಿದ್ದ ಅಧಿಕಾರಿಯೆ ಕದ ತೆರೆದನು. ರೊಸ್ತೋವ್ ಒಳಗೆ ಪ್ರವೇಶಿಸಿದನು.

ಬಿಳಿಯ ಇಜಾರವನ್ನೂ ಎತ್ತರದ ಬೂಟುಗಳನ್ನೂ ಧರಿಸಿದ್ದ ಗಟ್ಟಿಮುಟ್ಟಾದ, ಆದರೆ ತುಸು ಕುಳ್ಳಗಿನ, ಸುಮಾರು ಮೂವತ್ತು ವರ್ಷದ ಯುವಕ ಕೋಣೆಯಲ್ಲಿ ನಿಂತಿದ್ದನು. ನಯವಾದ ಬಿಳಿಯ ನಾರಿನಿಂದ ಅಂದರೆ ಕೇಂಬ್ರಿಕ್‌ನಿಂದ ತಯಾರಿಸಿದ ಷರಟನ್ನು ಅದೆ ತಾನೆ ತೊಟ್ಟುಕೊಂಡಂತೆ ಕಾಣುತ್ತಿತ್ತು. ಅವನ ಸೇವಕ ಅಂದವಾದ ರೇಷ್ಮೆಯಂಚಿನ ಜೋಡಿ ಬಿಗಿ ಪಟ್ಟಿಗಳನ್ನು ಹಿಂದಿನ ಇಜಾರಕ್ಕೆ ಸೇರಿಸಿ, ಗುಂಡಿ ಹಾಕುತ್ತಿದ್ದನು. ಏಕೋ ಏನೋ ಆ ಬಿಗಿ ಪಟ್ಟಿಗಳು ರೊಸ್ತೋವ್‌ನ ದೃಷ್ಟಿಯನ್ನು ಆಕರ್ಷಿಸಿದ್ದುವು. ಪಕ್ಕದ ಕೋಣೆಯಲ್ಲಿದ್ದ ಯಾವುದೋ ವ್ಯಕ್ತಿಯೊಡನೆ ಆ ಮನುಷ್ಯ ಮಾತಾಡುತ್ತಿದ್ದನು.

'ಸುಂದರವಾದ ಆಕೃತಿ. ಇದೆ ತಾನೆ ಮುಗುಳೊಡೆದಿರುವ ಕೋರಿ' ಎಂದವನು ಹೇಳುತ್ತಿದ್ದು, ರೊಸ್ತೋವ್‌ನನ್ನು ಕಂಡ ಕೂಡಲೇ, ಮಾತು ಮೊಟಕಿಸಿ, ಹುಬ್ಬು ಗಂಟಿಕ್ಕಿಕೊಂಡನು. 'ಏನದು ? ಅರ್ಜಿಯೆ ?'

'ಏನದು ?' ಎಂದು ಪಕ್ಕದ ಕೋಣೆಯ ವ್ಯಕ್ತಿ ಕೇಳಿತು.

'ಮತ್ತೊಬ್ಬ ಮನವಿದಾರ' ಎಂದು ರೇಷ್ಮೆಯಂಚಿನ ಪಟ್ಟಿಯ ಮನುಷ್ಯ ಉತ್ತರಿಸಿದನು.

'ಸ್ವಲ್ಪ ಹೊತ್ತು ಬಿಟ್ಟು ಬರುವಂತೆ ಹೇಳಿ ಕಳಿಸಿ. ಅವರು ನೇರವಾಗಿ ಬಂದು ಬಿಡುತ್ತಾರೆ. ನಾವು ಹೋಗಬೇಕು.'

'ಆ ಮೇಲೆ....ಆಮೇಲೆ ? ನಾಳೆ. ಈಗ ತುಂಬ ತಡವಾಗಿದೆ....'

ರೊಸ್ತೋವ್ ಹಿಂದಕ್ಕೆ ತಿರುಗಿ, ಹೊರಡುವುದರಲ್ಲಿದ್ದಾಗ, ಆ ಮನುಷ್ಯ ನಿಲ್ಲಿಸಿ 'ನೀವು ಯಾರು ? ಯಾರ ಕಡೆಯಿಂದ ಬಂದಿದ್ದೀರಿ ?' ಎಂದು ಪ್ರಶ್ನಿಸಿದನು.

'ಮೇಜರ್ ಡೆನಿಸೋವ್ ಕಡೆಯಿಂದ ಬಂದಿದ್ದೇನೆ' ಎಂದು ರೊಸ್ತೋವ್ ಉತ್ತರಿಸಿದನು.

'ನೀವೊಬ್ಬರು ಅಧಿಕಾರಿಯೇನು ?'

'ಲೆಫ್ಟಿನೆಂಟ್ ಕೌಂಟ್ ರೊಸ್ತೋವ್.'

'ಎಂಥ ಉದ್ಧಟತನ! ನಿಮ್ಮ ನಾಯಕನ ಮೂಲಕ ರವಾನಿಸು. ಇಲ್ಲಿಂದ ಹೊರಡು....ಹೊರಡು' ಎಂದವನು ಗುಡುಗುತ್ತ, ಸೇವಕ ಕೊಟ್ಟ ಸಮವಸ್ತ್ರವನ್ನು ಧರಿಸಿಕೊಳ್ಳುತ್ತಿದ್ದನು.

ರೊಸ್ತೋವ್ ಅಂಗಳಕ್ಕೆ ಹಿಂದಿರುಗಿದನು ; ತಾನು ದಾಟಿಹೋಗಬೇಕಾಗಿದ್ದ ಮುಖಮಂಟಪದಲ್ಲಿ ಮೆರವಣಿಗೆಯ ದಿರಿಸು ಧರಿಸಿದ್ದ ಸೇನಾನಿಗಳನ್ನೂ ಅಧಿಕಾರಿಗಳನ್ನೂ ಗಮನಿಸಿದನು.

ತನ್ನ ಹುಚ್ಚುಸಾಹಸವನ್ನು ರೊಸ್ತೋವ್ ತಾನೆ ನಿಂದಿಸಿಕೊಂಡನು. ಯಾವ ಕ್ಷಣದಲ್ಲಾದರೂ ಚಕ್ರವರ್ತಿಯನ್ನು ಮುಖಾಮುಖಿಯಾಗಿ ಕಾಣಬಹುದೆಂಬ, ಅವನ ಸಮ್ಮುಖದಲ್ಲಿಯೇ ತನ್ನನ್ನು ಬಂಧಿಸಿ, ಅವಮಾನಕ್ಕೆ ಗುರಿಯಾಗಬೇಕಾದೀತೆಂಬ ಭಯದಿಂದ ಅವನು ತಳಮಳಿಸಿದನು. ತನ್ನ ವರ್ತನೆಯ ಅನೌಚಿತ್ಯ ಅವನಿಗರಿವಾಗಿ, ಪಶ್ಚಾತ್ತಾಪಪಡ[illegible]ದನು. ಅಧೋನೇತ್ರನಾಗಿ, [illegible] ವಾದ

ಮೂಲಕ ಹಾದಿಮಾಡಿಕೊಂಡು ಅವನು ಮನೆಯಿಂದ ಹೊರಬೀಳುವಷ್ಟರಲ್ಲಿ ಪರಿಚಿತ ಧ್ವನಿಯೊಂದು ಅವನನ್ನು ಕರೆಯಿತು; ಕೈಯೊಂದು ಅವನನ್ನು ತಡೆದು ನಿಲ್ಲಿಸಿತು.

'ನೀವಿಲ್ಲಿಗೇಕೆ ಬಂದಿದ್ದೀರಿ, ಸ್ವಾಮಿ? ಅದೂ ಅಯೋಧ ಉಡುಪಿನಲ್ಲಿ' ಎಂದೊಂದು ಗಂಭೀರಧ್ವನಿ ಪ್ರಶ್ನಿಸಿತು.

ಹಾಗೆ ಕೂಗಿದವನು ಅಶ್ವದಳದ ಸೇನಾನಿ; ಈ ದಂಡಯಾತ್ರೆಯ ಕಾಲದಲ್ಲಿ ಚಕ್ರವರ್ತಿಗಳ ವಿಶೇಷ ಕೃಪೆಗೆ ಪಾತ್ರನಾಗಿದ್ದವನು, ಆ ಹಿಂದೆ ರೊಸ್ತೋವ್ ಸೇವೆ ಸಲ್ಲಿಸುತ್ತಿದ್ದ ಸೇನಾವಿಭಾಗದ ಮುಖಂಡನಾಗಿದ್ದವನು.

ತಲ್ಲಣಗೊಂಡ ರೊಸ್ತೋವ್ ತನ್ನ ವರ್ತನೆಯನ್ನು ಸಮರ್ಥಿಸಿಕೊಳ್ಳತೊಡಗಿದನು. ಆದರೆ ಸೇನಾನಿಯ ದಯಾಪೂರ್ಣ, ವಿನೋದಶೀಲ ಮುಖವನ್ನು ವೀಕ್ಷಿಸಿದ ಅವನು ಸೇನಾನಿಯನ್ನು ಪಕ್ಕಕ್ಕೆ ಕರೆದು, ಉದ್ರಿಕ್ತ ಧ್ವನಿಯಲ್ಲಿ ಇಡೀ ಪ್ರಕರಣವನ್ನು ವಿವರಿಸಿ, ಅವನಿಗೆ ಗೊತ್ತಿದ್ದ ಡೆನಿಸೋವ್‌ನ ಪರವಾಗಿ ಮಧ್ಯಸ್ಥಿಕೆ ವಹಿಸುವಂತೆ ವಿನಂತಿಸಿಕೊಂಡನು.

ಸೇನಾನಿ ಕೊನೆಯ ತನಕ ರೊಸ್ತೋವ್ ಹೇಳಿದ್ದನ್ನೆಲ್ಲ ಕೇಳಿಕೊಂಡು, ಗಂಭೀರವಾಗಿ ತಲೆಯಲ್ಲಾಡಿಸಿ, 'ಅವನ ಬಗ್ಗೆ ನನಗೆ ಮರುಕವಿದೆ, ನಿಜಕ್ಕೂ ಮರುಕವಿದೆ. ಅವನು ಒಳ್ಳೆಯವ. ಕಾಗದವನ್ನಿಲ್ಲಿ ಕೊಡಿ' ಎಂದು ಈಸಿಕೊಂಡನು.

ರೊಸ್ತೋವ್ ಕಾಗದವನ್ನವನಿಗೆ ಕೊಟ್ಟು, ಡೆನಿಸೋವ್‌ನ ಪ್ರಕರಣವನ್ನು ವಿವರಿಸುವಷ್ಟರಲ್ಲಿ ತರಾತುರಿಯ ಹೆಜ್ಜೆಗಳ ಸಪ್ಪಳವೂ ಬೂಟು ಜೋದಕಗಳ ಝಣಝಣತ್ಕಾರವೂ ಕಿವಿಯ ಮೇಲೆ ಬಿದ್ದುವು. ಸೇನಾನಿ ಅವನನ್ನಲ್ಲಿಯೇ ಬಿಟ್ಟು ಮುಖಮಂಟಪಕ್ಕೆ ಮರಳಿದನು. ಚಕ್ರವರ್ತಿಯ ಪರಿವಾರದ ಜನ ಸೋಪಾನಶ್ರೇಣಿಯನ್ನಿಳಿದು, ತಂತಮ್ಮ ಕುದುರೆಗಳ ಬಳಿ ಸಾರಿದರು. ಆಸ್ಟರ್‌ಲಿಜ್‌ನಲ್ಲಿ ನೋಡಿದ್ದ ಅದೇ ಕಾಸ್ತಾರ, ಹಾಯ್ನ್ ಚಕ್ರವರ್ತಿಯ ಕುದುರೆಯನ್ನು ನಡಸಿಕೊಂಡು ಬಂದನು. ರೊಸ್ತೋವ್‌ಗೆ ಗೊತ್ತಿದ್ದ ಸಣ್ಣ ಕಿರುಕಲು ಧ್ವನಿ ಪಾವಟಿಗೆಯ ಕಡೆಯಿಂದ ಕೇಳಿಸಿತು. ತನ್ನ ಗುರುತು ಸಿಗಬಹುದೆಂಬ ಅಪಾಯವನ್ನು ಮರೆತು ರೊಸ್ತೋವ್ ಕೆಲವು ಕುತೂಹಲ ದೃಷ್ಟಿಯ ಅಯೋಧ ಜನರೊಡನೆ ಮುಖಮಂಟಪದೊತ್ತಿನಲ್ಲಿ ನಿಂತನು. ತಾನು ಆರಾಧಿಸುತ್ತಿದ್ದ ಆಕೃತಿಯನ್ನವನು ಎರಡು ವರ್ಷಗಳ ತರುವಾಯ ಮತ್ತೆ ಈಕ್ಷಿಸುತ್ತಿದ್ದನು. ಅದೇ ಮುಖ, ಅದೇ ನೋಟ, ಅದೇ ಹೆಜ್ಜೆ ಮತ್ತು ಅದೇ ಗಾಂಭೀರ್ಯ ಮಾರ್ದವತೆಗಳ ಸಮ್ಮಿಲನ....ತನ್ನ ಸಾರ್ವಭೌಮನ ಬಗೆಗಿನ ಉತ್ಸಾಹೋತ್ಕರ್ಷವೂ ಪ್ರೇಮ ವೈಭವವೂ ಮತ್ತೆ ಹಿಂದಿನ ರಭಸದಿಂದ ಅವನ ಇಡೀ ಚೇತನದಲ್ಲಿ ಪ್ರವಹಿಸತೊಡಗಿದುವು. ಪ್ರಿಯೊಬ್ರಝೋನ್‌ಸ್ಕ್ ದಳದ ಸಮವಸ್ತ್ರವಾದ ಜಿಂಕೆಯ ಮೆದು ತೊಗಲಿನ ಬಿಳಿಯ ಷರಾಯಿಯನ್ನೂ ಕೈಗೆ ಗವಸುಗಳನ್ನೂ ಎತ್ತರದ ಬೂಟುಗಳನ್ನೂ ಧರಿಸಿದ್ದ ಚಕ್ರವರ್ತಿ ಕಂಕುಳಲ್ಲಿ ಟೋಪಿಯನ್ನಿರಿಸಿಕೊಂಡು ಮುಖಮಂಟಪವನ್ನು ಪ್ರವೇಶಿಸಿದನು. ಅವನು ಹೊಸದಾಗಿ ಅಲಂಕರಿಸಿಕೊಂಡಿದ್ದ ಲೀಜನ್ ಆಫ್ ಆನರ್ ನಕ್ಷತ್ರವನ್ನು ರೊಸ್ತೋವ್ ಹಿಂದೆ ನೋಡಿರಲಿಲ್ಲ. ಚಕ್ರವರ್ತಿ ನಿಂತು ಸುತ್ತಲೂ ದೃಷ್ಟಿ ಹಾಯಿಸಿದಾಗ ಎಲ್ಲೆಲ್ಲೂ ಪ್ರಕಾಶ ಪ್ರವಹಿಸಿದಂತಾಯಿತು. ಅವನು ಸೇನಾನಿಗಳೊಡನೆ ಮಾತು ವಿನಿಮಯಿಸಿ

ಕೊಂಡನು ; ರೊಸ್ತೋವ್ ವಿಭಾಗೀಯ ಸೈನ್ಯದ ಹಿಂದಿನ ಸೇನಾನಿಯನ್ನು ಗುರುತಿಸಿ, ಮುಗುಳು ನಗೆ ಬೀರಿ, ಸನ್ನೆಮಾಡಿ. ತನ್ನೆಡೆಗೆ ಕರೆದನು.

ಪರಿವಾರದ ಜನ ಹಿಂದಕ್ಕೆ ಸರಿದರು. ಸೇನಾನಿ ಚಕ್ರವರ್ತಿಯೊಡನೆ ತುಸು ಹೊತ್ತು ಮಾತಾಡುತ್ತಿದ್ದುದನ್ನು ರೊಸ್ತೋವ್ ಗಮನಿಸಿದನು.

ಚಕ್ರವರ್ತಿ ಸೇನಾನಿಯೊಡನೆ ಮಾತು ಮುಗಿಸಿದ ನಂತರ, ತನ್ನ ಕುದುರೆಯ ಕಡೆಗೆ ಹೆಜ್ಜೆ ಹಾಕಿದನು. ಮತ್ತೆ ಪರಿವಾರದ ಸಮೂಹ ಮತ್ತು ಬೀದಿ ನೆರವಿಗಳು (ರೊಸ್ತೋವ್ ಸಹ ಆ ನೆರವಿಯಲ್ಲಿದ್ದನು) ಚಕ್ರವರ್ತಿಯ ಸನಿಹಕ್ಕೆ ಸರಿದುವು. ತನ್ನ ಕುದುರೆಯ ಬಳಿ ನಿಂತು, ಕಾಟರದ ಮೇಲೆ ಕೈಯಿಟ್ಟುಕೊಂಡು, ಅಶ್ವದಳದ ಸೇನಾನಿಯ ಕಡೆ ತಿರುಗಿಕೊಂಡು, ಎಲ್ಲರಿಗೂ ಕೇಳಿಸಲೆಂಬ ಉದ್ದೇಶದಿಂದ ಚಕ್ರವರ್ತಿ ಗಟ್ಟಿಯಾಗಿ ಘೋಷಿಸಿದನು :

'ಇದು ಸಾಧ್ಯವಿಲ್ಲ, ಸೇನಾನಿಗಳೆ ; ಖಂಡಿತ ಸಾಧ್ಯವಿಲ್ಲ. ಏಕೆಂದರೆ ನನಗಿಂತ ಕಾನೂನು ಪ್ರಬಲವಾಗಿದೆ.' ಕೂಡಲೇ ಅವನು ರಿಕಾಪಿನಲ್ಲಿ ಕಾಲಿರಿಸಿದನು.

ಸೇನಾನಿ ಗೌರವಪೂರ್ವಕವಾಗಿ ತಲೆ ಮಣಿದನು. ಚಕ್ರವರ್ತಿ ಕುದುರೆಯೇರಿ, ನಾಗಾಲೋಟದಲ್ಲಿ ಬೀದಿಯಲ್ಲಿ ಸವಾರಿಸಿದನು. ಉತ್ಸಾಹದ ಭರದಲ್ಲಿ ತನ್ನನ್ನು ಮರೆತ ರೊಸ್ತೋವ್ ನೆರವಿಯಲ್ಲಿ ಸೇರಿಕೊಂಡು, ಅವನ ಹಿಂದೆ ಓಡಿದನು.

ಅಧ್ಯಾಯ ೨೧

ಕರಡಿದೊಗಲಿನ ಟೋಪಿ ಧರಿಸಿದ್ದ ಫ್ರೆಂಚ್ ಕಾವಲುದಳ ಎಡಗಡೆಯಲ್ಲಿ, ಪ್ರಿಯೊಬ್ರಝೆನ್‌ಸ್ಕ್‌ನ ಪಡೆ ಬಲಗಡೆಯಲ್ಲಿ ಎದುರೆದುರಾಗಿ ನಿಂತಿದ್ದ ಚೌಕದ ಬಳಿಗೆ ಚಕ್ರವರ್ತಿ ಸವಾರಿಸಿದನು.

ದಳದ ಒಂದು ಪಾರ್ಶ್ವದ ಬಳಿಗೆ ಸವಾರಿಸಿದಾಗ ಸೈನಿಕರ ಗುಂಪು ವಿಧಿವತ್ತಾಗಿ ಬಂದೂಕು ವಂದನೆಯನ್ನು ಸಲ್ಲಿಸಿತು. ಮತ್ತೊಂದು ಅಶ್ವದಳದ ಗುಂಪು ಎದುರು ಪಾರ್ಶ್ವದ ಕಡೆಗೆ ನಾಗಾಲೋಟದಲ್ಲಿ ಸವಾರಿಸಿತು. ಅವುಗಳ ಮುಂಭಾಗದಲ್ಲಿ ರೊಸ್ತೋವ್ ನೆಪೋಲಿಯನ್ನನನ್ನು ಗುರುತಿಸಿದನು. ಅವನು ನೆಪೋಲಿಯನ್ ಅಲ್ಲದೆ, ಬೇರೆಯವನಾಗಿರಲಾರನೆಂದವನು ಬಗೆದನು. ಅವನು ನಾಗಾಲೋಟದಲ್ಲಿ ಬಂದನು. ಅವನು ಸಣ್ಣದೊಂದು ಟೋಪಿ ಧರಿಸಿದ್ದನು. ಬಿಳಿಯ ನಡುವಂಗಿಯ ಮೇಲೆ ನೀಲಿ ಸಮವಸ್ತ್ರವಿತ್ತು ; ಭುಜದ ಮೇಲೆ ಸೆಂಟ್ ಆಂಡ್ರ್ಯೂ ಪದಕ ರಂಜಿಸುತ್ತಿತ್ತು. ಅವನು ಸವಾರಿಸುತ್ತಿದ್ದ ಬೂದು ಬಣ್ಣದ ಅರಬ್ ತಳಿಯ ಸುಂದರ ವಾಜಿಯ ಜೀನಿನ ಮೇಲೆ ಕಡುಗೆಂಪು ಬಣ್ಣದ ಚಿನ್ನದ ಜರಿಗೆಯ ಬಟ್ಟೆಯನ್ನು ಹೊದಿಸಿತ್ತು. ಅಲೆಕ್ಸಾಂಡರನ ಬಳಿ ಬಂದ ಕೂಡಲೇ ಅವನು ತನ್ನ ಟೋಪಿಯನ್ನು ತೆಗೆದನು. ಹಾಗೆ ತೆಗೆಯುವಾಗ ಅವನು ಕಾಟರದ ಮೇಲೆ ಸರಿಯಾಗಿ, ಭದ್ರವಾಗಿ ಕುಳಿತಿರಲಿಲ್ಲವೆಂಬುದನ್ನು ರಾವುತ ಗಣ್ಣಿನ ರೊಸ್ತೋವ್ ಗಮನಿಸಿದನು. 'ಹುರ್ರಾ, ಚಕ್ರವರ್ತಿಗಳಿಗೆ ಜಯವಾಗಲಿ' ಎಂದು ದಳಗಳು ಉಚ್ಚಕಂಠದಿಂದ ಘೋಷಿಸಿದುವು. ನೆಪೋಲಿಯನ್ ಅಲೆಕ್ಸಾಂಡರನೊಡನೆ

ಏನೊ ಮಾತಾಡಿದನು. ಇಬ್ಬರೂ ಕುದುರೆಯಿಂದಿಳಿದರು. ಪರಸ್ಪರ ಕೈಗಳನ್ನು ಹಿಡಿದು ಕೊಂಡರು. ನೆಪೋಲಿಯನ್ನನ ಮುಖದಲ್ಲಿ ಕೃತಕವೂ ಅಹಿತಕರವೂ ಆದ ಮುಗುಳು ನಗೆ ಚಿಮ್ಮುತ್ತಿತ್ತು. ಅಲೆಕ್ಸಾಂಡರ್ ಸೌಜನ್ಯದಿಂದ ಅವನೊಡನೆ ಮಾತಾಡು ತ್ತಿದ್ದನು.

ಫ್ರೆಂಚ್ ಪೋಲೀಸು ಸೈನ್ಯದ ಕುದುರೆಗಳು ಹೆಜ್ಜೆ ತುಳಿಯುತ್ತ, ನೆರವಿಯನ್ನು ಹಿಂದಕ್ಕೆ ದಬ್ಬುತ್ತಿದ್ದರೂ, ರೊಸ್ತೋವ್‌ನ ಕಣ್ಣು ಅಲೆಕ್ಸಾಂಡರ್ ಮತ್ತು ಬೋನಪಾರ್ಟ್‌ರ ಚಲನೆಯನ್ನೆ ಅನುಸರಿಸಿತ್ತು. ಅಲೆಕ್ಸಾಂಡರ್ ಬೋನಪಾರ್ಟ್‌ನನ್ನು ತನಗೆ ಸರಿಸಮನಾಗಿ ಕಾಣುತ್ತ, ಬೋನಪಾರ್ಟ್ ತ್ಸಾರ್‌ನೊಡನೆ ಸರಾಗವಾಗಿರುತ್ತ, ಚಕ್ರವರ್ತಿಯೊಡನೆಯ ಅಂಥ ಸಂಬಂಧಗಳು ಅವನಿಗೆ ದಿನ ನಿತ್ಯದ ರೂಢಿಯೆಂಬಂತೆ ತೋರುತ್ತಿದ್ದುದು ರೊಸ್ತೋವ್‌ಗೆ ಸೋಜಿಗವಾಗಿ ತೋರುತ್ತಿತ್ತು.

ಅಲೆಕ್ಸಾಂಡರ್ ಮತ್ತು ನೆಪೋಲಿಯನ್ನರು ತಮ್ಮ ಸುದೀರ್ಘ ಪರಿವಾರ ಪರಂಪರೆ ಯೊಡನೆ ಪ್ರಿಯೊಬ್ರಝೀನ್‌ಸ್ಕ್ ದಳದ ಬಲಪಾರ್ಶ್ವವನ್ನು ಸಮೀಪಿಸಿ, ಅಲ್ಲಿ ನಿಂತಿದ್ದ ನೆರವಿಯ ಕಡೆಗೆ ನೇರವಾಗಿ ಬಂದರು. ಅವರು ಅನಿರೀಕ್ಷಿತವಾಗಿ ನೆರವಿಗೆ ತುಂಬ ಹತ್ತಿರ ದಲ್ಲಿದ್ದಾಗ, ತನ್ನ ಗುರುತು ಹಿಡಿದಾರೆಂದು ಮೊದಲನೆಯ ಸಾಲಿನಲ್ಲಿ ನಿಂತಿದ್ದ ರೊಸ್ತೋವ್ ಶಂಕಿಸಿದನು.

'ಮಾನ್ಯರೆ, ತಮ್ಮ ಸೈನ್ಯದಲ್ಲಿ ಅತ್ಯಂತ ಧೈರ್ಯಶಾಲಿಯಾದವರಿಗೆ ಲೀಜನ್ ಆಫ್ ಆನರ್ ದಯಪಾಲಿಸಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ' ಎಂಬುದಾಗಿ ಹರಿತವೂ ಖಚಿತವೂ ಆದ ದನಿಯೊಂದು ಪ್ರತಿಯೊಂದು ಅಕ್ಷರವನ್ನು ಸ್ಪಷ್ಟವಾಗಿ ಉಚ್ಚರಿಸಿತು.

ಅಲೆಕ್ಸಾಂಡರನ ಕಣ್ಣುಗಳನ್ನೆ ದಿಟ್ಟಿಸುತ್ತ ಹಾಗೆ ಉಚ್ಚರಿಸಿದವನು ಗಿಡ್ಡಾಕಾರದ ವ್ಯಕ್ತಿ ನೆಪೋಲಿಯನ್. ಅವನು ಹೇಳಿದ್ದನ್ನು ಆಸಕ್ತಿಯಿಂದ ಆಲಿಸಿ, ಅಲೆಕ್ಸಾಂಡರ್ ತನ್ನ ಶಿರವನ್ನು ಬಾಗಿಸಿ, ಆಹ್ಲಾದಕರ ಮಂದಹಾಸವನ್ನು ಸೂಸಿದನು.

'ಕಳೆದ ಯುದ್ಧದಲ್ಲಿ ಸ್ಥೈರ್ಯ ಧೈರ್ಯಗಳಿಂದ ಹೋರಾಡಿದ ವೀರಯೋಧನಿಗೆ' ಎಂದು ನೆಪೋಲಿಯನ್ ಪ್ರತಿಯೊಂದಕ್ಷರವನ್ನೂ ಒತ್ತಿ ಒತ್ತಿ ಹೇಳಿದನು. ಅವನ ಪ್ರತಿಷ್ಠೆ ಮತ್ತು ಚಿತ್ತಸ್ವಾಸ್ಥ್ಯಗಳು ತನ್ನನ್ನು ಕೆರಳಿಸಿದಂತಾಗಿ ರೊಸ್ತೋವ್ ಚಕ್ರವರ್ತಿಯಲ್ಲಿಯೇ ಕಣ್ಣುಗಳನ್ನು ನಾಟಿ ಬಂದೂಕ ಮರ್ಯಾದೆಯನ್ನು ಸಲ್ಲಿಸಿದ ರಷ್ಯನ್ ಸೈನಿಕ ಪಂಕ್ತಿಗಳ ಮೇಲೆ ತನ್ನ ದೃಷ್ಟಿ ಹರಿಸಿದನು.

'ಕರ್ನಲ್‌ನೊಡನೆ ಸಮಾಲೋಚನೆ ನಡಸಲು ಮಹಾಪ್ರಭುಗಳ ಅನುಮತಿ ಯಿದೆಯೆ?' ಎಂದು ಅಲೆಕ್ಸಾಂಡರ್ ನುಡಿದು, ದಳನಾಯಕ ರಾಜಕುಮಾರ ಕೊಸ್ಲೋವ್‌ಸ್ಕಿಯ ಕಡೆಗೆ ಚುರುಕು ಹೆಜ್ಜೆ ಹಾಕಿದನು.

ಆ ಮಧ್ಯೆ ಬೋನಪಾರ್ಟ್ ತನ್ನ ಬೆಳ್ಳನೆಯ ಕಿರುಗೈಯ ಗವಸನ್ನು ತೆಗೆದು, ತೆಗೆಯುವಾಗ ಹರಿದು, ಬಿಸಾಡಿದನು. ಅವನ ಅಂಗರಕ್ಷಕ ಮುಂದೆ ನುಗ್ಗಿ, ಅದನ್ನೆತ್ತಿ ಕೊಂಡನು.

'ಅದನ್ನು ಪಡೆಯುವ ಅರ್ಹತೆ ಯಾರಿಗಿದೆ?' ಎಂದು ಚಕ್ರವರ್ತಿ ಅಲೆಕ್ಸಾಂಡರ್ ರಷ್ಯನ್ ಭಾಷೆಯಲ್ಲಿ ಮೆಲ್ಲಗೆ ಕೊಸ್ಲೋವ್‌ಸ್ಕಿಯನ್ನು ಕೇಳಿದನು.

'ಮಹಾಪ್ರಭುಗಳು ಅಪ್ಪಣೆ ಕೊಡಿಸಿದಂತಾಗಲಿ.'

ಚಕ್ರವರ್ತಿ ಅತೃಪ್ತಿಯಿಂದ ಹುಬ್ಬು ಗಂಟಿಕ್ಕಿಕೊಂಡು, ಹಿಂದಕ್ಕೆ ಕಣ್ಣು ಮಿಟುಕಿಸಿ 'ಅವರಿಗೀಗಲೇ ಉತ್ತರ ಕೊಡಬೇಕಾಗಿದೆ' ಎಂದನು.

ಕೊಸ್ಲೋವ್‌ಸ್ಕಿ ಸೈನಿಕ ಸಾಲುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪರಿಶೀಲಿಸಿದನು; ಅವನ ಪರಿಶೀಲನೆಯಲ್ಲಿ ರೊಸ್ಟೋವ್ ಸಹ ಸೇರಿದ್ದನು.

'ನಾನೂ ಅವರ ದೃಷ್ಟಿಯಲ್ಲಿರಬಹುದೆ?' ಎಂದು ರೊಸ್ಟೋವ್ ಯೋಚಿಸಿದನು.

'ಲಾಜರೆವ್!' ಎಂದು ಕರ್ನಲ್ ಮುಖ ಸಿಂಡರಿಸಿಕೊಂಡು ಕರೆದನು. ಸಾಲಿನಲ್ಲಿ ಮೊದಲ ಸ್ಥಾನದಲ್ಲಿದ್ದ ಲಾಜರೆವ್ ಬಿರುಸಾಗಿ ಮುಂದಡಿಯಿಟ್ಟನು.

'ಎಲ್ಲಿಗೆ ಓಡುತ್ತಿದ್ದೀಯೆ? ನಿಲ್ಲು' ಎಂದು ಕೆಲವರು ಪಿಸುಗುಟ್ಟಿದರು. ಎಲ್ಲಿಗೆ ಹೋಗುವುದೆಂದು ಲಾಜರೆವ್‌ಗೆ ಗೊತ್ತಾಗಲಿಲ್ಲ. ಬೆದರಿಕೆಯಿಂದ ಕರ್ನಲ್ಲನ ಕಡೆಗೆ ಪಕ್ಕ ನೋಟವನ್ನು ಬೀರಿ, ಅವನು ನಿಂತುಕೊಂಡನು. ಸೈನಿಕ ಪಂಕ್ತಿಗಳ ಮುಂದೆ ಬರುವಂತೆ ಸೈನಿಕರನ್ನು ಕರೆದಾಗ ಸಾಮಾನ್ಯವಾಗಿ ಅವರಿಗಾಗುವಂತೆ ಅವನ ಮುಖ ವಿಕಾರವಾಗಿ ಸ್ಪಂದಿಸಿತು.

ನೆಪೋಲಿಯನ್ ತುಸು ತಲೆಯೊಲೆದು, ಏನೊ ಬೇಕೆನ್ನುವಂತೆ, ತನ್ನ ದುಂಡುಗೈಯನ್ನು ಹಿಂದಕ್ಕೆ ಚಾಚಿದನು. ಕೂಡಲೇ ಅವನಿಗೇನುಬೇಕೆಂಬುದನ್ನೂಹಿಸಿಕೊಂಡು ಪರಿವಾರದ ಜನ ಚಲಿಸಲಾರಂಭಿಸಿದರು; ಚಲಿಸುವಾಗ ಅವರು ಪರಸ್ಪರವಾಗಿ ಪಿಸುದನಿಯಲ್ಲಿ ಮಾತಾಡಿಕೊಂಡರು. ಹಿಂದಿನ ಸಂಜೆ ಬೋರಿಸ್‌ನ ಕೋಣೆಯಲ್ಲಿ ರೊಸ್ಟೋವ್ ನೋಡಿದ್ದ ಬಾಲಸೇವಕ ಮುಂದೆ ಧಾವಿಸಿ, ಚಾಚಿದ ಕೈಯ ಮೇಲೆ ಗೌರವಪೂರ್ವಕವಾಗಿ ಬಾಗಿ, ಎವೆಯಿಕ್ಕುವಷ್ಟರಲ್ಲಿ ಕೆಂಪು ಪಟ್ಟಿಯ ಲಾಂಛನವೊಂದನ್ನು, ಆ ಕೈಯಲ್ಲಿರಿಸಿದನು. ನೆಪೋಲಿಯನ್ ನೋಡದೆಯೆ ಎರಡು ಬೆರಳುಗಳನ್ನೊಟ್ಟಿಗೆ ಒತ್ತಲಾಗಿ, ಲಾಂಛನವೊಂದು ಅವುಗಳ ನಡುವೆ ಕಾಣಿಸಿತು. ಅನಂತರ ಅವನು ಲಾಜರೆವ್‌ನ ಬಳಿ ಸಾರಿ (ಲಾಜರೆವ್ ಕಣ್ಣು ಹೊರಳಿಸಿ, ಮತ್ತೆ ಮತ್ತೆ ತನ್ನ ಚಕ್ರವರ್ತಿಯ ಕಡೆಗೆ ದಿಟ್ಟಿಸುತ್ತಿದ್ದನು), ತನ್ನ ಗೆಳೆತನದ ಕುರುಹಾಗಿ ತಾನು ಆ ಕರ್ತವ್ಯವನ್ನು ನಿರ್ವಹಿಸುತ್ತಿದ್ದುದನ್ನು ಸೂಚಿಸಲೆಂಬಂತೆ ಚಕ್ರವರ್ತಿ ಅಲೆಕ್ಸಾಂಡರನ ಕಡೆಗೆ ದೃಷ್ಟಿ ಹೊರಳಿಸಿದನು. ಲಾಂಛನವನ್ನು ಹಿಡಿದಿದ್ದ ಕಿರುಗೈ ಲಾಜರೆವ್‌ನ ಗುಂಡಿಗಳನ್ನು ಸ್ಪರ್ಶಿಸಿತು. ಕೇವಲ ತನ್ನ ಹಸ್ತಸ್ಪರ್ಶದ ಅನುಗ್ರಹದಿಂದ ಆ ಸೈನಿಕ ಎಂದೆಂದಿಗೂ ಸುಖದಿಂದಿರುತ್ತಾನೆಂದೂ, ಅವನಿಗೆ ಸಕಲ ಬಹುಮಾನಗಳು ಸಂದಂತಾಗುತ್ತದೆಂದೂ, ಇಡೀ ಜಗತ್ತಿನಲ್ಲಿಯೇ ಯಾರಿಗೂ ಲಭ್ಯವಾಗದ ಮನ್ನಣೆ ದೊರಕಿದಂತಾಯಿತೆಂದೂ ನೆಪೋಲಿಯನ್ ಆ ಸಂದರ್ಭದಲ್ಲಿ ಭಾವಿಸಿಕೊಂಡಂತಿತ್ತು. ನೆಪೋಲಿಯನ್ ಲಾಂಛನವನ್ನು ಲಾಜರೆವ್‌ನ ಎದೆಯ ಮೇಲಿರಿಸಿ, ಅದು ಅಲ್ಲಿಯೇ ಅಂಟಿಕೊಳ್ಳುತ್ತದೆಂಬ ಭರವಸೆಯುಳ್ಳವನಂತೆ, ಹಿಂದಕ್ಕೆ ಕೈ ತೆಗೆದುಕೊಂಡು, ಅಲೆಕ್ಸಾಂಡರನ ಕಡೆಗೆ ನಡೆದನು. ಅದು ವಾಸ್ತವವಾಗಿ ಅಲ್ಲಿಯೇ ಅಂಟಿಕೊಂಡಿತ್ತು.

ಅಲ್ಲಿಯೇ ಕಾದುಕೊಂಡಿದ್ದ ರಷ್ಯನ್ ಮತ್ತು ಫ್ರೆಂಚ್ ಸೈನಿಕರು ಕೇಳಿಸಿ ಕೇಳಿಸಿಕೊಳ್ಳದೆಯೆ ತಳುವಿಗೆ ಲಾಂಛನವನ್ನು ಹಿಡಿದುಕೊಂಡು, ಸಮವಸ್ತ್ರಕ್ಕೆ ಸೇರಿಸಿ

ದರು. ಗಿಡ್ಡಮನುಷ್ಯನ ಬೆಳ್ಳನೆಯ ಕೈಗಳು ಏನುಮಾಡುತ್ತವೆಂಬುದನ್ನರಿಯದೆ, ಅವುಗಳನ್ನೇ ನಿರ್ವಿಣ್ಣನಾಗಿ ನೋಡುತ್ತ, ಬಂದೂಕ ಮರ್ಯಾದೆಯ ಭಂಗಿಯಲ್ಲಿ ಲಾಜರೆವ್ ನಿಶ್ಚಲನಾಗಿ ನಿಂತಿದ್ದನು. ತಾನಲ್ಲಿಯೇ ನಿಂತಿರಬೇಕೋ, ಹೋಗಬೇಕೋ ಅಥವಾ ಬೇರೇನಾದರೂ ಮಾಡಬೇಕೋ ಎಂಬ ಅನುಮತಿಗಾಗಿ ಕಾದುಕೊಂಡಿದ್ದವ ನಂತೆ ಅವನ ಕಣ್ಣುಗಳು ಮತ್ತೆ ಮತ್ತೆ ಅಲೆಕ್ಸಾಂಡರನ ದೃಷ್ಟಿಯ ಕಡೆಗೆ ಹೊರಳು ತ್ತಿದ್ದುವು. ಯಾವುದಕ್ಕೂ ಅನುಮತಿ ದೊರಕದಿದ್ದುದರಿಂದ ಅವನು ತುಸು ಹೊತ್ತು ಅದೇ ಸೆಡೆತ ಭಂಗಿಯಲ್ಲಿದ್ದನು.

ಚಕ್ರವರ್ತಿಗಳು ಮತ್ತೆ ಕುದುರೆಯೇರಿ, ಹೊರಟುಹೋದರು. ಪ್ರಿಯೋ ಬ್ರಝೇನ್‌ಸ್ಕಿ ದಳವಿಭಾಗ ಪಂಕ್ತಿಕ್ರಮವನ್ನು ತೊರೆದು, ಫ್ರೆಂಚ್ ಕಾವಲುಪಡೆ ಯೊಡನೆ ಬೆರೆಸಿಕೊಂಡರು ; ಅವರಿಗಾಗಿಯೇ ಸಿದ್ಧವಾಗಿದ್ದ ಮೇಜುಗಳ ಮುಂದೆ ಆಸೀನ ರಾದರು.

ಲಾಜರೆವ್ ಗೌರವ ಸ್ಥಾನದಲ್ಲಿ ಕುಳಿತನು. ರಷ್ಯನ್ ಮತ್ತು ಫ್ರೆಂಚ್ ಅಧಿಕಾರಿ ಗಳು ಅವನನ್ನಾಲಿಂಗಿಸಿಕೊಂಡರು ; ಅಭಿನಂದಿಸಿದರು ; ಅವನ ಕೈ ಕುಲುಕಿದರು. ಅಧಿಕಾರಿಗಳು ಮತ್ತು ಅಯೋಧ ಪ್ರಜೆಗಳು ಅವನ ದರ್ಶನಕ್ಕಾಗಿಯೇ ಹತ್ತಿರ ಬಂದರು. ರಷ್ಯನ್ ಮತ್ತು ಫ್ರೆಂಚ್ ಧ್ವನಿಹಾಸಗಳ ಮೊಳಗು ಆ ಚೌಕದಲ್ಲೆಲ್ಲ ಘೋಷಿಸು ತ್ತಿತ್ತು. ಉತ್ಸಾಹೋಲ್ಲಾಸಗಳಿಂದ ಪ್ರಜ್ವಲಿಸುತ್ತಿದ್ದ ನಗೆಮೊಗದ ಇಬ್ಬರು ಅಧಿಕಾರಿ ಗಳು ರೊಸ್ಟೋವ್‌ನ ಮುಂದೆ ಹಾದುಹೋದರು.

'ಸತ್ಕಾರ ಕೂಟದ ಬಗ್ಗೆ ನಿಮ್ಮ ಅಭಿಪ್ರಾಯವೇನು ? ಎಲ್ಲರಿಗೂ ಬೆಳ್ಳಿಯ ತಟ್ಟೆಯೇನು ? ನೀವು ಲಾಜರೆವ್ ನೋಡಿದ್ದೀರಾ ?' ಎಂದೊಬ್ಬ ಪ್ರಶ್ನಿಸಿದನು.

'ನೋಡಿದ್ದೇನೆ.'

'ನಾಳೆ ಪ್ರಿಯೊಬ್ರಝೇನ್‌ಸ್ಕಿದಳದ ಸೈನಿಕರು ಅವರಿಗಾಗಿ ಭೋಜನ ಕೂಟ ಏರ್ಪಡಿಸಿದ್ದಾರಂತೆ'.

'ಹೌದು. ಲಾಜರೆವ್ ಎಂಥ ಅದೃಷ್ಟಶಾಲಿ ! ಬದುಕಿರುವ ತನಕ ಅವನಿಗೆ ಒಂದು ಸಾವಿರದ ಇನ್ನೂರು ಫ್ರಾಂಕುಗಳಂತೆ.'

'ಇಗೋ ಇಲ್ಲೊಂದು ಟೋಪಿಯಿದೆ, ಹುಡುಗರೆ !' ಎಂದು ಪ್ರಿಯೊಬ್ರಝೇನ್‌ಸ್ಕಿ ದಳದ ಸೈನಿಕನೊಬ್ಬ ದೊರಗುಗೂದಲಿನ ಫ್ರೆಂಚ್ ಟೋಪಿಯನ್ನು ತಲೆಯ ಮೇಲಿಟ್ಟು ಕೊಳ್ಳುತ್ತ ಕೂಗಿಕೊಂಡನು.

'ಭೇಷ್. ತುಂಬ ಚೆನ್ನಾಗಿದೆ. ಒಂದನೆಯ ದರ್ಜೆಯದು.'

'ಸಂಕೇತಪದ ಕೇಳಿದಿರೇನು ?' ಎಂದು ಕಾವಲುಪಡೆಯ ಅಧಿಕಾರಿ ಮತ್ತೊಬ್ಬ ನನ್ನು ಪ್ರಶ್ನಿಸಿದನು. "ಮೊನ್ನೆ ನೆಪೋಲಿಯನ್, ಫ್ರಾನ್ಸ್, ಸಾಹಸೋನ್ನತಿ" ಎಂದಿತ್ತು ಅದು. "ನಿನ್ನೆ ಅಲೆಕ್ಸಾಂಡರ್, ರಷ್ಯಾ, ವೈಭವೋನ್ನತಿ" ಎಂದಾಯಿತು. ಒಂದು ದಿನ ನಮ್ಮ ಚಕ್ರವರ್ತಿ ಬಹುಮಾನ ನೀಡಿದರೆ, ಮತ್ತೊಂದು ದಿನ ನೆಪೋಲಿಯನ್. ನಾಳೆ ನಮ್ಮ ಸಾರ್ವಭೌಮರು ಫ್ರೆಂಚ್ ಕಾವಲುಪಡೆಯ ಮಹಾಸಾಹಸಿಗೆ ಸೆಂಟ್

ಜಾರ್ಜ್ ಲಾಂಛನವನ್ನು ದಯಪಾಲಿಸುತ್ತಾರೆ. ಇದು ಆಗಲೇಬೇಕು. ಗೌರವಕ್ಕೆ ಪ್ರತಿಗೌರವ.'

ಪ್ರಿಯೊಬ್ರಝೆನ್‌ಸ್ಕಿ ಔತಣ ಕೂಟವನ್ನು ನೋಡುವ ಸಲುವಾಗಿ ಬೋರಿಸ್ ಸಹ ತನ್ನ ಗೆಳೆಯ ಝಿಲಿನ್‌ಸ್ಕಿಯೊಡನೆ ಬಂದನು. ಹಿಂದಿರುಗುವಾಗ, ಮನೆಯೊಂದರ ಮೂಲೆಯಲ್ಲಿ ನಿಂತಿದ್ದ ರೊಸ್ತೋವ್ ಅವನ ಕಣ್ಣಿಗೆ ಬಿದ್ದನು.

'ರೊಸ್ತೋವ್! ಹೇಗಿದ್ದೀರಿ? ನಿಮ್ಮನ್ನಗಲಿ ಎಷ್ಟೋ ದಿನವಾದಂತಿದೆ. ಏನು ಸಮಾಚಾರ?' ಎಂದವನು ಕೇಳಿದನು.

ರೊಸ್ತೋವ್‌ನ ಮುಖದ ಮೇಲೆ ವಿಷಾದದ ಹಾಗೂ ತುಮುಲದ ಅಲೆ ಸುಳಿದಾಡಿತು. 'ಏನೂ ಇಲ್ಲ, ಏನೂ ಇಲ್ಲ' ಎಂದವನು ಉತ್ತರಿಸಿದನು.

'ಮನೆಗೆ ಬರುತ್ತೀರಾ?'

'ಆಗಲಿ, ಬರುತ್ತೇನೆ.'

ರೊಸ್ತೋವ್ ಅದೇ ಮೂಲೆಯಲ್ಲಿ ದೂರದಿಂದಲೆ ಔತಣಕೂಟವನ್ನು ಬಹು ಹೊತ್ತು ನೋಡುತ್ತ ನಿಂತನು. ಅವನ ಮನಸ್ಸಿನಲ್ಲಿ ಯಾತನಾಮಯವಾದ ತುಮುಲ ಜರುಗುತ್ತಿತ್ತು. ಯಾವೊಂದು ನಿರ್ಣಯಕ್ಕೂ ಬರಲು ಅವನಿಗೆ ಸಾಧ್ಯವಾಗಲಿಲ್ಲ. ಅವನ ಚೇತನ ಭಯಂಕರ ಸಂಶಯಗಳ ರಣರಂಗವಾಯಿತು. ಮನಃಪರಿವರ್ತನೆ ಹೊಂದಿದ, ಶರಣಾಗತಿಗೆ ಸಿದ್ಧನಾದ ಡೆನಿಸೋವ್ ಅವನ ಮನೋನೇತ್ರದ ಮುಂದೆ ಸುಳಿದನು. ಕೈಕಾಲುಗಳನ್ನು ಕಳೆದುಕೊಂಡಿದ್ದ, ರೋಗಕಶ್ಮಲಗಳಲ್ಲಿ ಒದ್ದಾಡುತ್ತಿದ್ದ ಸೈನಿಕರ ಆಸ್ಪತ್ರೆ ನೆನಪಾಯಿತು. ಆಸ್ಪತ್ರೆಯ ಕೊಳೆತ ಮಾಂಸದ ದುರ್ನಾತ ಎಷ್ಟರ ಮಟ್ಟಿಗೆ ಅವನ ನೆನಪನ್ನು ಕೆರಳಿಸಿತೆಂದರೆ, ಆ ಅಸಹ್ಯವಾಸನೆ ಎಲ್ಲಿಂದ ಬಂದಿರಬಹುದೆಂದು ಸುತ್ತಮುತ್ತ ಕಣ್ಣು ಹಾಯಿಸಿದನು. ಈಗ ಚಕ್ರವರ್ತಿ ಎನಿಸಿಕೊಂಡು, ಅಲೆಕ್ಸಾಂಡರನ ಗೌರವಾದರಗಳಿಗೆ ಪಾತ್ರನಾಗಿದ್ದ, ಆತ್ಮಸಂತುಷ್ಟಿಯ, ಬೆಳ್ಳನೆಯ ಕಿರುಗೈಯ ಬೋನಪಾರ್ಟ್‌ನನ್ನು ತರುವಾಯ ನೆನೆದನು. ಆ ಜನ ಕೈಕಾಲುಗಳನ್ನು ಕಳೆದುಕೊಂಡದ್ದೇಕೆ? ಹಲವರು ಸತ್ತದ್ದೇಕೆ? ಎಂಬ ಚಿಂತೆ ಅನಂತರ ಅವನ ಮನಸ್ಸನ್ನು ಕಲಕಿತು. ಅನಂತರ ಮತ್ತೆ ಪ್ರಶಸ್ತಿಗಳಿಗೆ ಪಾತ್ರನಾದ ಲಾಜರೆವ್‌ನನ್ನೂ ಕ್ಷಮಾಯಾಚನೆ ನಿಷ್ಫಲಗೊಂಡು ಶಿಕ್ಷೆಗೆ ಗುರಿಯಾಗಿದ್ದ ಡೆನಿಸೋವ್‌ನನ್ನೂ ಕುರಿತು ಚಿಂತಿಸಿದನು. ಅಂಥ ವಿಚಿತ್ರ ಆಲೋಚನೆಗಳು ಅವನ ಮನಸ್ಸಿನ ಮೇಲೆ ಧಾಳಿ ಮಾಡಿದಾಗ ಅವನು ಭಯಭೀತನಾದನು.

ಪ್ರಿಯೊಬ್ರಝೆನ್‌ಸ್ಕಿ ಸೈನಿಕರು ತಿನ್ನುತ್ತಿದ್ದ ಊಟದ ವಾಸನೆ ಮತ್ತು ಕ್ಷುಧಾಪೀಡೆ ಅವನ ಆಲೋಚನೆಗಳನ್ನು ಮರೆಸಿ, ಅನ್ಯತ್ರ ಅವನ ಗಮನವನ್ನು ಸೆಳೆದುವು. ಮುಂದೆ ಹೊರಡುವ ಮುನ್ನ ಅವನು ಏನನ್ನಾದರೂ ತಿನ್ನಬೇಕಿತ್ತು. ಆ ದಿನ ಬೆಳಗ್ಗೆ ಕಣ್ಣಿಗೆ ಬಿದ್ದಿದ್ದ ಹೋಟಲಿನ ಕಡೆಗೆ ಅವನ ಹೆಜ್ಜೆ ಸಾಗಿದುವು. ಆ ಹೋಟಲಿನಲ್ಲಿ ಗುಂಪು ದೊಡ್ಡದಾಗಿತ್ತು. ತನ್ನಂತೆಯೇ ಅಯೋಧ ವಸ್ತ್ರಗಳಲ್ಲಿ ಬಂದಿದ್ದ ಅಧಿಕಾರಿಗಳು ಹಲವರಿದ್ದರು. ಆದ್ದರಿಂದ ಊಟ ದೊರಕುವುದೆ ಅವನಿಗೆ ಕಷ್ಟವಾಯಿತು. ಅವನ ವಿಭಾಗದ ಇಬ್ಬರು ಅಧಿಕಾರಿಗಳು ಅವನೊಟ್ಟಿಗೆ ಕುಳಿತರು. ಸಂಭಾಷಣೆ ಸಹಜವಾಗಿಯೇ

ಶಾಂತಿ ಸಂಧಾನದ ಕಡೆಗೆ ತಿರುಗಿತು. ಫ್ರೀಡ್‌ಲೆಂಡ್ ಕದನದ ತರುವಾಯ ನಡಸಿದ ಸಂಧಾನದಿಂದ ಅಧಿಕಾರಿಗಳೂ, ಸಂಗಡಿಗರೂ, ಸೈನಿಕರೂ ಅತೃಪ್ತರಾಗಿದ್ದರು. ಕೆಲವು ದಿನ ಕದನವನ್ನು ಮುಂದುವರಿಸಿದ್ದರೆ ಫ್ರೆಂಚ್ ಸೈನ್ಯದಲ್ಲಿ ಆಹಾರ ಸಾಮಗ್ರಿಗಳೂ ಮದ್ದು ಗುಂಡುಗಳೂ ಮುಗಿದು, ನೆಪೋಲಿಯನ್‌ನ ಕತೆ ಮುಗಿಯುತ್ತಿತ್ತೆಂದು ಅವರು ವಾದಿಸಿದರು. ನಿಕೊಲಾಸ್ ಸದ್ದಿಲ್ಲದೆ ತಿಂದ; ಕಂಠಪೂರ್ತಿಯಾಗಿ ಕುಡಿದ. ತಾನೊಬ್ಬನೇ ಕೆಲವು ಬಾಟಲಿ ವೈನು ಮುಗಿಸಿದ. ಅವನ ಮನಸ್ಸಿನಲ್ಲಿ ನಡೆಯುತ್ತಿದ್ದ ತುಮುಲ ಮಾತ್ರ, ತೀರ್ಮಾನ ಸಾಧ್ಯವಾಗದೆ, ಅವನನ್ನು ಕಾಡುತ್ತಿತ್ತು. ಚಿಂತೆಯಿಂದ ಕುಸಿಯುವುದಾಗಿ ಹೆದರಿದರೂ, ಅವುಗಳಿಂದ ಪಾರಾಗಲು ಅವನಿಗೆ ಸಾಧ್ಯವಾಗಲಿಲ್ಲ. ಫ್ರೆಂಚರ ಕಡೆ ನೋಡುವುದೇ ಅವಮಾನಕರ ಸಂಗತಿಯೆಂದು ಅಧಿಕಾರಿಗಳಲ್ಲೊಬ್ಬ ಹಠಾತ್ತನೆ ನುಡಿದನು.

ಅಧಿಕಾರಿಗಳಿಗೂ ಆಶ್ಚರ್ಯವಾಗುವ ರೀತಿಯಲ್ಲಿ, ಅನವಶ್ಯವಾದ ಹುಮ್ಮಸ್ಸಿನಿಂದ ರೊಸ್ತೋವ್ ಕೂಗಾಡತೊಡಗಿದನು: 'ಯಾವುದು ಸರಿಯೆಂದು ನೀವು ನಿರ್ಣಯಿಸುವುದಾದರೂ ಹೇಗೆ?' ಎನ್ನುವಾಗ ಅವನ ಮುಖದ ಕಡೆಗೆ ರಕ್ತ ನುಗ್ಗುತ್ತಿತ್ತು. 'ಚಕ್ರವರ್ತಿಗಳ ತೀರ್ಮಾನವನ್ನು ನೀವು ಟೀಕಿಸುವುದಾದರೂ ಹೇಗೆ? ಆ ಬಗ್ಗೆ ವಾದ ಮಾಡಲು ನಮಗೇನು ಹಕ್ಕಿದೆ? ಚಕ್ರವರ್ತಿಗಳ ಉದ್ದೇಶವಾಗಲಿ, ಅವರ ವರ್ತನೆಯಾಗಲಿ ನಮಗರ್ಥವಾಗುವುದಿಲ್ಲ.'

'ಚಕ್ರವರ್ತಿಗಳ ಬಗ್ಗೆ ನಾನು ಚಕಾರವೆತ್ತಿಲ್ಲ' ಎಂದು ಅಧಿಕಾರಿ ತನ್ನ ವಾದವನ್ನು ಸಮರ್ಥಿಸಿಕೊಂಡನು; ರೊಸ್ತೋವ್‌ನ ಉದ್ರೇಕಕಾರಣ ಅವನಿಗರ್ಥವಾಗಲಿಲ್ಲ; ಅವನಿಗೆ ಅಮಲೇರಿದ್ದಂತು ನಿಜ.

ಆದರೆ ರೊಸ್ತೋವ್ ಅವನು ಹೇಳಿದ್ದನ್ನು ಕೇಳಿಸಿಕೊಳ್ಳದೆಯೆ, ತನ್ನ ಮಾತು ಮುಂದುವರಿಸಿದ್ದನು. 'ನಾವು ರಾಯಭಾರಿ ಅಧಿಕಾರಿಗಳಲ್ಲ, ಸೈನಿಕರು ಮಾತ್ರ. ಸೈನಿಕರೆಂದರೆ ಸೈನಿಕರೆ. ನಾವು ಸಾಯಬೇಕೆಂದು ಆಜ್ಞೆಯಾದರೆ ಸಾಯಲೇಬೇಕು. ನಮಗೆ ಶಿಕ್ಷೆಯಾದರೆ, ಅದು ನಮಗೆ ಸಲ್ಲತಕ್ಕದ್ದೆಂದೇ ಅರ್ಥ. ತೀರ್ಮಾನಿಸುವ ಹಕ್ಕು ನಮಗಿಲ್ಲ. ಚಕ್ರವರ್ತಿಗಳು ಬೋನಪಾರ್ಟ್‌ನನ್ನು ಚಕ್ರವರ್ತಿಯೆಂದು ಮಾನ್ಯಮಾಡಿ, ಸಂಧಿ ಮಾಡಿಕೊಂಡಿದ್ದಾದರೆ, ಅವರು ಯೋಗ್ಯವಾದದ್ದನ್ನು ಮಾಡಿದ್ದಾರೆಂದೇ ಅರ್ಥ. ನಾವೇ ಟೀಕಿಸುತ್ತ, ವಾದಿಸುತ್ತ ಹೊರಟರೆ, ಯಾವುದರ ಬಗ್ಗೆಯೂ ಗೌರವವುಳಿಯುವುದಿಲ್ಲ. ದೇವರಿಲ್ಲವೆಂದು ಸಾರುತ್ತಿದ್ದರೆ—ಉಳಿಯುವುದಾದರೂ ಏನು?' ಎಂದು ನಿಕೊಲಾಸ್ ಮೇಜು ಕುಟ್ಟುತ್ತ ಗರ್ಜಿಸಿದನು. ಅವನ ಗರ್ಜನೆ ಅವನ ಶ್ರೋತೃಗಳಿಗೆ ಅನುಚಿತವೆಂದು ತೋರಿದರೂ, ಅದು ಅವನ ಆಲೋಚನಾ ಸರಣಿಗನುಗುಣವಾಗಿತ್ತೆಂಬುದಂತು ನಿಜ. 'ಕರ್ತವ್ಯ ನಿರ್ವಹಣೆ ಮತ್ತು ಹೋರಾಟ ನಮ್ಮ ಪಾಲಿನ ಕೆಲಸವೇ ಹೊರತು, ಅಭಿಪ್ರಾಯ ನೀಡಿಕೆಯಲ್ಲ. ಅದಷ್ಟೇ....' ಎಂದವನು ನುಡಿದನು.

'ಜತೆಗೆ ಕುಡಿತ' ಎಂದು ಜಗಳವಾಡಲಿಚ್ಛಿಸದ ಅಧಿಕಾರಿಯೊಬ್ಬ ನುಡಿದನು.

'ಹೌದು. ಕುಡಿತ' ಎಂದು ನಿಕೊಲಾಸ್ ಸಮ್ಮತಿಸಿ, 'ಯಾರಲ್ಲಿ? ಮತ್ತೊಂದು ಬಾಟಲಿ!' ಎಂದು ನುಡಿದನು.

ಅಧ್ಯಾಯ ೨೨

೧೮೦೮ರಲ್ಲಿ ಚಕ್ರವರ್ತಿ ಅಲೆಕ್ಸಾಂಡರ್ ಚಕ್ರವರ್ತಿ ನೆಪೋಲಿಯನ್‌ನನ್ನು ಮತ್ತೆ ಭೇಟಿ ಮಾಡುವ ಸಲುವಾಗಿ ಎರ್‌ಫರ್ಟ್‌ಗೆ ಹೋದನು. ಆ ಪ್ರಮುಖ ಭೇಟಿಯ ವೈಭವವನ್ನು ಕುರಿತು ಪೀಟರ್ಸ್ ಬರ್ಗ್‌ನ ಉನ್ನತವಲಯಗಳಲ್ಲಿ ಮಾತುಕತೆ ವಿಪುಲ ವಾಗಿ ಸಾಗಿತ್ತು.

೧೮೦೯ರ ಹೊತ್ತಿಗೆ 'ಜಗತ್ತಿನ ಇಬ್ಬರು ನ್ಯಾಯನಿರ್ಣಯಕಾರರು' ಎಂದು ಪ್ರಸಿದ್ಧರಾಗಿದ್ದ ನೆಪೋಲಿಯನ್ ಮತ್ತು ಅಲೆಕ್ಸಾಂಡರರ ನಡುವಣ ಆತ್ಮೀಯತೆ ಎಷ್ಟು ಗಾಢವಾಗಿ ವೃದ್ಧಿಗೊಂಡಿತ್ತೆಂದರೆ, ನೆಪೋಲಿಯನ್ ಆಸ್ಟ್ರಿಯಾ ಮೇಲೆ ಯುದ್ಧ ಘೋಷಿಸಿದಾಗ, ಹಿಂದಿನ ಮಿತ್ರ ಆಸ್ಟ್ರಿಯಾದ ಚಕ್ರವರ್ತಿಯ ವಿರುದ್ಧವಾಗಿ, ಹಳೆಯ ಹಗೆ ಬೋನಪಾರ್ಟ್‌ಗೆ ಸಹಕಾರ ನೀಡುವ ಸಲುವಾಗಿ, ರಷ್ಯಾದ ಒಂದು ದಳ ಗಡಿ ಯನ್ನು ದಾಟಿ, ಫ್ರೆಂಚ್ ಸೈನ್ಯದ ಜತೆ ಸೇರಿಕೊಂಡಿತ್ತು ; ಅಷ್ಟೇ ಅಲ್ಲ, ಅಲೆಕ್ಸಾಂಡರನ ತಂಗಿಯರಲ್ಲೊಬ್ಬಳು ನೆಪೋಲಿಯನ್ನನನ್ನು ಮದುವೆಯಾಗುತ್ತಾಳೆಂಬ ಸುದ್ದಿಯೂ ಅರಮನೆಯ ಸುತ್ತಿನಲ್ಲಿ ವ್ಯಾಪಿಸಿತ್ತು. ಆದರೆ ವಿದೇಶಾಂಗ ನೀತಿಯ ವಿಚಾರಗಳಿಗಿಂತ ಮಿಗಿಲಾಗಿ, ಆ ಸಮಯದಲ್ಲಿ ರಷ್ಯನ್ ಸಮಾಜದ ತೀವ್ರ ಗಮನ ಆಂತರಿಕ ಬದಲಾವಣೆ ಗಳ ಕಡೆಗೆ ಹರಿದಿತ್ತು. ಸರ್ಕಾರದ ಎಲ್ಲ ಇಲಾಖೆಗಳಲ್ಲಿಯೂ ನವೀಕರಣರೂಪದ ಬದಲಾವಣೆಗಳು ಜರುಗುತ್ತಿದ್ದುವು.

ಏತನ್ಮಧ್ಯೆ ನೆಪೋಲಿಯನ್ ಜತೆಯ ರಾಜಕೀಯ ಮೈತ್ರಿ ಅಥವಾ ವೈರವನ್ನಾಗಲಿ, ಪುನರ್ ನವೀಕರಣ ಯೋಜನೆಗಳನ್ನಾಗಲಿ ಅವಲಂಬಿಸದೆಯೆ, ಜೀವನವಾಹಿನಿ ಸ್ವತಂತ್ರ ವಾಗಿ ಪ್ರವಹಿಸುತ್ತಿತ್ತು. ಆರೋಗ್ಯ ಮತ್ತು ರೋಗರುಜಿನಗಳಲ್ಲಿ ಹಾಗೂ ಶ್ರಮಜೀವನ ಮತ್ತು ವಿಶ್ರಾಂತಿಗಳಲ್ಲಿ ಆಸಕ್ತಿಯುಳ್ಳ ಅಂತೆಯೇ ಆಲೋಚನೆ, ವಿಜ್ಞಾನ, ಕಾವ್ಯ, ಸಂಗೀತ, ಪ್ರೇಮ, ಸ್ನೇಹ, ದ್ವೇಷ ಮತ್ತು ಮನೋವೃತ್ತಿಗಳ ಬಗ್ಗೆ ಬೌದ್ಧಿಕ ಆಸಕ್ತಿ ಯುಳ್ಳ ನಿಜವಾದ ಜೀವನವಾಹಿನಿ ಎಂದಿನಂತೆ ನಿರಂತರವಾಗಿ ಸಾಗಿತ್ತು.

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

1. ಪ್ರೊ॥ ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
   ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨

2. ಎಲ್. ಎಸ್. ಶೇಷಗಿರಿರಾವ್
   267, 'ಜ್ಯೋತಿ' ಮೂರನೇ ಬ್ಲಾಕ್, ಜಯನಗರ, ಬೆಂಗಳೂರು–೫೬೦ ೦೦೧

3. ಟಿ. ಎಸ್. ರಾಮಸ್ವಾಮಿ
   ಸಿ. ಹೆಚ್. 73, 7ನೇ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು–೫೭೦ ೦೦೯

4. ಎ. ಆರ್. ನಾಗಭೂಷಣ
   1235, ಕೆ. ಎಂ. ಪುರಂ, ಮೈಸೂರು–೫೭೦ ೦೦೪

5. ಸೂಜನ್ ಡ್ಯಾನಿಯಲ್, ಅಧ್ಯಾಪಕಿ
   ಇಂಗ್ಲಿಷ್ ವಿಭಾಗ, ಯುವರಾಜ ಕಾಲೇಜು, ಮೈಸೂರು–೫೭೦ ೦೦೫

6. ತಿಪ್ಪೇಸ್ವಾಮಿ, ಅಧ್ಯಾಪಕರು
   ಹಿಂದೀ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

7. ಶಂಸ ಐತಾಳ
   ನಂ. 616, 'ಚಂದನ', ಪಿ ಮತ್ತು ಟಿ ಬ್ಲಾಕ್, ಕುವೆಂಪುನಗರ,
   ಮೈಸೂರು–೫೭೦ ೦೨೩

8. ಸರಸ್ವತಿ ಬಡೆಕ್ಕಿಲ
   ನಂ. 614, ಪಿ. ಅಂಡ್ ಟಿ. ಬ್ಲಾಕ್, ಕುವೆಂಪುನಗರ,
   ಮೈಸೂರು–೫೭೦ ೦೨೩

9. ಪ್ರೊ॥ ಎ. ಎನ್. ಮೂರ್ತಿರಾವ್
   185, ಎಚ್. ಎ. ಎಲ್. ಲೇ ಔಟ್, 2ನೇ ಹಂತ, ಸಂಜಯನಗರ
   ಬೆಂಗಳೂರು–೫೬೦ ೦೨೪


ನಿರ್ಮಲ್